ಭಾನುವಾರ ಜನವರಿ 11 2026 ₹ 7.00
www.prajavani.net

ಪ್ರಜಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಅನಾವರಣ...
ಫಿಫಾ ವಿಶ್ವಕಪ್ ಟೂರ್ನಿಗೆ ಮೊದಲು ವಿಶ್ವ ಪ್ರವಾಸದ ಭಾಗವಾಗಿ ಮೂಲ ಟ್ರೋಫಿ ಶನಿವಾರ ದೆಹಲಿಗೆ ತಲುಪಿತು. ಚಿನ್ನದಿಂದ ತಯಾರಿಸಲಾಗಿರುವ ಟ್ರೋಫಿಯು 6.176 ಕೆ.ಜಿ. ತೂಕ ಹೊಂದಿದೆ.

'ಮಲಯಾಳ ಹೇರಿಕೆ: ವೇಣುಗೋಪಾಲ್ ಮಧ್ಯಪ್ರವೇಶಿಸಲಿ' 5

'ಬಜೆಟ್ ನ್ಯಾಯ'ಕ್ಕೆ ರಾಜ್ಯ ಪಟ್ಟು

ಕೇಂದ್ರ ಸಚಿವೆ ನಿರ್ಮಲಾ ಎದುರು ಬೇಡಿಕೆ ಮಂಡಿಸಿದ ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದಿಂದ ಜಿಎಸ್‌ಟಿ ವ್ಯವಸ್ಥೆ ಸರಳೀಕರಣ, ನರೇಗಾ ರದ್ದು ಮತ್ತಿತರ ಉಪಕ್ರಮಗಳಿಂದ ರಾಜ್ಯಕ್ಕೆ ಬರುತ್ತಿದ್ದ ಅನುದಾನದಲ್ಲಿ ಭಾರಿ ಖೋತಾ ಆಗಿದೆ. ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಕೇಂದ್ರ ಬಜೆಟ್‌ನಲ್ಲಿ ಸರಿಪಡಿಸಬೇಕು ಎಂದು ಕರ್ನಾಟಕ ಸರ್ಕಾರ ಪಟ್ಟು ಹಿಡಿದಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಶನಿವಾರ ಇಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ರಾಜ್ಯದ ಬೇಡಿಕೆಗಳ ಪಟ್ಟಿ ಮುಂದಿಟ್ಟರು.

ಜಿಎಸ್‌ಟಿ ವ್ಯವಸ್ಥೆ ಸರಳೀಕರಣದ ಬಳಿಕ ರಾಜ್ಯದ ಜಿಎಸ್‌ಟಿ ಬೆಳವಣಿಗೆ ಶೇ 12ರಿಂದ ಶೇ 5ಕ್ಕೆ ಇಳಿದಿದೆ. ಇದರ ಪರಿಣಾಮವಾಗಿ ಈ ವರ್ಷ ₹5,000 ಕೋಟಿ ಕೊರತೆ ಮತ್ತು ವಾರ್ಷಿಕ ₹ 9,000 ಕೋಟಿ ಕೊರತೆ ಉಂಟಾಗುತ್ತಿದೆ. ಕೇಂದ್ರವು ಪಾನ್ ಮಸಾಲಾ ಮೇಲಿನ ಸೆಸ್ ಮತ್ತು ತಂಬಾಕಿನ ಮೇಲಿನ ಅಬಕಾರಿ ಸುಂಕದ ಮೂಲಕ ತನ್ನ ನಷ್ಟವನ್ನು ಸರಿದೂಗಿಸಿಕೊಂಡಿದೆ. ಆದರೆ, ರಾಜ್ಯಗಳಿಗೆ ಇದರ ಲಾಭ ಸಿಗುತ್ತಿಲ್ಲ. ರಾಜ್ಯಗಳಿಗೆ ಬಲವಾದ ಆದಾಯ ಸಂರಕ್ಷಣಾ ಕಾರ್ಯವಿಧಾನ ರೂಪಿಸಬೇಕು. ಜಿಎಸ್‌ಟಿ ಪರಿಹಾರ ಸೆಸ್‌ನಂತೆಯೇ ಆದಾಯ ನಷ್ಟಕ್ಕೆ ಸಂಪೂರ್ಣ ಪರಿಹಾರ ನೀಡಬೇಕು ಎಂದು ಅವರು ಆಗ್ರಹಿಸಿದರು.

ಹಣಕಾಸಿನ ಸಮಾನತೆ ಮತ್ತು ಸಹಕಾರಿ ಒಕ್ಕೂಟ ಪುನಃಸ್ಥಾಪಿಸಲು ತಂಬಾಕಿನ ಮೇಲಿನ ಅಬಕಾರಿ ಸುಂಕ ಮತ್ತು ಪಾನ್ ಮಸಾಲಾ ಮೇಲಿನ ಸೆಸ್ ಅನ್ನು 50:50 ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಹಂಚಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ನರೇಗಾ ಕಾಯ್ದೆ ರದ್ದುಪಡಿಸಿ ಜಿ–ರಾಮ್–ಜಿ ಕಾಯ್ದೆ ಜಾರಿಗೆ ತಂದಿರುವುದರಿಂದ 13 ಕೋಟಿ ಮಾನವ ದಿನಗಳ ಜೀವನೋಪಾಯ ಭದ್ರತೆ ಒದಗಿಸುವುದನ್ನು ಮುಂದುವರಿಸಲು ಕರ್ನಾಟಕಕ್ಕೆ ₹2,000 ಕೋಟಿ ಬೇಕಾಗುತ್ತದೆ. ಇದು ಆರ್ಥಿಕವಾಗಿ ಸಮರ್ಥನೀಯವಲ್ಲ. ಹೊಸ ವೆಚ್ಚ ಹಂಚಿಕೆಯು ರಾಜ್ಯದ ಹೊರೆ ಹೆಚ್ಚಿಸಿದೆ. ಹೀಗಾಗಿ, ಯೋಜನೆಯ ವಿನ್ಯಾಸವನ್ನು ಮರು ಪರಿಶೀಲಿಸಬೇಕು ಹಾಗೂ ಬೇಡಿಕೆ ಆಧಾರಿತ ಉದ್ಯೋಗ ಮರುಸ್ಥಾಪಿಸಬೇಕು ಎಂದು ಅವರು ಮನವಿ ಮಾಡಿದರು.


ಕೃಷ್ಣ ಬೈರೇಗೌಡ

ಜೆಜೆಎಂ ಬಾಕಿ ಕೊಡಿ: ಜಲಜೀವನ್ ಮಿಷನ್ ಅಡಿಯಲ್ಲಿ ಕೇಂದ್ರ ಸರ್ಕಾರ ₹11,786 ಕೋಟಿಯಷ್ಟೇ ಕೊಟ್ಟಿದೆ. ರಾಜ್ಯ ಸರ್ಕಾರ ₹24,598 ಕೋಟಿ ಬಿಡುಗಡೆ ಮಾಡಿದೆ. ಜೆಜೆಎಂ ಕಾಮಗಾರಿಗಳಿಗೆ ಅಡ್ಡಿಯಾಗದಂತೆ ತಡೆಯಲು ಕರ್ನಾಟಕ ಸರ್ಕಾರ ಹೆಚ್ಚುವರಿಯಾಗಿ ₹13,004 ಕೋಟಿ ಬಿಡುಗಡೆ ಮಾಡಿದೆ. ಯೋಜನೆಯನ್ನು ಸಕಾಲಕ್ಕೆ ಮುಗಿಸಲು ಬಾಕಿ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಪಿಡಿಪಿಎಸ್‌ಗೆ ₹796 ಕೋಟಿ: ಬೆಲೆ ಕೊರತೆ ಪಾವತಿ ಯೋಜನೆಯಡಿ (ಪಿಡಿಪಿಎಸ್) ಜೋಳ, ಸೋಯಾಬೀನ್, ಮಾವು, ಮೆಣಸಿನಕಾಯಿ, ಈರುಳ್ಳಿ, ಟೊಮೆಟೊ, ಅರಿಶಿನ, ಶುಂಠಿ ಬೆಳೆಗಳನ್ನು ತರಲು ಪ್ರಸ್ತಾಪಿಸಲಾಗಿದೆ. 2026–27 ರಲ್ಲಿ ಸಕಾಲಿಕವಾಗಿ ಪಿಡಿಪಿಎಸ್ ಅನುಷ್ಠಾನಕ್ಕಾಗಿ ಪಿಎಂ ಆಶಾ ಯೋಜನೆಯಡಿ ಹೆಚ್ಚುವರಿಯಾಗಿ ₹796 ಕೋಟಿ ಹಂಚಿಕೆ ಮಾಡಬೇಕು ಎಂದು ಕೋರಿದರು.

ರಾಜ್ಯದ ಬೇಡಿಕೆಗಳೇನು?

- ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಗೌರವಧನ ₹ 8,000 ಮತ್ತು ಅಡುಗೆಯವರು ಮತ್ತು ಸಹಾಯಕರಿಗೆ ₹ 5,000ಕ್ಕೆ ಹೆಚ್ಚಿಸಬೇಕು
- ಬರಪೀಡಿತ ಮಧ್ಯ ಕರ್ನಾಟಕಕ್ಕೆ ನೀರು ಒದಗಿಸಲು ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಈ ಹಿಂದೆಯೇ ಘೋಷಿಸಿದ್ದ ₹ 5,300 ಕೋಟಿ ಬಿಡುಗಡೆ ಮಾಡಬೇಕು
- 15ನೇ ಹಣಕಾಸು ಆಯೋಗದ ಹಾಗೂ ವಿಪತ್ತು ಪರಿಹಾರ ನಿಧಿಯ ಬಾಕಿ ಅನುದಾನಗಳನ್ನು ಕೂಡಲೇ ಮಂಜೂರು ಮಾಡಬೇಕು. ವಿಶೇಷ ಅನುದಾನ ₹5,495 ಕೋಟಿ, ರಾಜ್ಯದ ನಿರ್ದಿಷ್ಟ ಅನುದಾನ ₹6,000 ಕೋಟಿ, 15ನೇ ಹಣಕಾಸು ನಿಧಿಯ ಕೊರತೆ ಅನುದಾನ ₹4,044 ಕೋಟಿ ಕೊಡಬೇಕು
- ಕಲ್ಯಾಣ ಕರ್ನಾಟಕದ ಹಿಂದುಳಿದ ಪ್ರದೇಶ ಅಭಿವೃದ್ಧಿಗೆ ₹5 ಸಾವಿರ ಕೋಟಿಯ ವಿಶೇಷ ಅನುದಾನ ನೀಡಬೇಕು

ಎಂಬಿಬಿಎಸ್ ಪೂರೈಸಿದ ಎಲ್ಲರಿಗೂ ಸಿಗುತ್ತಿಲ್ಲ ಕೆಎಂಸಿ ನೋಂದಣಿಯ ಅವಕಾಶ

ವೈದ್ಯ ವೃತ್ತಿಗೆ ತೊಡಕಾದ 'ಗ್ರಾಮೀಣ ಸೇವೆ'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯ ಸರ್ಕಾರ ದಶಕದ ಹಿಂದೆ ಜಾರಿಗೊಳಿಸಿದ್ದ ವೈದ್ಯರ 'ಗ್ರಾಮೀಣ ಸೇವೆ ಕಡ್ಡಾಯ' ನಿಯಮವು ವೈದ್ಯಕೀಯ ಪದವೀಧರರು ಕರ್ನಾಟಕ ವೈದ್ಯಕೀಯ ಪರಿಷತ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಅಡ್ಡಿಯಾಗಿದ್ದು, ವೈದ್ಯ ವೃತ್ತಿ ಆರಂಭಿಸಲು ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ತೊಡಕಾಗಿದೆ.

ಬಹುತೇಕ ವೈದ್ಯರು ಹಿಂದೆ ನಗರ ಪ್ರದೇಶಗಳಲ್ಲೇ ಕೆಲಸ ಮಾಡಲು ಆಸಕ್ತಿ ತೋರುತ್ತಿದ್ದ ಕಾರಣ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರ ಗಳು ಹಾಗೂ ತಾಲ್ಲೂಕು ಹಂತದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ತೀವ್ರವಾಗಿತ್ತು. ▶5

ತಾತ್ಕಾಲಿಕ ನೋಂದಣಿಗಿಲ್ಲ ಅವಕಾಶ

ಗ್ರಾಮೀಣ ಸೇವೆ ಕಡ್ಡಾಯದಿಂದ ಕರ್ನಾಟಕ ವೈದ್ಯಕೀಯ ಪರಿಷತ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ತೊಡಕಾಗಿರುವುದನ್ನು ಮನಗೊಂಡ ಸರ್ಕಾರ, ತಾತ್ಕಾಲಿಕ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಿದೆ.

ಭಾರತೀಯ ವೈದ್ಯಕೀಯ ಆಯೋಗ 2019ರಲ್ಲಿ ಜಾರಿಗೊಳಿಸಿದ ನಿಯಮದಂತೆ ಯಾವುದೇ ರಾಜ್ಯಗಳ ವೈದ್ಯಕೀಯ ಪರಿಷತ್‌ನಲ್ಲಿ ತಾತ್ಕಾಲಿಕ ನೋಂದಣಿಗೆ ಅವಕಾಶ ಇಲ್ಲ. ಹಾಗಾಗಿ, ಸರ್ಕಾರದ ಸೂಚನೆ ಕಾರ್ಯಗತವಾಗಿಲ್ಲ. ಗ್ರಾಮೀಣ ಸೇವೆ ಕಡ್ಡಾಯ ಕೇವಲ ಸರ್ಕಾರಿ ಕೋಟಾದ ವಿದ್ಯಾರ್ಥಿಗಳಿಗಷ್ಟೇ ಅನ್ವಯ. ▶5

ನಿಮ್ಮ ಜೀವನದ ಮೈಲಿಗಲ್ಲುಗಳ ಜೊತೆಗೇ ಬೆಳೆಯುವ ಶುದ್ಧ ವಿಮಾ ಸುರಕ್ಷೆಯ ಯೋಜನೆ.

ಪ್ರಸ್ತುತವಿದೆ
ಎಲ್‌ಐಸಿಯ
ಬಿಮಾ ಕವಚ್
ಯುಐಎನ್: 512N360V01 | ಪ್ಲಾನ್ ನಂ.: 887
ನಾನ್–ಪಾರ್, ನಾನ್–ಲಿಂಕ್ಡ್, ಲೈಫ್, ಇಂಡಿವಿಜ್ಯುವಲ್, ಪ್ಯೂರ್ ರಿಸ್ಕ್ ಪ್ಲಾನ್
ಪ್ಲಾನ್ ಆನ್‌ಲೈನ್‌ಲ್ಲಿಯೂ ಲಭ್ಯವಿದೆ

- ಸ್ಥಿರವಾದ ಅಥವಾ ಏರಿಕೆಯಾಗುವ ವಿಮಾ ಮೊತ್ತದ ಆಯ್ಕೆಗಳು
- ಹೊಂದಿಕೊಳ್ಳುವ ಪ್ರೀಮಿಯಮ್ ಪಾವತಿ ಆಯ್ಕೆಗಳು– ಏಕೈಕ (ಸಿಂಗಲ್), ನಿಯಮಿತ (ರೆಗ್ಯುಲರ್) ಅಥವಾ ಸೀಮಿತ (5, 10 ಅಥವಾ 15 ವರ್ಷಗಳು)
- ಜೀವಾವಧಿಯ ವಿಮಾ ರಕ್ಷೆ (100 ವರ್ಷಗಳವರೆಗೆ)
- ಜೀವನದ ನಿರ್ದಿಷ್ಟ ಹಂತಗಳಲ್ಲಿ ವಿಮಾ ರಕ್ಷೆಯನ್ನು ಹೆಚ್ಚಿಸುವ ಆಯ್ಕೆ*

*ಸ್ಥಿರ ವಿಮಾ ಮೊತ್ತದ ಆಯ್ಕೆಯ ಅಡಿಯಲ್ಲಿ, ನಿಯಮಿತ ಪ್ರೀಮಿಯಂ ಪಾವತಿಯೊಂದಿಗೆ, ವಯಸ್ಸು 40 (ಕೊನೆಯ ಜನ್ಮದಿನದ ಪ್ರಕಾರ) ಅಥವಾ ಅದಕ್ಕಿಂತ ಕಡಿಮೆಯಿರುವ ಪ್ರಮಾಣಿತ ಜೀವದ ಗ್ರಾಹಕರಿಗೆ ಮಾತ್ರ ಲಭ್ಯವಿದೆ.

LIC/R1/2025-26/24/Kan

ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827 | ನಮ್ಮ ವಾಟ್ಸಾಪ್ ನಂ. 8976862090 'Hi' ಹೇಳಿರಿ

ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ/ ಭೇಟಿ ನೀಡಿ www.licindia.inಗೆ
ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಅಥವಾ ಅದರ ಅಧಿಕಾರಿಗಳು ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಿಸುವುದು ಅಥವಾ ಪ್ರೀಮಿಯಂಗಳ ಹೂಡಿಕೆ, ಮೊತ್ತಗಳ ಮರುಪಾವತಿಯಂತಹ ವಿಮಾ ವ್ಯವಹಾರದ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ. ಪಾಲಿಸಿದಾರರು ಅಥವಾ ಅಂತಹ ಕರೆಗಳನ್ನು ಸ್ವೀಕರಿಸುವ ಪ್ರಾಸ್ಪೆಕ್ಟ್ ಪೋಲೀಸ್ ದೂರು ದಾಖಲಿಸುವಂತೆ ವಿನಂತಿಸಲಾಗಿದೆ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

'ಭೂಮಿಕಾ ಕ್ಲಬ್'ನಲ್ಲಿ ಚಂದನಾ ಲಕ್ಷ್ಮಿಕಾಂತ್ ಅವರ ಜತೆಗೆ ಮಕ್ಕಳು 'ಜುಂಬಾ' ನೃತ್ಯ ಪ್ರದರ್ಶನ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರಗಳು: ರಂಜು ಪಿ.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'
ಹಮ್ಮಿಕೊಂಡಿದ್ದ 'ಭೂಮಿಕಾ ಕ್ಲಬ್'ನಲ್ಲಿ ಗಾಯನ–ನೃತ್ಯ

ಮಹಿಳೆಯರ ವೇದಿಕೆಯಲ್ಲಿ ಮಕ್ಕಳ ಸಂಭ್ರಮ, ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರಿಗಾಗಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆಯಲ್ಲಿ ಮಕ್ಕಳು ಗಾಯನ–ನೃತ್ಯಕ್ಕೆ ಹೆಜ್ಜೆ ಹಾಕುವ ಜತೆಗೆ, ಫ್ಯಾಷನ್ ಶೋನಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

'ಗೋಲ್ಡ್ ವಿನ್ನರ್' ಸಹಯೋಗದಲ್ಲಿ ನಾಗರಬಾವಿಯ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್‌ನಲ್ಲಿರುವ ಕಿಂಗ್ಸ್ ಕ್ಲಬ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ 35ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ, ಮಹಿಳೆಯರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಯಿತು. ಈ ಬಾರಿ ಮಕ್ಕಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಇದರಿಂದಾಗಿ ಚಿಣ್ಣರ ಕಲರವ ಮಹಿಳೆಯರ ಸಂಭ್ರಮ ಹೆಚ್ಚಿಸಿತು.

ಇಂಪಾದ ಚಿತ್ರಗೀತೆಗಳು, ಮಕ್ಕಳ ಫ್ಯಾಷನ್ ಶೋ, ರ್‍ಯಾಂಪ್ ವಾಕ್, ರಸಪ್ರಶ್ನೆ, 'ಜುಂಬಾ' ನೃತ್ಯ, ಉಪನ್ಯಾಸ ಸೇರಿ ವಿವಿಧ ಚಟುವಟಿಕೆಗಳನ್ನು ಕಾರ್ಯಕ್ರಮ ಒಳಗೊಂಡಿತ್ತು. ಸಕ್ರಿಯವಾಗಿ ಪಾಲ್ಗೊಂಡಿದ್ದ ಮಹಿಳೆಯರು, ಚಿತ್ರಗೀತೆಗಳಿಗೆ ತಾವು ಧ್ವನಿಯಾಗುವ ಜತೆಗೆ ನೃತ್ಯವನ್ನೂ ಮಾಡಿದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಸಿಒಒ ಕಿರಣ್ ಸುಂದರರಾಜನ್ ಅವರು ದಿಕ್ಸೂಚಿ ಭಾಷಣ ಮಾಡಿದರು. ಕಾಂಗ್ರೆಸ್ ವಕ್ತಾರೆ ಕುಸುಮಾ ಎಚ್., ಕಿರುತೆರೆ ಕಲಾವಿದೆ ಶ್ಯಾಮ್ ಕುನ್ವಾರ್, 'ಗೋಲ್ಡ್ ವಿನ್ನರ್' ಪ್ರಾದೇಶಿಕ ಮಾರಾಟ ವ್ಯವಸ್ಥಾಪಕ ಸಿ.ಎಸ್. ಮಹೇಶ್, ಕಿಂಗ್ಸ್ ಕ್ಲಬ್ ವ್ಯವಸ್ಥಾಪಕ ನಿರ್ದೇಶಕ ಅಹ್ಮದ್ ಶಂಶುದ್ದೀನ್ ಅವರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಫ್ಯಾಷನ್ ಶೋ: ಗಾಯಕಿ ಅನಘಾ ಅವರು ವಿವಿಧ ಚಿತ್ರ ಗೀತೆಗಳನ್ನು ಹಾಡಿ ರಂಜಿಸಿದರು. ನೆರೆದಿದ್ದ ಮಹಿಳೆಯರು ಕೂಡ ಕೆಲ ಸಾಲುಗಳನ್ನು ಗುನುಗಿದರು. ಈ ವೇಳೆ ಮಕ್ಕಳು ವೇದಿಕೆಯನ್ನೇರಿ ಡ್ಯಾನ್ಸ್ ಮಾಡಿದರು. ಬಳಿಕ ನಡೆದ ಮಕ್ಕಳ ಫ್ಯಾಷನ್ ಶೋದಲ್ಲಿ ಬಣ್ಣಬಣ್ಣದ ಉಡುಗೆ ಧರಿಸಿ ಬಂದಿದ್ದ ಮಕ್ಕಳು, ಪ್ರೇಕ್ಷಕರತ್ತ ಕೈ ಬೀಸುತ್ತಾ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದರು. 3ರಿಂದ 5 ವರ್ಷ, 6ರಿಂದ 10 ವರ್ಷ ಹಾಗೂ 11ರಿಂದ 15 ವರ್ಷವೆಂದು ವಿಭಾಗವಾರು ಆಯೋಜಿಸಲಾಗಿತ್ತು. ಮೋನಾ ಮತ್ತು ವಿದ್ಯಾ ಚಿರಾ ಅವರು ಈ ಫ್ಯಾಷನ್ ಶೋ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಡಬ್ಲ್ಯುಐಸಿಸಿಐ ಲೀಡರ್‌ಶಿಪ್ ಕೋಚಿಂಗ್ ಕೌನ್ಸಿಲ್‌ನ ಅಧ್ಯಕ್ಷೆ ಆಶಾ ಬಿರಾದಾರ್ ಅವರು 'ಕೌಶಲದಿಂದ ಆದಾಯ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಕೌಶಲ ವೃದ್ಧಿ ಹಾಗೂ ಆದಾಯ ಗಳಿಕೆಗೆ ಇರುವ ಅವಕಾಶಗಳ ಬಗ್ಗೆ ತಿಳಿಯಲು ಈ ಗೋಷ್ಠಿ ಸಹಕಾರಿಯಾಯಿತು.

ಲಕ್ಕಿ ವಿಜೇತರಲ್ಲಿ ಸುಜಾತಾ ಸುರೇಶ್ ಅವರು ₹15 ಸಾವಿರ ಮೌಲ್ಯದ ವಾಟರ್ ಪ್ಯೂರಿಫೈಯರ್ ತಮ್ಮದಾಗಿಸಿಕೊಂಡರೆ, ವಿಮಲಾ ಜೆ. ಅವರು 'ಪ್ರಜಾವಾಣಿ ಸಿನಿ ಸಮ್ಮಾನ' ಸಮಾರಂಭದ ಎರಡು ವಿವಿಐಪಿ ಪಾಸ್‌ಗಳನ್ನು ಪಡೆದುಕೊಂಡರು.

ಹೆಣ್ಣು ಮಕ್ಕಳು ಎಲ್ಲ ಪಾತ್ರ ನಿರ್ವಹಿಸುತ್ತಾರೆ. ಅವರಿಗೆ ಪ್ರೋತ್ಸಾಹ ಮತ್ತು ಸುರಕ್ಷಿತ ವಾತಾವರಣ ಅಗತ್ಯ. ಭೂಮಿಕಾ ಕ್ಲಬ್ ಮಹಿಳೆಯರಿಗೆ ಉತ್ತಮ ವೇದಿಕೆಯಾಗಿದೆ

ಕುಸುಮಾ ಎಚ್., ಕಾಂಗ್ರೆಸ್ ವಕ್ತಾರೆ

ನಮ್ಮ ಕನಸನ್ನು ಸಾಕಾರ ಮಾಡಿಕೊಳ್ಳಲು ವಯಸ್ಸು ಅಡ್ಡಿಯಾಗದು. ಆತ್ಮವಿಶ್ವಾಸ ಮತ್ತು ಪರಿಶ್ರಮದಿಂದ ಎಲ್ಲವೂ ಸಾಧ್ಯ. ಭೂಮಿಕಾ ಕ್ಲಬ್ ಸದುಪಯೋಗ ಮಾಡಿಕೊಳ್ಳಿ

ಶ್ಯಾಮ್ ಕುನ್ವಾರ್, ಕಿರುತೆರೆ ಕಲಾವಿದೆ

ಅನಘಾ ಅವರು ವಿವಿಧ ಚಿತ್ರಗೀತೆಗಳನ್ನು ಹಾಡಿ ರಂಜಿಸಿದರು

ಬಾಲಕಿಯೊಬ್ಬಳು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದಳು

ಪ್ರೇಕ್ಷಕರ ಉತ್ಸಾಹ ಹೆಚ್ಚಿಸಿದ ಜುಂಬಾ ನೃತ್ಯ

ಫಿಟ್ನೆಸ್ ತಜ್ಞೆ ಚಂದನಾ ಲಕ್ಷ್ಮಿಕಾಂತ್ ಅವರು 'ಜುಂಬಾ' ನೃತ್ಯ ಪ್ರದರ್ಶನ ಪ್ರಸ್ತುತಪಡಿಸಿದರು. ಅವರ ಜತೆಗೆ ನೆರೆದಿದ್ದ ಪ್ರೇಕ್ಷಕರು ವಿವಿಧ ಗೀತೆಗಳಿಗೆ ಉತ್ಸಾಹದಿಂದ ಹೆಜ್ಜೆ ಹಾಕಿದರು. ಮಕ್ಕಳಿಂದ ವೃದ್ಧರವರೆಗೆ ಎಲ್ಲ ವಯೋಮಾನದವರು ಈ ನೃತ್ಯ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದು ವಿಶೇಷ.

ಮಹಿಳೆಯರಿಗೆ ಅಡುಗೆ ತಯಾರಿ ಸ್ಪರ್ಧೆಯನ್ನೂ ಆಯೋಜಿಸಲಾಗಿತ್ತು. ಚೀಟಿ ಎತ್ತುವ ಮೂಲಕ ಪ್ರೇಕ್ಷಕರಲ್ಲಿ ಇಬ್ಬರನ್ನು ಆಯ್ಕೆ ಮಾಡಲಾಯಿತು. ಮಹಿಳಾ ಪ್ರೇಕ್ಷಕರೇ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ವಿವಿಧ ಚಟುವಟಿಕೆಯಲ್ಲಿ ಭಾಗವಹಿಸಿದ ಪ್ರೇಕ್ಷಕರು, ಅಚ್ಚರಿಯ ಉಡುಗೊರೆಗಳನ್ನೂ ಪಡೆದು ಸಂಭ್ರಮಿಸಿದರು.

ಫ್ಯಾಷನ್ ಶೋದಲ್ಲಿ ಭಾಗವಹಿಸಿದ ಮಕ್ಕಳು

ಫ್ರೆಂಚ್‌ಫ್ರೈಸ್‌ಗೆ ನಿರ್ಬಂಧ ವಿಧಿಸಿದ್ದಕ್ಕಾಗಿ ಪತ್ನಿಯಿಂದಲೇ ದೂರು

ಪತಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಗುವಿಗೆ ಜನ್ಮ ನೀಡಿದ ನಂತರ ನನ್ನ ಪತಿ ನನಗೆ ಅನ್ನ, ಮಾಂಸ ಮತ್ತು ಫ್ರೆಂಚ್ ಫ್ರೈಸ್ ತಿನ್ನಲು ನಿರ್ಬಂಧ ವಿಧಿಸಿದ್ದಾರೆ' ಎಂಬ ಕಾರಣಕ್ಕೆ ಪತಿ ಮತ್ತು ಪತಿಯ ಕುಟುಂಬದ ಸದಸ್ಯರ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿದ್ದ ಕೌಟುಂಬಿಕ ಕ್ರೌರ್ಯ ಆರೋಪದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 498-ಎ ಅಡಿಯಲ್ಲಿ ಕ್ರೌರ್ಯದ (ಪತಿ ಮತ್ತು ಸಂಬಂಧಿಕರಿಂದ ಮಹಿಳೆಗೆ ಹಿಂಸೆ) ಅಪರಾಧಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ನಗರದ ಅಬುರ್ಝುರ್ ಅಹಮದ್ (36), ಅವರ ತಾಯಿ, ತಂದೆ ಹಾಗೂ ಸಹೋದರ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಇಂತಹ ದೂರುಗಳು ಬಂದಾಗ ಪೊಲೀಸರು ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಅನ್ವಯ ಪ್ರಾಥಮಿಕ ತನಿಖೆ ನಡೆಸದೆ ಹೇಗೆ ಎಫ್‌ಐಆರ್ ದಾಖಲಿಸುತ್ತಾರೆ' ಎಂದು ಪ್ರಶ್ನಿಸಿರುವ ನ್ಯಾಯಪೀಠ 'ಈ ಪ್ರಕರಣದಲ್ಲಿ ಅಬುರ್ಝುರ್ ಅಮೆರಿಕಕ್ಕೆ ಹಿಂತಿರುಗಿ ತಮ್ಮ ಉದ್ಯೋಗಕ್ಕೆ ಮರಳುವುದನ್ನು ತಡೆಯಲು ಪೊಲೀಸರು ಲುಕ್-ಔಟ್ ಸುತ್ತೋಲೆ ಹೊರಡಿಸುವ ಹಂತಕ್ಕೆ ಹೋಗಿರುವುದು ಆಶ್ಚರ್ಯಕರ' ಎಂದು ತೀವ್ರ ಕಳವಳ ವ್ಯಕ್ತಪಡಿಸಿದೆ.

'ಪತ್ನಿ ತಮಗಿರುವ ಆಹಾರದ ನಿರ್ಬಂಧಗಳು, ಉಡುಪಿನ ಬಗೆಗಿನ ನಿರೀಕ್ಷೆಗಳು, ಮನೆಯ ಜವಾಬ್ದಾರಿಗಳ ಹಂಚಿಕೆ, ದೂರದರ್ಶನ ವೀಕ್ಷಣೆಯ ಆದ್ಯತೆಗಳ ಬಗೆಗಿನ ಭಿನ್ನಾಭಿಪ್ರಾಯಗಳನ್ನು ದೂರಿನಲ್ಲಿ ವಿವರಿಸಿದ್ದಾರೆ. ಹಾಗೆಯೇ, ಪತಿ ನನ್ನನ್ನು ಸೇವಕಿಯಂತೆ ನಡೆಸಿಕೊಂಡಿರುವುದಾಗಿ ದೂರಿದ್ದಾರೆ. ಈ ಆರೋಪಗಳು ವೈವಾಹಿಕ ಕಲಹವನ್ನು ಬಿಂಬಿಸುತ್ತವೆಯೇ ವಿನಃ ಕ್ರೌರ್ಯದ ಅಪರಾಧವನ್ನು ಚಿತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿವೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.



'ಅರ್ಜಿದಾರ ಪತಿ ಮತ್ತು ದೂರುದಾರ ಪತ್ನಿ ಭಾರತದಲ್ಲಿ ವಾಸಿಸುತ್ತಿದ್ದರೂ ಅವರು ತಮ್ಮ ದಾಂಪತ್ಯ ಜೀವನವನ್ನು ಹೆಚ್ಚಾಗಿ ವಿದೇಶದಲ್ಲಿಯೇ ಕಳೆದಿದ್ದಾರೆ. ದೂರುದಾರೆ ತಮ್ಮ ಅತ್ತೆ-ಮಾವ ಮತ್ತು ಭಾವ ಅವರನ್ನು ವಿವೇಚನಾ ರಹಿತವಾಗಿ ಈ ಪ್ರಕರಣದಲ್ಲಿ ಎಳೆದು ತಂದಿದ್ದಾರೆ. ಇದು ತೀವ್ರ ಕಳವಳಕಾರಿ ಸಂಗತಿ. ಆದ್ದರಿಂದ, ಈ ಪ್ರಕರಣದ ತನಿಖೆ ಮತ್ತು ನ್ಯಾಯಿಕ ವಿಚಾರಣೆ ಮುಂದುವರಿಯಲು ಅವಕಾಶ ನೀಡಿದರೆ ಅದು ಕಾನೂನಿನ ದುರುಪಯೋಗ ಎನಿಸುತ್ತದೆ. ತನಿಖೆಯು ಅರ್ಜಿದಾರರಿಗೆ ಕಿರುಕುಳ ಹೆಚ್ಚಿಸುವುದರ ಜೊತೆಗೆ ಕಳಂಕವನ್ನೂ ತರುತ್ತದೆ. ಅಂತೆಯೇ, ಕೋರ್ಟ್‌ಗಳ ಅಮೂಲ್ಯ ಸಮಯವನ್ನು ಹಾಳು ಮಾಡುತ್ತದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಎಫ್‌ಐಆರ್ ಮತ್ತು ಅಧೀನ ನ್ಯಾಯಾಲಯದ ವಿಚಾರಣೆಯನ್ನು ರದ್ದುಪಡಿಸಲಾಗುತ್ತಿದೆ' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ದೂರುದಾರೆ (29) ಮತ್ತು ಅಬುರ್ಝುರ್ 2017ರಲ್ಲಿ ಮದುವೆಯಾಗಿದ್ದರು. ನಂತರ ಅಮೆರಿಕಕ್ಕೆ ತೆರಳಿ ಅಲ್ಲಿಯೇ ನೆಲೆಸಿದ್ದರು. ವಿದೇಶದಲ್ಲಿ ಆರು ವರ್ಷಗಳ ಕಾಲ ಚೆನ್ನಾಗಿದ್ದ ವೈವಾಹಿಕ ಜೀವನ ಮಗುವಿನ ಜನನದ ನಂತರದಲ್ಲಿ ಹದಗೆಟ್ಟಿತ್ತು. 2023ರ ಜನವರಿಯಲ್ಲಿ ಭಾರತಕ್ಕೆ ಬಂದಿದ್ದ ದೂರುದಾರೆ, 2024ರಲ್ಲಿ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪತಿ, ಅತ್ತೆ-ಮಾವ ಮತ್ತು ಭಾವ ವಿರುದ್ಧ ದೂರು ದಾಖಲಿಸಿದ್ದರು.

www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಇದು ರೈತನ 'ಕೂಸು'

ಚಿಕ್ಕಮಗಳೂರಿನ ರೈತರೊಬ್ಬರು ತಮ್ಮ ಜಮೀನಿನಲ್ಲಿ ಬೆಳೆದಿರುವ ಹೂಕೋಸನ್ನು ಶನಿವಾರ ಕಟಾವು ಮಾಡಿದರು

'ರಾಜ್ಯದಲ್ಲಿ ಶಿಕ್ಷೆ ಪ್ರಮಾಣ ಶೇ 52ರಷ್ಟು' 3F

ಸೇವಾ ಶುಲ್ಕ ವಿಧಿಸಿದ 27 ರೆಸ್ಟೋರೆಂಟ್‌ಗಳಿಗೆ ದಂಡ 12

ಯುಪಿಎಸ್‌ಸಿ ಪರೀಕ್ಷೆಗೆ 'ಚಹರೆ ದೃಢೀಕರಣ'

ನವದೆಹಲಿ (ಪಿಟಿಐ): ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇಮಕಾತಿ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರದಲ್ಲಿ 'ಚಹರೆಯ ದೃಢೀಕರಣ' ಪರೀಕ್ಷೆಯನ್ನು ನಡೆಸಲಾಗುವುದು ಎಂದು ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಹೇಳಿದೆ.

UPSC

ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ಈಗಾಗಲೇ ಎನ್‌ಡಿಎ, ಎನ್‌ಎ, ಸಿಡಿಎಸ್ ಪರೀಕ್ಷೆಗಳ ಸಂದರ್ಭದಲ್ಲಿ ಅಭ್ಯರ್ಥಿಗಳ 'ಚಹರೆಯ ದೃಢೀಕರಣ' ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ಇದನ್ನು ಇನ್ನು ಮುಂದೆ ಎಲ್ಲ ಪರೀಕ್ಷೆಗಳಲ್ಲಿ ಜಾರಿಗೆ ತರಲಾಗುವುದು ಎಂದು ಯುಪಿಎಸ್‌ಸಿ ಪ್ರಕಟಣೆ ತಿಳಿಸಿದೆ.

ಪ್ರತಿ ಅಭ್ಯರ್ಥಿಯ ದೃಢೀಕರಣ ಪ್ರಕ್ರಿಯೆಗೆ ತೆಗೆದುಕೊಳ್ಳುತ್ತಿದ್ದ ಸಮಯವು ಎ.ಐ ತಂತ್ರಜ್ಞಾನದ ಬಳಕೆಯಿಂದ 8ರಿಂದ 10 ಸೆಕೆಂಡ್‌ಗಳಿಗೆ ತಗ್ಗಿದೆ ಎಂದು ಯುಪಿಎಸ್‌ಸಿ ಅಧ್ಯಕ್ಷ ಅಜಯ್ ಕುಮಾರ್ ಹೇಳಿದ್ದಾರೆ.

ಪಶ್ಚಿಮಘಟ್ಟಕ್ಕೆ ಅಭಿವೃದ್ಧಿಯ ಕುತ್ತು

ಯೋಜನೆಗಳಿಗೆ ಪ್ರಾಕೃತಿಕ ಸಂಪತ್ತು ನಾಶ, ಆರಂಭವಾದ ಆಂದೋಲನ

ಒಳನೋಟ

- ರಾಹುಲ ಬೆಳಗಲಿ
- ಗಣಪತಿ ಹೆಗಡೆ

ಕಾರವಾರ: 'ಸಮುದ್ರಕ್ಕೆ ಸೇರುವ ನೀರು ಪೋಲು ಎಂಬ ವಾದವನ್ನು ಮುಂದಿಟ್ಟು ನದಿ ತಿರುವು ಯೋಜನೆಗೆ ಮುಂದಾಗುತ್ತಿರುವ ಸರ್ಕಾರಕ್ಕೆ ಪಶ್ಚಿಮ ಘಟ್ಟ ನಾಶವಾದರೆ ಪರಿಸರದ ಜೊತೆಗೆ ಸಂಸ್ಕೃತಿಯೂ ಅವನತಿ ಆಗಬಹುದು ಎಂಬ ಕಲ್ಪನೆ ಇಲ್ಲವೆ? ಹಿಮಾಲಯ ಶ್ರೇಣಿಗಳಿಗಿಂತಲೂ ಮುಂಚೆಯೇ ಉಗಮವಾದ ಪಶ್ಚಿಮ ಘಟ್ಟ ಲಕ್ಷಾಂತರ ವರ್ಷಗಳಿಂದ ಜಗತ್ತಿನ ಪರಿಸರ ಸಮತೋಲನ ಕಾಯ್ದುಕೊಂಡಿದೆ. ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶದಲ್ಲಿ ಯೋಜನೆಗಳ ಮೂಲಕ ಅಪರೂಪದ ಪರಿಸರ ವ್ಯವಸ್ಥೆಗೆ ಧಕ್ಕೆ ತರುವ ಉದ್ದೇಶವಾದರೂ ಏನು?' ಎಂದು ಖಾರವಾಗಿ ಪ್ರಶ್ನಿಸುತ್ತಾರೆ ಕಡಲ ಜೀವಶಾಸ್ತ್ರಜ್ಞ ವಿ.ಎನ್.ನಾಯಕ.

4

ಪಶ್ಚಿಮ ಘಟ್ಟಗಳ ಮಹತ್ವವನ್ನು ಅರಿಯುವ ಕೆಲಸ ಸರ್ಕಾರದಿಂದ ಆಗಬೇಕು. ಯೋಜನೆಗಳನ್ನು ಜಾರಿಗೊಳಿಸುವ ಮುನ್ನ ಅದರ ಸಾಧಕ–ಬಾಧಕಗಳನ್ನು ಅರಿಯಬೇಕು. ಇಲ್ಲದಿದ್ದರೆ, ಎಲ್ಲವೂ ವ್ಯರ್ಥವಾಗುತ್ತದೆ

ಮಹಾಬಲೇಶ್ವರ ಸಾಯಿಮನೆ,
ಪರಿಸರವಾದಿ

ಪಶ್ಚಿಮ ಘಟ್ಟದ ವಿಹಂಗಮ ನೋಟ

ಪಶ್ಚಿಮ ಘಟ್ಟದಲ್ಲಿ ಉದ್ದೇಶಿತ ಯೋಜನೆಗಳು..

- ಭೀಮಘಡ ವನ್ಯಜೀವಿ ಅಭಯಾರಣ್ಯದಲ್ಲಿ ಕಳಸಾ ಬಂಡೂರಿ ನದಿ ತಿರುವು ಯೋಜನೆ
- ಕ್ಯಾಸೆಲ್ ರಾಕ್ - ಕುಲೆಮ್ (ಗೋವಾ) ಕರ್ನಾಟಕದ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ರೈಲ್ವೆ ಡಬಲ್ ಟ್ರ್ಯಾಕಿಂಗ್
- ಕೈಗಾ ಪರಮಾಣು ವಿದ್ಯುತ್ ಸ್ಥಾವರ ವಿಸ್ತರಣೆ 5ನೇ ಮತ್ತು 6ನೇ ಹಂತ
- ತಾಳಗುಪ್ಪ - ಶರಾವತಿ ವನ್ಯಜೀವಿ ಅಭಯಾರಣ್ಯದ ಮೂಲಕ ಹೊನ್ನಾವರ ರೈಲು ಮಾರ್ಗ
- ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯದಲ್ಲಿ ಕೊಡಚಾದ್ರಿ ಬೆಟ್ಟಗಳಿಗೆ ರೋಪ್‌ವೇ
- ಚನ್ನರಾಯಪಟ್ಟಣ - ಹೊಳೆನರಸೀಪುರ-ಅರಕಲಗೂಡು-ಕೊಡ್ಲಿಪೇಟೆ-ಮಡಿಕೇರಿ ರಸ್ತೆ ವಿಸ್ತರಣೆ
- ಹಳೇಬೀಡು -ಹಾಸನ -ಅರಕಲಗೂಡು-ಪಿರಿಯಾಪಟ್ಟಣ-ಕುಟ್ಟ -ಕಣ್ಣೂರು (ಕೇರಳ) ರಸ್ತೆ ವಿಸ್ತರಣೆ
- ಕೊಡಗು, ಪಶ್ಚಿಮ ಘಟ್ಟಗಳ ಮಡಿಕೇರಿ-ವಿರಾಜಪೇಟೆ-ಮಾಕುಟ್ಟ-ಕಣ್ಣೂರು ರಸ್ತೆ ವಿಸ್ತರಣೆ
- ಕೊಡಗು ಜಿಲ್ಲೆಯ ಮಡಿಕೇರಿ-ಭಾಗಮಂಡಲ-ಪಾಣತ್ತೂರು-ಹೊಸದುರ್ಗ (ಕೇರಳ) ರಸ್ತೆ ವಿಸ್ತರಣೆ.
- ಕಾವೇರಿಯಲ್ಲಿ ಸಕಲೇಶಪುರ-ಶುಕ್ರವಾರ ಸಂತೆ-ಕೊಡ್ಲಿಪೇಟೆ-ವಿರಾಜಪೇಟೆ-ತಲಶ್ಶೇರಿ ರಸ್ತೆ ವಿಸ್ತರಣೆ
- ಮೈಸೂರು-ಕುಶಾಲನಗರ-ಮಡಿಕೇರಿ ರೈಲು ಮಾರ್ಗ
- ಕೊಡಗು ಮೂಲಕ ಮೈಸೂರು-ತಲಶ್ಶೇರಿ ರೈಲು ಮಾರ್ಗ
- ಕಾಣಿಯೂರು - ಕಾಂಞಂಗಾಡ್ ರೈಲು ಮಾರ್ಗ
- ಆಗುಂಬೆ ಸುರಂಗ ರಸ್ತೆ

'ಎಸ್‌ಐಆರ್ ಅಳಿಸುವ ಪ್ರಕ್ರಿಯೆ'

ಕೋಲ್ಕತ್ತ (ಪಿಟಿಐ): 'ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವು ದಾಖಲೆಗಳನ್ನು ಸರಿಪಡಿಸುವ ಬದಲಿಗೆ, ಮತದಾರರನ್ನು ಪಟ್ಟಿಯಿಂದ ಹೊರಗಿಡುವ ಪ್ರಕ್ರಿಯೆಯಾಗಿ ಪರಿವರ್ತಿತವಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ವಿವರ ಪುಟ 6

ATTEND TODAY, JANUARY 11 COME. TOUR. MEET.

OPEN HOUSE

Join us at PES University's Open House to meet our esteemed faculty, get all your queries answered, explore our state-of-the-art infrastructure, and discover why we are a top choice for your academic journey.

OPEN HOUSE ON JAN 11, FOR THE BELOW PROGRAMS ONLY.

MANAGEMENT
BBA
BBA (Hons) Business Analytics
BBA (Hospitality & Event Management)
BBA (Sports Management)

LAW
BBA-LLB (Hons)
BA-LLB (Hons)
LLB (Hons)
LLM

COMMERCE
B.Com (Gen / Hons)
B.Com (Hons) ACCA
B.Com (Hons) CMA
B.Com (Hons) CA
B.Com (Hons) CFA

DESIGN & ARCHITECTURE
B.Des
M.Des
B.Arch

ECONOMICS
B.Sc. (Hons) Economics

JOURNALISM & MASS COMMUNICATION
B.Sc. (Hons) Journalism & Mass Communication

PSYCHOLOGY
B.Sc. (Hons) Psychology
M.Sc. Psychology

COMPUTER APPLICATIONS
BCA
MCA

ARTS
B.A. (Hons) Performing Arts

TODAY, JAN 11
10:00 AM TO 1:00 PM
+91 8010 297 297
Scan
www.pes.edu
PES UNIVERSITY

VENUE: PES UNIVERSITY RING ROAD CAMPUS (BANASHANKARI 3RD STAGE)

ಚಿನಕುರುಳಿ ಪ್ರಕಾಶ್ ಶೆಟ್ಟಿ

'ಸುಪ್ರೀಂ' ಅಂಗಳ ತಲುಪಿದ ಜಟಾಪಟಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ/ ಕೋಲ್ಕತ್ತ: ರಾಜಕೀಯ ಸಲಹಾ ಸಂಸ್ಥೆ 'ಐ–ಪ್ಯಾಕ್' ಮೇಲೆ ದಾಳಿ ನಡೆಸಿದ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಪಶ್ಚಿಮ ಬಂಗಾಳ ಸರ್ಕಾರದ ನಡುವಿನ 'ಜಟಾಪಟಿ' ಶನಿವಾರ ಸುಪ್ರೀಂ ಕೋರ್ಟ್ ಅಂಗಳಕ್ಕೆ ತಲುಪಿದೆ.

'ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಶೋಧ ಕಾರ್ಯ ನಡೆಸುತ್ತಿದ್ದಾಗ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಅಲ್ಲಿನ ಸರ್ಕಾರಿ ಅಧಿಕಾರಿಗಳು ಅಡ್ಡಿಪಡಿಸಿದ್ದಾರೆ. ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳುವುದಕ್ಕೆ ತಡೆ ಒಡ್ಡಿದ್ದಾರೆ' ಎಂದು ಇ.ಡಿ, ಅರ್ಜಿಯಲ್ಲಿ ಆರೋಪಿಸಿದೆ.

ಬಂಗಾಳ ಸರ್ಕಾರವೂ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ತನ್ನ ವಾದ ಆಲಿಸದೆ ಯಾವುದೇ ಪ್ರತಿಕೂಲ ಆದೇಶ ಹೊರಡಿಸಬಾರದು ಎಂದು ಕೋರಿ ಕೇವಿಯಟ್ ಸಲ್ಲಿಸಿದೆ.

6

ಪೊಲೀಸ್ ತನಿಖೆ ಆರಂಭ

'ಐ–ಪ್ಯಾಕ್' ಮೇಲಿನ ದಾಳಿಗೆ ಸಂಬಂಧಿಸಿದಂತೆ ಮಮತಾ ಬ್ಯಾನರ್ಜಿ ಸಲ್ಲಿಸಿರುವ ದೂರಿನ ಕುರಿತ ತನಿಖೆಯನ್ನು ಕೋಲ್ಕತ್ತ ಪೊಲೀಸರು ಶನಿವಾರ ಆರಂಭಿಸಿದ್ದಾರೆ.

'ಐ–ಪ್ಯಾಕ್' ಮುಖ್ಯಸ್ಥ ಪ್ರತೀಕ್ ಜೈನ್ ಅವರ ನಿವಾಸ ಮತ್ತು ಸಂಸ್ಥೆಯ ಕಚೇರಿಯಲ್ಲಿದ್ದ ದಾಖಲೆಗಳ ಕಳ್ಳತನದಲ್ಲಿ ಭಾಗಿಯಾಗಿರುವ ಇ.ಡಿ ಅಧಿಕಾರಿಗಳನ್ನು ಗುರುತಿಸುವ ಪ್ರಕ್ರಿಯೆ ಪೊಲೀಸರು ಆರಂಭಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ ಈ ಎರಡೂ ಸ್ಥಳಗಳಲ್ಲಿದ್ದ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಗುರುತಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

6

HONDA

Alpha-Bold Plus Grille^ (Available as Optional Genuine Accessory) | Ivory & Black Two-Tone Interior | Intelligent ADAS Technology | Ultra Large Boot Space | 360° Surround Vision Camera^^ (Available as Optional Genuine Accessory)

Visit Nearest Honda Dealership
Call +91 73034 61122 | www.hondacarindia.com

UP TO 10 YEAR ANYTIME WARRANTY
Standard Warranty: 3 Years/ Unlimited Kilometers
Industry-first Extended Warranty: 7 Years/ Unlimited Kilometers
Industry-first Anytime Warranty: 10 Years/ 1 20 000 Kilometers

GOVT. APPROVED CNG RETROFITMENT KIT AVAILABLE# ON SELECT MODELS

E20 Honda Environment Technology

AVAIL SCRAPPAGE BENEFITS

SEAT BELTS FOR ALL SAFETY FOR ALL

SCAN TO TALK TO OUR EXPERT

*TOTAL BENEFITS: T&C Apply. Amount includes applicable cash, exchange, corporate, extended warranty or any other applicable offer/ benefits. Available for limited period on select model and in select cities. Stock without benefits is also available. ^Optional Honda Genuine Accessory available at an extra cost, to be fitted at Dealership. Honda Accessory Warranty is applicable & is limited to 1 year from the date of purchase. ^^Optional Accessory available at an extra cost from third party, to be fitted at Dealership. Warranty on such accessories is supported by Supplier & is limited to 2 years from date purchase. ^10 YEAR ANYTIME WARRANTY: Extendable up to the maximum age of 10 years or 120000 kilometers by renewing every year and is applicable from the date of purchase of car. Please refer owner's manual and Warranty Document for more details. #CNG: Govt. approved CNG retrofitment kit is provided by third party. CNG Kit warranty and any other related terms and conditions are applicable as specified by third party. Applicable on select models only. Black glass appearance on vehicle is due to lighting effect. Actual vehicle color, features, and specifications may vary from those shown and might not be part of standard fitment. Please check the availability of grades, colors, features, and offers at authorized dealerships. Honda Cars India Limited reserves the right to change or withdraw any colour, grade, feature, offers/ scheme or benefits without any prior notice. Scrappage benefits applicable on select models subject to receipt of valid certificate of deposit issued by RVSF. Honda SENSING (ADAS) cannot substitute human acumen and vigilance while driving. Honda Cars India Limited urges drivers to follow traffic rules which are meant to keep them safe on roads. For more information, please visit our authorized dealership or www.hondacarindia.com. For corporate sales enquiry please write to corporatesales@hondacarindia.com.

WHITEFIELD HONDA Whitefield Road - 86575 89175 | MAGNUM HONDA Kanakapura Road - 98455 24394 | Mekhri Circle - 99000 29164 | DAKSHIN HONDA Hosur Road - 86575 88495 | Lavelle Road - 98804 21212 | BRIGADE HONDA Yelahanka - 86575 88450

सत्यमेव जयते
Government of Gujarat
Shri Narendra Modi
Hon'ble Prime Minister
Shri Bhupendrabhai Patel
Hon'ble Chief Minister, Gujarat
Vibrant GUJARAT REGIONAL CONFERENCES
Regional Aspirations, Global Ambitions
SMRITI VAN EARTHQUAKE MUSEUM
Kutch & Saurashtra
11th & 12th January, 2026
Regional Aspirations, Global Ambitions
Focus Sectors
Ceramics
MSMEs
Engineering
Startups
Minerals
Petrochemicals
Fisheries
Textile
Ports & Logistics
Skill Development
Tourism & Culture
Agro & Food Processing
Green Energy Ecosystem
Machinery & Equipment
Blue Economy
Key Features of the Conference
• Inaugural Session
• Sector-specific Seminars
• Country Seminar
• Panel Discussions
• CEO Round Table Conference
• Startup Felicitation Programme
• B2B/ B2G Meetings
• Excursion Visits
• Industrial Tours
• Regional MSME Conclave
• Regional Awards (MSMEs/Artisans)
• Trade Show/ Exhibition
• Reverse Buyer-Seller Meet
• Udyami Mela
• Vendor Development Programme
• Cultural Programme
• Valedictory Session
Vibrant Gujarat Regional Exhibition
11th to 15th January, 2026 | 10:00 hrs. to 17:30 hrs.
Inauguration by
Shri Narendra Modi
Hon'ble Prime Minister
In the august presence of
Shri Bhupendrabhai Patel
Hon'ble Chief Minister, Gujarat
Shri Harsh Sanghavi
Hon'ble Deputy Chief Minister, Gujarat
11th January, 2026, Sunday
12:30 hrs.
Marwadi University, Rajkot, Gujarat
"Vibrant Gujarat Regional Conference will open a new direction for Gujarat's industrial excellence."
- Shri Harsh Sanghavi, Hon'ble Deputy Chief Minister, Gujarat
Partner Countries
Japan
Rwanda
South Korea
Ukraine
Live Telecast on: CMOGuj CMOGuj CMOGujarat CMOGujarat vibrantgujarat vibrantgujarat vibrant_gujarat vibrantgujarat
Scan QR code for website
Scan QR code for location
Partner Organisations
icbc
JETRO
US-INDIA
U.S.-India Business Council
THE WORLD BANK
ACMA
IACC INDO-AMERICAN CHAMBER OF COMMERCE
UIBC
kotra Korea Trade-Investment Promotion Agency
FEBI
AMCHAM INDIA

‘ದ್ವೇಷ ಭಾಷಣ ಮಸೂದೆಗೆ ಸಹಿ ಹಾಕದಿರಲಿ’

‘ಪ್ರಜಾಪ್ರಭುತ್ವಕ್ಕಾಗಿ ನಾಗರಿಕರು’ ವೇದಿಕೆಯ ವಿಚಾರಗೋಷ್ಠಿಯಲ್ಲಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವು ರೂಪಿಸಿರುವ ದ್ವೇಷ ಭಾಷಣ ಮತ್ತು ದ್ವೇಷಾಪರಾಧ ತಡೆ ಮಸೂದೆಯು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ಇಂತಹ ಮಸೂದೆಗೆ ರಾಜ್ಯಪಾಲರು ಸಹಿ ಮಾಡಬಾರದು. ಇದು ಜಾರಿಯಾಗಲೇಬಾರದು’ ಎಂದು ಹಿರಿಯ ವಕೀಲ ಬಿ.ವಿ.ಆಚಾರ್ಯ ಅವರು ಹೇಳಿದರು.

‘ಪ್ರಜಾಪ್ರಭುತ್ವಕ್ಕಾಗಿ ನಾಗರಿಕರು’ ವೇದಿಕೆಯು ಶನಿವಾರ ಆಯೋಜಿಸಿದ್ದ ‘ದ್ವೇಷ ಭಾಷಣ ಮಸೂದೆ ಮತ್ತು ನಾಗರಿಕ ಸ್ವಾತಂತ್ರ್ಯ’ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಈ ಮಸೂದೆಯ ಪರಿಣಾಮಗಳ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು. ನನಗಿರುವ ಮಾಹಿತಿ ಪ್ರಕಾರ ರಾಜ್ಯಪಾಲರು ಈ ಮಸೂದೆಗೆ ಸಹಿ ಹಾಕಿಲ್ಲ ಮತ್ತು ಅದನ್ನು ರಾಷ್ಟ್ರಪತಿ ಅವರಿಗೆ ಕಳುಹಿಸಲು ಕಾಯ್ದಿರಿಸಿದ್ದಾರೆ. ಮಸೂದೆ ಕುರಿತಾಗಿ ನಾಗರಿಕರು ರಾಜ್ಯಪಾಲರಿಗೆ ಮನವಿ ಸಲ್ಲಿಸಬಹುದಾಗಿದ್ದು, ಅವರು ಅವನ್ನು ಪರಿಗಣಿಸುವ ಸಾಧ್ಯತೆಯೂ ಇದೆ’ ಎಂದರು.

‘ಸಮವರ್ತಿ ಪಟ್ಟಿಯಲ್ಲಿರುವ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾನೂನು ರೂಪಿಸಿದರೆ, ಕೇಂದ್ರದ ಕಾನೂನೇ ಅನ್ವಯವಾಗುತ್ತದೆ. ರಾಜ್ಯದ ಮಸೂದೆಯು ಜಾರಿಯಾಗಬೇಕಾದರೆ, ರಾಷ್ಟ್ರಪತಿ ಅವರ ಅಂಕಿತ ಅನಿವಾರ್ಯ. ಈ ಕರಾಳ ಮಸೂದೆಯನ್ನು ತಡೆಗಟ್ಟಲು ಜನರು ರಾಷ್ಟ್ರಪತಿಗೂ ಮನವಿ ಸಲ್ಲಿಸಬೇಕು’ ಎಂದು ಕರೆ ನೀಡಿದರು.

ಗೋಷ್ಠಿಯಲ್ಲಿ ವಿಚಾರ ಮಂಡಿಸಿದ ವಕೀಲರು, ನಿವೃತ್ತ ಪೊಲೀಸ್ ಅಧಿಕಾರಿ ಮತ್ತು ಪತ್ರಕರ್ತರು, ದ್ವೇಷ ಭಾಷಣ ಮತ್ತು ದ್ವೇಷಾಪರಾಧ ಅಂದರೆ ಏನು ಎಂಬುದನ್ನು ಮಸೂದೆಯಲ್ಲಿ ಸ್ಪಷ್ಟಪಡಿಸಿಲ್ಲ. ಹೀಗಾಗಿ, ಇದು ಜಾರಿಯಾದರೆ ದುರ್ಬಳಕೆಯಾಗುವ ಸಾಧ್ಯತೆ ಹೆಚ್ಚು ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ (ಎಡದಿಂದ) ಪತ್ರಕರ್ತ ರಂಗನಾಥ್ ಭಾರದ್ವಾಜ್, ಬಿ. ವಿ ಆಚಾರ್ಯ, ಜ್ಯೋತಿಪ್ರಕಾಶ್ ಮಿರ್ಜಿ, ವಿವೇಕ್ ಸುಬ್ಬಾರೆಡ್ಡಿ ಮತ್ತು ಸಾಮಾಜಿಕ ಕಾರ್ಯಕರ್ತ ಎ. ಹರಿರಾಮ್ ಅವರು ಭಾರತಾಂಬೆ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಭಾರತೀಯ ನ್ಯಾಯ ಸಂಹಿತೆಯ 196 ಮತ್ತು 266ನೇ ಸೆಕ್ಷನ್‌ಗಳಲ್ಲಿ ದ್ವೇಷ ಭಾಷಣದಂತಹ ಅಪರಾಧಗಳನ್ನು ವ್ಯಾಖ್ಯಾನಿಸಿದ್ದು, ಅಂಥದ್ದೇ ಅಪರಾಧಗಳಿಗೆ ಮತ್ತೊಂದು ಕಾನೂನು ಏಕೆ?
ವಿವೇಕ್ ಸುಬ್ಬಾರೆಡ್ಡಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ

ಮಸೂದೆ ಸಿದ್ಧಪಡಿಸುವಾಗ ರಾಜ್ಯ ಸರ್ಕಾರವು, ವ್ಯಕ್ತಿ ಸ್ವಾತಂತ್ರ್ಯ ಮತ್ತು ಅದರ ಮಹತ್ವವನ್ನು ಮರೆತಿರುವಂತಿದೆ. ಜನರು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವೇ ಇಲ್ಲದಂಥ ಸ್ಥಿತಿ ಸರಿಯಲ್ಲ
ಎಂ.ಟಿ.ನಾಣಯ್ಯ, ಹಿರಿಯ ವಕೀಲ

ಮಸೂದೆ ಜಾರಿಯಾದರೆ ಪೊಲೀಸರ ಮೇಲೆ ಒತ್ತಡ ಹೆಚ್ಚಲಿದೆ. ಕೃತ್ಯವನ್ನು ಯಾವ ಕಾನೂನಿನಲ್ಲಿ ಪರಿಗಣಿಸಬೇಕು, ಪ್ರಕರಣ ದಾಖಲಿಸಬೇಕು ಎಂಬ ಗೊಂದಲ ಸೃಷ್ಟಿಯಾಗಲಿದೆ
ಜ್ಯೋತಿ ಪ್ರಕಾಶ್ ಮಿರ್ಜಿ, ನಿವೃತ್ತ ಐಪಿಎಸ್ ಅಧಿಕಾರಿ

ಹೂಡಿಕೆದಾರರ ಜಾಗೃತಿ ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ

CANARA ROBECO Mutual Fund

#smarTomorrows
ಹೂಡಿಕೆದಾರರ ಶಿಕ್ಷಣ ಮತ್ತು ಜಾಗೃತಿ ಉಪಕ್ರಮ

ಸದಾನಂದ ಪ್ಯಾಟಿ

ಬೆಂಗಳೂರು: ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಮತ್ತು ‘ಕೆನರಾ ರೊಬೆಕೊ’ ಮ್ಯೂಚುವಲ್ ಫಂಡ್ಸ್ ಸಹಯೋಗದೊಂದಿಗೆ ಜನವರಿ 12 ರಂದು ಸಂಜೆ 4 ಗಂಟೆಗೆ ಹಣಕಾಸು ತಜ್ಞರಿಂದ ‘ಸ್ಮಾರ್ಟ್ ಟುಮಾರೊ– ಹೂಡಿಕೆದಾರರಿಗೆ ಜಾಗೃತಿ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಎಂ.ಜಿ. ರಸ್ತೆಯಲ್ಲಿರುವ ದಿ ಪ್ರಿಂಟರ್ಸ್ ಮೈಸೂರು ಕಚೇರಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ, ಬಂಡವಾಳ ಮಾರುಕಟ್ಟೆಯಲ್ಲಿ ಅಪಾಯಗಳ ನಿರ್ವಹಣೆ, ಮಾರುಕಟ್ಟೆ ಒಳಸುಳಿವು ಮತ್ತು ಹಣಕಾಸು ಯೋಜನೆ, ಕಾಲಕಾಲಕ್ಕೆ ಶಿಸ್ತುಬದ್ಧ ಹೂಡಿಕೆಗಳ ಬಗ್ಗೆ ಆರ್ಥಿಕ ಪರಿಣತರು ಮಾಹಿತಿ ನೀಡುವರು.

ಇತ್ತೀಚಿನ ಸುಲಭ ಹೂಡಿಕೆ ವಿಧಾನ ಮತ್ತು ಹಿಂಪಡೆಯುವಿಕೆ ಆಯ್ಕೆಗಳ ಬಗ್ಗೆಯೂ ತಿಳಿವಳಿಕೆ ನೀಡಲಾಗುವುದು.

ಈ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದೆ.

ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ನೋಂದಣಿ ಮಾಡಿಕೊಳ್ಳಬಹುದು. 60ರಿಂದ 90 ನಿಮಿಷದ ಅವಧಿಯ ಉಪನ್ಯಾಸ ಕಾರ್ಯಕ್ರಮವನ್ನು ‘ಕೆನರಾ ರೊಬೆಕೊ’ ವಲಯ ಮಾರಾಟ ವಿಭಾಗದ ಮುಖ್ಯಸ್ಥ ಸದಾನಂದ ಪ್ಯಾಟಿ ಅವರು ನಿರ್ವಹಿಸುವರು.

ಇದು ರಾಜ್ಯದಲ್ಲಿ ನಡೆಯುತ್ತಿರುವ 4ನೇ ಆವೃತ್ತಿಯ ಹೂಡಿಕೆದಾರರ ಜಾಗೃತಿ ಕಾರ್ಯಕ್ರಮ. ಮಾಹಿತಿಗೆ 7338018541 ಸಂಪರ್ಕಿಸಬಹುದು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

SITE FOR SALE ANJANAPURA 1st Block 30x40 E/F and BCCHS Layout 30x40 and 40x60 E/F. Call: 9740148870 9341050991.

Banashankari

"BANASHANKARI 6TH STAGE 4th Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex. Call: 9845146725/ 9741466369"

60X40 A Khata SITE in Veerabhadranagar near PES University, Hosakerehalli for sale. Contact: 9591299944

BDA HALF site for sale IV H Block FE of BSK VI stage 6mx9mEF 9449081178

Hosur Road

14,200 SQ ft plot for sale Basapura village south Bangalore call Ganesh 9448477152 for info

Hebbal

40X60
West Face SITE Sale
BBMP B KATHA
Nr Manyata Techpark
Near MANYATA TECHPARK Back Gate No.5(200m) P&T Layout, Rachenahalli. Ct: 9483114740/ 9962377428

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

LUXURY TRIPLEX HOUSE FOR SALE @ TIRUPATI

Scenic View of Alipiri Nama & Seven Hills

- Premium Independent Modern Triplex
- Total Site Area: 336 Sq. Yds
- Built-up: 9,712 Sq Feet
- West Facing | Italian Marble Flooring
- Vastu Compliant
- 7 Bedrooms with Attached High-End Bathrooms
- Modern Modular Kitchen | Lift | Home Theatre | Gym | Bar | Library
- 2 Car Parking | Borewell
- Situated in Posh Layout

Prime Location:

- 5 mins to Railway Station & Bus Stand
- 10 mins to Alipiri (Tollgate of Tirumala)
- 15 mins to Airport

Contact: Mr. Ravi Kumar - 99895 36333

DIRECT OWNER 30x40 N/F BDA Site Sale, KEMPEGWODA LAYOUT 7th H Sector, Full Developed. 9632966556

Magadi Road

750 SQFT Vacant Site, WF Herohalli, Sunkadakatte, Magadi Road, E Katha, 53L, Direct Owner 9740073482

"BEL 2ND_STAGE Magadi_Main Road 1425_Sqft x 2 Sites South West Corner 60`ft Road. 9845500019/ 7019314962"

SITE SALE 30x50 BMRDA, WF, 30ft Road, Rs. 12250/- Rashi Residency Layout, Magadi Road Negotiable: 9916826976

Nagarabhavi

"NAGARABHAVI DEEPA_COMPLEX MPM Layout 40x60 East North Corner BDA Site Sale 80% White. 9448432633"

Rajajinagar

FOR Sale BDA 30X50 West Rajajingar 2nd Stage Rs. 25000/- Two percent Commission: 8884255563

RMV

DOLLARS COLONY RMV 2nd Stage 50X90 West Facing, Old House BDA Excellent Location For-Sale Call:7829203369

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

Vishweshwariah Layout

DIRECT OWNER 30x40 BDA Site Sale VISHWESHWARAIAH LAYOUT 40ft Road, Full Developed Area, ₹11000/-. 9742681666

"40.5X55 [2227]_SQFT EF_RESIDENTIAL BBMP CONVENTION SITE SALE. ATTACH_1ST_BLOCK VISHVESHWARAIAH LAYOUT- 9845143579"

"VISHVESWARAIAH LAYOUT 6th Block 40x60 South facing Site Sale, Good Location Genuine Buyers Contact: 9845500019/ 7019314962"

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

"VISVESHWARAIAH LAYOUT 1st Block 40x60 East facing Site for sale Call: "Krishna"- 9886294610 (Brokers Excuse)"

ರೌನ್ ಇನ್ಫ್ರಾ RAUN E-CITYSCAPE

A PREMIUM PLOTTED DEVELOPMENT LIMITED EDITION
PRIVATE KINGDOM AWAITS YOU !... @ ELECTRONIC CITY PHASE 1
Behind Euro School
(30x40) (30x50) PLOTS AVAILABLE FOR SALE
SCAN FOR LOCATION
BDA APPROVED
RERA NUMBER: PRM/KA/RERA/1251/308/PR/041024/007115
BDA NUMBER: ಬೆಅಪ್ರಾ/ನಯೋ/PRL-03/2065/2023-24
+91 98442 52259 / 98440 08171

VISHWESHWARAIAH LAYOUT, BDA 6th Block, 20x30 West Facing, 30 Feet Road Direct Owner Contact: 6360050356

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

30X40 SITE Sale VISHVESHWARAIAH Layout North Face, 20x30 East 46 Lakhs 6th Block Attached: 8310003509

House

Banashankari

RENT LEASE sale 2/ 3 house apartments Banashankari 2nd stage, Basavanagudi, Girinagar, Padmanabhanagar. Siddappa : 9964079497

Jayanagar

SLAE 35X45 at_Jayanagar 4th T_Block 40feet Road North Facing old_House Excellent_Location Ct: 9844134068

J P Nagar

SALE 30X40 J.P.Nagar 3rd Phase 2BHK Each 3 Floors Just 5years old Excellent Loction Ct: 9844134068

Mysore

MYSORE LUXURY HOUSE FOR SALE Brand New Three Floors 37 Squares. Ground 2BHK, First and Second 3BHK Duplex. Own Borewell 2 Carparks, All modern Facility. 1.95Cr Contact: 99867-42260/ 99864-94502

HOUSE FOR SALE

Ground & First Floor J.P. NAGAR 1st PHASE Close to Oxford School & College
Site Measuring 30 x 40 Feet About 1200 Sq. Ft.
Price Rs. 31500 Per Sq. Ft.,
Whatsapp: 7338632180

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

SALE BSK 3rd stage- 3 BHK + 3T .1651 SF. A- khata. Recently Renovated. Mob- 9801269356. E-Mail: sfylaptop@gmail.com

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to Move, A Khatha, E-swathu, Carparking Lift Vaasthu, Maruthi Layout. Rs.1.10.Cr. 9945224058 6363181276.

Residential/ Commercial

Hoskote

PLOT FOR SALEHaralur,Hoskote,6000sq ft,Rs.4000/sqft,BMRDA approved, West facing Corner plot,5min to STRR,BMTC Route, Call: +91 9448011981

Outer Ring Road

ORR(SUMANAHALLI-LAGGARE BRIDGE) Corner Commercial Site 2,800 Sft. "A"&"E" Khatha facing ORR at Chowdeshwarinagar Call:998055558

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Joint Development

Tumkur Road

JV 2.5 Acres Converted Land Near Tata Homes New Haven. Approach 80' Road. 9008406693/9008406695.

Industrial & Factory

Peenya

SALE, PEENYA 3rd phase, KIADB, half_acre land, builtup- 15000 sqft with power. Rs.10000/- sqft. Not Negotiable. ANAND_RAO 9844039416

Farm House/ Land/ Resorts

General

HILLTOP FARM For Sale in Wayanad. Cont: 7338630606

Commerical

General

TENANTED PROPERTY for sale in Prestige towers Residency Road, 2244 sft Rents 1.90 lakh Per month sale price 4.25 Cr. Citilines 9741417120.

Koramangala

KORAMANGALA 740 sqft Superbuilt Furnished office- Sale, opposite Nexus, Bangalore, Raheja Arcade. Clear titles. 7010513435.

Mysore

COMMERCIAL LAND FOR SALE
52,272 sqft/ 1.08 Acres
Rs.1250/- per sqft
10 Km from Palace, Surrounded by Layouts
SUITABLE FOR Layout, Hospital, Hotels, Lodge, Villa House, Choultry, Farm House, HD Kote Main Road Mysore.
Ganishka Properties Buy/Sell
Contact: +91 97397 03467

MORE Classifieds Ads on Subsequent Pages

PRM/KA/RERA/1251/308/PR/291225/008366
DS MAX SKY SAMPADHA
SUPER LUXURIOUS 2 & 3-BHK APARTMENTS
HOSUR ROAD
10 MINS. ELECTRONIC CITY
2-BHK HOMES STARTS @ **₹ 60.30 L***
G+22 FLOORS
*T & C Apply
DS MAX

CREDAI BENGALURU
8880 003 003
www.dsmaxproperties.com

FOR SALE

BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

Commercial Building

J P Nagar

RENT - JP Nagar 9th phase, 5000sft, factory Outlet / Dark Store / Warehouse. 9910022981

Agricultural Land Converted

Intl Airport Road

ONE ACRE to Fifty acres agriculture land around devanahalli, doddaballpura, nandihills, chikkaballapur. for out rate sale Genuine/ serious buyer call: 9844471345

Agricultural Land

Out-Station

18 ACRES BEAUTIFUL AGRI LAND WITH ABUNDANT WATER IN KUDALUR, HANUR TALUK, CHAMRAJNAGAR DISTRICT PIN: 571444
Excellent Cash Crop Cultivation
Build Green Farm Houses
Build Schools and Resorts
Excellent Future Value
Long Term Investment
90470 75405

AGRICULTURAL LAND For-Sale at Yadgir Dist Naykal Village Near to Main-Road 11.28 Acres. 9880563629 9448473358

South

VICTORY PROPERTIES
(A 35 years Experienced Real Estate Company)
FOR SALE 3-14 ACRES
(1,36,590 Sq Ft) At Bangalore South, Uttrahalli Hobli, Nelguli Village, Bangalore 560082, 2kms from Bangalore-Kanakpura highway, Near Somanhalli Toll, 32 kms from Vidhana Soudha, Under New Greater Bangalore Authority, Excellent Property For Farmland Project, Fully Compounded, Borewell, Electricity, Price Rs 1500/ Per Sqft
CONTACT
8618576685

Mysore

MYSORE NANJANGUDU 5acre and 10acre Land For Immediate Sale Only 25 Lakhs Per Acre: 9535195656

Commercial Land

Airport Road

AIRPORT ROAD, Near Mall of Asian, 3 Acres Converted Land, Registered Owner. SALE 13,500/-sft. Call:9980577227

Sarjapur Road

COMMERCIAL LAND Sale 25000Sft Dommasandra Electronic City Main Road Near PRR Junction And DPS 8884501767

RENTAL PROPERTIES

Accommodation Available

Commercial

OFFICE/ ATM Space for RENT 20,000/-, 350 sqft. Bellary Main road near CBI, Ganganagar. 9845154533.

Flats

SEMI-FURNISHED 3BHK FLAT for`RENT at Sumukha Meadows Vishnu`Vardhan Road Channasandra Bengaluru with.CarPark, Lift.& 24hrs`Water Supply. Ready`to Occupy. No Brokers. Call:9533339694 9246369439.

House

FURNISHED POSH One RK Available at J.P.Nagar, 4th Phase For Rent Contact: 8431686838

PREMISES REQUIRED ON LEASE

Bank requires a well-constructed commercial premise for Branch Banking, admeasuring 2000sq.ft. ± 10% Carpet Area in ready possession / under construction at **Vijayanagar Govindarajnagar**, Bengaluru -560040 on ground floor.

For further details, please visit Bank's website **www.unionbankofindia.com/e-Procurement** portal **tenders.gov.in/**.

Last date for submission of bids in prescribed format is **01.02.2026 up-to 16.00 hrs.**

The Bank reserves the right to reject any or all bids without assigning any reasons whatsoever.

Sd/- Deputy General Manager

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUSINESS

Business to Business

Finance

FINANCE
Property Collaterals Available in HYDERABAD
9154136496

WE ARRANGE Loan against Commerical/ Residential Building/ School Building/ Hospital Building Convention Hall/ Bar & Restaurant, Property and Business loan from Schedule Banks. Call Mrs Jyothi: 8971132289- 9380509779

Business Offers

Business For Sale

SALE 100_BED multi-speciality hospital with latest equipments near Manyata Tech'Park. Call Arun 9845077299. If next generation is not interested in your business, schools, Colleges and Hospitals sell it.

General

AVAILABLE: 2ACRES FARMLAND, Borewell, Guest House,150Trees Before,Magadi for Developing NatureCure Center. Naturopaths With,Experience Contact appliedco@gmail.com and,WhatsApp 9448139894.

MATRIMONIAL

Brides Wanted

Hindu

BRIDE WANTED
For handsome & humble 30 years 168 cm fair in complexion Telugu boy only child from affluent family . Educated in Switzerland & India boys parents inter caste marriage . Seeking well educated Telugu speaking well educated girl from any OC/ BC caste only from well settled business families
9059380447

Grooms Wanted

Hindu

LOOKING FOR GROOM
Looking for a Hindu Doctor Groom. We are seeking a suitable match for our daughter, a 32-year-old, well-educated and accomplished Hindu girl from Bangalore. She is 5'2" in height, an MD in Paediatrics, and currently working as a Paediatric Doctor. Brought up with strong values, she is career-oriented and family-minded. We are looking for a Hindu groom who is a qualified MD Doctor, from India or abroad. Caste & Community are open with Hindu preference. Interested families may kindly contact - 9880834239

DH DECCAN HERALD Classifieds
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

SUZUKI

*10-POINT FREE CHECK-UP

*10% DISCOUNT ON LABOUR CHARGES & ACCESSORIES

10 MILLION SMILES

10 MILLION MOMENTS OF PRIDE. THANK YOU FOR CHOOSING SUZUKI.

IT'S YOU WHO MADE IT POSSIBLE.
WE'LL ALWAYS BE BY YOUR SIDE.

*EXCLUSIVE GIFT ON EVERY TEST RIDE

*SPECIAL SCHEME: LAST EMI WAIVER AND NIL PROCESSING FEE

T&C apply: *Service offer valid from 10th Jan to 10th Feb 2026. *Sales offer valid from 10th Jan to 10th March 2026.

AUTHORISED DEALERSHIPS: BANGALORE: Hosur Road: NINESTAR SUZUKI, Ph: 9019023333, **HSR Layout:** NINESTAR SUZUKI, Ph: 9019023333, **Bannerghatta Road:** NINESTAR SUZUKI, Ph: 9019023333, **Koramangala:** ORION SUZUKI, Ph: 080-25524747, 9535081055, **JP NAGAR:** ORION SUZUKI, Ph: 96060 37441. **Rajaji Nagar:** SAPTAGIRI SUZUKI, Ph: 8123754163, **Mathikere:** SAPTAGIRI SUZUKI, Ph: 8123754136, **Basaweshwara Nagar:** SAPTAGIRI SUZUKI, Ph: 8123754127, **Sheshadripuram:** SAPTAGIRI SUZUKI, Ph: 8123754171, **Kottigepalya:** SAPTAGIRI SUZUKI, Ph: 8123754131, **T. Dasarahalli, Tumkur Road:** SAPTAGIRI SUZUKI, Ph: 8123754150, **Nelamangala:** SAPTAGIRI SUZUKI, Ph: 8123754142, **Vasanthnagar:** VALUE SUZUKI, Ph: 9845906084/ 9108258679, **Yelhanka:** HONNASIRI SUZUKI, Ph: 9945004047, **Basavanagudi:** ADVAITH SUZUKI, Ph: 9880741841, **Kathriguppe:** APPLE SUZUKI, Ph: 080-26697070/ 8080, 8884446504/08/02, **BTM Layout:** APPLE SUZUKI, Ph: 8884446512, **Kanakapura Road:** APPLE SUZUKI, Ph: 8884446503, **RR Nagar:** APPLE SUZUKI, Ph: 8884446502, **Old Airport Road(Domlur):** ARYAN SUZUKI, Ph: 9739969996, **Whitefield:** ARYAN SUZUKI, Ph: 9739969995, **K. R. Puram:** ARYAN SUZUKI,Ph: 9739949998, **Mahadevpura:** ARYAN SUZUKI, Ph: 9739929996, **Hoodi:** ARYAN SUZUKI –Bike Zone, Ph: 08047470000/8073783992, **KH Road:** AVANISH SUZUKI - 9591931113, **KH Road:** AVANISH SUZUKI BIKEZONE-9900879000, **Vijaynagar:** AVANISH SUZUKI, Ph: 8971900111, 8197800222, **Kengeri:** AVANISH SUZUKI, Ph: 8197900111, 9108945333, **Nagarbhavi:** AVANISH SUZUKI, Ph: 9606988444/ 9148233644, **Banaswadi:** BHOJANNA SUZUKI, Ph: 9148656565, **Bellary Road:** MEGHAVATH SUZUKI, Ph: 9632899459, **M G Road:** MEGHDOOTH SUZUKI, Ph: 9513533384, **HBR Layout:** MEGHDOOTH SUZUKI: Ph: 9513533374., **HOSAKOTE:** DAIVIK SUZUKI, 9449046049, 7899366585,

INDIAN NAVY
COMBAT READY CREDIBLE COHESIVE ATMANIRBHAR

INDIAN NAVY

Safeguarding Seas for a Viksit Samriddha Bharat



THE INDIAN NAVY 10+2 (B.TECH) CADET ENTRY SCHEME (PERMANENT COMMISSION)
COURSE COMMENCING – JUL 2026

Applications are invited from unmarried men and women candidates (fulfilling the conditions of nationality as laid down by the Govt. of India) for becoming Permanent Commissioned Officers in Executive and Technical branches under 10+2 B Tech Cadet Entry Scheme after undergoing four year B Tech course at the prestigious Indian Naval Academy, Ezhimala

DATE OF OPENING – 03 Jan 2026 | LAST DATE FOR ONLINE APPLICATION – 19 Jan 2026

Vacancies & Age: The age eligibility & vacancies for the course are as under:-

Branch	Vacancy	Gender	Age
Executive & Technical	44	Men and Women (maximum of 07 vacancies for women)	Born between 02 Jan 2007 and 01 Jul 2009 (both dates inclusive)

(*Branch allocation viz Executive & Technical (Engineering & Electrical) will be undertaken at INA.)

Educational Qualification. Passed Senior Secondary Examination (10+2 Pattern) or its equivalent examination from any recognised Board with at least 70% aggregate marks in Physics, Chemistry and Mathematics (PCM) and at least 50% marks in English (either in Class X or Class XII).

For eligibility criteria and details visit www.joinindiannavy.gov.in

Employment News Dated 03 Jan 2026

CBC 10701/13/0018/2526

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಹೋರಾಟಗಾರರ ಬಂಧನ: ಆಕ್ರೋಶ

ವರ್ಗಾ ಅಟ್ಯಾಚ್‌ಮೆಂಟ್ ಸಂಸ್ಥೆ ವಿರುದ್ಧದ ಪಾದಯಾತ್ರೆ ತಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲೂರು ಕೈಗಾರಿಕಾ ಪ್ರದೇಶದ ವರ್ಗಾ ಅಟ್ಯಾಚ್‌ಮೆಂಟ್ ಸಂಸ್ಥೆ ತನಕ ಹೊರಟಿದ್ದ ಪಾದಯಾತ್ರೆಯನ್ನು ಹೊಸಕೋಟೆ ಟೋಲ್ ಬಳಿ ಪೊಲೀಸರು ತಡೆದು ಹೋರಾಟಗಾರರನ್ನು ಬಂಧಿಸಿರುವ ಕ್ರಮವನ್ನು ಸಿಐಟಿಯು ರಾಜ್ಯ ಸಮಿತಿ ಖಂಡಿಸಿದೆ.

ಕಾರ್ಮಿಕರಿಗೆ ನ್ಯಾಯಬದ್ಧ ಸೌಲಭ್ಯಗಳನ್ನೂ ನೀಡಿಲ್ಲ. ಕೈಗಾರಿಕೆ ಮುಚ್ಚಿರುವುದಾಗಿ ಸುಳ್ಳು ಹೇಳಿ, 81 ಕಾರ್ಮಿಕರನ್ನು ಕೆಲಸದಿಂದ ಹೊರಹಾಕಿದ್ದಾರೆ. ಮತ್ತೊಂದು ಸಂಸ್ಥೆಯ ಮೂಲಕ ಉತ್ಪಾದನಾ ಚಟುವಟಿಕೆ ನಡೆಸಲಾಗುತ್ತಿದೆ ಎಂದು ಸಿಐಟಿಯು ಅಧ್ಯಕ್ಷೆ ಎಂ.ಎಸ್.ಮೀನಾಕ್ಷಿ ಸುಂದರಂ ಹಾಗೂ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಆರೋಪಿಸಿದ್ದಾರೆ.

ಶಾಂತಿಯುತವಾಗಿ ಪಾದಯಾತ್ರೆ ಹೊರಟಿತ್ತು. ಹೋರಾಟಗಾರರನ್ನು ಬಂಧಿಸಿ ಹೋರಾಟ ಹತ್ತಿಕ್ಕುವ ಕೆಲಸ ಮಾಡಲಾಗಿದೆ. ಸರ್ಕಾರ ಮಾಲೀಕರ ಪರ ನಿಲ್ಲುತ್ತಿರುವುದು ಸ್ಪಷ್ಟವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 142 ದಿನಗಳಿಂದ ಹಲವು ರೀತಿಯ ಕಾನೂನುಬದ್ಧ ಹೋರಾಟ ಮಾಡಿ, ಕಾರ್ಮಿಕ ಸಚಿವ, ಕೋಲಾರ ಜಿಲ್ಲಾಧಿಕಾರಿ ಮತ್ತು ಕಾರ್ಮಿಕ ಇಲಾಖೆಯ ಪ್ರಮುಖರಿಗೆ ಮನವಿ ಸಲ್ಲಿಸಲಾಗಿತ್ತು. ಆದರೂ ಬೇಡಿಕೆ ಈಡೇರಿಲ್ಲ. ರಾಜ್ಯದ ಹಲವು ಕಾನೂನುಗಳನ್ನು ವರ್ಗಾ ಅಟ್ಯಾಚ್‌ಮೆಂಟ್ ಸಂಸ್ಥೆ ಮಾಲೀಕರು ಉಲ್ಲಂಘನೆ ಮಾಡಿ, ಕಾರ್ಮಿಕರಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

JOB OPPORTUNITIES

Teachers/ Professors

ST.PHILOMENA'S English School, Doddabommasandra, Bengaluru-97. State & ICSE Board Hiring Teachers for all the classes for all the subjects including Art-craft PE-Female. Qualification: BA,B.Sc,MA, M.Sc B.Ed. Walk-in OR send Resume WhatsApp 9741275231, Email:administrator @st-philomena.org Contact: 40903810

ST.CHARLES WOMEN'S PU College Invites well-qualified and committed faculty members (preferably female, residents of Bengaluru) with excellent communication skills for the following positions: Teaching Staff (Post Graduate): Physics, Chemistry, Mathematics, Biology, Computer Science, History, Economics, Business Studies, Accountancy, Statistics, Physical Education, Kannada, Hindi, English and French. Non -Teaching Staff: Office Admin & Lab Assistant Eligible candidates may attend a walk-in interview with their resume and a recent passport- size photograph or send email within 5 days from the date of publication of this advertisement at the address given below: ST. CHARLES WOMEN'S PU COLLEGE St. Thomas Town, Lingarajapuram, B'lore-84. Ph: 080- 25800997, 8951817353, 7337771636 Email: stcharlespu@gmail.com

VET FIRST Grade College, JP Nagar invites faculty for BBA Business Analytics. Qualification- MBA/ MCom/ MCA. Preference will be given to KSET/ NET qualified & SC/ ST candidates. Email- vetfgc@rediffmail.com

ARVIND Residential School & PU College
Kunigal. Ph: 08132-210000/ 01. Mob: 9945210041/ 9483683002.
Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
▸ PUC LECTURERS (Science & Commerce Stream)
Well Experienced NEET & JEE faculties
▸ VICE-PRINCIPAL & CO-ORDINATOR (ICSE/ CBSE/ STATE)
▸ Nursery/ Primary/ Middle School/ High school Teachers (ICSE/ CBSE/ STATE)
▸ Warden (M/F), Nurse (F), Office Asst. PE Teachers Experienced in all streams with desired qualification
Send your resume with recent passport size photo to airsjobs@gmail.com within 7 days

BANASHANKARI VIDYA SAMSTHE, #105, 12th Main, Opp.BHCS Layout, Subramanyapura Post, Bangalore-560061, REQUIRED- ACCOUNTANT, Degree with Computer Skills. Contact: 9343738553, 9483494468.

MOUNT CARMEL PU COLLEGE, #58, Palace Road, Bengaluru-01 mails@mcpuc.edu.in, requires LECTURERS (Post-Graduates with B.Ed will be Preferred) For All SUBJECTS of HUMANITIES, SCIENCE, COMMERCE, ENGLISH, All LANGUAGES and FRENCH, PHYSICAL EDUCATION, LIBRARY and COUNSELING. Apply before 17.01.2026

Hotel

WANTED EMPLOYEES Working for Hotels All Types of Chefs- 30k to 40k Salary Dishwasher- 15k Salary Housekeeping- 15k Salary Kitchen Helper- 18k to 20k Salary Dosa Master- 30k Salary Tea Master - 20k to 25k Salary Food & Accommodation will be provided for free. Please contact 9901242961 for the job.

WANTED: MANAGER/ SUPERVISOR with Hotel Management/Business Administration experience & Experienced COOKS for CAFE MYTHRI at Bommasandra, Bangalore-560099. Contact: 080-26601239/ 9741862781. Email- cafemythri@gmail.com

Marketing & Sales

TELECALLERS (FEMALE) BUSINESS EXECUTIVES (MALE) Graduates with English Communication, Computer Knowledge, Basaveswarnagar Media Office: 9845411113

THANKS GIVING
To Place your Classified Ads Contact:
9731810277

Part-Time Jobs

CHANNEL PARTNER with HDFC Bank Subsidiary. Age 40-69, 75K, PF/ MC, Experience Only: 9902072424

Manager

WANTED MALE Candidate for Leading Wireless Telecom Company: (A) MANAGER -Marketing /Business Development, (B) MANAGER -Sales & Service, Qualification- Diploma /B.Sc. /Engg (E&C/ E&E) 5-8 years experience with 2 wheeler. 9845602130 9945026468

MORE Classifieds Ads on Subsequent Pages

Multiple Vacancy

WANTED SAFINA Plaza - Immediate Requirements: 1) Property Manager 2) Manager - Housekeeping Minimum 5 years' experience in a reputed property. Salary as per industry standards and experience. Please send your resume to info@safinaplaza.com Contact: 7019235988

PERSONAL

Change of Name

I, MONIKA BHAGWAN DAREKAR, Residing at Flat-A103, Desai Grandeur Apartment, Vijanaynagar, Whitefield, Bengaluru-560066, have changed my Name to MONIKA OMKAR PISAL, vide Affidavit dated 09-01-2026, sworn before notary VEENA. J, Bengaluru.

Lost

LOST OF DOCUMENT
I, Rashmi Prabhakar D/o Prabhakar No.14 & 15, 3rd Cross, Shankarpuram, Bangalore-560004. I have Lost original Sale deed copy in a name of A Nirmala Site No.182, sale deed No.2111/2000-01, Book 1, Volume No.2268 Dt. 20-02-2001 and Site No.183 sale deed No.2110/2000-01, Book 1, Volume No.2268 Pages 9 to16 Dt. 20-02-2001 and Site No.184, Sale deed No.2115/2000-01 Book 1, Volume 2268 pages 49-56, Dt.20-02-2001 above 3 Sites situated at Vinayas Nagar, Bukkasagara Village, Jigani Hobli, Anekal Taluk, Bengaluru wile traveling by Auto Dt.15-11-2025 **Finders Please Contact: 9900110018**

DOCUMENT LOST
I, **Rajendra Kumar Jain,** R/at No 977/A 10th B Main, 2nd Floor 4th E Block Rajajinagar, Bangalore-10, have lost the **Original Registered Sale Deed, No.: 6689/96-97, (Peenya) Complete File of Site No. 149, Anoopnagar Layout, Huskur (P), Dasana pura (H) Vide E - Khata No 15020020280130058O.** If found please Contact: **7000580369, 9424530888.**





ನರೇಗಾ: ಪಂಥಾಹ್ವಾನ ಸ್ವೀಕರಿಸಿದ ಎಚ್‌ಡಿಕೆ

ಯೋಜನೆಯ ಹೊಸ ಸ್ವರೂಪ ಕುರಿತು ಬಹಿರಂಗ ಚರ್ಚೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಗಾ ಯೋಜನೆಯ ಹೊಸ ಸ್ವರೂಪ ಕುರಿತು ಬಹಿರಂಗ ಚರ್ಚೆಗೆ ಕಾಂಗ್ರೆಸ್ ನಾಯಕರು ನೀಡಿರುವ ಆಹ್ವಾನ ಸ್ವೀಕರಿಸಿದ್ದೇನೆ. ನರೇಗಾ ಯೋಜನೆಯಲ್ಲಿ ರಾಜ್ಯ ಸರ್ಕಾರ ನಡೆಸಿದ ಭ್ರಷ್ಟಾಚಾರವನ್ನೂ ಅದೇ ವೇದಿಕೆಯಲ್ಲಿ ಬಹಿರಂಗ ಪಡಿಸುತ್ತೇನೆ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರ ಸ್ವಾಮಿ ಹೇಳಿದರು.

ಕುಮಾರಸ್ವಾಮಿ

'ನರೇಗಾ ಯೋಜನೆಯ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಸವಾಲು ಹಾಕಿದ್ದರು.

ಬಿಜೆಪಿ ನಾಯಕರ ಜತೆ ಶನಿವಾರ ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ, 'ವಿಬಿ–ಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಪಕ್ಷ ಸುಳ್ಳಿನ ಕಥನ ಸೃಷ್ಟಿ ಮಾಡುತ್ತಿದೆ. ಆ ಸುಳ್ಳನ್ನು ಎದುರಿಸಲು ದಾಖಲೆ ಸಮೇತ ಬಹಿರಂಗ ಚರ್ಚೆಗೆ ತಯಾರಿದ್ದೇನೆ. ಅವರು ಹರಡುತ್ತಿರುವ ಸುಳ್ಳುಗಳನ್ನು ಜನರು ನಂಬುವ ಕಾಲ ಈಗ ಇಲ್ಲ' ಎಂದರು.

'ಸುದೀರ್ಘ ಅವಧಿ ದೇಶವನ್ನು ಆಳಿದ ಕಾಂಗ್ರೆಸ್ ನಾಯಕರು ಯಾವುದಾದರೂ ಪ್ರಮುಖ ಯೋಜನೆಗಳಿಗೆ ಗಾಂಧೀಜಿ ಅವರ ಹೆಸರು ಇಟ್ಟಿದ್ದಾರೆಯೇ? ಎಲ್ಲಾ ಯೋಜನೆಗಳಿಗೆ ನೆಹರೂ ಕುಟುಂಬದ ಸದಸ್ಯರ ಹೆಸರು ಇಟ್ಟು ಗಾಂಧೀಜಿಗೆ ದ್ರೋಹ ಬಗೆದಿದ್ದಾರೆ. ಕೇವಲ ಮತಕ್ಕಾಗಿ ಹೆಸರು ಬಳಕೆ ಮಾಡಿಕೊಂಡಿದ್ದಾರೆ. ಅವರಿಗೆ ಗಾಂಧೀಜಿ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ' ಎಂದು ಹೇಳಿದರು.

'ನರೇಗಾದಲ್ಲಿ ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ. ಜಾಬ್‌ಕಾರ್ಡ್ ಇಲ್ಲದ ವರಿಗೂ ಹಣ ನೀಡಿದ್ದಾರೆ. ಗ್ರಾಮೀಣ ಜನರಿಗೆ ಅಗತ್ಯವಾದ ಆಸ್ತಿ ಯನ್ನು ಸೃಷ್ಟಿಸಿಲ್ಲ. ಕೇಂದ್ರದ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಿದ್ದಾರೆ. ಕಳ್ಳ ಲೆಕ್ಕ ಸೃಷ್ಟಿಸಿ ಲೂಟಿ ಮಾಡಿದ್ದಾರೆ. ಈ ತಪ್ಪುಗಳನ್ನು ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಸರಿ ಮಾಡಲಿಲ್ಲ. ಅದಕ್ಕಾಗಿಯೇ ಕೇಂದ್ರ ಸರ್ಕಾರ ಲೋಪಗಳನ್ನು ಸರಿಪಡಿಸಲು ಕಾಯ್ದೆಗೆ ತಿದ್ದುಪಡಿ ತಂದಿದೆ' ಎಂದರು.

'ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕೊಪ್ಪಳ ದಲ್ಲಿ ನರೇಗಾ ಕೂಲಿ ಕೊಟ್ಟಿಲ್ಲ ಎಂದು ಪ್ರತಿಭಟನೆ ನಡೆಸಿದವರ ಮೇಲೆ ಲಾಠಿ ಚಾರ್ಜ್ ನಡೆದಿತ್ತು. ಕೂಲಿ ನೀಡು ವುದಾಗಿ ಟ್ರ್ಯಾಕ್ಟರ್‌ನಲ್ಲಿ ಕರೆದುಕೊಂಡು ಹೋಗಿದ್ದ ಕಾರ್ಮಿಕರಿಗೆ ಜಾಬ್‌ಕಾರ್ಡ್ ಇರಲಿಲ್ಲ. ಅಪಘಾತಕ್ಕೆ ತುತ್ತಾಗಿ ಕೆಲ ಕಾರ್ಮಿಕರು ಮೃತಪಟ್ಟಿದ್ದರು. ಕಾಂಗ್ರೆಸ್ ಭ್ರಷ್ಟಾಚಾರಕ್ಕೆ ಇದು ಸಾಕ್ಷಿ' ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಯುವ ಜನತಾದಳ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಉಪಸ್ಥಿತರಿದ್ದರು.

'ಚರ್ಚೆಗೆ ನಾವೂ ಸಿದ್ಧ'

'ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ನರೇಗಾ) ಕಾಯ್ದೆ ಕುರಿತು ಚರ್ಚೆಗೆ ನಾವೂ ಸಿದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ನರೇಗಾ ಯೋಜನೆಯ ಕುರಿತು ಬಹಿರಂಗ ಚರ್ಚೆಗೆ ಎಚ್.ಡಿ. ಕುಮಾರಸ್ವಾಮಿ ಆಹ್ವಾನಿಸಿದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ನರೇಗಾ ವಿಚಾರದಲ್ಲಿ ನಾವು ದೊಡ್ಡ ಆಂದೋಲನವನ್ನೇ ಮಾಡುತ್ತೇವೆ' ಎಂದರು. 'ರಾಜ್ಯಕ್ಕೆ ಎಷ್ಟೇ ಅನ್ಯಾಯವಾದರೂ ಕೇಂದ್ರ ಸರ್ಕಾರ ಮಾಡಿದ್ದನ್ನೆಲ್ಲಾ ಬಿಜೆಪಿಯವರು ಸಮರ್ಥಿಸಿಕೊಳ್ಳುವುದು ಮಹಾ ತಪ್ಪು. ಕರ್ನಾಟಕಕ್ಕೆ ಆಗಿರುವ ಎಲ್ಲ ಅನ್ಯಾಯಗಳನ್ನು ಬಿಜೆಪಿಯವರು ನ್ಯಾಯ ಎನ್ನುವುದು ಮಹಾ ಅಪರಾಧ' ಎಂದು ಅವರು ಹೇಳಿದರು. ಕುಮಾರಸ್ವಾಮಿ ಮಾಡಿರುವ ಆರೋಪಗಳಿಗೆ ಪ್ರತಿ-ಕ್ರಿಯಿಸಲು ನಿರಾಕರಿಸಿದ ಮುಖ್ಯಮಂತ್ರಿ, 'ಬಿಜೆಪಿ, ಜೆಡಿಎಸ್‌ನವರು ಸುಳ್ಳು ಹೇಳುತ್ತಾರೆ' ಎಂದರು.

'ಸದನದಲ್ಲೇ ಚರ್ಚೆಗೆ ಬನ್ನಿ'

'ವಿಬಿ–ಜಿ ರಾಮ್ ಜಿ ಯೋಜನೆ ಕುರಿತ ಚರ್ಚೆಗೆ ವಿಶೇಷ ಅಧಿವೇಶನ ಕರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ನರೇಗಾ ಮೂಲಕ ಕಾಂಗ್ರೆಸ್ ಇಷ್ಟು ವರ್ಷಗಳಲ್ಲಿ ಏನು ಮಾಡಿದೆ? 10 ವರ್ಷಗಳಲ್ಲಿ ಮೋದಿಯವರ ನಾಯಕತ್ವದಡಿ ಮಾಡಿದ ಸಾಧನೆ ಏನು ಎಂಬುದನ್ನು ಚರ್ಚಿಸಲು ನಾವೂ ಸಿದ್ಧರಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸು ನನಸಾಗಲು ₹8 ಲಕ್ಷ ಕೋಟಿ ಖರ್ಚು ಮಾಡುವ ಯೋಜನೆ ಸುಲಲಿತವಾಗಿ ಸಾಗಬೇಕು. ಬಡವರಿಗೆ ತಲುಪಬೇಕು ಎಂಬ ಕಾರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಕಾಯ್ದೆ ತಂದಿದ್ದಾರೆ. ಬಡವರಿಗೆ ತಲುಪಬೇಕೆಂದು ಪ್ರಧಾನಿಯವರು ಆಲೋಚಿಸಿದ್ದೇ ತಪ್ಪೇ ಎಂದು ಅವರು ಪ್ರಶ್ನಿಸಿದರು.

'ಮೋದಿಯವರ ಜನಪ್ರಿಯತೆ ಅರಗಿಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗುತ್ತಿಲ್ಲ. ಅದು ಹತಾಶೆಯ ಸ್ಥಿತಿಯಲ್ಲಿದೆ. ಹತ್ತಾರು ವರ್ಷ ಆಡಳಿತ ಮಾಡಿದಾಗ ಸ್ಕೀಂ (ಯೋಜನೆ) ಬಗ್ಗೆ ಕಾಂಗ್ರೆಸ್ ಯೋಚಿಸಿಲ್ಲ; ಸ್ಕ್ಯಾಮ್(ಹಗರಣ) ಬಗ್ಗೆಯೇ ಅದು ಯೋಚಿಸಿತು ಎಂದು ವಿಜಯೇಂದ್ರ ಟೀಕಿಸಿದರು.

'ಸಿದ್ದರಾಮಯ್ಯ 'ಲೀಸ್' ಮುಖ್ಯಮಂತ್ರಿ'

'ಸಿದ್ದರಾಮಯ್ಯ ಲೀಸ್ ಆಧಾರದಲ್ಲಿ ನೇಮಕವಾಗಿರುವ ಮುಖ್ಯಮಂತ್ರಿ. ಲೀಸ್ ಅವಧಿ ಮತ್ತು ಅದಕ್ಕೆ ನಿಗದಿಯಾದ ಮೊತ್ತದ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಕುಮಾರಸ್ವಾಮಿ ಹೇಳಿದರು. 'ದೇವರಾಜ ಅರಸು ದಾಖಲೆ ಮುರಿಯುವುದೇ ಸಾಧನೆಯಲ್ಲ. ಹಿಂದೆ ಇಂದಿರಾಗಾಂಧಿ ವಿರುದ್ಧ ಅರಸು ಅವರು ಸಡ್ಡು ಹೊಡೆದು ನಿಂತಿದ್ದರು. ನಿರಂತರವಾಗಿ ಅವರು ಅಧಿಕಾರ ನಡೆಸಿದ್ದರು. ಸಿದ್ದರಾಮಯ್ಯ ಅವರು ಈಗ ರಾಹುಲ್ ಗಾಂಧಿ ಅವರು ಹೊರಗೆ ಹೋಗು ಎನ್ನುವ ದಿನಕ್ಕಾಗಿ ಕಾಯುತ್ತಿದ್ದಾರೆ' ಎಂದರು.

ದ್ವೇಷಾಪರಾಧ: ರಾಜ್ಯಪಾಲರಿಗೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ಭಾಷಣ ಹಾಗೂ ದ್ವೇಷಾಪರಾಧಗಳನ್ನು ತಡೆಯಲು ರಾಜ್ಯ ಸರ್ಕಾರ ತಂದಿರುವ ಮಸೂದೆಯ ಪರವಾಗಿ ಕಾಂಗ್ರೆಸ್, ವಿರೋಧವಾಗಿ ಬಿಜೆಪಿಯು, ರಾಜ್ಯಪಾಲರ ಮೊರೆ ಹೋಗಲು ಅಣಿಯಾಗಿವೆ.

ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನ ದಲ್ಲಿ ಈ ಮಸೂದೆ ಮಂಡಿಸಿದ್ದ ರಾಜ್ಯ ಸರ್ಕಾರ, ಬಿಜೆಪಿ, ಜೆಡಿಎಸ್ ವಿರೋಧದ ಮಧ್ಯೆಯೇ ಅನುಮೋದನೆ ಪಡೆದಿತ್ತು.

ಮಸೂದೆಯನ್ನು ಅಂಗೀಕರಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಕೋರಿ, ಲೋಕಭವನಕ್ಕೆ ಕಳುಹಿಸಲಾಗಿತ್ತು. ಈ ಮಸೂದೆಯು ರಾಜ್ಯಪಾಲರ ಪರಿಶೀಲನೆಯಲ್ಲಿದೆ ಎಂದು ಗೊತ್ತಾಗಿದೆ.

ಏತನ್ಮಧ್ಯೆ, ಮಸೂದೆಯ ಪರ–ವಿರೋಧದ ಚಟುವಟಿಕೆ ಶುರುವಾಗಿದೆ. ಈ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ರಾಜ್ಯಪಾಲರನ್ನು ಭೇಟಿ ಮಾಡಿ ಈ ಬಗ್ಗೆ ವಿವರಣೆ ನೀಡಲಾಗುವುದು' ಎಂದರು.

'ಮಸೂದೆಯ ಕರಾಳತೆ ಮನವರಿಕೆ ಮಾಡುವೆ'

'ದ್ವೇಷ ಭಾಷಣ ಮಸೂದೆಯು ಒಂದು ಕರಾಳ ಅಧ್ಯಾಯ. ಇದು ಜಾರಿಯಾದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂಬುದನ್ನು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಿಧಾನಸಭೆಯಲ್ಲಿ ಚರ್ಚೆಗೆ ಅವಕಾಶ ಇಲ್ಲದೆಯೇ ಈ ಮಸೂದೆಗೆ ಅಂಗೀಕಾರ ಪಡೆಯಲಾಯಿತು. ನಾನು ಚರ್ಚೆಗೆ ಮುಂದಾಗುತ್ತಿದ್ದಂತೆ ಆಡಳಿತ ಪಕ್ಷದವರು ಗಲಾಟೆ ಆರಂಭಿಸಿದರು. ಈ ಮಸೂದೆಗೆ ಅಂಗೀಕಾರ ಪಡೆಯುವಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರ ನಡೆಯ ಬಗ್ಗೆಯೂ ನನಗೆ ಬೇಸರವಿದೆ' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, 'ಈ ಮಸೂದೆಯನ್ನು ಬಿಜೆಪಿ ಮತ್ತು ಜೆಡಿಎಸ್ ವಿರೋಧಿಸಿವೆ. ಈ ಮಸೂದೆ ಮೂಲಕ ಅಘೋಷಿತ ತುರ್ತು ಪರಿಸ್ಥಿತಿ ಹೇರಲು ಕಾಂಗ್ರೆಸ್ ಮುಂದಾಗಿದೆ. ರಾಜ್ಯಪಾಲರು ಮಸೂದೆಯನ್ನು ತಡೆದು ಒಳ್ಳೆಯ ಕೆಲಸ ಮಾಡಿದ್ದಾರೆ' ಎಂದರು.

'ಮಸೂದೆ ವಾಪಸ್ ಕಳುಹಿಸಿಲ್ಲ'

'ದ್ವೇಷ ಭಾಷಣ ತಡೆಗಾಗಿ ವಿಧಾನಮಂಡಲದಲ್ಲಿ ಅನುಮೋದನೆಯಾದ ಮಸೂದೆಯನ್ನು ರಾಜ್ಯಪಾಲರು ಅವರ ಬಳಿಯೇ ಇಟ್ಟುಕೊಂಡಿದ್ದಾರೆ' ಎಂದು ಜಿ. ಪರಮೇಶ್ವರ ಹೇಳಿದರು. 'ರಾಜ್ಯಪಾಲರು ವಾಪಸ್ ಕಳುಹಿಸಿ ಸ್ಪಷ್ಟನೆ ಕೇಳಿದರೆ ಕೊಡುತ್ತೇವೆ. ತಿರಸ್ಕರಿಸಿದರೆ ಮುಂದೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ' ಎಂದರು.

ನದಿ ಜೋಡಣೆ: ಜನ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ಪಶ್ಚಿಮಘಟ್ಟದ ಜೀವನಾಡಿಗಳಾದ ಬೇಡ್ತಿ-ವರದಾ ಹಾಗೂ ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆ ಕೈಬಿಡಲು ಆಗ್ರಹಿಸಿ ಜ.11ರಂದು ಶಿರಸಿಯ ಎಂಇಎಸ್ ಕಾಲೇಜು ಮೈದಾನದಲ್ಲಿ 'ಜನ ಸಮಾವೇಶ' ನಡೆಯಲಿದೆ.

'ಮಲೆನಾಡು ಭಾಗದ ಜನರ ಧ್ವನಿ ಈ ಸಮಾವೇಶದ ಮೂಲಕ ಮೊಳಗಲಿದೆ' ಎಂದು ಹೋರಾಟದ ನೇತೃತ್ವ ವಹಿಸಿರುವ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸರ್ಕಾರಗಳು ನದಿ ಜೋಡಣೆ ಯೋಜನೆ ಜಾರಿಗೆ ಮುಂದಾಗುತ್ತಿರುವ ಹಂತದಲ್ಲಿ ಜನರ ವಿರೋಧದ ಧ್ವನಿ ಇನ್ನಷ್ಟು ಗಟ್ಟಿಯಾಗಬೇಕಾಗಿದೆ. ಪರಿಸರಕ್ಕೆ ಮಾರಕ ವಾಗುವ ಯೋಜನೆ ವಿರುದ್ಧ ಜನಶಕ್ತಿ ಒಗ್ಗೂಡ ಬೇಕಿದೆ' ಎಂದರು. ನೆಲಮಾವು ಮಠದ ಮಾಧವಾನಂದಭಾರತಿ ಸ್ವಾಮೀಜಿ ಇದ್ದರು.

ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ

ಭೀಮಣ್ಣ ಖಂಡ್ರೆ ಆರೋಗ್ಯ ಕ್ಷೀಣ; ಆಸ್ಪತ್ರೆಗೆ ದಾಖಲು

ಬೀದರ್: ಮಾಜಿ ಸಚಿವರೂ ಆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ (102) ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದು, ನಗರದ ಗುದಗೆ ಮಲ್ಟಿ ಸ್ಪೆಷಾಲಿಟಿ ಆ್ಯಂಡ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭೀಮಣ್ಣ ಖಂಡ್ರೆ

'ವೈದ್ಯಕೀಯ ತಂಡ ಉಪಚಾರ ಮಾಡುತ್ತಿದ್ದು, ಆರೋಗ್ಯ ಸುಧಾರಣೆ ಕಾಣುತ್ತಿದೆ' ಎಂದು ಹಿರಿಯ ವೈದ್ಯ ಚಂದ್ರಕಾಂತ ಗುದಗೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ವಿಷಯ ತಿಳಿದ ಸಚಿವ ಈಶ್ವರ ಬಿ. ಖಂಡ್ರೆ ಅವರು ಆಸ್ಪತ್ರೆಗೆ ಭೇಟಿ ಕೊಟ್ಟು, ತಂದೆಯ ಯೋಗಕ್ಷೇಮ ವಿಚಾರಿಸಿ, ವೈದ್ಯರಿಂದ ಮಾಹಿತಿ ಪಡೆದರು.

ಪತ್ರಕರ್ತರೊಂದಿಗೆ ಮಾತನಾಡಿದ ಈಶ್ವರ ಖಂಡ್ರೆ, 'ಒಂದು ವಾರದಿಂದ ಅನಾರೋಗ್ಯ ದಿಂದ ಬಳಲುತ್ತಿದ್ದರು. ವಯೋ ಸಹಜ ಕಾಯಿಲೆ ಇದೆ. ಉಸಿರಾಟದ ಸಮಸ್ಯೆ ಇದ್ದು, 2-3 ದಿನಗಳಿಂದ ಬಿಪಿಯಲ್ಲಿ ಏರುಪೇರಾಗಿದೆ. ಬೆಳಿಗ್ಗೆ ಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡಿದೆ' ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಪ್ರತಿಪಾದನೆ

'ತುಷ್ಟೀಕರಣದ ಅಗತ್ಯ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೂ, ಮುಸ್ಲಿಂ, ಪಾರ್ಸಿ, ಸಿಖ್ಖರು ಈ ದೇಶದ ನಾಗರಿಕರು. ಹೀಗಿರುವಾಗ ಯಾವ ಸಮುದಾಯವನ್ನೂ ತುಷ್ಟೀಕರಣ ಮಾಡುವ ಅಗತ್ಯ ಇಲ್ಲ' ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಹೇಳಿದರು.

ನಗರದ ಭವತಾರಿಣಿ ಪ್ರಕಾಶನ ಮತ್ತು ಚಾರಿಟಬಲ್ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಎಸ್.ಗುರುಮೂರ್ತಿ ಅವರ 'ಭಾರತೀಯ ಮುಸ್ಲಿಂ ವೀರಯೋಧರ ವೀರಗಾಥೆಗಳು' ಪುಸ್ತಕವನ್ನು ಜನಾರ್ಪಣೆಗೊಳಿಸಿ ಮಾತನಾಡಿದರು.

'ದೇಶದ ಜನರು ನಮ್ಮವರು ಅಂದುಕೊಂಡರೆ ಯಾವ ಸಮಸ್ಯೆ ಬರುವುದಿಲ್ಲ. ಇಲ್ಲಿರುವ ಮುಸ್ಲಿಮರು ನಮ್ಮ ದೇಶದಲ್ಲಿಯೇ ಹುಟ್ಟಿರುವುದು. ಕೆಲವರು ತುಷ್ಟೀಕರಣದ ಕುರಿತು ಮಾತ ನಾಡುತ್ತಿದ್ದಾರೆ. ಜ್ಞಾನ ಇಲ್ಲದ ಜನರು ದೇಶ ಆಳುತ್ತಿದ್ದಾರೆ ಮತ್ತು ಈ ರೀತಿಯ ವ್ಯಾಖ್ಯಾನ ಮಾಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಟಿಪ್ಪು ಜಯಂತಿ ಆಚರಣೆ ಮಾಡಿದ್ದೆವು. ಆಗ ಯಾವುದೇ ಪ್ರತಿಭಟನೆ ಮಾಡಿರಲಿಲ್ಲ. ನಂತರ ವಿವಾದ ಶುರು ಮಾಡಿದ್ದಾರೆ. ಟಿಪ್ಪು ದೇಶಕ್ಕಾಗಿ ತನ್ನ ಮಕ್ಕಳನ್ನು ಬ್ರಿಟಿಷರಿಗೆ ಅಡವಿಟ್ಟ. ದೇಶದ ಇತಿಹಾಸ ತಿಳಿದುಕೊಳ್ಳಬೇಕು. ದೇಶದ ಸಂಸ್ಕೃತಿ, ಪ್ರಜಾಪ್ರಭುತ್ವ ಮೌಲ್ಯ ತಿಳಿದುಕೊಳ್ಳದ ಹೊರತು ಗಲಭೆಗಳು ನಿಲ್ಲುವುದಿಲ್ಲ' ಎಂದು ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ ಗುರುಮೂರ್ತಿ, ಎಂ. ಅಬ್ದುಲ್ ರೆಹಮಾನ್ ಪಾಷ, ಮೊಹಮದ್ ಫಾರೂಕ್ ಪಾಷ, ರಿಜ್ವಾನ್ ಅರ್ಷದ್, ಹಂಪ ನಾಗರಾಜಯ್ಯ ಮತ್ತು ಎಂ. ವೀರಪ್ಪ ಮೊಯಿಲಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಪ್ರಜಾಪ್ರಭುತ್ವ ಮೌಲ್ಯ ತಿಳಿದುಕೊಳ್ಳದ ಹೊರತು ಗಲಭೆ ನಿಲ್ಲದು
- ಜ್ಞಾನ ಇಲ್ಲದ ಜನರು ದೇಶ ಆಳುತ್ತಿದ್ದಾರೆ: ಮಾಜಿ ಸಿ.ಎಂ ಟೀಕೆ

ದೇಶಕ್ಕೆ ಸ್ವರೂಪ ಕೊಟ್ಟವರು ಗಾಂಧೀಜಿ. ಇದನ್ನು ಮರೆತರೆ ನಾವು ದೇಶ ದ್ರೋಹಿಗಳಾಗುತ್ತೇವೆ. ದೇಶಕ್ಕಾಗಿ ಹೋರಾಡಿದವರ ಮಾಹಿತಿಯನ್ನು ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು. ಈ ಪುಸ್ತಕದ ಮೂಲಕ ಅಂತಹ ಕೆಲಸವಾಗಿದೆ.
ಎಂ.ವೀರಪ್ಪ ಮೊಯಿಲಿ, ಮಾಜಿ ಮುಖ್ಯಮಂತ್ರಿ

ಸಾಹಿತಿ ಪ್ರೊ. ಹಂಪ ನಾಗರಾಜಯ್ಯ ಮಾತನಾಡಿ, 'ಭಾಷೆಗೂ ಜಾತಿ ಕಟ್ಟುತ್ತಿದ್ದಾರೆ. ಉರ್ದು ಮಾತನಾಡಿದರೆ ಮುಸ್ಲಿಂ, ಪ್ರಾಕೃತ ಮಾತನಾಡಿದರೆ ಜೈನರು ಎನ್ನುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಮನಸ್ಸು ಪರಿವರ್ತನೆ ಆಗುವಂತಹ ಪುಸ್ತಕವನ್ನು ಗುರುಮೂರ್ತಿ ಅವರು ಬರೆದಿದ್ದಾರೆ' ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ಸಾಹಿತಿ ಪ್ರೊ. ಜಿ.ಅಶ್ವತ್ಥ ನಾರಾಯಣ, ಲೇಖಕರಾದ ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ, ಶಾಕಿರಾ ಖಾನಂ, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಮೊಹಮ್ಮದ್ ರಫಿ ಪಾಷ, ಪ್ರಾಧ್ಯಾಪಕ ಮೊಹಮ್ಮದ್ ಫಾರೂಕ್ ಪಾಷ ಇದ್ದರು.

'ಭಾರತೀಯ ದೃಷ್ಟಿಕೋನದ ವಿಶ್ಲೇಷಣೆ ಅಗತ್ಯ'

ಮಂಗಳೂರು ಲಿಟ್ ಫೆಸ್ಟ್: ಇತಿಹಾಸ ತಜ್ಞೆ, ಮೀನಾಕ್ಷಿ ಜೈನ್ ಅಭಿಮತ

ಪ್ರಜಾವಾಣಿ ವಾರ್ತೆ

ಮಂಗಳೂರು: 'ದೇಶದ ಇತಿಹಾಸವನ್ನು ಭಾರತೀಯ ಸೈದ್ಧಾಂತಿಕ ನೆಲೆಯಲ್ಲಿ ವಿಶ್ಲೇಷಿಸಿದಾಗ, ಇಲ್ಲಿನ ಶ್ರೀಮಂತ ಸಂಸ್ಕೃತಿಯನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ' ಎಂದು ಇತಿಹಾಸ ತಜ್ಞೆ, ರಾಜ್ಯಸಭಾ ಸದಸ್ಯೆ ಮೀನಾಕ್ಷಿ ಜೈನ್ ಶನಿವಾರ ಇಲ್ಲಿ ಅಭಿಪ್ರಾಯಪಟ್ಟರು.

ಭಾರತ ಫೌಂಡೇಶನ್ ಆಶ್ರಯದಲ್ಲಿ ಆರಂಭವಾದ ಎಂಟನೇ ಆವೃತ್ತಿಯ 'ಮಂಗಳೂರು ಲಿಟ್ ಫೆಸ್ಟ್' ಉದ್ಘಾಟನಾ ಸಮಾರಂಭದಲ್ಲಿ 'ಮಂಗಳೂರು ಲಿಟ್ ಫೆಸ್ಟ್ ಪ್ರಶಸ್ತಿ'ಯನ್ನು ಸ್ವೀಕರಿಸಿ, ಬಳಿಕ 'ಭಾರತೀಯ ನಾಗರಿಕತೆ; ಪರಂಪರೆಯ ಮರುಕೊಂಡಿ' ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆರಾಧನೆ, ಆಚರಣೆಗಳು ಜನಜೀವನದಲ್ಲಿ ಹಾಸುಹೊಕ್ಕಿರುವ ಪರಿಣಾಮವಾಗಿ, ಉಳಿದೆಲ್ಲ ನಾಗರಿಕತೆಗಳು ಅಳಿದರೂ ಜನರಿಂದ ರಕ್ಷಣೆಯಾದ ಸಿಂಧೂ ನಾಗರಿಕತೆ ಅಜರಾಮರವಾಗಿದೆ ಎಂದರು.

ಪಾಶ್ಚಾತ್ಯ ದೃಷ್ಟಿಕೋನವನ್ನು ದೂರೀಕರಿಸಿ, ಭಾರತೀಯ ದೃಷ್ಟಿಯಲ್ಲಿ ಇತಿಹಾಸದ ವಿಶ್ಲೇಷಣೆ ಮಾಡಿದಾಗ ನೈಜ ಇತಿಹಾಸದ ಅರಿವು ಬೆಳಗುತ್ತದೆ ಎಂದರು.

ಕಾಶಿ ಜಾಗದ ವಿಚಾರ ಉಲ್ಲೇಖಿಸಿದ ಅವರು, 1936ರಲ್ಲಿ ವ್ಯಕ್ತಿಯೊಬ್ಬರು ಅದು ವಕ್ಫ್‌ಗೆ ಸೇರಿದ ಜಾಗವೆಂದು ದಾವೆ ಹೂಡಿದರು. ಬ್ರಿಟಿಷರ ಆಡಳಿತದಲ್ಲೇ ಅದರ ತನಿಖೆ ನಡೆಸಲಾಯಿತು. ಅಲ್ಲಿನ 35 ನಿವಾಸಿಗಳನ್ನು ಮಾತನಾಡಿಸಿ ಮಾಹಿತಿ ಸಂಗ್ರಹಿಸಲಾಯಿತು. ಸುಮಾರು ನಾಲ್ಕು ಸಾವಿರ ಪುಟಗಳಷ್ಟು ವರದಿಯನ್ನು ಸಲ್ಲಿಸಲಾಗಿದೆ ಎನ್ನುತ್ತಾ, ಅಯೋಧ್ಯೆ, ಮಥುರಾ, ಕಾಶಿ ಬಗ್ಗೆ ನಡೆಸಿರುವ ಅಧ್ಯಯನವನ್ನು ಉಲ್ಲೇಖಿಸಿದರು.

'ಮಥುರಾ 1947ರ ಪೂರ್ವದವರೆಗೂ ಅದು ಕೃಷ್ಣ ಜನ್ಮ ಭೂಮಿಯಾಗಿತ್ತು. ಕೃಷ್ಣ ಜನ್ಮ ಭೂಮಿ ಟ್ರಸ್ಟ್‌ನ ಹೋರಾಟಗಳ ನಡುವೆಯೂ 13.37 ಎಕರೆ ಭೂಮಿಯಲ್ಲಿ 3 ಎಕರೆಯನ್ನು 1968ರಲ್ಲಿ ಅಧಿಕಾರದಲ್ಲಿದ್ದ ಸರ್ಕಾರ ಈದ್ಗಾಕ್ಕೆ ಹಸ್ತಾಂತರಿಸಿದೆ. ಕಾನೂನಾತ್ಮಕವಾಗಿ ಈ ಭೂಮಿ ಹಸ್ತಾಂತರಿಸಿದ್ದರಿಂದ ಇದನ್ನು ವಾಪಸ್ ಪಡೆಯುವುದು ಸುಲಭ ವಾಗಲಾರದು' ಎಂದು ಪ್ರೇಕ್ಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ಶತಾವಧಾನಿ ಆರ್. ಗಣೇಶ್ ಅವರು ಸಾಹಿತ್ಯ ಹಬ್ಬವನ್ನು ಉದ್ಘಾಟಿಸಿದರು. ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ರವಿ ಎಸ್, ಸಂಸದ ಕ್ಯಾ. ಬ್ರಿಜೇಶ್ ಚೌಟ ಇದ್ದರು

'ಮಂಗಳೂರು ಲಿಟ್ ಫೆಸ್ಟ್'ನಲ್ಲಿ ಇತಿಹಾಸ ತಜ್ಞೆ, ಮಿನಾಕ್ಷಿ ಜೈನ್ ಅವರಿಗೆ ಮಂಗಳೂರು ಲಿಟ್ ಫೆಸ್ಟ್ ಪ್ರಶಸ್ತಿ ನೀಡಿ ಗೌರವಿಸಲಾಯಿತು –ಪ್ರಜಾವಾಣಿ ಚಿತ್ರ

'ಆಂತರಿಕ ಭದ್ರತೆ'ಯ ಪ್ರಜ್ಞೆ ಮುಖ್ಯ: ವಿಕ್ರಂ ಸೂದ್

ಶತ್ರುಗಳನ್ನು ಹಣಿಯಲು ಮತ್ತು ದೇಶದ ಆಂತರಿಕ ಭದ್ರತೆಯನ್ನು ಗಟ್ಟಿಗೊಳಿಸಲು ವಿರೋಧ ಪಕ್ಷದಲ್ಲಿ ಪ್ರಜ್ಞಾವಂತಿಕೆ ಮತ್ತು ಸದ್ವಿಚಾರ ಇರಬೇಕು ಎಂದು ರಾ (ರೀಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್) ಮಾಜಿ ಮುಖ್ಯಸ್ಥ ವಿಕ್ರಂ ಸೂದ್ ಅಭಿಪ್ರಾಯಪಟ್ಟರು.

'ಪಾಶ್ಚಿಮಾತ್ಯ ರಾಷ್ಟ್ರಗಳ ಕುಗ್ಗುವಿಕೆ ಮತ್ತು ಪೂರ್ವದೇಶಗಳ ಉತ್ಥಾನದಲ್ಲಿ ಬಲಪ್ರದರ್ಶನ' ಎಂಬ ಗೋಷ್ಠಿಯಲ್ಲಿ ಮಾತನಾಡಿದದರು.

ವಿದೇಶಾಂಗ ವ್ಯವಹಾರಗಳ ತಜ್ಞೆ ಶ್ರೀಪರ್ಣ ಪಾಠಕ್ ಗೋಷ್ಠಿ ನಡೆಸಿಕೊಟ್ಟರು.

ನಗರದಲ್ಲಿ ಇಂದು

ಕರ್ನಾಟಕ ಸಂಗೀತ ಕಛೇರಿ: ಗಾಯನ: ರಾಜರಾಜೇಶ್ವರಿ ಪ್ರಕಾಶ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7

'ಬಿ ಗುಡ್ ಡು ಗುಡ್' ವಾಕಥಾನ್: ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 7

ಪುಟಾಣಿ ಮಕ್ಕಳ ಬೃಹತ್ ಅಬಾಕಸ್– ಬೌದ್ಧಿಕ ಅಂಕಗಣಿತ ಸ್ಪರ್ಧೆ, ಬುದ್ಧಿಮತ್ತೆಯ ಅದ್ಭುತ ಪ್ರದರ್ಶನ: ಆಯೋಜನೆ: ಎಸ್ಐಪಿ ಅಕಾಡೆಮಿ, ಸ್ಥಳ: ಮರ್ಕಟ, ಚಾಮರ ವಜ್ರ, ಅರಮನೆ ಮೈದಾನ, ಬೆಳಿಗ್ಗೆ 8ರಿಂದ

ಸಮೃದ್ಧಿ ಸುಗ್ಗಿ ಉತ್ಸವ: ಉದ್ಘಾಟನೆ: ಬಿ.ವಿ. ಶ್ರೀನಿವಾಸ್, ಅತಿಥಿಗಳು: ಸುರೇಖ, ಶುಭಾರಾಣಿ, ಆಯೋಜನೆ: ಸಮೃದ್ಧಿ ಸಂಗೀತ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 8.30

ಅಖಿಲ ಭಾರತೀಯ ಅಂತರ್ ವಿಶ್ವವಿದ್ಯಾಲಯ ಮಹಿಳೆಯರ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್: ಉದ್ಘಾಟನೆ: ಜವಹರ್ ದೊರೆಸ್ವಾಮಿ, ಅತಿಥಿಗಳು: ಅಶ್ವಿನಿ ಭಟ್, ಜೆ. ಸೂರ್ಯಪ್ರಸಾದ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯದ ಆರ್‌ಆರ್ ಕ್ಯಾಂಪಸ್, ಬನಶಂಕರಿ ಮೂರನೇ ಹಂತ, ಬೆಳಿಗ್ಗೆ 9

ಉಚಿತ ಆರೋಗ್ಯ ತಪಾಸಣಾ ಶಿಬಿರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಉದಯ್ ಬಿ. ಗರುಡಾಚಾರ್, ಅಧ್ಯಕ್ಷತೆ: ಡಿ.ಆರ್. ವಿಜಯಸಾರಥಿ, ಆಯೋಜನೆ: ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಸ್ಥಳ: ಚಾಮರಾಜು ಕಲ್ಯಾಣ ಮಂಟಪ, ಜಯನಗರ, ಬೆಳಿಗ್ಗೆ 9

ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ: ಅತಿಥಿಗಳು: ಎನ್. ಕುಮಾರ್, ಕೆ.ಆರ್. ರಮೇಶ್ ಕುಮಾರ್, ಕೆ.ಸಿ. ರಾಮಮೂರ್ತಿ, ಅಧ್ಯಕ್ಷತೆ: ವಿ.ಎನ್. ಲಕ್ಷ್ಮೀನಾರಾಯಣ್, ಆಯೋಜನೆ: ಸ್ವಾಮಿ ವಿವೇಕಾನಂದ ಅಭ್ಯುದಯ ಪ್ರತಿಷ್ಠಾನ, ಸ್ಥಳ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡ, ಎಂಟನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಬೆಳಿಗ್ಗೆ 9.50

'ಕುಂಚಿಟಿಗ ರತ್ನ, ಕುಂಚಶ್ರೀ, ಕುಂಚಿಟಿಗ ಶಿರೋಮಣಿ, ಕುಂಚಿಟಿಗ ಆದರ್ಶ ದಂಪತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಹನುಮಂತನಾಥ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಮುರಳೀಧರ್ ಹಾಲಪ್ಪ, ಪ್ರಶಸ್ತಿ ಪ್ರದಾನ: ಡಿ.ಎಂ. ರಾಮಾಂಜಿನಪ್ಪ, ಅತಿಥಿಗಳು: ಮಂಜೇಗೌಡ, ಹಿರಿಸಾವೆ ಶ್ರೀಕಂಠಯ್ಯ ಸುಧಾ, ಅಧ್ಯಕ್ಷತೆ: ವಿ. ಆಂಜನಪ್ಪ, ಆಯೋಜನೆ: ವಿಶ್ವ ಕುಂಚಿಟಿಗರ ಪರಿಷತ್, ಸ್ಥಳ: ಮುದ್ದರಂಗಮ್ಮ ಮುನಿಹನುಮಯ್ಯ ಪಾರ್ಟಿ ಹಾಲ್, ದೊಂಬರಹಳ್ಳಿ, ಮಾದನಾಯಕನಹಳ್ಳಿ, ಬೆಳಿಗ್ಗೆ 10

'ಪ್ರತಿಭಾ ನಂದಕುಮಾರ್' ಕಾವ್ಯ ಕುರಿತ ವಿಶೇಷ ಉಪನ್ಯಾಸ, ಪುಸ್ತಕಗಳ ಬಿಡುಗಡೆ: ಉಪನ್ಯಾಸ: ಸುಂದರ್ ಸಾರುಕ್ಕೈ, ಎಂ.ಎಸ್. ಆಶಾದೇವಿ, ಅತಿಥಿ: ಜೋಗಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.15ರಿಂದ

ಪ್ರತಿಭಾ ನಂದಕುಮಾರ್

ದೇವಿಕ ಎಸ್., ಗುಂಡೀಗೆರೆ ವಿಶ್ವನಾಥ್ ಅವರು ಸಂಪಾದಿಸಿದ 'ಲೋಕದೃಷ್ಟಿ–ಲೋಕಸೃಷ್ಟಿ, ಎಂ.ಎಸ್. ಚಾಂದಕವಟೆ ಅವರ 'ಬುದ್ಧನ ನೆನಹುಗಳು' ಪುಸ್ತಕಗಳ ಬಿಡುಗಡೆ: ಲಲಿತಾ ಕೆ. ಹೊಸಪ್ಯಾಟಿ, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಪುಸ್ತಕಗಳ ಕುರಿತು: ಉಷಾದೇವಿ ಹಿರೇಮಠ, ಸಿ.ಎಸ್. ಮಹೇಶ್ ಕುಮಾರ್, ಅತಿಥಿಗಳು: ರಾಜಶೇಖರ ಮಠಪತಿ, ಉಪಸ್ಥಿತಿ: ಎಸ್.ಸಿ. ದೇವರಮನಿ, ಆಯೋಜನೆ: ಜ್ಞಾನಸಂಬುದ್ಧ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಮೂರನೇ ಮಹಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

'ಸಫ್ದರ್ ಹಷ್ಮಿ ಮತ್ತು ಬಾದಲ್ ಸರ್ಕಾರ' ರಾಜ್ಯಮಟ್ಟದ ಬೀದಿ ನಾಟಕೋತ್ಸವ, ವಿಚಾರಗೋಷ್ಠಿ, ರಂಗ ಗೌರವ: ಪ್ರಳಯನ್ ಚಂದ್ರಶೇಖರ್, ದು. ಸರಸ್ವತಿ, ಸುರೇಶ ಆನಗಳ್ಳಿ, 'ಸಫ್ದರ್ ಹಷ್ಮಿ ಹಲ್ಲಾಬೋಲ್' ಗೋಷ್ಠಿ: ಸುಧನ್ವ ದೇಶಪಾಂಡೆ, ವಿಮಲಾ ಕೆ.ಎಸ್., ಬೊಳುವಾರು ಐ.ಕೆ., ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಗಾಂಧಿ ಕುಟೀರ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ


ದು. ಸರಸ್ವತಿ

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೋ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಡಾ.ಸಿ. ಎನ್. ಅಶ್ವತ್ಥನಾರಾಯಣ, ಸಿ.ಟಿ. ರವಿ, ಆಯೋಜನೆ: ಫಸ್ಟ್ ಸರ್ಕಲ್, ಸ್ಥಳ: ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ ಸಭಾಂಗಣ, ಸಂಜೆ 4


ನಂಜಾವಧೂತ ಸ್ವಾಮೀಜಿ

ಜಿ. ರಾಮಕೃಷ್ಣ ಅವರ ಇಂಗ್ಲಿಷ್‌ಗೆ ಅನುವಾದಗೊಂಡ 'ಋಗ್ವೇದ ಪ್ರವೇಶಿಕೆ' ಪುಸ್ತಕ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಪುಸ್ತಕದ ಕುರಿತು: ಶೈಲಜಾ, ಅಧ್ಯಕ್ಷತೆ: ಸಿದ್ಧನಗೌಡ ಪಾಟೀಲ, ಆಯೋಜನೆ: ನವ ಕರ್ನಾಟಕ ಪ್ರಕಾಶನ, ಸ್ಥಳ: ಹೊಸತು ಅಂಗಳ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಳಿಗ್ಗೆ 10.30


ಪುರುಷೋತ್ತಮ ಬಿಳಿಮಲೆ

'ಬಹುಳ' ನೃತ್ಯ ಪ್ರಸ್ತುತಿ: 'ಕಾರಿ ಹೆಗ್ಗಡೆಯ ಮಗಳು': ಪುಲಿಕೇಶಿ ಕಸ್ತೂರಿ, ಉಪಸ್ಥಿತಿ: ಲಲಿತಾ ಶ್ರೀನಿವಾಸನ್, ಆಯೋಜನೆ: ಶಾಂತಲ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10.30

'ಡಾ.ಎಂ. ಚಿದಾನಂದಮೂರ್ತಿ ಐದನೇ ವರ್ಷದ ಸಂಸ್ಮರಣೆ, ಕನ್ನಡ–ಕನ್ನಡಿಗ–ಕರ್ನಾಟಕ 17ನೇ ಆವೃತ್ತಿ ಪುಸ್ತಕ ಲೋಕಾರ್ಪಣೆ, ಡಾ.ಎಸ್. ಎಲ್. ಭೈರಪ್ಪ ನೆನಪು': ಪುಸ್ತಕ ಲೋಕಾರ್ಪಣೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಆರ್. ಶೇಷಶಾಸ್ತ್ರಿ, ಉಪಸ್ಥಿತಿ: ನಿತಿನ್ ಷಾ, ಬಾ.ಹ. ಉಪೇಂದ್ರ, ಬಿ.ಎಸ್. ಜಯಪ್ರಕಾಶ ನಾರಾಯಣ, ವ.ಚ. ಚನ್ನೇಗೌಡ, ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30


ಎಸ್.ಜಿ. ಸಿದ್ಧರಾಮಯ್ಯ

ಸಂಕ್ರಾಂತಿ ಸಂಭ್ರಮ, ಸಾಹಿತ್ಯ, ಸಂಸ್ಕೃತಿ ಪುರಸ್ಕಾರೋತ್ಸವ: ಅತಿಥಿಗಳು: ಜಯಮಾಲ, ಮಾಲತಿ ಸುಧೀರ್, ರೋಹಿಣಿ ಸತ್ಯ, ಅಧ್ಯಕ್ಷತೆ: ಎ. ರಾಧಾಕೃಷ್ಣರಾಜು, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದರ, ವೈಯಾಲಿ ಕವಾಲ್, ಬೆಳಿಗ್ಗೆ 10ರಿಂದ, ಸಭಾ ಕಾರ್ಯಕ್ರಮ ಮಧ್ಯಾಹ್ನ 2ಕ್ಕೆ

ಜಯಮಾಲ

ಅಣ್ಣಮ್ಮ ದೇವಿಯ ಉತ್ಸವ, ಸಂಕ್ರಾಂತಿ ಸುಗ್ಗಿ: ಅಣ್ಣಮ್ಮ ದೇವಿಯ ಅದ್ದೂರಿ ಮೆರವಣಿಗೆ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ನಾಟಪ್ರಭು ಕೆಂಪೇಗೌಡ ಜಾಗೃತ ವೇದಿಕೆ, ಸ್ಥಳ: ಚುಂಚನಗಿರಿ ಮಠದ ರಸ್ತೆಯಿಂದ ವಿಜಯನಗರದ ರಾಜ ಬೀದಿಗಳಲ್ಲಿ, ಬೆಳಿಗ್ಗೆ 11

ಮಾಧವ ಗಾಡ್ಗೀಳ್ ಅವರಿಗೆ ನುಡಿ ನಮನ: ಭಾಗವಹಿಸುವವರು: ಬಿ.ಕೆ. ಚಂದ್ರಶೇಖರ್, ಟಿ.ವಿ. ರಾಮಚಂದ್ರ, ನಾಗೇಶ ಹೆಗಡೆ, ಶೇಷಗಿರಿ ರಾವ್, ಕೆ. ಇ. ರಾಧಾಕೃಷ್ಣ, ಆಯೋಜನೆ: ಪರಿಸರಾಸಕ್ತ ಬಳಗ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11


ಮಾಧವ ಗಾಡ್ಗೀಳ್

ಕುವೆಂಪು, ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ 'ಬಾಲ್ಕ್ ಸಂಕಲ್ಪ–2026': ಆಯೋಜನೆ: ಬಾಲ್ಕ್, ಸ್ಥಳ: ತಿಮ್ಮಕ್ಕ ಪಟೇಲ್ ವೆಂಕಟಪ್ಪ ಕಲ್ಯಾಣ ಮಂಟಪ, ಸುಂಕದಕಟ್ಟೆ, ಬೆಳಿಗ್ಗೆ 11.30

ಸ್ನೇಹ ಸಮ್ಮಿಲನ ಕಾರ್ಯಕ್ರಮ: ಸಾನ್ನಿಧ್ಯ: ಗುರುಬಸವ ಸ್ವಾಮೀಜಿ, ಅತಿಥಿಗಳು: ಪ್ರಭಾ ಮಲ್ಲಿಕಾರ್ಜುನ್, ದಿವಾಕರ ಎಂ.ಎಸ್., ಬಸವರಾಜು ವಿ. ಶಿವಗಂಗಾ, ಕೆ.ಎಸ್. ಬಸವರಾಜು, ಧನಂಜಯ ಸರ್ಜಿ, ವಡ್ನಾಳ್ ಜಗದೀಶ್, ಎಚ್. ಎಸ್. ಶಿವಕುಮಾರ್, ಮಾಡಾಳ್ ಮಲ್ಲಿಕಾರ್ಜುನ್, ಅಧ್ಯಕ್ಷತೆ: ಚಿನ್ಮಯಾನಂದ ಎ.ಸಿ., ಆಯೋಜನೆ: ಚನ್ನಗಿರಿ ತಾಲ್ಲೂಕಿನ ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2ರಿಂದ

ತರಬೇತಿ ಕಾರ್ಯಾಗಾರ ಹಾಗೂ 17ನೇ ರಾಜ್ಯಮಟ್ಟದ ಸಮ್ಮೇಳನ: ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಎಸ್. ಸುನಿಲ್‌ದತ್ ಯಾದವ್, ಸೀಮಾಂತ್ ಕುಮಾರ್ ಸಿಂಗ್, ಬಿ.ಎ. ಬೆಳ್ಳಿಯಪ್ಪ, ಬಿ.ಎನ್. ಜಗದೀಶ್, ಸಿ.ಎಸ್. ಷಡಕ್ಷರಿ, ಅಂಜನಾ ಚೌಹಾಣ್, ಆಯೋಜನೆ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕರ್ನಾಟಕ ರಾಜ್ಯ ಅಭಿಯೋಜನಾಧಿಕರಿಗಳ ಸಂಘ, ಸ್ಥಳ: ಕೆಇಬಿ ಎಂಜಿನಿಯರ್ ಅಸೋಸಿಯೇಷನ್ ರಜತ ಮಹೋತ್ಸವ ಕಟ್ಟಡ, ರೇಸ್‌ಕೋರ್ಸ್ ರಸ್ತೆ, ಸಂಜೆ 4.15

ಕುವೆಂಪು ನೆನಪು: ಅತಿಥಿ: ಲತಾ ಮೈಸೂರು, ಅಧ್ಯಕ್ಷತೆ: ಸುನೀತ್ ಕುಮಾರ್ ಶೆಟ್ಟಿ, ಆಯೋಜನೆ: ಕುವೆಂಪು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30

'ಟೈಮ್‌ಲೆಸ್ ಟ್ಯೂನ್ಸ್': ಸುಧಾಕರ್ ರಾವ್, ಕಿಂಜಲ್ ಚಟರ್ಜಿ, ಪ್ರಸನ್ನ ರಾವ್, ಸಮನ್ವಿತಾ ಶರ್ಮ, ಹರ್ಷ ರಂಜಿನಿ, ಧ್ವನಿ ಮೌಲ್ಯ, ಆಯೋಜನೆ: ಫೇರ್‌ಲಾರ್ಕ್, ದಿ ಆರ್ಟ್ ಆಫ್ ಲಿವಿಂಗ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಸಂಜೆ 5.30

ಹಿಂದಿಯ ಶ್ರೇಷ್ಠ ನಾಟಕಗಳು ಅತುಲ್ ಸತ್ಯ: ಚಕ್ರವ್ಯೂಹ: ಕೌಶಿಕ್, ಕೃಷ್ಣನ ಪಾತ್ರದಲ್ಲಿ: ನಿತೀಶ್ ಭಾರದ್ವಾಜ್, ಆಯೋಜನೆ: ಸೇವಾ ಸಮಿತಿ ಬೆಂಗಳೂರು, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕನಕಪುರ ರಸ್ತೆ, ಸಂಜೆ 6

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸುಧಾ ರಘುನಾಥನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಶ್ರೀರಂಗನಾಥನ ದರ್ಶನಕ್ಕೆ ಭಕ್ತರ ನೂಕು ನುಗ್ಗಲು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಶನಿವಾರ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದರಿಂದ ನೂಕು ನುಗ್ಗಲು ಉಂಟಾಯಿತು.

'ಆದಿರಂಗ, ಮಧ್ಯರಂಗ, ಅಂತ್ಯರಂಗನ ದರ್ಶನ ಮಾಡಿದರೆ ಪುಣ್ಯ ಬರುತ್ತದೆ' ಎಂಬ ಜೋತಿಷಿಗಳ ಹೇಳಿಕೆ ಕಾರಣದಿಂದ ಸಹಸ್ರಾರು ಭಕ್ತರು ದೇಗುಲಕ್ಕೆ ಭೇಟಿ ನೀಡಿದ್ದರು.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಎಸ್‌ಜಿ–ಎಸ್‌ಡಬ್ಲ್ಯುಆರ್–ಪಿಆರ್‌ಓಜಿ–ಯುಬಿಎಲ್–ಎಂಎಸ್‌ಡಿಎಸ್2 ದಿನಾಂಕ : 08-01-2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ : ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ, ಹೊಸಪೇಟೆ ಮತ್ತು ತೋರಣಗಲ್ಲು ನಿಲ್ದಾಣಗಳಲ್ಲಿ ಪುನರಾವರ್ತನೆ ವೈಶಿಷ್ಟ್ಯದೊಂದಿಗೆ ವಿಶ್ವಾಸಾರ್ಹತಾ ಟ್ರ್ಯಾಕ್ ಡಿಟೆಕ್ಷನ್ ಒದಗಿಸುವುದರಿಂದ ಥ್ರೂಪುಟ್ ಎನ್ಹಾನ್ಸ್‌ಮೆಂಟ್ ಮತ್ತು ಸುರಕ್ಷತಾ ಕಾಮಗಾರಿ.	ರೂ. 39,12,99,418.60

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-01-2026 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಯೋಜನೆ–II / ಹುಬ್ಬಳ್ಳಿ
ಪಿಯುಬಿ/814/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಮಾಲೀಕರಾದ ದಿವಂಗತ ನರಸಿಂಹಯ್ಯ ರವರ ಮಗನಾದ ಡಾ. ಎನ್. ಲಕ್ಷ್ಮಿಪತಿ ಬಾಬು ರವರೊಂದಿಗೆ ("ಮಾಲೀಕರು") ಜಂಟಿಯಾಗಿ ಅಭಿವೃದ್ಧಿ ಪಡಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳು ಸದರಿ ಡಾ. ಎನ್. ಲಕ್ಷ್ಮಿಪತಿ ಬಾಬು ರವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಅಭಿವೃದ್ಧಿಪಡಿಸುವ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರವಾದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿ ಡಾ. ಎನ್. ಲಕ್ಷ್ಮಿಪತಿ ಬಾಬು ರವರ ಮಾಲೀಕತ್ವಕ್ಕೆ ಮತ್ತು ಸದರಿ ಅಭಿವೃದ್ಧಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯೂಲ್ ಸ್ವತ್ತುಗಳ ಅಭಿವೃದ್ಧಿಗೆ ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ತಲಘಟ್ಟಪುರ ಗ್ರಾಮದಲ್ಲಿರುವ ಸರ್ವೇ ನಂ. 27/2 ರಲ್ಲಿ 1 ಎಕರೆ 2 ಗುಂಟೆ ಮತ್ತು ಸರ್ವೇ ನಂ. 28/2 ರಲ್ಲಿ 2 ಎಕರೆ 12 ಗುಂಟೆ ಒಟ್ಟು ವಿಸ್ತೀರ್ಣ 3 ಎಕರೆ 14 ಗುಂಟೆ ಉಳ್ಳ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ : ಉತ್ತರಹಳ್ಳಿ ಮನವರ್ತೆಕಾವಲ್ ಗ್ರಾಮದ ಗಡಿ; **ಪಶ್ಚಿಮಕ್ಕೆ** : ಸರ್ವೇ ನಂ. 28/1 ಮತ್ತು ಸರ್ವೇ ನಂ. 27/1 ರ ಜಮೀನುಗಳು; **ಉತ್ತರಕ್ಕೆ** : ರಸ್ತೆ ಮತ್ತು ಮಿತ್ರ ಇಟರ್ನಿಯಾ ಲೇಔಟ್; **ದಕ್ಷಿಣಕ್ಕೆ** : ಉತ್ತರಹಳ್ಳಿ ಮನವರ್ತೆಕಾವಲ್ ಗ್ರಾಮದ ಗಡಿ.

ಸ್ಥಳ : ಬೆಂಗಳೂರು **ದಿನಾಂಕ : ಜನವರಿ 11, 2026**

ಸಹಿ./- ವೀಣಾ ಟಿ. ಎಸ್, ವಕೀಲರು, **ಕ್ರೆಸ್ಟ್ ಲಾ ಪಾರ್ಟ್ನರ್ಸ್**
33, ಥ್ರಿವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047. **ದೂ: 080 41473535 / 080 41473536**

ಚಟಕಿ ಸುದ್ದಿ

ನಿರ್ಮಾಪಕರ ಸಂಘದ ಅಧ್ಯಕ್ಷ ರಾಮಮೂರ್ತಿ

ಬೆಂಗಳೂರು: ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿ ನಿರ್ಮಾಪಕ ರಾಮಮೂರ್ತಿ ಎಂ.ಜಿ ಆಯ್ಕೆಯಾಗಿದ್ದಾರೆ. ಶಿವಾನಂದ ಸರ್ಕಲ್ ಬಳಿಯ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅವರು ಹಿಂದಿನ ಅಧ್ಯಕ್ಷ ಉಮೇಶ್ ಬಣಕಾರ್ ಅವರನ್ನು ಮಣಿಸಿ ಆಯ್ಕೆಗೊಂಡರು.

ಉಪಾಧ್ಯಕ್ಷರಾಗಿ ನಂದಿಹಾಳ್ ಎಸ್. ಜೆ.ಆಯ್ಕೆಗೊಂಡಿದ್ದಾರೆ. ರಾಜೇಶ್ ಬ್ರಹ್ಮಾವರ್, ಶಿಲ್ಪ ಶ್ರೀನಿವಾಸ್, ಹಿರಿಯ ನಟ, ನಿರ್ಮಾಪಕ ಗಣೇಶ್ ರಾವ್ ಕೇಸರ್‌ಕರ್ ಸೇರಿದಂತೆ 12 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚುನಾಯಿತರಾಗಿದ್ದಾರೆ.

'ಕಾವ್ಯ, ಸಂಕಷ್ಟದ ಆತ್ಮಕಥನ'

ಬೆಂಗಳೂರು: 'ಮಹಿಳಾ ಕಾವ್ಯ ಎನ್ನುವುದು ಕೇವಲ ಕನಸುಗಳ ಲೋಕವಲ್ಲ. ಅದು ಅವಳು ಸಾಗಿ ಬಂದ ಹೋರಾಟ, ಸಂಕಷ್ಟದ ಆತ್ಮಕಥನ ಕೂಡ' ಎಂದು ವಕೀಲೆ ಪ್ರಮಿಳಾ ನೇಸರ್ಗಿ ಹೇಳಿದರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ದೇವಿಕ. ಎಸ್. ಅವರ 'ಕೊಳಲ ಕನವರಿಕೆ' ಕವನ ಸಂಕಲನದ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, 'ಪ್ರಸ್ತುತ ಕಾಲಘಟ್ಟದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿಹೋಗದೆ, ಕಾವ್ಯ, ಕೃತಿ ರಚನೆಯಲ್ಲಿ ತೊಡಗುವುದು ಆರೋಗ್ಯಕರ ಬೆಳವಣಿಗೆ' ಎಂದರು.

ಚಿಂತಕರಾದ ಜಂಬುನಾಥ ಮಳಿಮಠ, ಲೇಖಕರಾದ ರಾಜಶೇಖರಯ್ಯ ಮಠಪತಿ, ರವೀಂದ್ರ ನಾಯಕ್ ಸಣ್ಣಕ್ಕಿಬೆಟ್ಟು, ವಿಮರ್ಶಕ ಬೈರಮಂಗಲ ರಾಮೇಗೌಡ, ಜ್ಞಾನ ಸಂಬುದ್ಧ ಪ್ರಕಾಶನದ ವಿಶ್ವನಾಥ್ ಗುಂಡಿಗೆರೆ, ಸ್ಮಿತಾ ಎಂ. ಭಾವಿಕಟ್ಟಿ ಉಪಸ್ಥಿತರಿದ್ದರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯ ಪ್ರೊ. ಜಾಜಿ ದೇವೇಂದ್ರಪ್ಪ ಅವರನ್ನು ಸನ್ಮಾನಿಸಲಾಯಿತು.

ನಾಲ್ಕೇ ತಿಂಗಳಲ್ಲಿ ಕಾಯ್ದೆ ಉಲ್ಲಂಘನೆ

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಮೂರು ತಿಂಗಳೊಳಗೆ ನಡೆಯದ 2ನೇ ಜಿಬಿಎ ಸಭೆ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆಯಾಗಿ ನಾಲ್ಕೇ ತಿಂಗಳಿಗೆ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಉಲ್ಲಂಘನೆಯಾಗಿದೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದನ್ನು ಜಿಬಿಎ ಮರೆತುಹೋಗಿದೆ.

ಜಿಬಿಜಿಎಯ ಅಧ್ಯಾಯ–3ರ ಪ್ರಕರಣ 12ರ ಪ್ರಕಾರ, ಜಿಬಿಎ ಅಧ್ಯಕ್ಷರು ಪ್ರತಿ ಮೂರು ತಿಂಗಳಿಗೆ ಕನಿಷ್ಠ ಒಂದು ಬಾರಿ ಜಿಬಿಎ ಸಭೆ ಕರೆಯಬೇಕು. ಜಿಬಿಎಯ ಮೊದಲ ಸಭೆ 2025ರ ಅಕ್ಟೋಬರ್ 10ರಂದು ನಡೆದಿತ್ತು. 2026ರ ಜನವರಿ 10ರೊಳಗೆ ಕನಿಷ್ಠ ಒಂದು ಸಭೆಯನ್ನಾದರೂ ನಡೆಸಬೇಕಿತ್ತು. ಆದರೆ ಈ ಸಭೆ ಬಗ್ಗೆ ಇನ್ನೂ ತಯಾರಿಯೇ ನಡೆದಿಲ್ಲ.

> **ಸಭೆ ಮಾಡಬೇಕಿತ್ತು, ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿಯವರ ಸಮಯ ಪಡೆದು ಕೂಡಲೇ ಜಿಬಿಎ ಸಭೆ ನಡೆಸಲಾಗುತ್ತದೆ**
> **ಮಹೇಶ್ವರ್ ರಾವ್,** ಮುಖ್ಯ ಆಯುಕ್ತ, ಜಿಬಿಎ

2025ರ ಸೆಪ್ಟೆಂಬರ್ 2ರಂದು ರಚನೆಯಾದ ಜಿಬಿಎಯ ಅಧ್ಯಕ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಅ.10ರಂದು ನಡೆದಿದ್ದ ಮೊದಲ ಸಭೆಯಲ್ಲಿ, ಜಿಬಿಎಗೆ ಅಧಿಕಾರಿಗಳ ನೇಮಕ, ಯೋಜನಾ ಪ್ರಾಧಿಕಾರದ ಜವಾಬ್ದಾರಿಯನ್ನು ನೀಡಲಾಗಿತ್ತು. ತದನಂತರ ಜಿಬಿಎ ಸಭೆ ನಡೆದಿಲ್ಲ. ಮೂರು ತಿಂಗಳಿಗೆ ಕನಿಷ್ಠ ಒಂದು ಸಭೆ ನಡೆಯಬೇಕೆಂದು ಕಾಯ್ದೆಯಲ್ಲಿದೆ. ಅಂದರೆ, ನಗರ ಅಭಿವೃದ್ಧಿಗಾಗಿ ಒಂದಕ್ಕಿಂತ ಎಷ್ಟಾದರೂ ಸಭೆಯನ್ನು ನಡೆಸಬಹುದು. ಆದರೆ, ನಗರ ಅಭಿವೃದ್ಧಿಯ ಯೋಜನೆಗಳತ್ತ ರಾಜ್ಯದ ಚುಕ್ಕಾಣಿ ಹಿಡಿದಿರುವವರು ದೃಷ್ಟಿ ಹರಿಸಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಸೇರಿದಂತೆ ಹಲವು ಅಧಿಕಾರಿಗಳನ್ನು ಜಿಬಿಎ ಸದಸ್ಯರನ್ನಾಗಿ ನೇಮಿಸಿಕೊಳ್ಳಲು ಜಿಬಿಜಿಎಗೆ ತಿದ್ದುಪಡಿಯನ್ನೂ ತರಲಾಗಿದೆ. ಇದರಿಂದ ಜಿಬಿಎ ಸಭೆಯಲ್ಲಿ ನಿರ್ಧಾರವಾಗುವ ವಿಷಯಗಳಿಗೆ ಹೆಚ್ಚಿನ ವೇಗ ಸಿಗುತ್ತದೆ ಎಂಬ ಉದ್ದೇಶವಿದೆ. ಆದರೆ, ಸಭೆಯೇ ನಡೆಯದೆ ಯಾವ ಉದ್ದೇಶವೂ ಈಡೇರುವುದಿಲ್ಲ ಎಂಬ ಆರೋಪ ವ್ಯಕ್ತವಾಗಿದೆ.

ಜಿಬಿಜಿಎಯಂತೆ ಮುಖ್ಯಮಂತ್ರಿ ಅನುಪಸ್ಥಿತಿಯಲ್ಲಿ ಜಿಬಿಎ ಉಪಾಧ್ಯಕ್ಷ ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು. ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪದನಿಮಿತ್ತ ಜಿಬಿಎ ಉಪಾಧ್ಯಕ್ಷರಾಗಿದ್ದಾರೆ. ಅವರ ಅಧ್ಯಕ್ಷತೆಯಲ್ಲಾದರೂ ಸಭೆ ನಡೆಸಬಹುದಿತ್ತು. ಇಲ್ಲದಿದ್ದರೆ, ಅವರಿಬ್ಬರ ಅನುಪಸ್ಥಿತಿಯಲ್ಲಿ ಜಿಬಿಎ ಸಭೆಯಲ್ಲಿ ಹಾಜರಿರುವ ಸದಸ್ಯರು ತಾವೇ ಇತರ ಸದಸ್ಯರೊಬ್ಬರನ್ನು ಆಯ್ಕೆ ಮಾಡಿ ಸಭೆಯ ಅಧ್ಯಕ್ಷರನ್ನಾಗಿ ಮಾಡಿ, ಕಲಾಪಗಳನ್ನು ನಡೆಸಬಹುದು.

ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರೇ ಜಿಬಿಎ ಸಭೆಗೆ ಮುಂದಾಗದಿರುವುದರಿಂದ ಕಾಯ್ದೆ ಉಲ್ಲಂಘನೆಯಾದರೂ ಸಚಿವರು, ಅಧಿಕಾರಿಗಳು ಸಭೆ ನಡೆಸುವ ಬಗ್ಗೆ ಹೆಚ್ಚಿನ ಒಲವು ತೋರಿಲ್ಲ. 'ಜಿಬಿಎ ಸಭೆ ನಡೆಸುವ ಬಗ್ಗೆ ಉಪ ಮುಖ್ಯಮಂತ್ರಿಯವರೇ ನಿರ್ಧರಿಸಬೇಕು. ಅವರೇ ಅಲ್ಲವೇ ಬೆಂಗಳೂರಿನ 'ಇನ್‌ಚಾರ್ಜ್' ಎಂದು ನಗರದ ಸಚಿವರೊಬ್ಬರು ಪ್ರತಿಕ್ರಿಯಿಸಿದರು.

ಸಾರ್ವಜನಿಕರಿಗೆ ಲಭ್ಯವಾಗದ ಮಾಹಿತಿ

2025ರ ಅಕ್ಟೋಬರ್ 10ರಂದು ನಡೆದ ಜಿಬಿಎಯ ಮೊದಲ ಸಭೆಯ ತೀರ್ಮಾನ ಹಾಗೂ ಸಂಕ್ಷಿಪ್ತ ಟಿಪ್ಪಣಿ ಸಾರ್ವಜನಿಕವಾಗಿ ಇನ್ನೂ ಲಭ್ಯವಾಗಿಲ್ಲ.

ಜಿಬಿಜಿಎ ಅಧ್ಯಾಯ–3ರ ಪ್ರಕರಣ–12ರ 6ನೇ ಅಂಶದಂತೆ, ಜಿಬಿಎ ಸಭೆಯ ಎಲ್ಲ ತೀರ್ಮಾನಗಳು ಮತ್ತು ಸಂಕ್ಷಿಪ್ತ ಟಿಪ್ಪಣಿಗಳನ್ನು ದಾಖಲಿಸಬೇಕು. ಸಭೆ ಮುಗಿದ ಮೂರು ದಿನಗಳೊಳಗೆ ಅದನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು ಎಂದು ಹೇಳಲಾಗಿದೆ. ಮೂರು ತಿಂಗಳಾದರೂ ಈ ಯಾವ ಮಾಹಿತಿಯೂ ಸಾರ್ವಜನಿಕವಾಗಿ ದೊರೆಯುತ್ತಿಲ್ಲ.

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ಕೊಟ್ಟ ಮಾತು ಈಡೇರಿಸಲಿ: ಚನ್ನಗಿರಿ ಶಾಸಕ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದಂತೆ ನಡೆದವರು. ಅವರು ಕೊಟ್ಟ ಭರವಸೆ ಈಡೇರಿಸಲಿ' ಎಂದು ಚನ್ನಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸವರಾಜ ಶಿವಗಂಗಾ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಕುರ್ಚಿ ಸದ್ಯ ಖಾಲಿ ಇಲ್ಲ. ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಇರುತ್ತಾರೆಂದು ಹೈಕಮಾಂಡ್ ಹೇಳಿದರೆ ಅದಕ್ಕೆ ನಾವೂ ಬದ್ಧ' ಎಂದರು.

'ಶಾಸಕರಾದ ಬಸವರಾಜ ರಾಯರಡ್ಡಿ, ಕೆ.ಎನ್. ರಾಜಣ್ಣ, ನಾನು ಯಾರೂ ಹೈಕಮಾಂಡ್ ಅಲ್ಲ. ಅವರ ಮಾತುಗಳನ್ನು ಪರಿಗಣಿಸುವ ಅಗತ್ಯವೂ ಇಲ್ಲ. ಹೈಕಮಾಂಡ್ ಮಾತಿಗೆ ನಾವೆಲ್ಲರೂ ಬದ್ಧ' ಎಂದರು.

'ನುಡಿದಂತೆ ನಡೆಯಬೇಕೆಂದು ಕೆ.ಎನ್. ರಾಜಣ್ಣ ಹೇಳಿದ್ದಾರೆ. ಹೈಕಮಾಂಡ್ ಮುಂದೆ ಏನಾದರೂ ಒಪ್ಪಂದ ಆಗಿದ್ದರೆ ಅವರು ಮಾತನಾಡಲಿ. ಒಪ್ಪಂದ ಆಗಿದ್ದರೆ ಹೈಕಮಾಂಡ್ ಹೇಳಬೇಕು' ಎಂದರು.

'ಪ್ರತಿಯೊಬ್ಬ ಶಾಸಕರಿಗೂ ಅವರದ್ದೇ ಆದ ಗೌರವವಿದೆ. ಒಬ್ಬರಿಗೆ ನೋಟಿಸ್ ಕೊಡುವುದು, ಮತ್ಯಾರಿಗೊ ಕೊಡದೇ ಇರುವುದು ಸರಿಯಲ್ಲ' ಎಂದ ಅವರು, 'ಸಂಕ್ರಾಂತಿ ಬಳಿಕ ನಾನು ಮಾತನಾಡುತ್ತೇನೆ' ಎಂದೂ ಹೇಳಿದರು.

ಗುಲಾಬಿ ಮೆಟ್ರೊ: ಏಪ್ರಿಲ್ ಅಂತ್ಯಕ್ಕೆ ಪರೀಕ್ಷೆ ಪೂರ್ಣ

ಬೆಂಗಳೂರು: ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ರೋಲಿಂಗ್ ಸ್ಟಾಕ್ ಪರೀಕ್ಷೆಗಳು ಜ.11ರಿಂದ ಆರಂಭವಾಗಲಿದ್ದು, ಏಪ್ರಿಲ್ ಮಧ್ಯಭಾಗದಲ್ಲಿ ಪೂರ್ಣಗೊಳ್ಳಲಿವೆ.

ಸುಮಾರು 7.5 ಕಿ.ಮೀ ಉದ್ದದ ಗುಲಾಬಿ ಮಾರ್ಗದ ಮುಖ್ಯ ಪರೀಕ್ಷೆಗಳನ್ನು ವಾಣಿಜ್ಯ ಸಂಚಾರ ಮಾಡುವ ಮೊದಲು ಕೈಗೊಳ್ಳಲಾಗುತ್ತದೆ. ನೈಜ ಕ್ಷೇತ್ರ ಪರಿಸ್ಥಿತಿಗಳಲ್ಲಿ ರೈಲು ಕಾರ್ಯಕ್ಷಮತೆ ಮತ್ತು ವ್ಯವಸ್ಥೆಗಳ ಪರಿಸ್ಪರ ಸಂಯೋಜನೆಯ ಸಮಗ್ರ ಪರಿಶೀಲನೆಯನ್ನೂ ಒಳಗೊಂಡಿರುತ್ತದೆ. ಶಾಸನಬದ್ಧ ಅನುಮೋದನೆಗಳನ್ನು ಪಡೆಯಲು ಈ ಪರೀಕ್ಷೆಗಳು ಅಗತ್ಯವಾಗಿವೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಜ.11ರಿಂದ ಏಪ್ರಿಲ್ ಮಧ್ಯಭಾಗದವರೆಗೆ ಟ್ರ್ಯಾಕ್ಷನ್– ಬ್ರೇಕ್, ಆಸಿಲೇಷನ್, ಸಿಗ್ನಲಿಂಗ್, ವಿದ್ಯುತ್ ಮತ್ತು ದೂರಸಂಪರ್ಕದ ವ್ಯವಸ್ಥೆಗಳೊಂದಿಗೆ ಏಕೀಕರಣ ಸೇರಿದಂತೆ ಹಲವು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಗುಲಾಬಿ ಮಾರ್ಗ ಯೋಜನೆಯಲ್ಲಿ ಈ ಪರೀಕ್ಷೆ ನಡೆಸುತ್ತಿರುವುದು ಮಹತ್ವದ ಮೈಲಿಗಲ್ಲು. ಸಾರ್ವಜನಿಕ ಸೇವೆಗೆ ಈ ಮಾರ್ಗ ತೆರೆಯುವ ಮುನ್ನ ಅತ್ಯುನ್ನತ ಮಟ್ಟದ ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳಲು ಬಿಎಂಆರ್‌ಸಿಎಲ್ ಬದ್ಧವಾಗಿದೆ ಎಂದು ತಿಳಿಸಿದೆ.

ಒಕ್ಕಲಿಗರೂ ಉದ್ಯಮಿಗಳಾಗಲಿ: ಡಿವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಕ್ಕಲಿಗರು ಕೃಷಿ ಮತ್ತು ಶಿಕ್ಷಣ ಕ್ಷೇತ್ರದಾಚೆಗೂ ಬೆಳೆಯಬೇಕು. ಲಭ್ಯವಿರುವ ಸವಲತ್ತುಗಳನ್ನು ಬಳಸಿಕೊಂಡು ಉದ್ಯಮಿಗಳಾಗಬೇಕು' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.

ಶನಿವಾರ ಫಸ್ಟ್ ಸರ್ಕಲ್ ಒಕ್ಕಲಿಗ ಎಕ್ಸ್‌ಪೊದ 'ಉದ್ಯಮಿ ಪ್ರತಿನಿಧಿಗಳ ಸಮಾವೇಶ'ದಲ್ಲಿ ಅವರು ಮಾತನಾಡಿದರು.

'ಭಾರತದಲ್ಲಿ ಉದ್ಯಮ ಕ್ಷೇತ್ರವು ಬಹಳ ತ್ವರಿತವಾಗಿ ಬೆಳೆಯುತ್ತಿದೆ. ಈ ಅವಕಾಶವನ್ನು ಒಕ್ಕಲಿಗರು ಬಳಸಿಕೊಳ್ಳಬೇಕು. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ಕ್ಷೇತ್ರದ ಉತ್ತೇಜನಕ್ಕೆ ಕೇಂದ್ರ ಸರ್ಕಾರವು ಹಲವು ಸವಲತ್ತುಗಳನ್ನು ಒದಗಿಸುತ್ತಿದೆ. ಅವನ್ನು ಒಕ್ಕಲಿಗರು ಬಳಸಿಕೊಳ್ಳಬೇಕು' ಎಂದರು.

'ಎಂಎಸ್‌ಎಂಇ ಸ್ಥಾಪನೆಗೆ ಮುಂದಾಗುವವರಿಗೆ ಸಾಲ, ಸಹಾಯಧನ, ತರಬೇತಿ ಕಾರ್ಯಕ್ರಮಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ಆರಂಭಿಸಿದೆ. ಇವುಗಳನ್ನು ಬಳಸಿಕೊಂಡು ಎಲ್ಲ ಸಮುದಾಯದವರೂ ಉದ್ಯಮಿಗಳಾಗುತ್ತಿದ್ದಾರೆ. ಒಕ್ಕಲಿಗರು ಕೃಷಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದ್ದಾರೆ. ಅದರ ಜತೆಯಲ್ಲಿ ಉದ್ಯಮಿಗಳಾಗುವತ್ತಲೂ ಗಮನ ಹರಿಸಬೇಕು' ಎಂದು ತಿಳಿಸಿದರು.

'ಭಾರತದಲ್ಲೇ ತಯಾರಿಸಿ' ಅಭಿಯಾನವು, ದೇಶದಲ್ಲಿ ಉದ್ಯಮಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಯನ್ನು ಉತ್ತೇಜಿಸುತ್ತಿದೆ. ಅದರ ಫಲವಾಗಿ ದೇಶದಲ್ಲಿ ತಯಾರಿಕಾ ಚಟುವಟಿಕೆಯು ಉತ್ತಮ ಬೆಳವಣಿಗೆ ಸಾಧಿಸಿದೆ ಹಾಗೂ ರಫ್ತು ಹೆಚ್ಚುತ್ತಿದೆ. ಇಂತಹ ಅವಕಾಶವನ್ನು ಒಕ್ಕಲಿಗರು ಪರಿಗಣಿಸಬೇಕು' ಎಂದು ಸಲಹೆ ನೀಡಿದರು.

'ಇದಕ್ಕಾಗಿ ಒಕ್ಕಲಿಗರು ಹಲವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಕೌಶಲ ಅಭಿವೃದ್ಧಿ, ಮಾರುಕಟ್ಟೆ, ರಫ್ತು ಮಾರುಕಟ್ಟೆ ಸಂಬಂಧ ತರಬೇತಿ ಪಡೆದುಕೊಳ್ಳುವುದು ಅತ್ಯಗತ್ಯ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಅವಕಾಶಗಳಿದ್ದು, ಅದನ್ನೇ ಉದ್ಯಮವಾಗಿ ಪರಿವರ್ತಿಸಬಹುದು. ಈ ಉದ್ಯಮ ಕಲೆಗಳನ್ನು ಒಕ್ಕಲಿಗರು ಕರಗತ ಮಾಡಿಕೊಳ್ಳಬೇಕು' ಎಂದರು.

ಫಸ್ಟ್ ಸರ್ಕಲ್ ಒಕ್ಕಲಿಗ ಎಕ್ಸ್‌ಪೊದಲ್ಲಿ ಶನಿವಾರ ರಾಶಿ ಪೂಜೆ ಮತ್ತು ಒಕ್ಕಲು ಗೀತೆಗಳು ಗಮನ ಸೆಳೆದವು –ಪ್ರಜಾವಾಣಿ ಚಿತ್ರ

ಪರಶುರಾಮ ಥೀಮ್ ಪಾರ್ಕ್‌ನಿಂದ ಕಳವು ಇಬ್ಬರ ಬಂಧನ

ಉಡುಪಿ: ಕಾರ್ಕಳದ ಬೈಲೂರಿನ ಉಮಿಕಲ್ ಬೆಟ್ಟದ ಪರಶುರಾಮ ಥೀಮ್ ಪಾರ್ಕ್‌ನ ಕಟ್ಟಡದ ಮೇಲೆ ಅಳವಡಿಸಿದ್ದ ತಾಮ್ರದ ಹೊದಿಕೆ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿಯ ಶಾಂತಿ ನಗರದ ಆರೀಫ್ ಯಾನೆ ಮುನ್ನ (37) ಹಾಗೂ ಕಾವೂರು ಉಲ್ಲಾಸ ನಗರದ ಅಬ್ದುಲ್ ಹಮೀದ್ (32) ಬಂಧಿತ ಆರೋಪಿಗಳು.

ಆರೋಪಿಗಳ ಪತ್ತೆಗೆ ಮೂರು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಮಾರ್ಗದರ್ಶನದಲ್ಲಿ ಪೊಲೀಸರ ತಂಡವು ಆರೋಪಿಗಳನ್ನು ಬಂಧಿಸಿ, 51 ಕೆ.ಜಿ. ತಾಮ್ರದ ಹೊದಿಕೆ, ಎರಡು ಸೀಲಿಂಗ್ ಫ್ಯಾನ್ ಹಾಗೂ ಕೃತ್ಯಕ್ಕೆ ಬಳಸಿದ್ದ ಗೂಡ್ಸ್ ರಿಕ್ಷಾ, ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿ ಆರೀಫ್ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ 9ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಉತ್ತರ ನಗ ರ ಪಾಲಿಕೆ– ವಾರ್ಡ್‌ವಾರು ಕರಡು ಮೀಸಲಾತಿ

ಬೆಂಗಳೂರು ಉತ್ತರ

150-ಯಲಹಂಕ ವಿಧಾನಸಭೆ ಕ್ಷೇತ್ರ		
ವಾರ್ಡ್ 1	ರಾಜಾ ಕೆಂಪೇಗೌಡ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 2	ಏರೋಸಿಟಿ ವಾರ್ಡ್	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 3	ಚೌಡೇಶ್ವರಿ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 4	ನ್ಯಾಯಾಂಗ ಬಡಾವಣೆ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 5	ಯಲಹಂಕ ಸ್ಯಾಟಲೈಟ್ ಟೌನ್	ಹಿಂದುಳಿದ ವರ್ಗ ಎ
ವಾರ್ಡ್ 6	ದೊಡ್ಡಬೆಟ್ಟಹಳ್ಳಿ	ಪರಿಶಿಷ್ಟ ಪಂಗಡ
ವಾರ್ಡ್ 7	ಅಟ್ಟೂರು	ಹಿಂದುಳಿದ ವರ್ಗ ಎ (ಮಹಿಳೆ)
152-ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರ		
ವಾರ್ಡ್ 8	ಸಿಂಗಾಪುರ	ಸಾಮಾನ್ಯ (ಮಹಿಳೆ)
ವಾರ್ಡ್ 9	ಕುವೆಂಪುನಗರ	ಪರಿಶಿಷ್ಟ ಜಾತಿ
ವಾರ್ಡ್ 10	ವಿದ್ಯಾರಣ್ಯಪುರ	ಸಾಮಾನ್ಯ (ಮಹಿಳೆ)
ವಾರ್ಡ್ 11	ದೊಡ್ಡಬೊಮ್ಮಸಂದ್ರ	ಸಾಮಾನ್ಯ
ವಾರ್ಡ್ 12	ತಿಂಡ್ಲು	ಹಿಂದುಳಿದ ವರ್ಗ ಬಿ
ವಾರ್ಡ್ 13	ಕೊಡಿಗೆಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 14	ರಾಜೀವ್ ಗಾಂಧಿ ನಗರ	ಸಾಮಾನ್ಯ
ವಾರ್ಡ್ 15	ಬ್ಯಾಟರಾಯನಪುರ	ಹಿಂದುಳಿದ ವರ್ಗ ಎ
ವಾರ್ಡ್ 16	ಅಮೃತಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 17	ಜಕ್ಕೂರು	ಸಾಮಾನ್ಯ (ಮಹಿಳೆ)
ವಾರ್ಡ್ 18	ಕೆಂಪಾಪುರ	ಹಿಂದುಳಿದ ವರ್ಗ ಬಿ
ವಾರ್ಡ್ 19	ಥಣಿಸಂದ್ರ	ಹಿಂದುಳಿದ ವರ್ಗ ಎ
ವಾರ್ಡ್ 20	ಸಂಪಿಗೆಹಳ್ಳಿ	ಸಾಮಾನ್ಯ
ವಾರ್ಡ್ 21	ಕೋಗಿಲು	ಹಿಂದುಳಿದ ವರ್ಗ ಎ (ಮಹಿಳೆ)
160-ಸರ್ವಜ್ಞನಗರ ವಿಧಾನಸಭೆ ಕ್ಷೇತ್ರ		
ವಾರ್ಡ್ 22	ನಾಗವಾರ	ಸಾಮಾನ್ಯ
ವಾರ್ಡ್ 23	ಹೆಣ್ಣೂರು	ಸಾಮಾನ್ಯ
ವಾರ್ಡ್ 24	ಎಚ್.ಬಿ.ಆರ್. ಲೇಔಟ್	ಹಿಂದುಳಿದ ವರ್ಗ ಎ
ವಾರ್ಡ್ 25	ಗೋವಿಂದಪುರ	ಸಾಮಾನ್ಯ (ಮಹಿಳೆ)
ವಾರ್ಡ್ 26	ಸಮಾಧಾನ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 27	ಕೆ.ಜಿ.ಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 28	ವೆಂಕಟೇಶಪುರ	ಸಾಮಾನ್ಯ
ವಾರ್ಡ್ 29	ಲಿಂಗರಾಜಪುರ	ಹಿಂದುಳಿದ ವರ್ಗ ಬಿ
ವಾರ್ಡ್ 30	ಕಾಚರಕನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 31	ಕಲ್ಯಾಣ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 32	ಬಾಣಸವಾಡಿ	ಹಿಂದುಳಿದ ವರ್ಗ ಎ
ವಾರ್ಡ್ 33	ಎಚ್‌ಆರ್‌ಬಿಆರ್ ಲೇಔಟ್	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 34	ಸುಬ್ಬಯ್ಯನಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 35	ಕಮ್ಮನಹಳ್ಳಿ	ಪರಿಶಿಷ್ಟ ಜಾತಿ
ವಾರ್ಡ್ 36	ಮಾರುತಿ ಸೇವಾ ನಗರ	ಸಾಮಾನ್ಯ
ವಾರ್ಡ್ 37	ಜೀವನಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
159-ಪುಲಕೇಶಿನಗರ ವಿಧಾನಸಭೆ ಕ್ಷೇತ್ರ		
ವಾರ್ಡ್ 38	ಶಾಂಪುರ	ಸಾಮಾನ್ಯ (ಮಹಿಳೆ)
ವಾರ್ಡ್ 39	ಕಾವಲ್ ಬೈರಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 40	ಶಕ್ತಿ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 41	ಪೆರಿಯಾರ್ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 42	ಅರುಣ ಆಸಿಫ್ ಅಲಿ ವಾರ್ಡ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 43	ವರಲಕ್ಷ್ಮಿ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 44	ದೊಡ್ಡಣ್ಣ ನಗರ	ಪರಿಶಿಷ್ಟ ಜಾತಿ
ವಾರ್ಡ್ 45	ಕುಶಾಲ್ ನಗರ	ಹಿಂದುಳಿದ ವರ್ಗ ಎ
ವಾರ್ಡ್ 46	ಸಗಾಯಪುರ	ಪರಿಶಿಷ್ಟ ಜಾತಿ
ವಾರ್ಡ್ 47	ಪುಲಕೇಶಿ ನಗರ	ಸಾಮಾನ್ಯ
ವಾರ್ಡ್ 48	ಎಸ್.ಕೆ ಗಾರ್ಡನ್	ಸಾಮಾನ್ಯ
158-ಹೆಬ್ಬಾಳ ವಿಧಾನಸಭೆ ಕ್ಷೇತ್ರ		
ವಾರ್ಡ್ 49	ಜಯ ಚಾಮರಾಜೇಂದ್ರ ನಗರ	ಸಾಮಾನ್ಯ
ವಾರ್ಡ್ 50	ದಿಣ್ಣೂರು	ಸಾಮಾನ್ಯ
ವಾರ್ಡ್ 51	ಮನೋರಾಯನಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 52	ವಿಶ್ವನಾಥ ನಾಗೇನಹಳ್ಳಿ	ಸಾಮಾನ್ಯ
ವಾರ್ಡ್ 53	ಆರ್.ಟಿ ನಗರ	ಸಾಮಾನ್ಯ
ವಾರ್ಡ್ 54	ಗಂಗೇನಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 55	ಗಂಗಾನಗ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 56	ಹೆಬ್ಬಾಳ	ಪರಿಶಿಷ್ಟ ಜಾತಿ
ವಾರ್ಡ್ 57	ಭೂಪಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 58	ನಾಗಶೆಟ್ಟಿಹಳ್ಳಿ	ಸಾಮಾನ್ಯ
ವಾರ್ಡ್ 59	ಗೆದ್ದಲಹಳ್ಳಿ	ಹಿಂದುಳಿದ ವರ್ಗ ಎ
154-ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರ		
ವಾರ್ಡ್ 60	ಜಾಲಹಳ್ಳಿ	ಪರಿಶಿಷ್ಟ ಪಂಗಡ (ಮಹಿಳೆ)
ವಾರ್ಡ್ 61	ಎಚ್‌ಎಂಟಿ ವಾರ್ಡ್	ಸಾಮಾನ್ಯ
ವಾರ್ಡ್ 62	ಬೃಂದಾವನ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 63	ಜೆ.ಪಿ ಪಾರ್ಕ್	ಹಿಂದುಳಿದ ವರ್ಗ ಎ
ವಾರ್ಡ್ 64	ಯಶವಂತಪುರ	ಸಾಮಾನ್ಯ
155-ದಾಸರಹಳ್ಳಿ ವಿಧಾನಸಭೆ ಕ್ಷೇತ್ರ		
ವಾರ್ಡ್ 65	ಅಬ್ಬಿಗೆರೆ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 66	ಕಮ್ಮಗೊಂಡನಹಳ್ಳಿ	ಸಾಮಾನ್ಯ
ವಾರ್ಡ್ 67	ಶೆಟ್ಟಿಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 68	ಮಲ್ಲಸಂದ್ರ	ಸಾಮಾನ್ಯ
ವಾರ್ಡ್ 69	ಬಾಗಲಗುಂಟೆ	ಸಾಮಾನ್ಯ (ಮಹಿಳೆ)
ವಾರ್ಡ್ 70	ಮಂಜುನಾಥ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 71	ನೆಲೆ ಮಹೇಶ್ವರಮ್ಮ ದೇವಾಲಯ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 72	ದಾಸರಹಳ್ಳಿ	ಸಾಮಾನ್ಯ

ದಕ್ಷಿಣ ನಗರ ಪಾಲಿಕೆ– ವಾರ್ಡ್‌ವಾರು ಕರಡು ಮೀಸಲಾತಿ

ಬೆಂಗಳೂರು ದಕ್ಷಿಣ

171-ಪದ್ಮನಾಭನಗರ ವಿಧಾನಸಭೆ ಕ್ಷೇತ್ರ		
ವಾರ್ಡ್ 1	ಪದ್ಮನಾಭನಗರ	ಸಾಮಾನ್ಯ (ಮಹಿಳೆ)
ವಾರ್ಡ್ 2	ಕದಿರೇನಹಳ್ಳಿ	ಸಾಮಾನ್ಯ
ವಾರ್ಡ್ 3	ಯಾರಬ್ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 4	ಬನಶಂಕರಿ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 5	ಕಾನೆ ಮುನೀಶ್ವರ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 6	ಗೌಡನಪಾಳ್ಯ	ಹಿಂದುಳಿದ ವರ್ಗ ಬಿ (ಮಹಿಳೆ)
173 - ಜಯನಗರ ವಿಧಾನಸಭೆ ಕ್ಷೇತ್ರ		
ವಾರ್ಡ್ 7	ಬೈರಸಂದ್ರ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 8	ತಿಲಕ್ ನಗರ	ಹಿಂದುಳಿದ ವರ್ಗ ಎ
ವಾರ್ಡ್ 9	ಎನ್.ಎ.ಎಲ್ ಲೇಔಟ್	ಹಿಂದುಳಿದ ವರ್ಗ ಎ
ವಾರ್ಡ್ 10	ಅಬ್ದುಲ್ ಕಲಾಂ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 11	ಜಯನಗರ ಪೂರ್ವ	ಹಿಂದುಳಿದ ವರ್ಗ ಎ
ವಾರ್ಡ್ 12	ಪಟ್ಟಾಭಿರಾಮ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 13	ಮಾರೇನಹಳ್ಳಿ ದಕ್ಷಿಣ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 14	ಜೆ.ಪಿ. ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 15	ಶಾಕಂಬರಿನಗರ	ಹಿಂದುಳಿದ ವರ್ಗ ಬಿ
ವಾರ್ಡ್ 16	ಸಾರಕ್ಕಿ	ಸಾಮಾನ್ಯ
172-ಬಿ.ಟಿ.ಎಂ. ಲೇಔಟ್ ವಿಧಾನಸಭೆ ಕ್ಷೇತ್ರ		
ವಾರ್ಡ್ 17	ಎನ್.ಎಸ್. ಪಾಳ್ಯ	ಸಾಮಾನ್ಯ
ವಾರ್ಡ್ 18	ವಿಶ್ವಮಾನವ ಕುವೆಂಪು ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 19	ತಾವರೆಕೆರೆ	ಸಾಮಾನ್ಯ
ವಾರ್ಡ್ 20	ಮಡಿವಾಳ	ಸಾಮಾನ್ಯ
ವಾರ್ಡ್ 21	ಚಿಕ್ಕ ಆಡುಗೋಡಿ	ಹಿಂದುಳಿದ ವರ್ಗ ಎ
ವಾರ್ಡ್ 22	ಎಸ್.ಜಿ. ಪಾಳ್ಯ	ಸಾಮಾನ್ಯ
ವಾರ್ಡ್ 23	ಲಕ್ಕಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 24	ಎ. ಆಡುಗೋಡಿ	ಸಾಮಾನ್ಯ (ಮಹಿಳೆ)
ವಾರ್ಡ್ 25	ನ್ಯಾಷನಲ್ ಗೇಮ್ಸ್ ವಿಲೇಜ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 26	ಈಜಿಪುರ	ಪರಿಶಿಷ್ಟ ಜಾತಿ
ವಾರ್ಡ್ 27	ಶ್ರೀ ಲಕ್ಷ್ಮಿ ದೇವಿ ವಾರ್ಡ್	ಹಿಂದುಳಿದ ವರ್ಗ ಬಿ
ವಾರ್ಡ್ 28	ಕೋರಮಂಗಲ ಪೂರ್ವ	ಸಾಮಾನ್ಯ
ವಾರ್ಡ್ 29	ಕೋರಮಂಗಲ ಪಶ್ಚಿಮ	ಪರಿಶಿಷ್ಟ ಪಂಗಡ
ವಾರ್ಡ್ 30	ಜಕ್ಕಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
174-ಮಹದೇವಪುರ ವಿಧಾನಸಭೆ ಕ್ಷೇತ್ರ		
ವಾರ್ಡ್ 31	ಕಸವನಹಳ್ಳಿ	ಸಾಮಾನ್ಯ (ಮಹಿಳೆ)
177- ಆನೇಕಲ್ ವಿಧಾನಸಭೆ ಕ್ಷೇತ್ರ		
ವಾರ್ಡ್ 32	ಕೂಡ್ಲು	ಸಾಮಾನ್ಯ
176-ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ		
ವಾರ್ಡ್ 33	ನಾಗನಾಥಪುರ	ಸಾಮಾನ್ಯ
ವಾರ್ಡ್ 34	ಚಿಕ್ಕ ತೋಗೂರು	ಸಾಮಾನ್ಯ
ವಾರ್ಡ್ 35	ವಿಶ್ವಪ್ರಿಯ ನಗರ	ಸಾಮಾನ್ಯ
ವಾರ್ಡ್ 36	ಬೇಗೂರು	ಸಾಮಾನ್ಯ
ವಾರ್ಡ್ 37	ಯೆಲೇನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 38	ದೊಡ್ಡಕಮ್ಮನಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 39	ಗೊಟ್ಟಿಗೆರೆ	ಹಿಂದುಳಿದ ವರ್ಗ ಎ
ವಾರ್ಡ್ 40	ಅಂಜನಾಪುರ	ಸಾಮಾನ್ಯ (ಮಹಿಳೆ)
ವಾರ್ಡ್ 41	ಕೊತ್ತನೂರು	ಪರಿಶಿಷ್ಟ ಜಾತಿ
ವಾರ್ಡ್ 42	ಆರ್‌ಬಿಐ ಲೇಔಟ್	ಸಾಮಾನ್ಯ (ಮಹಿಳೆ)
ವಾರ್ಡ್ 43	ಭೀಮೇಶ್ವರ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 44	ಹರಿನಗರ	ಸಾಮಾನ್ಯ
ವಾರ್ಡ್ 45	ಕೋಣನಕುಂಟೆ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 46	ಯಲಚೇನಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 47	ಚಂದ್ರನಗರ	ಸಾಮಾನ್ಯ
ವಾರ್ಡ್ 48	ವಸಂತಪುರ	ಸಾಮಾನ್ಯ (ಮಹಿಳೆ)
ವಾರ್ಡ್ 49	ಉತ್ತರಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 50	ಸಾರ್ವಭೌಮ ನಗರ	ಸಾಮಾನ್ಯ
ವಾರ್ಡ್ 51	ಸುಬ್ರಹ್ಮಣ್ಯಪುರ	ಹಿಂದುಳಿದ ವರ್ಗ ಎ
153-ಯಶವಂತಪುರ ವಿಧಾನಸಭೆ ಕ್ಷೇತ್ರ		
ವಾರ್ಡ್ 52	ತಲಘಟ್ಟಪುರ	ಸಾಮಾನ್ಯ
175-ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ		
ವಾರ್ಡ್ 53	ಜರಗನಹಳ್ಳಿ	ಸಾಮಾನ್ಯ
ವಾರ್ಡ್ 54	ಕೆಂಗಲ್ ಹನುಮಂತಯ್ಯ ದಕ್ಷಿಣ	ಸಾಮಾನ್ಯ (ಮಹಿಳೆ)
ವಾರ್ಡ್ 55	ಪುಟ್ಟೇನಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 56	ದೊರೆಸಾನಿಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 57	ಹುಳಿಮಾವು	ಸಾಮಾನ್ಯ (ಮಹಿಳೆ)
ವಾರ್ಡ್ 58	ಅರೆಕೆರೆ	ಸಾಮಾನ್ಯ (ಮಹಿಳೆ)
ವಾರ್ಡ್ 59	ವಿಜಯ ಬ್ಯಾಂಕ್ ಲೇಔಟ್	ಸಾಮಾನ್ಯ (ಮಹಿಳೆ)
ವಾರ್ಡ್ 60	ಬಿಳೇಕಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 61	ಕೋಡಿ ಚಿಕ್ಕನಹಳ್ಳಿ	ಪರಿಶಿಷ್ಟ ಜಾತಿ
ವಾರ್ಡ್ 62	ದೇವರಚಿಕ್ಕನಹಳ್ಳಿ	ಹಿಂದುಳಿದ ವರ್ಗ ಬಿ
ವಾರ್ಡ್ 63	ಬೊಮ್ಮನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 64	ಹೊಂಗಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 65	ಗಾರ್ವೆಬಾವಿ ಪಾಳ್ಯ	ಸಾಮಾನ್ಯ
ವಾರ್ಡ್ 66	ಸಿಂಗಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 67	ಬಂಡೇಪಾಳ್ಯ	ಹಿಂದುಳಿದ ವರ್ಗ ಎ
ವಾರ್ಡ್ 68	ಮಂಗಮ್ಮನ ಪಾಳ್ಯ	ಸಾಮಾನ್ಯ
ವಾರ್ಡ್ 69	ಹೊಸಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 70	ಇಬ್ಬಲೂರು	ಪರಿಶಿಷ್ಟ ಜಾತಿ
ವಾರ್ಡ್ 71	ಅಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 72	ಎಚ್‌ಎಸ್‌ಆರ್ ಲೇಔಟ್	ಸಾಮಾನ್ಯ

ಪೂರ್ವ ನಗರ ಪಾಲಿಕೆ ವಾರ್ಡ್ ಕರಡು ಮೀಸಲಾತಿ

ಬೆಂಗಳೂರು ಪೂರ್ವ

151-ಕೆ.ಆರ್. ಪುರ ವಿಧಾನಸಭೆ ಕ್ಷೇತ್ರ		
ವಾರ್ಡ್ 1	ಕೆ. ನಾರಾಯಣಪುರ	ಸಾಮಾನ್ಯ (ಮಹಿಳೆ)
ವಾರ್ಡ್ 2	ಹೊರಮಾವು	ಹಿಂದುಳಿದ ವರ್ಗ ಎ
ವಾರ್ಡ್ 3	ಚೆಲ್ಲಕರೆ	ಸಾಮಾನ್ಯ (ಮಹಿಳೆ)
ವಾರ್ಡ್ 4	ಬಾಬುಸಾಬ್ ಪಾಳ್ಯ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 5	ಹೊಯ್ಸಳ ನಗರ ಪೂರ್ವ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 6	ಕಲ್ಕೆರೆ	ಸಾಮಾನ್ಯ
ವಾರ್ಡ್ 7	ಕೆ. ಚೆನ್ನಸಂದ್ರ	ಪರಿಶಿಷ್ಟ ಪಂಗಡ
ವಾರ್ಡ್ 8	ಆನಂದಪುರ	ಸಾಮಾನ್ಯ
ವಾರ್ಡ್ 9	ಭಟ್ಟರಹಳ್ಳಿ	ಸಾಮಾನ್ಯ
ವಾರ್ಡ್ 10	ಬಸವನಪುರ	ಸಾಮಾನ್ಯ
ವಾರ್ಡ್ 11	ಕೃಷ್ಣನಗರ	ಸಾಮಾನ್ಯ
ವಾರ್ಡ್ 12	ದೇವಸಂದ್ರ	ಸಾಮಾನ್ಯ
ವಾರ್ಡ್ 13	ರಾಜರಾಜೇಶ್ವರಿ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 14	ಕೆ.ಆರ್. ಪುರ	ಹಿಂದುಳಿದ ವರ್ಗ ಎ
ವಾರ್ಡ್ 15	ರಾಮಮೂರ್ತಿ ನಗರ	ಪರಿಶಿಷ್ಟ ಜಾತಿ
ವಾರ್ಡ್ 16	ಕೊತ್ತೂರು	ಸಾಮಾನ್ಯ
ವಾರ್ಡ್ 17	ವಿಜಿನಾಪುರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 18	ದೂರವಾಣಿನಗರ	ಸಾಮಾನ್ಯ (ಮಹಿಳೆ)
ವಾರ್ಡ್ 19	ಕೆ.ಎಸ್. ನಿಸ್ಸಾರ್ ಅಹಮದ್ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 20	ಎ. ನಾರಾಯಣಪುರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 21	ಉದಯ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 22	ಮಹದೇವಪುರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 23	ಸಂಗಮ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 24	ವಿಜ್ಞಾನನಗರ	ಸಾಮಾನ್ಯ
ವಾರ್ಡ್ 25	ಎಲ್.ಬಿ. ಶಾಸ್ತ್ರಿ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 26	ಜಗದೀಶ್ ನಗರ	ಪರಿಶಿಷ್ಟ ಜಾತಿ
ವಾರ್ಡ್ 27	ವಿಭೂತಿಪುರ	ಸಾಮಾನ್ಯ (ಮಹಿಳೆ)
174-ಮಹದೇವಪುರ ವಿಧಾನಸಭೆ ಕ್ಷೇತ್ರ		
ವಾರ್ಡ್ 28	ಬೈರತಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 29	ಹೂಡಿ	ಸಾಮಾನ್ಯ
ವಾರ್ಡ್ 30	ಬೆಳತ್ತೂರು	ಪರಿಶಿಷ್ಟ ಜಾತಿ
ವಾರ್ಡ್ 31	ಕಾಡುಗೋಡಿ	ಸಾಮಾನ್ಯ
ವಾರ್ಡ್ 32	ಚನ್ನಸಂದ್ರ	ಸಾಮಾನ್ಯ
ವಾರ್ಡ್ 33	ಎಸ್.ಎಂ ಕೃಷ್ಣ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 34	ಕಾವೇರಿ ನಗರ	ಪರಿಶಿಷ್ಟ ಜಾತಿ
ವಾರ್ಡ್ 35	ಗರುಡಾಚಾರ್ ಪಾಳ್ಯ	ಹಿಂದುಳಿದ ವರ್ಗ ಬಿ
ವಾರ್ಡ್ 36	ಭಾರತ ಐಕ್ಯ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 37	ಕುಂದಲಹಳ್ಳಿ	ಹಿಂದುಳಿದ ವರ್ಗ ಬಿ
ವಾರ್ಡ್ 38	ವೈಟ್‌ಫೀಲ್ಡ್	ಹಿಂದುಳಿದ ವರ್ಗ ಎ
ವಾರ್ಡ್ 39	ಹಗದೂರು	ಸಾಮಾನ್ಯ (ಮಹಿಳೆ)
ವಾರ್ಡ್ 40	ವರ್ತೂರು	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 41	ಮುನ್ನೇಕೊಳಾಲು	ಸಾಮಾನ್ಯ
ವಾರ್ಡ್ 42	ಪ್ರಿಯದರ್ಶಿನಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 43	ದೊಡ್ಡನೆಕ್ಕುಂದಿ	ಸಾಮಾನ್ಯ
ವಾರ್ಡ್ 44	ಅಶ್ವಥ್ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 45	ಮಾರತಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 46	ಯಮಲೂರು	ಸಾಮಾನ್ಯ (ಮಹಿಳೆ)
ವಾರ್ಡ್ 47	ಬೆಳ್ಳಂದೂರು	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 48	ಪಣತ್ತೂರು	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 49	ದೊಡ್ಡಕನ್ನೆಲ್ಲಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 50	ಗುಂಜೂರು	ಹಿಂದುಳಿದ ವರ್ಗ ಎ

‘ರಾಜ್ಯದಲ್ಲಿ ಶಿಕ್ಷೆ ಪ್ರಮಾಣ ಶೇ 52ರಷ್ಟು’

ಪ್ರಾಸಿಕ್ಯೂಟರ್‌ಗಳ 17ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿ ಪ್ರಕಾರ ಕರ್ನಾಟಕದಲ್ಲಿ ಶಿಕ್ಷೆ ಪ್ರಮಾಣ ಶೇ 52ರಷ್ಟು ಮಾತ್ರವೇ ಇದ್ದು, ದೇಶದಲ್ಲಿ 22ನೇ ಸ್ಥಾನದಲ್ಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಖ್ಯಾಂಶಗಳು

- ದೇಶದಲ್ಲಿ 22ನೇ ಸ್ಥಾನದಲ್ಲಿದೆ ಕರ್ನಾಟಕ
- ಪ್ರಾಸಿಕ್ಯೂಟರ್‌ಗಳಿಗೆ ಹೆಚ್ಚಿನ ತರಬೇತಿ ಅಗತ್ಯ: ಸಿದ್ದರಾಮಯ್ಯ
- ಆರ್ಥಿಕ, ಸೈಬರ್, ತಾಂತ್ರಿಕ ಅಪರಾಧಗಳು ಹೆಚ್ಚಳ

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘದ ವತಿಯಿಂದ ನಗರದ ಕೆಇಬಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಪ್ರಾಸಿಕ್ಯೂಟರ್‌ಗಳ 17ನೇ ರಾಜ್ಯ ಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಅಪರಾಧ ಕೃತ್ಯಗಳಲ್ಲಿನ ಶಿಕ್ಷೆ ಪ್ರಮಾಣದಲ್ಲಿ ಕೇರಳ ಶೇ 87, ಮಿಜೋರಾಂ ಶೇ 98, ದೆಹಲಿ ಶೇ 89, ಉತ್ತರ ಪ್ರದೇಶ ಶೇ 27, ಗುಜರಾತ್ ಶೇ 57, ತೆಲಂಗಾಣಗಳಲ್ಲಿ ಶೇ 57ರಷ್ಟಿದೆ. ನಾವು ಕೇರಳ ರಾಜ್ಯದ ಪ್ರಮಾಣವನ್ನು ತಲುಪಲು ಕ್ರಮವಹಿಸಬೇಕಿದೆ ಎಂದು ಹೇಳಿದರು.

‘ಈ ದಿನಗಳಲ್ಲಿ ಆರ್ಥಿಕ, ಸೈಬರ್ ಮತ್ತು ತಾಂತ್ರಿಕ ಅಪರಾಧಗಳು ಮುನ್ನಲೆಗೆ ಬರುತ್ತಿದ್ದು ಇಂತಹ ಪ್ರಕರಣಗಳಲ್ಲಿ ವಾದ ಮಂಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಟರ್‌ಗಳಿಗೆ ಹೆಚ್ಚಿನ ತರಬೇತಿಯ ಅತ್ಯಗತ್ಯವಿದೆ. ಈ ನಿಟ್ಟಿನಲ್ಲಿ ಅಭಿಯೋಜಕರ ತರಬೇತಿ ಅಕಾಡೆಮಿ ಸ್ಥಾಪಿಸಿ, ಅನುದಾನ ನೀಡುವ ಬಗ್ಗೆ ಪರಿಶೀಲಿಸುವೆ’ ಎಂದು ಭರವಸೆ ನೀಡಿದರು.

‘ಪೊಲೀಸ್ ಠಾಣೆಗಳಲ್ಲಿ ದೋಷಾರೋಪ ಪಟ್ಟಿಯನ್ನು ತನಿಖಾಧಿಕಾರಿಗಳ ಬದಲಾಗಿ ರೈಟರ್‌ಗಳು ಬರೆಯುತ್ತಾರೆ. ಠಾಣೆಗಳಲ್ಲಿ ಕುಳಿತು ಮಹಜರ್ ವರದಿ ಸಿದ್ಧಪಡಿಸುತ್ತಾರೆ. ಪರಿಣಾಮ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ, ಸರ್ಕಾರಿ ವಕೀಲರು ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಕ್ಕೂ ಮುನ್ನ ತನಿಖಾಧಿಕಾರಿಗಳೊಂದಿಗೆ ಚರ್ಚಿಸಬೇಕು’ ಎಂದರು.

ಸಮಾರಂಭದಲ್ಲಿ ತುಷಾರ್ ಗಿರಿನಾಥ್ ಹಾಗೂ ಜಿ. ಪರಮೇಶ್ವರ ಚರ್ಚೆಯಲ್ಲಿ ತೊಡಗಿದ್ದರು. ಸಿದ್ದರಾಮಯ್ಯ, ಎಚ್‌.ಕೆ. ಪಾಟೀಲ ಹಾಗೂ ಎಚ್‌.ಪಿ. ಸಂದೇಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

400 ಹುದ್ದೆ ಶೀಘ್ರ ಭರ್ತಿ: ಗೃಹ ಸಚಿವ

‘ಗೃಹ ಇಲಾಖೆ ಅಧೀನದಲ್ಲಿ 900 ಸರ್ಕಾರಿ ಪ್ರಾಸಿಕ್ಯೂಟರ್‌ಗಳಿದ್ದು ಸದ್ಯ 400 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ. ಪಾಟೀಲ, ಹೈಕೋರ್ಟ್ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕಿ ಅಂಜಲಿ ದೇವಿ, ರಾಜ್ಯ ಪ್ರಾಸಿಕ್ಯೂಟರ್‌ಗಳ ಸಂಘದ ಅಧ್ಯಕ್ಷ ಕೆ.ವಿ. ಅಶ್ವತ್ಥ ನಾರಾಯಣ ಮತ್ತು ಕಾರ್ಯದರ್ಶಿ ಸವಿತಾ ಉಪಸ್ಥಿತರಿದ್ದರು.

ಹೆಚ್ಚುವರಿ 50 ಸೀಟು: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ವೈದ್ಯಕೀಯ ಶಿಕ್ಷಣ

ಬೆಂಗಳೂರು: ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲೂ 50 ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಲು ಪ್ರಸ್ತಾವ ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ ಸೂಚಿಸಿದೆ.

ಈ ಕುರಿತು ಮಾಹಿತಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ‘ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) 2025–26ನೇ ಸಾಲಿನಲ್ಲಿ ರಾಜ್ಯಕ್ಕೆ ಹೆಚ್ಚುವರಿಯಾಗಿ 450 ವೈದ್ಯಕೀಯ ಸೀಟುಗಳನ್ನು ಮಂಜೂರು ಮಾಡಿತ್ತು. 421 ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೂ ಅನುಮೋದನೆ ಸಿಕ್ಕಿತ್ತು. ಮೂಲಸೌಕರ್ಯ ಹೊಂದಿರುವ ಕಾಲೇಜುಗಳಿಗೆ 2026–27ನೇ ಸಾಲಿನಲ್ಲಿ ವೈದ್ಯಕೀಯ ಸೀಟುಗಳ ಹೆಚ್ಚಳಕ್ಕಾಗಿ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಲಾಗಿದೆ’ ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಹಾಗೂ ಬಾಗಲಕೋಟೆಯಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಲು ಎನ್‌ಎಂಸಿಗೆ ಪ್ರಸ್ತಾವ ಸಲ್ಲಿಸಲಾಗುವುದು. ಕಟ್ಟಡ ಹಾಗೂ ಆಸ್ಪತ್ರೆಯ ಕೊರತೆಯ ಕಾರಣ ಕನಕಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸುವ ಪ್ರಸ್ತಾವ ಈ ವರ್ಷವೂ ಸಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ನೇಮಕಾತಿ, ಮೂಲಸೌಕರ್ಯ ಕೊರತೆ ಕಾರಣ 3 ವರ್ಷಗಳಿಂದ ರಾಮನಗರ, ಕನಕಪುರದಲ್ಲಿ ವೈದ್ಯಕೀಯ ಕಾಲೇಜು ಆರಂಭಕ್ಕೆ ಅನುಮೋದನೆ ಸಿಕ್ಕಿಲ್ಲ. ಕಳೆದೆರಡು ಶೈಕ್ಷಣಿಕ ವರ್ಷಗಳಲ್ಲಿ ರಾಜ್ಯ ಸರ್ಕಾರ ಸಲ್ಲಿಸಿದ ಪ್ರಸ್ತಾವಕ್ಕೆ ಎನ್‌ಎಂಸಿ ಅನುಮತಿ ನಿರಾಕರಿಸಿತ್ತು. ಕನಕಪುರದಲ್ಲಿ ₹550 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ನಿರ್ಮಿಸಲು ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ನಿರ್ಮಾಣ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಬಾಗಲಕೋಟೆಯಲ್ಲಿ ₹250 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ಆರಂಭಿಸಲು ಟೆಂಡರ್ ಕರೆಯಲಾಗಿದೆ.

ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಉಪಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳೇ ವಿನ್ಯಾಸ ಗೊಳಿಸಿರುವ ಉಪಗ್ರಹ ಡಿಎಸ್‌ಎಟಿ-1 ಉಡ್ಡಯನ ಮಾಡುವುದಕ್ಕೆ ದಯಾನಂದ ಸಾಗರ ವಿಶ್ವವಿದ್ಯಾಲಯ (ಡಿಎಸ್‌ಯು) ಮುಂದಾಗಿದೆ. ಇಸ್ರೊದ ಪಿಎಸ್‌ಎಲ್‌ವಿ–ಸಿ62 ರಾಕೆಟ್ ಬಳಸಿ ಈ ಉಪಗ್ರಹ ಉಡ್ಡಯನ ಮಾಡಲಾಗುತ್ತದೆ.

ಅಟಲ್ ಇನ್ನೊವೇಶನ್ ಸೆಂಟರ್–ದಯಾನಂದ ಸಾಗರ್ ವಿಶ್ವವಿದ್ಯಾಲಯ (ಎಐಸಿ–ಡಿಎಸ್‌ಯು) ನೆರವಿನಿಂದ ಈ ಉಪಗ್ರಹವನ್ನು ಅಭಿವೃದ್ಧಿಪಡಿಸಲಾಗಿದೆ. ಈ ಕೇಂದ್ರವನ್ನು ನೀತಿ ಆಯೋಗ ಒದಗಿಸಿರುವ ₹10 ಕೋಟಿ ಅನುದಾನದಿಂದ ಸ್ಥಾಪಿಸಲಾಗಿದೆ.

ಡಿಎಸ್‌ಎಟಿ ಉಪಗ್ರಹವು ಸಂವಹನಕ್ಕೆ ಸಂಬಂಧಿಸಿದಂತೆ ಹಲವು ವೈಶಿಷ್ಟ್ಯ (ವಿವಿಧ ತರಂಗಾಂತರ, ರೇಡಿಯೊ ಬ್ಯಾಂಡ್) ಒಳಗೊಂಡಿದೆ. ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸ್ಥಾಪಿಸಲಾಗಿರುವ ‘ಗ್ರೌಂಡ್ ಸ್ಟೇಷನ್’ನಿಂದ ಈ ಉಪಗ್ರಹಕ್ಕೆ ಸಂದೇಶವನ್ನು (ಎಸ್‌ಎಂಎಸ್) ಕಳುಹಿಸಲಾಗುತ್ತದೆ. ಈ ಸೌಲಭ್ಯವನ್ನು ಧ್ರುವ ಸ್ಪೇಸ್ ಸ್ಥಾಪಿಸಿದೆ. ಇದರಿಂದ ಕಡಿಮೆ ಬ್ಯಾಂಡ್ ವಿಡ್ತ್ ಮೂಲಕ ಸಂವಹನ ಸಾಧ್ಯವಾಗಲಿದೆ. ಉಡ್ಡಯನಕ್ಕೆ ಬೇಕಾದ ಎಲ್ಲಾ ಸಿದ್ಧತೆ, ಪರೀಕ್ಷೆಗಳನ್ನು ಪೂರ್ಣಗೊಳಿಸಲಾಗಿದೆ.

ವಿಶ್ವವಿದ್ಯಾಲಯದ ಕುಲಾಧಿಪತಿ ಹೇಮಚಂದ್ರ ಸಾಗರ್, ‘ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಶ್ರಮದ ಫಲವಾಗಿ ಡಿಎಸ್‌ಎಟಿ–1 ಉಡ್ಡಯನಕ್ಕೆ ಸಿದ್ಧಗೊಂಡಿದೆ. ಉಡಾವಣೆಗೆ ವೇದಿಕೆಯನ್ನು ಒದಗಿಸಿದ ಇಸ್ರೊ ಹಾಗೂ ಧ್ರುವ ಸ್ಪೇಸ್‌ಗೆ ಕೃತಜ್ಞರಾಗಿದ್ದೇವೆ. ಡಿಎಸ್‌ಎಟಿ–1 ಕರ್ನಾಟಕದ ದೂರದೃಷ್ಟಿಯ ‘ಅಂತರಿಕ್ಷ ನೀತಿ 2024–2029’ಗೆ ಸಾಕ್ಷಿಯಾಗಿ ನಿಂತಿದೆ’ ಎಂದು ತಿಳಿಸಿದರು.

ಸಹ ಕುಲಾಧಿಪತಿ ಡಿ.ಪ್ರೇಮ್‌ಚಂದ್ರ ಸಾಗರ್, ‘ಉಡಾವಣೆಯ ಬಳಿಕ ವಿಶ್ವವಿದ್ಯಾಲಯದ ‘ಗ್ರೌಂಡ್ ಸ್ಟೇಷನ್’ನಿಂದ ಕಾರ್ಯಾಚರಣೆಗಳನ್ನು ವಿದ್ಯಾರ್ಥಿಗಳು ಸ್ವತಂತ್ರವಾಗಿ ನಿರ್ವಹಿಸಲಿದ್ದಾರೆ. ಈ ಅವಧಿಯಲ್ಲಿ ಸಂಗ್ರಹವಾಗುವ ದತ್ತಾಂಶವು ಉಪಗ್ರಹ ಸಂವಹನ, ಮಿಷನ್ ಕಾರ್ಯಾಚರಣೆಗಳು ಹಾಗೂ ಅಂತರಿಕ್ಷ ಎಂಜಿನಿಯರಿಂಗ್ ಶಿಕ್ಷಣ ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯ ನಡೆಸುತ್ತಿರುವ ನಿರಂತರ ಸಂಶೋಧನೆಗೆ ಸಹಕಾರಿಯಾಗಲಿದೆ’ ಎಂದರು.

ಅಹಮದಾಬಾದ್‌ನ ಐಎನ್–ಎಸ್‌ಪಿಎಸಿಇ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿರ್ದೇಶಕ ಡಾ.ಪ್ರಫುಲ್ಲ ಕುಮಾರ್ ಜೈನ್ ಅವರು ದಯಾನಂದ ಸಾಗರ್ ವಿಶ್ವವಿದ್ಯಾಲಯದ ಸಹ ಕುಲಪತಿ ಪ್ರೊ. ಆರ್. ಜನಾರ್ಧನ್ ಅವರಿಗೆ ಒಪ್ಪಂದ ಪತ್ರ ಹಸ್ತಾಂತರಿಸಿದರು. ಎಐಸಿ–ಡಿಸಿಯು ಸಿಇಒ ವಿನೋದ್ ಶಂಕರ್ ಇದ್ದರು.

ಅಂತರರಾಷ್ಟ್ರೀಯ ಸ್ವಯಂಸೇವಕ ವರ್ಷದ ಉದ್ಘಾಟನೆ: ರಿಷಬ್ ಶೆಟ್ಟಿ ಹೇಳಿಕೆ

‘ಸರ್ಕಾರಿ ಶಾಲೆ ಮುಚ್ಚುವುದು ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳ ಸಂಖ್ಯೆ ಇಲ್ಲ ಎಂಬ ಕಾರಣಕ್ಕೆ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಸರಿಯಲ್ಲ’ ಎಂದು ಯೂತ್ ಫಾರ್ ಸೇವಾದ ರಾಯಭಾರಿಯೂ ಆಗಿರುವ ಚಿತ್ರನಟ ರಿಷಬ್ ಶೆಟ್ಟಿ ಹೇಳಿದರು.

ಮುಖ್ಯಾಂಶಗಳು

- ಶಾಲೆಗಳಿಗೆ ಮೂಲ ಸೌಕರ್ಯ, ಶಿಕ್ಷಕರ ನೇಮಕಕ್ಕೆ ಮನವಿ
- ಸರ್ಕಾರಿ ಶಾಲೆಯಲ್ಲಿ ಕಲಿತವರು ಉನ್ನತ ಹುದ್ದೆಗಳಿಗೆ ಆಯ್ಕೆ
- ಬಲಿಷ್ಠ ಸಮಾಜ ನಿರ್ಮಿಸಲು ಸಲಹೆ

ಯೂತ್ ಫಾರ್ ಸೇವಾ ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಸ್ವಯಂಸೇವಕ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

‘ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಏಕೆ ಇಲ್ಲ? ಅಲ್ಲಿ ಬೇಕಾಗಿರುವ ವ್ಯವಸ್ಥೆ, ಶಿಕ್ಷಕರ ಕೊರತೆ ಸರಿಪಡಿಸಬೇಕು. ಸರ್ಕಾರಿ ಶಾಲೆಗಳಲ್ಲಿ ನೀಡುವ ಶೇ 100ರಷ್ಟು ಗುಣಮಟ್ಟದ ಶಿಕ್ಷಣ ಪಡೆದವರು ಸಮಾಜದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ಅನೇಕ ಐಎಎಸ್, ಐಆರ್‌ಎಸ್ ಅಧಿಕಾರಿಗಳು ಸರ್ಕಾರಿ ಶಾಲೆಯಲ್ಲಿ ಓದಿ ಉನ್ನತ ಹುದ್ದೆಗೇರಿದ್ದಾರೆ. ನಾನು ಸಹ ಸರ್ಕಾರಿ ಶಾಲೆಯಲ್ಲಿ ಓದಿದ್ದೇನೆ’ ಎಂದರು.

‘ಸರ್ಕಾರಿ ಶಾಲೆಗಳಲ್ಲಿ ಓದಿದರೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕುವುದು ಕಷ್ಟ ಆಗುತ್ತದೆ ಎಂಬ ಯೋಚನೆಯನ್ನು ಬದಲಾಯಿಸಲು ಯುವ ಸಮುದಾಯ ಕೈಜೋಡಿಸಬೇಕು. ನಾನು ಸಹ ಸಿನಿಮಾ ಮೂಲಕ ಇದನ್ನು ಬದಲಾಯಿಸುವ ಪ್ರಯತ್ನ ಮಾಡುತ್ತಿದ್ದೇನೆ. ನಾನು ಯೂತ್ ಫಾರ್ ಸೇವಾದ ರಾಯಭಾರಿ ಆಗದೇ, ಒಬ್ಬ ಸೇವಕನಾಗಿ ಕಾರ್ಯನಿರ್ವಹಿಸುತ್ತೇನೆ. ಈಗಾಗಲೇ ನಾನು ಓದಿರುವ ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡು, ಅಭಿವೃದ್ಧಿಪಡಿಸುತ್ತಿದ್ದೇನೆ. ಎಲ್ಲರ ಮಾರ್ಗದರ್ಶನ ಪಡೆದು ನಾವೆಲ್ಲರೂ ಸೇರಿ ಬಲಿಷ್ಠ ಸಮಾಜದ ನಿರ್ಮಿಸೋಣ’ ಎಂದರು.

ಯೂತ್ ಫಾರ್ ಸೇವಾದ ಪ್ರಧಾನ ಕಾರ್ಯದರ್ಶಿ ಉನ್ನಿಕೃಷ್ಣನ್ ಮೆನನ್, ಕೇಂದ್ರ ಮಾನವ ಸಂಪನ್ಮೂಲ ಮತ್ತು ಸಾಮರ್ಥ್ಯ ನಿರ್ಮಾಣ ಆಯೋಗದ ಸದಸ್ಯ ಆರ್. ಬಾಲಸುಬ್ರಮಣಿಯಂ, ಡಬ್ಲ್ಯುಎಂಜಿ ಸಂಸ್ಥೆ ಸಂಸ್ಥಾಪಕ ಶ್ರೀಕರ ಐ.ಪಿ., ರೆಗೊ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಚ್‌.ಆರ್. ಶಂಕರ್, ಆರ್.ವಿ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಎಂ.ಪಿ. ಶ್ಯಾಮ್, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಕ್ಲೈವರ್ಕ್ಸ್ ಸ್ಪೇಸ್‌ನ ಸಹಸಂಸ್ಥಾಪಕ ಅಭಿಜಿತ್ ಶಶಿಧರ್, ಐವಿನ್ ಎಲೆಕ್ಟ್ರಾನಿಕ್ಸ್‌ನ ಸಂಸ್ಥಾಪಕಿ ಅಶ್ವಿನಿ ರೈ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪ್ರತಾಪ್ ಲಿಂಗಯ್ಯ, ರಿಷಬ್ ಶೆಟ್ಟಿ, ಆರ್‌. ಬಾಲಸುಬ್ರಮಣಿಯಂ, ಅಶ್ವಿನಿ ರೈ ಮತ್ತು ಎಚ್‌. ಆರ್‌. ಶಂಕರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ನೇಪಾಳದ ವ್ಯಕ್ತಿ ಸಾವು, ಆರು ಮಂದಿ ಅಸ್ವಸ್ಥ

ಧಾರವಾಡ: ನಗರದ ಸಾಯಿದರ್ಶನ ಬಡಾವಣೆಯ ಮನೆಯೊಂದರಲ್ಲಿ ವಾಸವಿದ್ದ ನೇಪಾಳ ಮೂಲದ ಏಳು ಮಂದಿಯಲ್ಲಿ ಒಬ್ಬರು ಮೃತಪಟ್ಟು, ಆರು ಮಂದಿ ಶನಿವಾರ ಅಸ್ವಸ್ಥರಾಗಿದ್ದಾರೆ.

ವಿವೇಕ (40) ಮೃತಪಟ್ಟವರು. ಅಸ್ವಸ್ಥಗೊಂಡಿದ್ದ ನರೇಶ್, ನಿತೀಶ್, ಡಿಕೇಶ್, ಲಕ್ಷ್ಮಣ, ಸೂಧನ್, ಕಮಾರ್ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಏಳು ಮಂದಿ ‘ಚಿಂಗ್ಸ್ ಚಾಂಗ್’ ಮೊಮೊಸ್ ಅಂಗಡಿ ನಡೆಸುತ್ತಿದ್ದರು. ಮನೆಯಲ್ಲಿ ಅವರು ಅಡುಗೆ ಒಲೆಗೆ ಇದ್ದಿಲು ಬಳಸಿರುವುದು ಕಂಡುಬಂದಿದೆ. ಶನಿವಾರ ಬೆಳಿಗ್ಗೆ ನೆರೆಹೊರೆಯವರು ಆ ಮನೆಯಲ್ಲಿದ್ದವರು ಅಸ್ವಸ್ಥರಾಗಿರುವುದನ್ನು ಗಮನಿಸಿ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಪರಿಶೀಲನೆ ನಡೆಸಿದಾಗ ಒಬ್ಬರು ಮೃತಪಟ್ಟಿದ್ದರು.

‘ಹೊಗೆ ಆವರಿಸಿ ಉಸಿರುಗಟ್ಟಿರಬಹುದು ಎಂದು ನೆರೆಹೊರೆಯವರು ತಿಳಿಸಿದ್ದಾರೆ. ತನಿಖೆ ನಡೆಸಲಾಗುವುದು’ ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

ಅರ್ಥಧಾರಿಗಳ ಅನುಕರಣೆ ಕಾರ್ಯಕ್ರಮ ಪ್ರದರ್ಶಿಸಿದ ವಿಠ್ಠಲ ಪುರಾಣಿಕ್ ಅವರನ್ನು ಸುಜಯ್ ನಾಗರಾಜ್, ಆಕಾಶವಾಣಿ ಅಧಿಕಾರಿ ನೂತನ ದೋಶೆಟ್ಟಿ ಹಾಗೂ ರಾಜೇಶ್ವರಿ ಹೆಬ್ಬಾರ ಸನ್ಮಾನಿಸಿದರು. ಸಾಹಿತಿ ಎಲ್. ಎಸ್. ಶಾಸ್ತ್ರಿ, ಬಹುಭಾಷಾ ತಜ್ಞ ಶಾ.ಮಂ. ಕೃಷ್ಣರಾಯ, ಸಪ್ತಕದ ಜಿ.ಎಸ್. ಹೆಗಡೆ ಉಪಸ್ಥಿತರಿದ್ದರು

ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ ಸ್ಫೋಟದಿಂದ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು

ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ: ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೊಕ್ಕಸಂದ್ರದ ಬಾಡಿಗೆ ಕೊಠಡಿಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಐವರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಿಹಾರದ ಮೊಹಮ್ಮದ್ ಹುಸೈನ್ (21), ಮುಜಾಪುರ ಹುಸೈನ್ ((19), ಅರ್ಬಾಜ್ ಆಲಂ (26), ರೋಹಿತ್ ಚೌಧರಿ (20) ಹಾಗೂ ಅನ್ನುರಾಜ್ ಕುಮಾರ್ ಅವರು ಗಾಯಗೊಂಡಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

‘ಬಿಹಾರದ ಐವರು ಕಾರ್ಮಿಕರು ಕೆಲವು ದಿನಗಳ ಹಿಂದೆ ನಗರಕ್ಕೆ ಬಂದಿದ್ದರು. ಧರ್ಮಪಾಲ ಎಂಬುವವರ ಬಳಿ ವೆಲ್ಡಿಂಗ್ ಕೆಲಸಕ್ಕೆ ಸೇರಿಕೊಂಡಿದ್ದರು. ಧರ್ಮಪಾಲ ಅವರೇ ಚೊಕ್ಕಸಂದ್ರದಲ್ಲಿ ಒಂದು ಬಾಡಿಗೆ ಕೊಠಡಿಯನ್ನು ಕೊಡಿಸಿದ್ದರು. ಧರ್ಮಪಾಲ ಅವರು ಅಡುಗೆ ಅನಿಲದ ಸಿಲಿಂಡರ್, ಸ್ಟೌ ಒದಗಿಸಿದ್ದರು. ಸಿಲಿಂಡರ್‌ನಿಂದ ಅಡುಗೆ ಅನಿಲ ಸೋರಿಕೆ ಆಗಿರುವುದನ್ನು ಅರಿಯದೇ ಶುಕ್ರವಾರ ಬೆಳಿಗ್ಗೆ ಟೀ ಕಾಯಿಸಲು ಲೈಟರ್ ಹೊತ್ತಿಸಿದಾಗ ಅಗ್ನಿ ಅವಘಡ ಸಂಭವಿಸಿದೆ’ ಎಂದು ಮೂಲಗಳು ಹೇಳಿವೆ.

‘ಅರ್ಬಾಜ್ ಆಲಂ ಕಡೆಯಿಂದ ಧರ್ಮಪಾಲ ಕೆಲಸಕ್ಕೆ ಕರೆಸಿಕೊಂಡಿದ್ದರು. ಅವರು ಕಳಪೆ ಗುಣ ಮಟ್ಟದ ಸಲಕರಣೆ ನೀಡಿದ್ದರ ಪರಿಣಾಮ ಅಗ್ನಿ ಅವಘಡ ಸಂಭವಿಸಿದೆ’ ಎಂದು ಅನ್ನುರಾಜ್ ಕುಮಾರ್ ದೂರು ನೀಡಿದ್ದಾರೆ.

ಧರ್ಮಪಾಲ ವಿರುದ್ಧ ಪೀಣ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪತ್ನಿ ಮೇಲೆ ಪತಿ ಗುಂಡು ಹಾರಿಸಿ ಕೊಲೆ ಮಾಡಿದ್ದ ಪ್ರಕರಣ

ಕೊಲೆಗೆ ಸುಪಾರಿ ಪಡೆದಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಮೌಳೇಶ್

ಭುವನೇಶ್ವರಿ

ಬೆಂಗಳೂರು: ಮಾಗಡಿ ರಸ್ತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ನಿ ಮೇಲೆ ಪತಿ ಗುಂಡು ಹಾರಿಸಿ, ಕೊಲೆ ಮಾಡಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯ ಪಾತ್ರ ಇರುವುದು ಪೊಲೀಸ್ ತನಿಖೆ ವೇಳೆ ಪತ್ತೆಯಾಗಿದೆ.

ತಮಿಳುನಾಡಿನ ಸೇಲಂನ ಮೌಳೇಶ್ ಎಂಬುವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ₹1.5 ಲಕ್ಷಕ್ಕೆ ಸುಪಾರಿ ನೀಡಿದ್ದ ಬಾಲಮುರುಗನ್
- ಪತ್ನಿಯಿಂದ ವಿಚ್ಛೇದನ ನೋಟಿಸ್ ಪಡೆದ ಬಳಿಕ ಕೊಲೆಗೆ ಸಂಚು

ಬಾಲಮುರುಗನ್ ಅವರು ತಮ್ಮ ಪತ್ನಿ ಭುವನೇಶ್ವರಿ ಅವರನ್ನು ಕೊಲೆ ಮಾಡಲು ಪುಡಿ ರೌಡಿ ಮೌಳೇಶ್‌ಗೆ ₹1.5 ಲಕ್ಷಕ್ಕೆ ಸುಪಾರಿ ನೀಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಅಪರಾಧ ಸುದ್ದಿ

ಏನಿದು ಪ್ರಕರಣ?: ‘ತಮಿಳುನಾಡಿನ ಬಾಲ ಮುರುಗನ್ ಹಾಗೂ ಭುವನೇಶ್ವರಿ 14 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ 12 ವರ್ಷದ ಮಗ ಹಾಗೂ 4 ವರ್ಷದ ಮಗಳಿದ್ದಾಳೆ. ಭುವನೇಶ್ವರಿ ಅವರು ಬೇರೊಬ್ಬರ ಜತೆ ಸಂಬಂಧ ಹೊಂದಿದ್ದಾರೆ ಎಂದು ಆರೋಪಿ ಬಾಲಮುರುಗನ್ ಶಂಕಿಸುತ್ತಿದ್ದ. ಇದೇ ವಿಚಾರಕ್ಕೆ ದಂಪತಿ ನಡುವೆ ಕೌಟುಂಬಿಕ ಕಲಹ ನಡೆಯುತ್ತಿತ್ತು. ಇದರಿಂದ ಬೇಸತ್ತ ಪತ್ನಿ, ವಿಚ್ಛೇದನ ಪಡೆಯಲು ತೀರ್ಮಾನಿಸಿದ್ದರು. ಇದಕ್ಕೆ ಪತಿ ಒಪ್ಪಿರಲಿಲ್ಲ. ಪತ್ನಿಯಿಂದ ವಿಚ್ಛೇದನ ನೋಟಿಸ್ ಪಡೆದ ಬಳಿಕ ಬಾಲ ಮುರುಗನ್ ಅವರು ಕೊಲೆಗೆ ಸಂಚು ರೂಪಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಸವೇಶ್ವರ ನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಭುವನೇಶ್ವರಿ ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಬಾಲಮುರುಗನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರು. ಡಿಸೆಂಬರ್ 24ರ ಸಂಜೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದ ಭುವನೇಶ್ವರಿಯತ್ತ ಐದು ಸುತ್ತು ಗುಂಡು ಹಾರಿಸಿ ಕೊಲೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಯನ್ನು ಬಂಧಿಸಿದ ಬಳಿಕ ವಿಚಾರಣೆ ನಡೆಸಿದಾಗ ಸುಪಾರಿ ನೀಡಿದ್ದು ಗೊತ್ತಾಯಿತು’ ಎಂದು ಪೊಲೀಸರು ಹೇಳಿದರು.

‘ಆನ್‌ಲೈನ್ ಮೂಲಕ ಮೌಳೇಶ್‌ನನ್ನು ಬಾಲಮುರುಗನ್ ಪರಿಚಯ ಮಾಡಿಕೊಂಡಿದ್ದರು. ಪತ್ನಿ ಕೊಲೆ ಮಾಡಲು ₹1.5 ಲಕ್ಷ ಹಣ ನೀಡಿದ್ದರು. ನಂತರ, ಕೃತ್ಯ ಎಸಗುವುದಕ್ಕಾಗಿ ತಮಿಳುನಾಡಿನಿಂದ ಬೆಂಗಳೂರಿಗೆ ಬಂದಿದ್ದ ಮೌಳೇಶ್ ಮೂರು ದಿನ ವಾಸ್ತವ್ಯ ಮಾಡಿದ್ದ. ಆದರೆ, ಕೃತ್ಯ ಎಸಗುವ ದಿನ ಆರೋಪಿ ತಮಿಳುನಾಡಿಗೆ ವಾಪಸ್ ಹೋಗಿದ್ದ’ ಎಂದು ಮೂಲಗಳು ಹೇಳಿವೆ.

ಕಿರುಕುಳ: ಬೈಕ್ ಟ್ಯಾಕ್ಸಿ ಸವಾರನ ಬಂಧನ

ವಿವೇಕ್

ಬೆಂಗಳೂರು: ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ ರ್‍ಯಾಪಿಡೊ ಬೈಕ್ ಟ್ಯಾಕ್ಸಿ ಸವಾರನನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ವಿವೇಕ್ ಬಂಧಿತ ಆರೋಪಿ. ಮಾನ್ಯತಾ ಟೆಕ್ ಪಾರ್ಕ್‌ನ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಯುವತಿ ಕೆಲಸ ಮಾಡುತ್ತಿದ್ದರು. ಕೆಲಸಕ್ಕೆ ತೆರಳುವುದಕ್ಕೆ ತಮ್ಮ ಮನೆಯ ಬಳಿಯಿಂದ ಬೈಕ್ ಟ್ಯಾಕ್ಸಿ ಬುಕ್ ಮಾಡಿದ್ದರು. ಪ್ರಯಾಣದ ವೇಳೆ, ವಿವೇಕ್ ಹಿಂಬದಿಗೆ ಸರಿದು ಯುವತಿಯ ಜತೆಗೆ ಅಸಭ್ಯವಾಗಿ ವರ್ತಿಸಿದ್ದ ಎಂದು ಪೊಲೀಸರು ತಿಳಿಸಿದರು.

ಯುವತಿ ಆಕ್ಷೇಪಿಸಿದಾಗ, ಆಕೆಯ ದೇಹವನ್ನು ಸ್ಪರ್ಶಿಸಲು ಪ್ರಯತ್ನಿಸಿದ್ದ. ಘಟನೆ ನಂತರ ಯುವತಿ ಕಿರುಚಾಡಿದ್ದರು. ಸ್ಥಳೀಯರು ನೆರವಿಗೆ ಬಂದಿದ್ದರು. ತಕ್ಷಣವೇ ಯುವತಿಯನ್ನು ಬೈಕ್‌ನಿಂದ ಇಳಿಸಿ ಸವಾರ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಯುವತಿ ನೀಡಿ ದೂರು ಆಧರಿಸಿ ತನಿಖೆ ನಡೆಸಲಾಯಿತು. ಬೈಕ್ ಸಂಚರಿಸಿದ್ದ ಮಾರ್ಗಗಳಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಪಾದಚಾರಿ ಮಾರ್ಗದತ್ತ ನುಗ್ಗಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 18ನೇ ಮುಖ್ಯರಸ್ತೆಯಲ್ಲಿ ವೇಗವಾಗಿ ಬಂದ ಕಾರೊಂದು ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದು ಪಾದಚಾರಿ ಮಾರ್ಗದತ್ತ ನುಗ್ಗಿದ್ದು, ಅಲ್ಲಿದ್ದ ಆರು ಮಂದಿ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದಾರೆ. ಜ.8ರಂದು ರಾತ್ರಿ 11.34ರ ಸುಮಾರಿಗೆ ಅವಘಾತ ಸಂಭವಿಸಿದೆ.

ರಸ್ತೆ ಪಕ್ಕದಲ್ಲಿನ ಹೋಟೆಲ್‌ನಲ್ಲಿರುವ ಸಿ.ಸಿ.ಸಿ.ಟಿ ಕ್ಯಾಮೆರಾದಲ್ಲಿ ರಸ್ತೆಯ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದಿರುವ ದೃಶ್ಯ ಸೆರೆಯಾಗಿದೆ. ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ಡೇರಿಕ್ ಟೋನಿ (42) ಕಾರು ಚಾಲನೆ ಮಾಡುತ್ತಿದ್ದರು. ಕಾರನ್ನು ಎಡ ಭಾಗಕ್ಕೆ ತೆಗೆದುಕೊಳ್ಳುವ ಬದಲಿಗೆ ಬಲಕ್ಕೆ ತೆಗೆದುಕೊಂಡಿದ್ದರಿಂದ ಈ ಅವಘಡ ಸಂಭವಿಸಿದೆ. ನಿಯಂತ್ರಣ ತಪ್ಪಿದ ಕಾರು, ವಿಭಜಕದ ಮೇಲೆ ಹತ್ತಿ ರಸ್ತೆಯ ಮತ್ತೊಂದು ಬದಿಗೆ ಹಾರಿ ಬಂದು ಹೋಟೆಲ್ ಕಟ್ಟಡಕ್ಕೆ ಡಿಕ್ಕಿಯಾಗಿದೆ. ಊಟ ಮುಗಿಸಿಕೊಂಡು ಹೋಟೆಲ್ ಮುಂದೆ ನಿಂತಿದ್ದವರು ತಕ್ಷಣವೇ ಪಕ್ಕಕ್ಕೆ ಜಿಗಿದು ಪಾರಾಗಿದ್ದಾರೆ.

ಮುಖ್ಯಾಂಶಗಳು

- ಆರು ಮಂದಿ ಕೂದಲೆಳೆ ಅಂತರದಲ್ಲಿ ಪಾರು
- ವಿಭಜಕದ ಮೇಲೆ ಹತ್ತಿ ರಸ್ತೆಯ ಮತ್ತೊಂದು ಬದಿಗೆ ಹಾರಿದ ಕಾರು

ಚಾಲಕ ಮದ್ಯಪಾನ ಮಾಡಿದ್ದರಿಂದ ಅಪಘಾತ ಸಂಭವಿಸಿದೆ ಎಂಬುದು ಪೊಲೀಸರು ನಡೆಸಿದ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಜೀವನ್ ವಿಮಾ ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹36 ಲಕ್ಷ ವಂಚನೆ: ಆರೋಪಿ ಪರಾರಿ

ಬೆಂಗಳೂರು: ವಿಚ್ಛೇದಿತ ಮಹಿಳೆಯನ್ನು ಮದುವೆಯಾಗಿ ₹36 ಲಕ್ಷ ಪಡೆದುಕೊಂಡು ವಂಚಿಸಿರುವ ಆರೋಪದಡಿ ವ್ಯಕ್ತಿಯೊಬ್ಬರ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬನಶಂಕರಿಯ ನಿವಾಸಿ ಮೋಹನ್ ರಾಜ್ ವಂಚನೆ ಆರೋಪ ಎದುರಿಸುತ್ತಿರುವ ವ್ಯಕ್ತಿ.

‘10 ವರ್ಷಗಳಿಂದ ಮೋಹನ್ ರಾಜ್ ಪರಿಚಯವಿದ್ದು, 2022ರಲ್ಲಿ ಇಬ್ಬರ ಮದುವೆ ನಡೆದಿತ್ತು. 2023ರ ಫೆಬ್ರುವರಿಯಲ್ಲಿ ಮಗು ಜನಿಸಿತ್ತು. ಕಳೆದ ವರ್ಷ ಆತ ಮನೆ ಬಿಟ್ಟು ಹೋಗಿದ್ದಾನೆ’ ಎಂದು ಸಂತ್ರಸ್ತೆ ಅಳಲು ತೋಡಿಕೊಂಡಿದ್ದಾರೆ.

‘ಹೊಸ ಮನೆ ಕಟ್ಟೋಣ ಎಂದು ಮೋಹನ್ ರಾಜ್ ನಂಬಿಸಿದ್ದ. ಆತನ ಮಾತು ನಂಬಿ ಚಿನ್ನಾಭರಣ ಅಡವಿಟ್ಟು ₹36 ಲಕ್ಷ ಸಾಲ ಪಡೆದು ಆತನಿಗೆ ನೀಡಿದ್ದೆ. ಆ ಹಣವನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ’ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

‘ನ್ಯಾಯ ಕೇಳಲು ಹೋದರೆ ನನ್ನ ಮೇಲೆ ಹಲ್ಲೆ ನಡೆಸಿದ್ದ. ನಾಲ್ಕು ಬಾರಿ ಪೊಲೀಸ್ ಠಾಣೆಗೆ ಹೋಗಿದ್ದರೂ ನ್ಯಾಯ ದೊರೆಯುತ್ತಿಲ್ಲ. ಮತ್ತೆ ದೂರು ನೀಡಿದರೆ ನನ್ನ ಮೇಲೆಯೇ ಕ್ರಮ ತೆಗೆದುಕೊಳ್ಳುವುದಾಗಿ ಪೊಲೀಸರು ಬೆದರಿಕೆ ಹಾಕಿದ್ದರು’ ಎಂದು ಮಹಿಳೆ ಅಳಲು ತೋಡಿಕೊಂಡಿದ್ದಾರೆ.

2021ರಲ್ಲಿ ಮೊದಲ ಪತಿಯಿಂದ ಸಂತ್ರಸ್ತೆ ವಿಚ್ಛೇದನ ಪಡೆದಿದ್ದರು.

150 ಶಾಲೆಗಳ ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

ಮಕ್ಕಳ ವಚನ ಮೇಳ: ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸಾಂಸ್ಕೃತಿಕ ಸಂಪತ್ತು ವಚನಗಳ ಮೂಲಕ ಮಕ್ಕಳಲ್ಲಿ ಸಂಸ್ಕೃತಿಯ ಬಿತ್ತನೆ ಮಾಡುತ್ತಿರುವ ಮಕ್ಕಳ ವಚನ ಮೇಳವು ಸಂಸ್ಕೃತಿಯ ಉತ್ಸವ ಎಂದು ಉದ್ಯಮಿ ಎಸ್. ಷಡಕ್ಷರಿ ಹೇಳಿದರು.

ವಚನಜ್ಯೋತಿ ಬಳಗವು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಮಕ್ಕಳ ವಚನ ಮೇಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸ್ಪರ್ಧಾತ್ಮಕ ಜಗತ್ತಿನಲ್ಲಿ ಮೂಲೆಗುಂಪಾಗುತ್ತಿರುವ ಕನ್ನಡದ ಉಳಿವಿಗೆ ವಚನ ಮೇಳಗಳು ಅಗತ್ಯ’ ಎಂದರು.

ಕನ್ನಡ ಸಂಸ್ಕೃತಿ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್ ಮಾತನಾಡಿ, ‘ಇಲ್ಲಿ ಸೇರಿರುವ ಅಪಾರಸ್ತೋಮ ವಚನಪ್ರೀತಿಗೆ ಸಾಕ್ಷಿಯಾಗಿದೆ. ಬಸವಣ್ಣನವರ ಆದರ್ಶಗಳನ್ನು ಮಕ್ಕಳಿಗೆ ಮುಟ್ಟಿಸುವ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ಮಾಡುತ್ತಿರುವ ವಚನಜ್ಯೋತಿ ಬಳಗದ ಕಾರ್ಯ ಅನುಕರಣೀಯ’ ಎಂದು ಪ್ರಶಂಸಿದರು.

ರವೀಂದ್ರ ಕಲಾಕ್ಷೇತ್ರದ ಮುಂಭಾಗದಲ್ಲಿ ಮಕ್ಕಳ ವಚನ ಮೇಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳೊಂದಿಗೆ ಗಣ್ಯರು

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ನಾಗೇಂದ್ರ ಹೊನ್ನಳ್ಳಿ ಮಾತನಾಡಿ, ‘ಮಕ್ಕಳನ್ನು ಮೊಬೈಲು ಗೀಳಿನಿಂದ ಹೊರತರಲು ಮಕ್ಕಳ ವಚನ ಮೇಳಗಳು ಹೆಚ್ಚೆಚ್ಚು ನಡೆಯಬೇಕು’ ಎಂದರು.

‘ಏಳು ದಿನ, ನಾಲ್ಕು ವೇದಿಕೆಗಳಲ್ಲಿ 12 ಪ್ರಕಾರಗಳಲ್ಲಿ ನಡೆದ ಮಕ್ಕಳ ವಚನ ಮೇಳದಲ್ಲಿ 150ಕ್ಕೂ ಹೆಚ್ಚು ಶಾಲೆಗಳ ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು’ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದರು.

ಸಮಾರಂಭದಲ್ಲಿ ಬೇಲಿಮಠದ ಶಿವರುದ್ರಸ್ವಾಮೀಜಿ, ವಿಶ್ವಬಂಧು ಫೌಂಡೇಷನ್‌ನ ಸಿದ್ದಯ್ಯ ಗುರೂಜಿ, ದೊಡ್ಡಮರಳವಾಡಿಯ ಶಿವಮಠದ ಪ್ರಭು ಕಿರೀಟ ಸ್ವಾಮೀಜಿ, ಸಂಗೀತ ನಿರ್ದೇಶಕ ಅನೂಪ್ ಸೀಲಿನ್, ಬಸವ ಸಮಿತಿಯ ಉಪಾಧ್ಯಕ್ಷ ಪ್ರಭುದೇವ ಚಿಗಟೇರಿ, ಉದ್ಯಮಿ ಬಸವನಗೌಡ, ವೀರಲೋಕದ ವೀರಕಪುತ್ರ ಶ್ರೀನಿವಾಸ್, ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪಾರ್ಶ್ವನಾಥ್, ವಚನಜ್ಯೋತಿ ಬಳಗದ ರಾಜಾ ಗುರುಪ್ರಸಾದ್, ಪ್ರಭು ಇಸುವನಹಳ್ಳಿ, ಮೀನಾಕ್ಷಿ ಮೇಟಿ, ಜಾನಕಿ, ಮಧು, ಶಿವಪ್ರಕಾಶ್, ಗಂಗಾಧರ್, ಡಾ. ರುದ್ರೇಶ ಅದರಂಗಿ, ವಿಶಾಲ್ ಹಾಗೂ ಸುರೇಶ್ ಭಾಗವಹಿಸಿದ್ದರು.

ದೇವರಾಜ್ ವಿರುದ್ಧ ಯಶ್ ತಾಯಿ ದೂರು

ಹಾಸನ: ‘ಮನೆಗೆ ಸೇರಿದ ಕಾಂಪೌಂಡ್ ಅನ್ನು ದೇವರಾಜ್ ಧ್ವಂಸಗೊಳಿಸಿದ್ದಾರೆ’ ಎಂದು ಆರೋಪಿಸಿ ನಟ ಯಶ್ ತಾಯಿ ಪುಷ್ಪಾ ಅವರು ಶನಿವಾರ ಹಾಸನ ಬಡಾವಣೆಯಲ್ಲಿ ದೂರು ನೀಡಿದ್ದು, ಅತಿಕ್ರಮ ಪ್ರವೇಶ, ಕಳ್ಳತನ ಹಾಗೂ ಕೊಲೆ ಬೆದರಿಕೆ ಆರೋಪದಡಿ ಪ್ರಕರಣ ದಾಖಲಾಗಿದೆ.

‘ಇಲ್ಲಿನ ವಿದ್ಯಾನಗರದಲ್ಲಿರುವ ಮನೆಯ ಪಕ್ಕದ ಜಾಗ, ನಮ್ಮ ಸ್ವಂತ ಸ್ವತ್ತು’ ಎಂದು ಪ್ರತಿಪಾದಿಸಿದ ಪುಷ್ಪಾ, ‘ಜಾಗವನ್ನು ಆರು ವರ್ಷಗಳ ಹಿಂದೆ ಖರೀದಿಸಿದ್ದೆವು. ನಗರಸಭೆಯ ಇ-ಖಾತೆಯೂ ನಮ್ಮ ಹೆಸರಲ್ಲಿದ್ದು, ಸಂಪೂರ್ಣ ದಾಖಲೆಗಳಿವೆ. ನ್ಯಾಯಾಲಯದಿಂದ ನೋಟಿಸ್ ಬಂದಿಲ್ಲ’ ಎಂದು ತಿಳಿಸಿದರು.

‘ನಾವು ಇಲ್ಲದ ಸಮಯದಲ್ಲಿ ದೇವರಾಜ್ ಅತಿಕ್ರಮ ಪ್ರವೇಶ ಮಾಡಿ ಬೆಲೆಬಾಳುವ ವಸ್ತುಗಳನ್ನು ನಾಶಪಡಿಸಿದ್ದಾನೆ. ಅವನನ್ನು ಏಕೆ ಬಂಧಿಸಿಲ್ಲ’ ಎಂದು ಪ್ರಶ್ನಿಸಿದರು. ದೇವರಾಜ್ ಅವರನ್ನು ಠಾಣೆಗೆ ಕರೆಸಿದ ಪೊಲೀಸರು ವಿಚಾರಣೆ ನಡೆಸಿದರು.

ಲಕ್ಷ್ಮಮ್ಮ ಅವರಿಂದ ಜಿಪಿಎ ಪಡೆದಿರುವ ದೇವರಾಜ್ ಅವರು, ಕಳೆದ ಭಾನುವಾರ ಜೆಸಿಬಿಯಿಂದ ಕಾಂಪೌಂಡ್, ಶೆಡ್ ತೆರವುಗೊಳಿಸಿದ್ದರು.

ಕೋಲ್ಕತ್ತ ರೇಸ್

ಅರ್ರೈವ್ಡ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಡರ್ಬಿ ಸ್ಟೇಕ್ಸ್ (2025-26) ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅರ್ರೈವ್ಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:00ಕ್ಕೆ ಆರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಿ ಪ್ರೆಸೆನ್ಸ್ 8, ಗಾಡ್‌ಸೆಂಡ್ ಡಿವೈನ್ 3, ಫ್ಲೆಮಿಂಗ್ ಗ್ರೇ 7
2ನೇ ರೇಸ್: ವಿವಾಲ್ಡಿ 3, ಲಕ್ಕಿ ನೈನ್ 4, ಸ್ಟಾರ್ಮಿ ಓಷನ್ 1
3ನೇ ರೇಸ್: ದಿಸ್ ಇಸ್ ಗೋಲ್ಡ್ 5, ಗೋಲ್ಡನ್ ಗ್ಲೋ 1, ಏರೊಪೊಲಿ 4
4ನೇ ರೇಸ್: ಅಪೆರಾಲ್ 1, ಪ್ರಿನ್ಸೆಸ್ ಪೀಚ್ 7, ಆರಿನಿ 4
5ನೇ ರೇಸ್: ಓಶಿಕಾ 5, ಲ್ಯಾವಿಶ್ ಗರ್ಲ್ 7, ಕೀಟಾರೊ 8
6ನೇ ರೇಸ್: ಸಿಲ್ವರ್ ಡ್ರೀಮ್ 2, ಟೆಟ್ಸೂ 3, ಥಂಡರೆಟ್ 4
7ನೇ ರೇಸ್: ಗ್ಲೋರಿಯಸ್ ಕಿಂಗ್ 3, ಮಿಸ್ಟಿ 6, ಬ್ಲ್ಯಾಕ್‌ಸ್ಟೋನ್ 1
8ನೇ ರೇಸ್: ಅರ್ರೈವ್ಡ್ 1, ಹಾರ್ಟ್ 8, ಡುಸೆನ್‌ಬರ್ಗ್ 2
9ನೇ ರೇಸ್: ಕಾಂಟೆಸ್ಸಿನಾ 3, ವೆನಿನೊ 7, ಕ್ವೀನ್ ಆಫ್ ಮಾಫಿಯಾ 2
10ನೇ ರೇಸ್: ನೂರಿ 1, ಕಾಶ್ಮೀರಿ ಸಿಲ್ಕ್ 4, ಕ್ರಿಸ್ಟಾಲ್ಡೊ 7

ಉತ್ತಮ ಬೆಟ್: ವಿವಾಲ್ಡಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	8,9,10.

ಪಶ್ಚಿಮಘಟ್ಟಕ್ಕೆ ಅಭಿವೃದ್ಧಿಯ ಕುತ್ತು

ರಾಷ್ಟ್ರೀಯ ಹೆದ್ದಾರಿ–66ರ ವಿಸ್ತರಣೆ ಸಲುವಾಗಿ ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿದ್ದರ ಪರಿಣಾಮ ಅಂಕೋಲಾದ ಶಿರೂರಿನಲ್ಲಿ ಗುಡ್ಡ ಕುಸಿತ ಸಂಭವಿಸಿರುವುದು.

ಎರಡನೇ ಮುಖಪುಟದಿಂದ..

'ಅಭಿವೃದ್ಧಿ ಪಶ್ಚಿಮ ಘಟ್ಟವನ್ನು ಪರಿಸರವನ್ನಾಗಿ ನೋಡುತ್ತಿಲ್ಲ. ಬದಲಾಗಿ ಆರ್ಥಿಕ ಸಂಪನ್ಮೂಲದ ಕೇಂದ್ರವಾಗಿ ಕಾಣುತ್ತಿದ್ದಾರೆ. ಇದೇ ಪರಿಸರದ ಅವನತಿಗೆ ಕಾರಣ ವಾಗುತ್ತಿದೆ' ಎಂಬ ಆತಂಕ ಹೊರಹಾಕಿದರು. ಇದು ಕೇವಲ ಅವರೊಬ್ಬರ ಮಾತಲ್ಲ. ಅವರಂತೆ ಹಲವು ಪರಿಸರವಾದಿಗಳು, ಪರಿಸರ ಕಾರ್ಯಕರ್ತರು, ಅಷ್ಟೇ ಏಕೆ, ಪಶ್ಚಿಮ ಘಟ್ಟ ವ್ಯಾಪ್ತಿಯ ಪ್ರದೇಶಗಳ ಜನಸಾಮಾನ್ಯರೂ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಪಶ್ಚಿಮ ಘಟ್ಟವು ಅಕ್ಷರಶಃ ಅಪಾಯದಲ್ಲಿದೆ. ಯೋಜನೆ, ಅಭಿವೃದ್ಧಿ, ಪರಿವರ್ತನೆ, ಹಿತರಕ್ಷಣೆ ಎಂಬ ನೆಪಗಳನ್ನು ಒಡ್ಡಿ ಪಶ್ಚಿಮ ಘಟ್ಟದ ಪ್ರಾಕೃತಿಕ ಸಮೃದ್ಧಿಗೆ ಧಕ್ಕೆ ತರುವ ಯೋಜನೆಗಳ ಜಾರಿಗೆ ವ್ಯವಸ್ಥಿತ ಪ್ರಯತ್ನ ನಡೆದಿದೆ. ಘಟ್ಟದ ವ್ಯಾಪ್ತಿಯಲ್ಲಿರುವ ನಿವಾಸಿಗಳ ಜತೆ ಸೇರಿ ಪರಿಸರವಾದಿಗಳ ತೀವ್ರ ಸ್ವರೂಪದ ಪ್ರತಿರೋಧ ವಿದ್ದರೂ, 'ಯೋಜನೆಯ ರೂಪುರೇಷೆ ಸಿದ್ಧವಾಗಿದೆ. ಯಾರು ಅಡ್ಡಿಪಡಿಸಿದರೂ ಸರಿಯೇ, ಯೋಜನೆ ಅನುಷ್ಠಾನಗೊಳಿಸುತ್ತೇವೆ. ಕಾಮಗಾರಿ ನಡೆಸುತ್ತೇವೆ' ಎಂಬ ಧೋರಣೆ ಪ್ರಬಲವಾಗುತ್ತಿದೆ.

2012ರಲ್ಲೇ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿದ ಪಶ್ಚಿಮ ಘಟ್ಟವು ರಾಜ್ಯ ಮತ್ತು ದೇಶದ ಪಾಲಿಗೆ ಹೆಮ್ಮೆಯ ಪ್ರದೇಶ. ಅದರ ಸಂರಕ್ಷಣೆ ಪ್ರಥಮ ಆದ್ಯತೆ ಆಗಬೇಕು. ಆದರೆ, ಯೋಜನೆಗಳ ಅಬ್ಬರಕ್ಕೆ ತನ್ನ ಸರ್ವಸ್ವವನ್ನೇ ಕಳೆದುಕೊಳ್ಳುವ ಸ್ಥಿತಿಯಲ್ಲಿದೆ. 300ಕ್ಕೂ ಹೆಚ್ಚು ಅಪಾಯದ ಅಂಚಿನಲ್ಲಿ ಇರುವ ಸಸ್ಯ, ಪ್ರಾಣಿ ಪ್ರಭೇದಗಳಿಗೆ ಅಲ್ಲದೇ ಅರಣ್ಯ ಪ್ರದೇಶಕ್ಕೆ ಅಪಾರ ಹಾನಿ ಆಗಲಿದೆ. ಸ್ಥಳೀಯರ ಬದುಕು ಸಹ ಅಪಾಯಕಾರಿಯಾಗಲಿದೆ.

ಪರಿಸರ ಸಂರಕ್ಷಣೆಯ ಅಂತರರಾಷ್ಟ್ರೀಯ ಒಕ್ಕೂಟವು (ಐಯುಸಿಎನ್) 2020ರಲ್ಲೇ ವರದಿಯೊಂದನ್ನು ಸಿದ್ಧಪಡಿಸಿ, 'ಜನಸಂಖ್ಯೆ ವೃದ್ಧಿಯ ಜೊತೆಗೆ ಅತಿಯಾದ ನಗರೀಕರಣ, ವಿವಿಧ ಕಾಮಗಾರಿ ಮತ್ತು ಹವಾಮಾನ ವೈಪರೀತ್ಯದಿಂದ ಪಶ್ಚಿಮ ಘಟ್ಟದ ಅಸ್ತಿತ್ವಕ್ಕೆ ಧಕ್ಕೆ ಆಗಲಿದೆ' ಎಂದು ಕಳವಳ ವ್ಯಕ್ತಪಡಿಸಿತ್ತು. ಈಗಾಗಲೇ ಶೇ 40ರಷ್ಟು ಮೂಲ ಅರಣ್ಯ ನಾಶವಾಗಿದೆ. ಸಂರಕ್ಷಿತ ಅರಣ್ಯವನ್ನು ಉಳಿಸಿಕೊಳ್ಳದಿದ್ದರೆ, ಒಟ್ಟಾರೆ ಜೀವಸಂಕುಲಕ್ಕೆ ಅಪಾಯ ನಿಶ್ಚಿತ ಎಂದು ಹೇಳಿತ್ತು.

ಪರಿಸರ ನಾಶದ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೀಗೆ ಕಳವಳ ವ್ಯಕ್ತವಾಗುತ್ತಿದ್ದರೂ ಅದು ಯಾವುದು ಕೂಡ ತಮಗೆ ಸಂಬಂಧವೇ ಇಲ್ಲ ಎಂಬಂತೆ ಪೈಪೋಟಿ ಏರ್ಪಟ್ಟಂತೆ ಒಂದೊಂದೇ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನ ನಡೆದಿದೆ. ಶತಮಾನಗಳಿಂದ ಇರುವ ಪ್ರಾಕೃತಿಕ ನಿಯಮ ಉಲ್ಲಂಘಿಸಿ ಒಂದೆಡೆ ನದಿಗಳ ದಿಕ್ಕನ್ನು ತಿರುಗಿಸಲು ಯೋಜಿಸಿದ್ದರೆ, ಮತ್ತೊಂದೆಡೆ ಲಕ್ಷಾಂತರ ಮರಗಳನ್ನು ನೆಲಕ್ಕುರುಳಿಸಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಪಶ್ಚಿಮ ಘಟ್ಟದ ವಿಸ್ತಾರ 20,668 ಚ.ಕಿ.ಮೀ. ಇದರ ವ್ಯಾಪ್ತಿಗೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಬರುತ್ತವೆ. ಇಲ್ಲಿನ ಅರಣ್ಯ ಪ್ರದೇಶವು ಅಪರೂಪದ ಸಸ್ಯಗಳಿಗೆ ಅಲ್ಲದೇ ಹುಲಿ, ಆನೆ, ಕಾಡೆಮ್ಮೆ, ಅಳಿವಿನಂಚಿನಲ್ಲಿರುವ ಸಿಂಹಬಾಲದ ಮಂಗಗಳಿಗೆ, ಮಲಬಾರ್ ಗ್ಲೈಡಿಂಗ್ ಕಪ್ಪೆ, ಕಾಳಿಂಗ ಮುಂತಾದ ಪ್ರಾಣಿ, ಪಕ್ಷಿ ಮತ್ತು ಕೀಟಗಳಿಗೆ ಆಶ್ರಯತಾಣವಾಗಿದೆ. ಅರಣ್ಯಪ್ರದೇಶದಲ್ಲಿ ಸ್ವಲ್ಪ ಏರುಪೇರಾದರೂ ಅವುಗಳ ಆವಾಸಸ್ಥಾನ ನಾಶವಾಗುತ್ತದೆ.

'ಅಮೂಲ್ಯ ಪರಿಸರವನ್ನು ಈ ಪೀಳಿಗೆಯವರಿಗೆ ಅಷ್ಟೇ ಅಲ್ಲ, ಮುಂಬರುವ ಪೀಳಿಗೆಗಳಿಗೂ ಉಳಿಸಿಕೊಳ್ಳುವ ಕನಿಷ್ಠ ಕಾಳಜಿಯೂ ಇಲ್ಲ' ಎಂಬ ಬೇಸರ ನಾಯಕರದ್ದು.

ಶರಾವತಿ ಕಣಿವೆಗೆ ಧಕ್ಕೆ ತರುವ ಶರಾವತಿ ಪಂಪ್ಡ್ ಸ್ಟೋರೇಜ್, ಅಂಕೋಲಾದ ಕೇಣಿಯಲ್ಲಿ ನಿರ್ಮಾಣಗೊಳ್ಳಲಿರುವ ಆಳಸಮುದ್ರ ಬಂದರು ಯೋಜನೆಗಳಿಗೆ ಈಗಾಗಲೇ ಪ್ರಬಲ ಪ್ರತಿರೋಧವಿದೆ. ಇದರ ಮಧ್ಯೆ ಪಶ್ಚಿಮಾಭಿಮುಖವಾಗಿ ಹರಿಯುವ ಬೇಡ್ತಿ ನದಿಯನ್ನು ಬಂಗಾಳ ಕೊಲ್ಲಿಗೆ ಸೇರುವ ತುಂಗಭದ್ರಾ ನದಿಯ ಉಪನದಿ ವರದಾಕ್ಕೆ ಜೋಡಿಸುವ ಯೋಜನೆಗೂ ಸಿದ್ಧತೆ ನಡೆದಿದೆ. ಇದಕ್ಕೂ ಸ್ಥಳೀಯರ ವಿರೋಧವಿದೆ. ಕಳೆದ ಎರಡು ತಿಂಗಳುಗಳಿಗೂ ಹೆಚ್ಚು ಅವಧಿಯಿಂದ ನದಿ ಜೋಡಣೆ ಯೋಜನೆ ವಿರುದ್ಧ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಜಾಗೃತಿ ಕಾರ್ಯಕ್ರಮ ನಡೆದಿದೆ. ಮಹಿಳೆಯರು ಗ್ರಾಮ ಮಟ್ಟದಲ್ಲಿ ಪಾದಯಾತ್ರೆ ನಡೆಸಿ ಜನರನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ.

'ಬೇಡ್ತಿ–ವರದಾ ನದಿ ಜೋಡಣೆ ಆಗಬೇಕು ಎಂಬುದು ಹಾವೇರಿ ಜಿಲ್ಲೆ ಜನರ ಬಹುದಿನಗಳ ಕನಸು. ಇದಕ್ಕಾಗಿ ವರ್ಷಗಳಿಂದ ಹೋರಾಡುತ್ತಿದ್ದೇವೆ. ಯೋಜನೆ ಜಾರಿಯಾದರೆ ಹಾವೇರಿ ಜಿಲ್ಲೆ ಬರಗಾಲ ಮುಕ್ತವಾಗಲಿದೆ. ಗದಗ, ಕೊಪ್ಪಳ ಜಿಲ್ಲೆಗೂ ನೀರು ಸಿಗಲಿದೆ. ಬೇಸಿಗೆಯಲ್ಲೂ ನೀರಿನ ಸಮಸ್ಯೆ ಇರುವುದಿಲ್ಲ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಹೇಳುತ್ತಾರೆ.

'ಬೇಡ್ತಿ ನದಿಯ 22 ಟಿಎಂಸಿ ನೀರು ಸಮುದ್ರ ಸೇರಿ ಪೋಲಾಗುತ್ತಿದೆ. ಅದೇ ನೀರನ್ನು ವರದಾ ನದಿಗೆ ಬಿಟ್ಟರೆ, ಹಾವೇರಿ, ಗದಗ, ಕೊಪ್ಪಳ ಜಿಲ್ಲೆಯ 16 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯವಾಗುತ್ತದೆ' ಎಂಬುದು ಅವರ ಅಭಿಪ್ರಾಯ. ನೀರನ್ನು ಅಣೆಕಟ್ಟು ಮೂಲಕ ಸಂಗ್ರಹಿಸಿ ಇಟ್ಟುಕೊಂಡರೆ, ಹಾವೇರಿ ಜಿಲ್ಲೆಗೆ ವರ್ಷಪೂರ್ತಿ ನೀರು ಸಿಗುತ್ತದೆ ಎನ್ನುವರು.

ಪಶ್ಚಿಮ ಘಟ್ಟದಲ್ಲಿ ಜಾರಿಯಾದ ಯೋಜನೆಗಳು..

- ಬೆಳಗಾವಿ-ಗೋವಾ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌4ಎ) ವಿಸ್ತರಣೆ
- ಬೆಳಗಾವಿ - ಚೋರ್ಲಾ ಘಾಟ್ ರಸ್ತೆ ವಿಸ್ತರಣೆ
- ದೇವಿಮನೆ ಘಾಟ್ ಮೂಲಕ ಶಿರಸಿ ಕುಮಟಾ ರಸ್ತೆ (ಎನ್‌ಎಚ್‌766ಇ) ವಿಸ್ತರಣೆ.
- ಶಿವಮೊಗ್ಗ ಜಿಲ್ಲೆಯಲ್ಲಿ ಮೂಕಾಂಬಿಕಾ ಮತ್ತು ಶರಾವತಿ ವನ್ಯಜೀವಿ ಅಭಯಾರಣ್ಯದ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌369ಇ) ವಿಸ್ತರಣೆ.
- ಮೂಕಾಂಬಿಕಾ ಮತ್ತು ಶರಾವತಿ ವನ್ಯಜೀವಿ ಅಭಯಾರಣ್ಯದ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌766ಸಿ) ರಸ್ತೆ ವಿಸ್ತರಣೆ.
- ಶಿವಮೊಗ್ಗದಲ್ಲಿನ ಶೆಟ್ಟಿಹಳ್ಳಿ ವನ್ಯಜೀವಿ ಅಭಯಾರಣ್ಯ ಮತ್ತು ಚಿಕ್ಕಮಗಳೂರಿನ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌169) ವಿಸ್ತರಣೆ.
- ಆಗುಂಬೆ ಘಾಟ್ ಮತ್ತು ಸೋಮೇಶ್ವರ ವನ್ಯಜೀವಿ ಅಭಯಾರಣ್ಯದ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌169ಎ) ವಿಸ್ತರಣೆ
- ಚಿಕ್ಕಮಗಳೂರು ಮುಖಾಂತರ (ಎನ್‌ಎಚ್‌173) ಹೆದ್ದಾರಿ ವಿಸ್ತರಣೆ
- ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಚಾರ್ಮಾಡಿ ಘಾಟ್ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌234) ವಿಸ್ತರಣೆ
- ಶಿರಾಡಿ ಘಾಟ್ ಮೂಲಕ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್‌75) ವಿಸ್ತರಣೆ
- ಮೈಸೂರು-ಮಡಿಕೇರಿ-ಬಂಟ್ವಾಳ-ಮಂಗಳೂರು ಹೆದ್ದಾರಿ (ಎನ್‌ಎಚ್‌275) ವಿಸ್ತರಣೆ

ಈ ನದಿ ಜೋಡಣೆ ವಿಷಯ ನಿನ್ನೆ–ಮೊನ್ನೆಯದ್ದಲ್ಲ. 1992ರಿಂದಲೇ ಇದರ ಬಗ್ಗೆ ಚರ್ಚೆ ನಡೆದಿದ್ದು, ಈಗ ಡಿಪಿಆರ್ ಹಂತಕ್ಕೆ ಬಂದಿದೆ. ಗದಗ ಜಿಲ್ಲೆಯ ಹಿರೇವಡ್ಡಟ್ಟಿ ಬಳಿ ದೊಡ್ಡ ಅಣೆಕಟ್ಟು ಮತ್ತು ಶಿರಸಿ ಬಳಿಯ ಮೆಣಸನಗೋಡ ಬಳಿ ಚಿಕ್ಕ ಸೇತುವೆ ನಿರ್ಮಿಸುವ ಆಲೋಚನೆ ಇತ್ತು. ನದಿ ಜೋಡಣೆ ಬಗ್ಗೆ 2003–04ರಲ್ಲಿ ಸಮೀಕ್ಷೆ ನಡೆಸಿದ್ದ ಸಿವಿಲ್ ಎಂಜಿನಿಯರ್ ಎನ್. ಶಂಕರಪ್ಪ ತೋರಣಗಲ್ಲು, ಅಂದಿನ ಕಾಲದಲ್ಲೇ ಅಂದಾಜು ₹ 622 ಕೋಟಿ ಹಣ ಬೇಕೆಂದು ವರದಿ ನೀಡಿದ್ದರು. ಸುರಂಗ ಮಾದರಿಯ ನದಿ ಜೋಡಣೆ ಕೆಲಸಕ್ಕೆ 500 ಎಕರೆ ಅರಣ್ಯ ಪ್ರದೇಶದಲ್ಲಿ ಇರುವ 1,741 ಮರಗಳನ್ನು ಕಡಿಯಬೇಕಿತ್ತು.

2021ರಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಯೋಜನೆಯನ್ನು ರಾಜ್ಯ ಬಜೆಟ್‌ನಲ್ಲೇ ಪ್ರಸ್ತಾಪಿಸಿದ್ದರು. ಡಿಪಿಆರ್ ಸಿದ್ಧಪಡಿಸಲು ರಾಷ್ಟ್ರೀಯ ಜಲಮೂಲ ಅಭಿವೃದ್ಧಿ ಏಜೆನ್ಸಿಗೆ ಕೋರಿದ್ದರು. ಆದರೆ, ಪರಿಸರಕ್ಕೆ ಹಾನಿಯಾಗುತ್ತದೆ ಎಂಬ ಕಾರಣಕ್ಕೆ ಯೋಜನೆ ಜಾರಿಯಾಗಲಿಲ್ಲ.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ, ಅರಣ್ಯಕ್ಕೆ ಧಕ್ಕೆಯಾಗದಂತೆ ಯೋಜನೆಗೆ ಹೊಸ ರೂಪ ನೀಡಲಾಗಿತ್ತು. ಈಗ 2025ರಲ್ಲಿ ಯೋಜನೆಯಲ್ಲಿ ಸಾಕಷ್ಟು ಮಾರ್ಪಾಡು ಮಾಡಿರುವ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು (ಎನ್‌ಡಬ್ಲ್ಯು-ಡಿಎ), ಕೇಂದ್ರ ಸರ್ಕಾರಕ್ಕೆ ಇತ್ತೀಚೆಗೆ ವರದಿ ಸಲ್ಲಿಸಿದೆ. ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಜಲಶಕ್ತಿ ಸಚಿವಾಲಯ ಸಿದ್ಧಪಡಿಸುವ ಡಿಪಿಆರ್‌ಗೆ ರಾಜ್ಯ ಸರ್ಕಾರ ಸಮ್ಮತಿ ಸೂಚಿಸಿದೆ. ಒಟ್ಟು ₹ 10 ಸಾವಿರ ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಕೇಂದ್ರ ಸರ್ಕಾರ ₹ 9 ಸಾವಿರ ಕೋಟಿ ಭರಿಸಲಿದೆ.

ಬೇಡ್ತಿ– ವರದಾ ನದಿ ಮಾತ್ರವಲ್ಲದೇ ವರದಾ–ಧರ್ಮಾ–ಬೇಡ್ತಿ ನದಿಗಳ ಜೋಡಣೆಗೂ ಅವಕಾಶ ಲಭ್ಯವಾಗುವ ನಿರೀಕ್ಷೆಯಿದೆ. ವರದಾ–ಬೇಡ್ತಿ ನದಿ ಜೋಡಣೆಯಿಂದ 10.6 ಟಿಎಂಸಿ ಹಾಗೂ ವರದಾ–ಧರ್ಮಾ–ಬೇಡ್ತಿ ನದಿ ಜೋಡಣೆಯಿಂದ 7.84 ಟಿಎಂಸಿ ಹೆಚ್ಚುವರಿ ನೀರು ಲಭ್ಯವಾಗಲಿದೆ. ಹೆಚ್ಚುವರಿ ನೀರನ್ನು ಹಿರೇವಡ್ಡಟ್ಟಿ ಬಳಿ ಸಂಗ್ರಹಿಸಲು ಸಹ ತೀರ್ಮಾನಿಸಲಾಗಿದೆ.

ಬೇಡ್ತಿ ಹಾಗೂ ವರದಾ ನದಿಗಳು 20 ಕಿ.ಮೀ. ಅಂತರದಲ್ಲಿ ಹಾದು ಹೋಗಿವೆ. ಇದೇ 20 ಕಿ.ಮೀ. ಜಾಗದಲ್ಲಿ ಅರಣ್ಯ ಪ್ರದೇಶ ಹೆಚ್ಚಿದೆ. ಸುರಂಗ ಮಾರ್ಗದಲ್ಲಿ ನದಿ ಜೋಡಣೆ ಮಾಡಿದರೆ, ಅರಣ್ಯಕ್ಕೆ ಹಾನಿಯಾಗಲಿದೆ. ಹೀಗಾಗಿ, ನೆಲದಡಿ ಪೈಪ್ ಅಳವಡಿಸುವ ಮೂಲಕ ನದಿ ಜೋಡಿಸುವ ಬಗ್ಗೆ ಹೊಸ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ ಎಂದು ಗೊತ್ತಾಗಿದೆ. 20 ಕಿ.ಮೀ. ಜಾಗ ಹೊರತುಪಡಿಸಿ ಬೇರೆ ಕಡೆಯಿಂದ ಹಿರೇವಡ್ಡಟ್ಟಿಯವರೆಗೂ 100 ಕಿ.ಮೀ. ಪೈಪ್ ಮೂಲಕವೇ ನೀರು ಹರಿಸುವ ಬಗ್ಗೆ ಚರ್ಚೆಗಳು ನಡೆದಿವೆ. 20 ಕಿ.ಮೀ. ಅಂತರದಲ್ಲಿ ಸೇರುವ ನದಿಗಳನ್ನು 100 ಕಿ.ಮೀ. ಅಂತರದಲ್ಲಿ ಸೇರಿಸಿದರೆ ಯೋಜನೆ ವೆಚ್ಚವೂ ಹೆಚ್ಚಾಗಲಿದೆ.

ಈ ಎಲ್ಲದರ ಬೆನ್ನಲ್ಲೇ ಗೋವಾ–ತಮ್ನಾರ್ ವಿದ್ಯುತ್ 400 ಕೆವಿ ವಿದ್ಯುತ್ ಮಾರ್ಗ ಯೋಜನೆಗೆ ರಾಜ್ಯ ಸರ್ಕಾರ ಹಸಿರುನಿಶಾನೆ ತೋರಿಸಿದೆ. ಇದು ಪಶ್ಚಿಮ ಘಟ್ಟದ 435 ಎಕರೆ ಪ್ರದೇಶಕ್ಕೆ ಧಕ್ಕೆ ತರಲಿದ್ದು, 13,954 ಮರಗಳ ಮಾರಣಹೋಮ ಆಗಲಿದೆ.

ಹೆದ್ದಾರಿ ವಿಸ್ತರಣೆ, ವಿದ್ಯುತ್ ತಂತಿ ಮಾರ್ಗ ವಿಸ್ತರಣೆ, ಬಂದರು ನಿರ್ಮಾಣ...ಹೀಗೆ ಸಾಲು ಸಾಲು ಯೋಜನೆಗಳಿಗೆ ಉತ್ತರ ಕನ್ನಡದಲ್ಲಿನ ಪಶ್ಚಿಮ ಘಟ್ಟದ ಕಾಡುಗಳು ನಿಧಾನಕ್ಕೆ ಕರಗುತ್ತಿವೆ. ಚತುಷ್ಪಥ ರಾಷ್ಟ್ರೀಯ ಹೆದ್ದಾರಿ–66 ಮತ್ತು ಹಾವೇರಿಯಿಂದ ಶಿರಸಿ ಮಾರ್ಗವಾಗಿ ಕುಮಟಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–766ಇ ವಿಸ್ತರಣೆಗೆ ಕಳೆದು ಒಂದು ದಶಕದಲ್ಲಿ 12 ಸಾವಿರಕ್ಕೂ ಹೆಚ್ಚು ಮರಗಳು ನಾಶವಾಗಿವೆ. ಪ್ರಾಕೃತಿಕ ಸಂಪತ್ತಿಗೆ ಭಾರಿ ಪೆಟ್ಟು ಬಿದ್ದಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಯಿಂದ ಜಗತ್ತಿನಲ್ಲೇ ಅಪರೂಪದ ರಾಮಪತ್ರೆ ಜಡ್ಡಿ (ಮಿಸ್ಟರಿಕಾ ಸ್ವ್ಯಾಂಪ್), ಸೀಮಿತ ಸಂಖ್ಯೆಯ ಸಿಂಹ ಬಾಲದ ಸಿಂಗಳೀಕ ಸೇರಿದಂತೆ ಅಳಿವಿನಂಚಿನಲ್ಲಿನ ಸಸ್ಯ, ಜೀವ ಪ್ರಬೇಧಗಳಿರುವ ಶರಾವತಿ ಕಣಿವೆ ಮತ್ತು ಶರಾವತಿ ಅಭಯಾರಣ್ಯಕ್ಕೆ ಅಪಾಯ ಎದುರಾಗಲಿದೆ ಎಂಬುದು ಪರಿಸರವಾದಿಗಳ ಆತಂಕ.

ಅಂದಾಜು ₹10,500 ಕೋಟಿ ವೆಚ್ಚದ ಈ ಯೋಜನೆಯ ಮೂಲಕ ಗೇರುಸೊಪ್ಪ ಜಲಾಶಯದಿಂದ ಸಾಗರ ತಾಲ್ಲೂಕಿನ ತಳಕಳಲೆ ಜಲಾಶಯಕ್ಕೆ ನೀರು ಸಾಗಿಸಿ ಜಲವಿದ್ಯುತ್ ಉತ್ಪಾದಿಸುವ ಉದ್ದೇಶವಿದೆ. ಇದಕ್ಕಾಗಿ ದಟ್ಟ ಅರಣ್ಯದ ಕೆಳಭಾಗದಲ್ಲಿ 7 ಕಿ.ಮೀ ಉದ್ದ ಸುರಂಗ ಮಾರ್ಗ ರಚಿಸಲು ಉದ್ದೇಶಿಸಲಾಗಿದೆ. 16 ಸಾವಿರ ಮರಗಳು ಹನನವಾಗಲಿದ್ದು, ಯೋಜನೆಗೆ 54.55 ಹೆಕ್ಟೇರ್ ಅರಣ್ಯ ಭೂಮಿ ನಾಶವಾಗಲಿದೆ ಎಂದು ಯೋಜನೆ ಜಾರಿಗೊಳಿಸುತ್ತಿರುವ ಕೆಪಿಸಿಎಲ್ ಹೇಳಿದೆ.

'ಶರಾವತಿ ನದಿಗೆ ಗೇರುಸೊಪ್ಪದಲ್ಲಿ ಶರಾವತಿ ಟೇಲರಿಸ್ ಯೋಜನೆ ಹೆಸರಿನಲ್ಲಿ ಜಲಾಶಯ ನಿರ್ಮಿಸುವ ವೇಳೆ ಇನ್ನುಮುಂದೆ ಶರಾವತಿ ನದಿ ಕಣಿವೆಯಲ್ಲಿ ಯಾವುದೇ ಯೋಜನೆ ಜಾರಿಗೆ ತರುವುದಿಲ್ಲ ಎಂದು ಹೈಕೋರ್ಟ್‌ನಲ್ಲಿ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಸಲ್ಲಿಸಿದ ಅಫಿಡವಿಟ್‌ನ್ನು ಉಲ್ಲಂಘಿಸಿದೆ' ಎಂಬುದು ಪರಿಸರವಾದಿಗಳ ಆರೋಪ.

'ಶರಾವದಿ ನದಿಯಲ್ಲಿ 14 ಕಿ.ಮೀ ದೂರದವರೆಗೆ ಉಪ್ಪುನೀರು ನುಗ್ಗುತ್ತಿದೆ. ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಯಾದರೆ 1 ಕೋಟಿಗೂ ಹೆಚ್ಚು ಲೀಟರ್ ನೀರನ್ನು ಮೇಲ್ಮಟ್ಟದ ಜಲಾಶಯಕ್ಕೆ ಸಾಗಿಸಲಾಗುತ್ತದೆ. ಗೇರುಸೊಪ್ಪ ಜಲಾಶಯದಿಂದ ನದಿಗೆ ಹರಿಯುವ ನೀರಿನ ಪ್ರಮಾಣ ಇಳಿಕೆಯಾಗಲಿದೆ. ಇದರಿಂದ ಉಪ್ಪುನೀರು ಇನ್ನಷ್ಟು ದೂರದವರೆಗೆ ನುಗ್ಗಲಿದೆ. ನದಿಯಲ್ಲಿ 45 ಪ್ರಬೇಧದ ಮೀನುಗಳಿವೆ. ಅವುಗಳಿಗೆ ಸೂಕ್ತ ಪೋಷಕಾಂಶ ಸಿಗದೆ ಅವೂ ನಶಿಸಲಿವೆ' ಎಂದು ಪರಿಸರ ಸಂಶೋಧಕ ಗುರುಪ್ರಸಾದ್ ಹೆಗಡೆ ಹೇಳುತ್ತಾರೆ.

ಪರಿಸರವಾದಿಗಳ ವಿರೋಧದ ನಡುವೆಯೇ ಮೂರು ದಶಕದಿಂದ ನನೆಗುದಿಗೆ ಬಿದ್ದಿರುವ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆ ಜಾರಿಗೆ ಪ್ರಯತ್ನ ನಡೆದಿದೆ. 1999ರಲ್ಲಿಯೇ ₹494 ಕೋಟಿ ವೆಚ್ಚದ ಯೋಜನೆಗೆ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಚಾಲನೆ ನೀಡಿದ್ದರು. ಹುಬ್ಬಳ್ಳಿಯಿಂದ ಕಲಘಟಗಿವರೆಗೆ 34 ಕಿ.ಮೀ ಉದ್ದ ರೈಲು ಮಾರ್ಗವೂ ನಿರ್ಮಾಣಗೊಂಡಿತ್ತು. ಆ ಬಳಿಕ ಯೋಜನೆ ನನೆಗುದಿಗೆ ಬಿದ್ದಿತ್ತು. ಪರಿಸರಕ್ಕೆ ಹಾನಿಯಾಗಲಿದೆ ಎಂಬ ಕಾರಣ ನೀಡಿ ಪರಿಸರವಾದಿ ಸಂಘಟನೆಗಳ ಆಕ್ಷೇಪಣೆಯಿಂದ ಕಳೆದ ಮೂರು ದಶಕದಿಂದ ಯೋಜನೆ ನನೆಗುದಿಗೆ ಬಿದ್ದಿತ್ತು. ಪಶ್ಚಿಮ ಘಟ್ಟ ಸೀಳಿಕೊಂಡು ಈಗಾಗಲೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ರೈಲು ಮಾರ್ಗದಿಂದ ಅರಣ್ಯಕ್ಕೆ, ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಧಕ್ಕೆ ಉಂಟಾಗಲಿದ್ದು, ವನ್ಯಜೀವಿಗಳ ಸಂಚಾರಕ್ಕೂ ಅಡ್ಡಿಯುಂಟಾಗಲಿದೆ ಎಂದು ವಾದಿಸಿದ್ದ ಪರಿಸರವಾದಿ ಸಂಘಟನೆಗಳು ಯೋಜನೆ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದರು.

ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಯೋಜನೆ ಕಾರ್ಯಗತವಾದರೆ ಅಭ್ಯಂತರ ಇಲ್ಲ ಎಂದು ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) 2016ರಲ್ಲಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಪರಿಸರವಾದಿಗಳು ಯೋಜನೆ ಕಾರ್ಯರೂಪಕ್ಕೆ ತರುವುದನ್ನು ಪ್ರಶ್ನಿಸಿದ್ದರು. 2024ರಲ್ಲಿ ಆದೇಶಿಸಿದ್ದ ಹೈಕೋರ್ಟ್ ವನ್ಯಜೀವಿ ಮಂಡಳಿ ಸಹಾಯದೊಂದಿಗೆ ಅಧ್ಯಯನ ಕೈಗೊಂಡು, ಪರಿಷ್ಕೃತ ಯೋಜನಾ ವರದಿ ಸಲ್ಲಿಸಲು ಸೂಚಿಸಿತ್ತು. ರೈಲ್ವೆ ಇಲಾಖೆ ಪರಿಷ್ಕೃತ ವಿಸ್ತೃತ ಯೋಜನಾ ವರದಿ ಸಲ್ಲಿಸಿದೆ. ಅದರಂತೆ, ಯೋಜನೆಗೆ ಕನಿಷ್ಠ 1.58 ಲಕ್ಷ ಮರಗಳು ಬಲಿಯಾಗಲಿವೆ, 595 ಹೆಕ್ಟೇರ್ ಅರಣ್ಯದ ಬದಲಿಗೆ 585 ಹೆಕ್ಟೇರ್ ಬಳಕೆಯಾಗಲಿದೆ. 164.4 ಕಿ.ಮೀ ಉದ್ದದ ಮಾರ್ಗದ ಪೈಕಿ 97 ಕಿ.ಮೀ ಅರಣ್ಯದಲ್ಲಿ ಹಾದುಹೋಗಲಿದೆ. ಅರಣ್ಯದಲ್ಲಿ ಹಾದುಹೋಗುವ ಮಾರ್ಗದಲ್ಲಿ 57 ಸುರಂಗಗಳ ನಿರ್ಮಾಣವಾಗಲಿದೆ ಎಂದು ವಿವರಿಸಿದೆ.

'ಪಶ್ಚಿಮ ಘಟ್ಟದ ಮುಖ್ಯ ಭಾಗವಾದ ಉತ್ತರ ಕನ್ನಡದಲ್ಲಿ ಅಭಿವೃದ್ಧಿ ಯೋಜನೆಗಳ ಹೇರಿಕೆಯಿಂದ ಅರಣ್ಯ ನಾಶ ಹೆಚ್ಚುತ್ತಿದೆ. 10 ವರ್ಷಗಳಲ್ಲಿ 588 ಭೂಕುಸಿತ ಪ್ರಕರಣಗಳು ವರದಿಯಾಗಿವೆ. ನಿರಂತರವಾಗಿ ಅಲ್ಲಲ್ಲಿ ಭೂ ಕುಸಿತ ಉಂಟಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಭಾರತ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಎರಡು ವರ್ಷಗಳ ಹಿಂದೆ ಜಿಲ್ಲೆಯಾದ್ಯಂತ ಅಧ್ಯಯನ ಕೈಗೊಂಡು 439 ಸ್ಥಳಗಳು ಭೂಕುಸಿತದ ಅಪಾಯ ಎದುರಿಸುತ್ತಿವೆ. ನದಿ ಜೋಡಣೆ ಸೇರಿ ಅಭಿವೃದ್ಧಿ ಯೋಜನೆಗಳಿಗೆ ಪಶ್ಚಿಮ ಘಟ್ಟ ನಾಶವಾದರೆ ಇಂತಹ ಅವಘಡಗಳು ಘಟಿಸುತ್ತಲೇ ಸಾಗುತ್ತವೆ'' ಎನ್ನುತ್ತಾರೆ ಜೀವ ಸಂರಕ್ಷಣಾ ಶಾಸ್ತ್ರಜ್ಞ ಕೇಶವ ಕೊರ್ಸೆ.

'ಬೇಡ್ತಿ, ಅಘನಾಶಿನಿ ನದಿಗಳಲ್ಲಿ ಕೇವಲ ಜುಲೈನಿಂದ-ಸೆಪ್ಟೆಂಬರ್ ತಿಂಗಳ ಮಳೆಗಾಲದ ಅವಧಿಯಲ್ಲಿ ಮಾತ್ರ ಮಳೆನೀರಿನ ಪ್ರವಾಹ ಇರುತ್ತದೆ. ಉಳಿದ 9 ತಿಂಗಳು ನೀರು ತೀರಾ ಕಡಿಮೆ ಇರುತ್ತದೆ. ಹೀಗಾಗಿ, ಈ ಯೋಜನೆಗಳಿಂದ ಈ ನದಿಗಳಲ್ಲಿ ಹರಿಯಬೇಕಾದ ಕನಿಷ್ಠ ಸ್ವಾಭಾವಿಕ ಪ್ರವಾಹವೂ ಇಲ್ಲವಾಗಿ, ಹೊಳೆ-ತೊರೆ-ಕೆರೆಗಳ ಜಲಮೂಲವಾದ ಅಂತರ್ಜಲ ಮರುಪೂರಣ ಕುಸಿದು, ಗಂಭೀರ ನೀರಿನ ಕೊರತೆ ಉಂಟಾಗಲಿದೆ' ಎಂದು ಆತಂಕ ಅವರದ್ದು.

ಪಶ್ಚಿಮ ಘಟ್ಟದಲ್ಲಿ ನಡೆಯಲಿರುವ ಅಭಿವೃದ್ಧಿ ಯೋಜನೆಗಳಿಂದ ಅರಣ್ಯ ನಾಶ ಆಗುವುದಲ್ಲದೆ, ಕರಾವಳಿ ಪರಿಸರದ ಹಾನಿಗೂ ಕಾರಣವಾಗುತ್ತದೆ. ಮಳೆಯ ಪ್ರಮಾಣ ಕಡಿಮೆಯಾಗಿ ನದಿಗಳಲ್ಲಿ ನೀರಿನ ಹರಿವು ಕುಸಿದು, ಈಗಾಗಲೇ ತಲೆದೋರಿರುವ ಕರಾವಳಿಯ ಮತ್ಸ್ಯಕ್ಷಾಮ ಇನ್ನಷ್ಟು ಬಿಗಡಾಯಿಸಿ, ಮೀನುಗಾರರ ಜೀವನೋಪಾಯ ನಾಶವಾಗುತ್ತದೆ. ನದಿಯ ಹರಿವು ಕಡಿಮೆಯಾದಾಗ ಸಮುದ್ರದ ಉಪ್ಪುನೀರು ಕರಾವಳಿಯ ಒಳಪ್ರದೇಶಗಳಿಗೆ ನುಗ್ಗಿ, ಬಾವಿ, ಕೃಷಿಮಣ್ಣು, ಕುಡಿಯುವ ನೀರಿನ ಮೂಲ ಅತಿಯಾಗಿ ಉಪ್ಪಾಗುತ್ತದೆ. ಇದರಿಂದ ಭೂಮಿ ಫಲವತ್ತತೆ ನಷ್ಟವಾಗಿ ಬೇಸಾಯ ಕಷ್ಟವಾಗುತ್ತದೆ.

ಪೂರಕ ಮಾಹಿತಿ: ಸಂತೋಷ ಜಿಗಳಿಕೊಪ್ಪ, ಚಿದಂಬರಪ್ರಸಾದ, ಜಿ.ಎಚ್.ವೆಂಕಟೇಶ
ಪರಿಕಲ್ಪನೆ: ಯತೀಶ್‌ಕುಮಾರ್ ಜಿ.ಡಿ

> ಪಶ್ಚಿಮ ಘಟ್ಟದ ಸಂರಕ್ಷಣೆಗಾಗಿ 40ಕ್ಕೂ ಹೆಚ್ಚು ವರ್ಷಗಳಿಂದ ನಿರಂತರ ಹೋರಾಟ ನಡೆಸಿದ್ದೇವೆ. ಅರಣ್ಯ ಮತ್ತು ಜೀವವಿರೋಧಿ ಯೋಜನೆಗಳನ್ನು ಜಾರಿಗೊಳಿಸಬಾರದು.
> **ಅನಂತ ಹೆಗಡೆ ಅಶೀಸರ,** ಅಧ್ಯಕ್ಷ, ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ

> ಅರಣ್ಯ ಸಂಪತ್ತಿನ ಸಂರಕ್ಷಣೆ ಇಂದಿನ ತುರ್ತು ಅಗತ್ಯವಿದೆ. ಒಂದು ವೇಳೆ ಪ್ರಾಕೃತಿಕ ಸಂರಕ್ಷಣೆಗೆ ಆದ್ಯತೆ ನೀಡದಿದ್ದಲ್ಲಿ, ಒಟ್ಟಾರೆ ಜೀವ ಸಂಕುಲಕ್ಕೆ ಅಪಾಯ ಆಗಲಿದೆ.
> **ಬಾಲಚಂದ್ರ ಸಾಯಿಮನೆ,** ಪರಿಸರವಾದಿ

> ಬೇಡ್ತಿ– ವರದಾ ನದಿಗಳ ಜೋಡಣೆ ಹಾವೇರಿ ಮತ್ತು ಗದಗ ಜಿಲ್ಲೆ ಜನರ ಕನಸು. ಇದರಿಂದ ಕುಡಿಯಲು ಮತ್ತು ಕೃಷಿಗೂ ನೀರು ಸಿಗುತ್ತದೆ. ಯೋಜನೆ ಜಾರಿಗೆ ಎಲ್ಲರೂ ಸಹಕರಿಸಬೇಕು. ಯೋಜನೆ ವಿರೋಧಿಸುವುದು ಸರಿಯಲ್ಲ.
> **ಬಸವರಾಜ ಬೊಮ್ಮಾಯಿ,** ಸಂಸದ

> ಬೃಹತ್ ಯೋಜನೆಗಳ ಅನುಷ್ಠಾನದಿಂದ ಪಶ್ಚಿಮ ಘಟ್ಟಕ್ಕೆ ಅಪಾಯವಾಗಲಿದೆ. ಪರಿಸರ ಅಲ್ಲದೇ ಒಟ್ಟಾರೆ ಜೀವ ಸಂಕುಲ ರಕ್ಷಣೆಗೆ ಹೋರಾಟ ಅನಿವಾರ್ಯ ಆಗಿದೆ
> **ಗಿರಿಧರ ಕುಲಕರ್ಣಿ,** ಪರಿಸರವಾದಿ

ಇಂದು ಶಿರಸಿಯಲ್ಲಿ ಸಮಾವೇಶ

ಬೇಡ್ತಿ–ವರದಾ, ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಗಳ ವಿರುದ್ಧ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಪ್ರಬಲ ಪ್ರತಿರೋಧ ವ್ಯಕ್ತವಾಗುತ್ತಿದ್ದು, ಜ.11ರಂದು ಭಾನುವಾರ ಶಿರಸಿಯಲ್ಲಿ ಬೃಹತ್ ಸಮಾವೇಶ ನಡೆಯುತ್ತಿದೆ. ಸ್ವರ್ಣವಲ್ಲೀ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಾವಿರಾರು ಜನರು ಸಮಾವೇಶದ ಮೂಲಕ ಯೋಜನೆ ಕೈಬಿಡುವಂತೆ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಆದರೆ, ಅದಕ್ಕೂ ಕೆಲ ತಿಂಗಳು ಮುಂಚಿನಿಂದಲೇ ಯೋಜನೆ ವಿರುದ್ಧ ಜನಜಾಗೃತಿ ಮೂಡಿಸಲು ಜಿಲ್ಲೆಯ ಪ್ರತಿ ಗ್ರಾಮ ಮಟ್ಟದಲ್ಲಿ ಅಘನಾಶಿನಿ–ಬೇಡ್ತಿ ಕೊಳ್ಳ ಸಂರಕ್ಷಣಾ ಸಮಿತಿ ಮಾರ್ಗದರ್ಶನದಲ್ಲಿ ಮಹಿಳೆಯರು ಪಾದಯಾತ್ರೆ ನಡೆಸುತ್ತ, ಯೋಜನೆಯ ದುಷ್ಪರಿಣಾಮ ಜನರಿಗೆ ತಿಳಿಸುವ ಕರಪತ್ರಗಳನ್ನು ಹಂಚುತ್ತಿದ್ದಾರೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹಾರ್ಲೆ ಎಸ್ಟೇಟ್ ಬಳಿ ಸಂಭವಿಸಿದ್ದ ಭೂಕುಸಿತ.

11 ವರ್ಷವಾದರೂ ಎತ್ತಿನಹೊಳೆ ಯೋಜನೆ ಅಪೂರ್ಣ...

ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಸೇರಿ ಬರಪೀಡಿತ ಜಿಲ್ಲೆಗಳಿಗೆ ನೀರು ಹರಿಸುವ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಯ 11 ವರ್ಷಗಳಾದರೂ ಇನ್ನೂ ಪೂರ್ಣಗೊಂಡಿಲ್ಲ. 2014ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಆಗಿನ ಸಂಸದ ವೀರಪ್ಪ ಮೊಯಿಲಿ ಅವರು ಯೋಜನೆಗೆ ಚಾಲನೆ ನೀಡಿದ್ದರು. ನೇತ್ರಾವತಿ ನದಿ ಮೂಲಕ ಅರಬ್ಬಿ ಸಮುದ್ರ ಸೇರುತ್ತಿದ್ದ ಎತ್ತಿನಹೊಳೆ ಮತ್ತು ಅದರ ಉಪ ಹಳ್ಳಗಳ ನೀರು, ಹೇಮಾವತಿ ನದಿ ಮೂಲಕ ಈಗ ಬಂಗಾಳಕೊಲ್ಲಿ ಸೇರುತ್ತಿದೆ.

'ಇದು ಅವೈಜ್ಞಾನಿಕ ಯೋಜನೆ, ನದಿ ಮೂಲ ನಾಶವಾಗುತ್ತದೆ ಎಂದು ಪ್ರಾರಂಭದಲ್ಲಿಯೇ ಹೇಳಿದ್ದೆವು. 5 ರಿಂದ 6 ಟಿಎಂಸಿ ಮಾತ್ರ ನೀರು ಸಿಗುತ್ತಿದ್ದು, ಇದು ಸಾಕಾಗುವುದಿಲ್ಲ ಎಂದು ಶರಾವತಿ ನೀರು ಸೇರಿಸಲು ಹೊರಟಿದ್ದಾರೆ. ಯೋಜನೆಯನ್ನು ವಿಸ್ತರಿಸಿ ಗಿರಿಹೊಳೆ, ಅಡ್ಡಹೊಳೆ ನೀರನ್ನು ಸೇರಿಸಲು ಮುಂದಾಗಿದ್ದಾರೆ. ಇನ್ನಷ್ಟು ಅರಣ್ಯ ನಾಶವಾಗಲಿದ್ದು, ಆನೆ–ಮಾನವ ಸಂಘರ್ಷ ಹೆಚ್ಚಲಿದೆ' ಎಂದು ಮಲೆನಾಡು ಜನಪರ ಹೋರಾಟ ಸಮಿತಿ ಅಧ್ಯಕ್ಷ ಕಿಶೋರ್ ಕುಮಾರ್ ಆತಂಕ ವ್ಯಕ್ತಪಡಿಸುತ್ತಾರೆ.

ಅರ್ಧಕ್ಕೆ ನಿಂತ ಕಾಲುವೆ ಕಾಮಗಾರಿ: ತನಗೆ ಸೇರಿದ ಜಾಗದಲ್ಲಿ ಕಾಲುವೆ ನಿರ್ಮಿಸಲು ಅರಣ್ಯ ಇಲಾಖೆ ತಕರಾರು ಎತ್ತಿದ್ದು, ಬೇಲೂರು ತಾಲ್ಲೂಕಿನ ಐದಳ್ಳ ಕಾವಲು ಬಳಿ ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಕಾಲುವೆ ನಿರ್ಮಾಣಕ್ಕೆ ತೊಂದರೆ ಎದುರಾಗಿದೆ. ಈ ಜಾಗವನ್ನು ಬಿಟ್ಟು ಕೊಡುವಂತೆ ಕೇಂದ್ರ ಅರಣ್ಯ ಇಲಾಖೆಗೆ ಸಲ್ಲಿಸಿರುವ ಪ್ರಸ್ತಾವಕ್ಕೆ ಇದುವರೆಗೆ ಅನುಮೋದನೆ ಸಿಕ್ಕಿಲ್ಲ. ಕಾಲುವೆಯೇ ಇಲ್ಲದಿರುವುದರಿಂದ 32 ಕಿ.ಮೀ. ನಿಂದ ಮುಂದೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ.

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ 10-1-2001

- **ಕನ್ನಡದಲ್ಲಿ ಕಲಿತವರಿಗೆ ಆದ್ಯತೆ: ಈ ತಿಂಗಳು ಸುತ್ತೋಲೆ**

ಬೆಂಗಳೂರು, ಜ.10– 'ಒಂದರಿಂದ ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳಿಗೆ ಉನ್ನತ ಮತ್ತು ವಿವಿಧ ವೃತ್ತಿ ಶಿಕ್ಷಣ ತರಗತಿಗಳಲ್ಲಿ ಆದ್ಯತೆ ಮೇಲೆ ಪ್ರವೇಶ ನೀಡಲು ಅವಕಾಶವಾಗುವಂತೆ ಈ ತಿಂಗಳ ಕೊನೆಯೊಳಗೆ ಸುತ್ತೋಲೆ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಕೃಷ್ಣ ಇಂದು ಇಲ್ಲಿ ಹೇಳಿದರು.

ಉರ್ದು, ತಮಿಳು, ತೆಲುಗು ಸೇರಿದಂತೆ ಇತರ ಶಾಲೆಗಳಲ್ಲಿ ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆಗೆ ಕೂಡಲೇ ಗುತ್ತಿಗೆ ಆಧಾರದಲ್ಲಿ ಅಭ್ಯರ್ಥಿಗಳ ನೇಮಕ ಮಾಡುವಂತೆಯೂ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದರು.

75 ವರ್ಷಗಳ ಹಿಂದೆ
ಗುರುವಾರ, 10-1-1951

- **ನೇಪಾಳಿ ಜನತೆಗೆ ರಾಜಾ ತ್ರಿಭುವನರ ಕರೆ**

ನವದೆಹಲಿ, ಜ.10– ನೇಪಾಳದಲ್ಲಿ ಶಾಂತಿ ನೆಮ್ಮದಿಗಳನ್ನು ಸ್ಥಾಪಿಸಲು, ಜನತೆ ಸರ್ವವಿಧಗಳಲ್ಲಿಯೂ ಶ್ರಮಿಸಬೇಕೆಂದೂ, ಕಳೆದ ಸೋಮವಾರ ಖಟ್ಮಂಡುವಿನಲ್ಲಿ ಘೋಷಿತವಾದ ರಾಜ್ಯಾಂಗ ಸುಧಾರಣಾ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಸಂಪೂರ್ಣ ಸಹಕಾರವನ್ನೀಯಬೇಕೆಂದು ರಾಜ ತ್ರಿಭುವನರು ಇಂದು ನೇಪಾಳಿ ಜನತೆಗೆ ಮನವಿ ಮಾಡಿದ್ದಾರೆ.

'ನಮ್ಮ ಪೂಜ್ಯ ಮಾತೃಭೂಮಿಯಲ್ಲಿ ಪ್ರಜಾಸತ್ತಾತ್ಮಕ ಸರಕಾರ ಸ್ಥಾಪನೆಗೆ ಇದು ಪ್ರಥಮ ಸೋಪಾನ. ಈ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರಲು ಸ್ಥಳದಲ್ಲಿಯೇ ರಾಜ ಘೋಷಣೆ ಹೊರಬೀಳುವುದು

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

11 ಜನವರಿ 2026 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಅಷ್ಟಮಿ ಗಂ 10-21 ನಕ್ಷತ್ರ: ಚಿತ್ತಾ ಗಂ 18-12 ಯೋಗ: ಸುಕರ್ಮ ಗಂ. 17-27 ಕರಣ: ಕೌಲವ ಗಂ. 10-21 ಧನು ಮಾಸದ 27 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 1 ನೇ ಪಾದ. ರಾಹುಕಾಲ : ಸಾಯಂಕಾಲ 04-30 -06-00 ಸೂರ್ಯೋದಯ : 07-00 ಸೂರ್ಯಾಸ್ತ : 06-17 ಮುಸ್ಲಿಂ ದಿನಾಂಕ : 21 ರಜಬ್, ಅದೃಷ್ಟ ಸಂಖ್ಯೆ : 3, 4

ಮೇಷ: ಇತರರಿಗೆ ಸಹಾಯ ಮಾಡುವ ವಿಚಾರದಲ್ಲಿ ಮುಂದಾಲೋಚನೆಯಿಲ್ಲದೆ ಮುಂದುವರೆಯುವುದನ್ನು ಬದಲು ಮಾಡಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ಬಾಳಸಂಗಾತಿಯ ಮಾತುಗಳಿಗೆ ನಿಮ್ಮ ಸಹಮತವಿರಲಿ.

ವೃಷಭ: ಸಮಾಜದಲ್ಲಿ ಗಣ್ಯ ವ್ಯಕ್ತಿಯಾಗಿರುವವರನ್ನು ನೋಡುವ ಅವರಲ್ಲಿ ಮಾತನಾಡುವ ಅವಕಾಶ ನಿಮಗೆ ಸಿಗುವುದು. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ. ನಿಮ್ಮ ಭಾವನೆಗಳಿಗೆ ಉತ್ತಮ ಪ್ರಶಂಸೆ ಸಿಗುವ ದಿನ ಇದಾಗಿದೆ.

ಮಿಥುನ: ಶಸ್ತ್ರ ಚಿಕಿತ್ಸೆಯ ವಿಚಾರವಾಗಿ ವೈದ್ಯರ ಮಾತುಗಳನ್ನು ವಿಶೇಷವಾದ ಗಮನವನ್ನು ಇಟ್ಟು ಕೇಳುವುದು ಸೂಕ್ತ. ಬಹಳ ದಿನಗಳ ನಂತರ ಒಂದು ದೃಢವಾದ ನಿರ್ಣಯವನ್ನು ಕೈಗೊಂಡಿರುವ ನಿಮಗೆ ಶುಭವಾಗುವುದು.

ಕರ್ಕಾಟಕ: ಕಾರ್ಯಕ್ಷೇತ್ರದಲ್ಲಿನ ಹೆಚ್ಚುವರಿ ಕೆಲಸದಿಂದ ಆದ ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಅಗತ್ಯ ಇರುವುದು. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಗಮನಿಸಿ. ಸರಕು ಸಾಗಾಣಿಕೆದಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ಸಿಂಹ: ನಾನಾ ರೀತಿಯಲ್ಲಿ ಉನ್ನತಿ ಗೋಚರಕ್ಕೆ ಬಂದರೂ ಹಣದ ಖರ್ಚುಗಳ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ಧೈರ್ಯದಿಂದ ದೊಡ್ಡ ದೊಡ್ಡ ಯೋಜನೆ ಕೈಗೊಳ್ಳಬಹುದು, ಆದರೆ ಹಣದ ವಿಚಾರದಲ್ಲಿ ಎಚ್ಚರ ವಹಿಸಿ.

ಕನ್ಯಾ: ಅಣ್ಣ-ತಮ್ಮಂದಿರು ಒಂದೇ ವ್ಯವಹಾರದಲ್ಲಿ ಸಂಯಮದಿಂದ ನಡೆದುಕೊಂರೆ ವ್ಯವಹಾರಿಕ ಲಾಭವನ್ನು ಹೊಂದಬಹುದು. ಕೃಷಿಯಲ್ಲಿ ನೀವು ಪಾಲಿಸುತ್ತಿರುವ ತಂತ್ರಗಳು ಶೀಘ್ರದಲ್ಲೇ ಫಲ ನೀಡಲಿವೆ.

ತುಲಾ: ಮಕ್ಕಳ ಓದಿನ ವಿಚಾರವಾಗಿ ತೆಗೆದುಕೊಂಡ ನಿರ್ಧಾರ ಸರಿ ಎಂದು ನಿಮಗೆ ಮನವರಿಕೆಯಾಗುವುದು. ಜಲ ಮಂಡಳಿ ನೌಕರರಿಗೆ ವೇತನ ಹೆಚ್ಚಳವಾಗಲಿದೆ. ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಂಭವವಿದೆ.

ವೃಶ್ಚಿಕ: ಆಹಾರ ಪದಾರ್ಥ, ಉಕ್ಕು (ಕಬ್ಬಿಣ) ಮುಂತಾದ ಗೃಹ ಬಳಕೆ ಸಾಮಾನುಗಳ ವರ್ತಕರಿಗೆ ದಿನದ ಪೂರ್ವದಲ್ಲಿ ಅಧಿಕ ಲಾಭ. ವೈಯಕ್ತಿಕ ವಿಚಾರಕ್ಕಾಗಿ ದೂರದ ಊರಿಗೆ ಪ್ರಯಾಣ ಮಾಡುವ ಅವಕಾಶ ಬರಬಹುದು.

ಧನು: ರಾಜಕೀಯ ವ್ಯಕ್ತಿಗಳಿಗೆ ಸ್ವಂತ ಕ್ಷೇತ್ರದಲ್ಲಿ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ. ಬಂಧುಗಳಲ್ಲಿ ಆರ್ಥಿಕ ಸಹಾಯ ಕೇಳಬೇಡಿ. ನೆರೆಯವರ ಸಹಾಯದಿಂದ ಮಗಳ ಮದುವೆ ನಿಶ್ಚಯವಾಗಲಿದೆ.

ಮಕರ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ ಹಾಗೂ ನಿಮ್ಮ ಜೀವನ ಶೈಲಿಯೂ ವಿಭಿನ್ನವಾಗಿ ಬದಲಾಗಲಿದೆ. ಮೀನುಗಾರರು ಅಥವಾ ಸಮುದ್ರ ಪ್ರಯಾಣ ಮಾಡುವವರು ಜಾಗೃತರಾಗಿರಿ. ದಿನಸಿ ವ್ಯಾಪಾರಿಗಳಿಗೆ ಅಲ್ಪ ಲಾಭ.

ಕುಂಭ: ಮೇಲಧಿಕಾರಿಗಳಿಂದ ಹೆಚ್ಚಿನ ಹೊಸ ಅವಕಾಶಗಳು ಹಾಗೂ ಪ್ರಶಂಸೆಯ ಮಾತುಗಳನ್ನು ಕೇಳುವಿರಿ. ಕಾರ್ಯಕ್ಷೇತ್ರದಲ್ಲಿ ಕೆಲಸದ ಒತ್ತಡ ಕಡಿಮೆಯಾಗಿ ಮನೆಯ ವಿಚಾರಕ್ಕೆ ಸಮಯ ನೀಡಲು ಅವಕಾಶವಾಗುವುದು.

ಮೀನ: ಕುಟುಂಬದಲ್ಲಿ ಭಿನ್ನಾಭಿಪ್ರಾಯವನ್ನು ಬಿಟ್ಟು ಹೊಸ ತಲೆಮಾರಿನವರು ನೂತನವಾಗಿ ಸಂಬಂಧವನ್ನು ಬೆಳೆಸುವಂತಾಗಲಿದೆ. ಹಿಡಿದ ಕಾರ್ಯವು ಯಾವಾಗ ಮುಗಿಯುವುದೆಂದು ಕಾಣುವ ಮನಸ್ಥಿತಿ ಎದುರಾಗುತ್ತದೆ.

ಪದಬಂಧ 6281
ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಕೊನೆಗೆ ಅಂತರ ಕಾಯ್ದುಕೊಂಡೇ ಮಾಡಿದ ತರ್ಜುಮೆ! (4)
6.ಮಲಯದಲ್ಲಿರುವ ಶ್ರೀಗಂಧ (4)
7.ಯಮನಿದ್ದಾಗಿನ ಸೂತ್ರ! (3)
10.ಜನರೊಳಗೆ ಕಾಣಿಸಿದ ಆಳು (3)
11.ಅಶ್ವದ ಮುಖವಿದು (5)
12.ಎರವಲು ಪಡೆದು ನೋಡುತ್ತಿರುವ ಸಮುದ್ರ (3)
13.ಕರದಿಂದ ಪ್ರಾರಂಭಿಸಿದ ಉತ್ಸವ (3)
15.ಕನ್ನಡಿಗರ ನಾಡಿದು (4)
17.ರಕ್ತ ವರ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ
1.ಈಕೆ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆ ಇದೆ! (2)
3.ಪಂಚಪಾಂಡವರಲ್ಲಿ ಎರಡನೆಯವನು (2)
4.ಜಯವನ್ನು ಗಳಿಸಿರುವ ಒಡೆಯ (4)
8. ಭವ್ಯವಾದ ಸೌಧವಿದು (3)
9.ಕಳವಳಪಟ್ಟು ತಿಂದಿರುವ ತುತ್ತು (3)
10.ಸೀತೆಯ ತಂದೆ (3)
12.ಕಳ್ಳ ಕಳ್ಳಿ ತೋರಿದ ಆಸ್ಥೆ! (4)
14.ಎಲ್ಲೆಯ ಬಳಿ ತೋರಿದ ಅವಸರ (4)
16. ವಾದಿ ಅಥವಾ ಪ್ರತಿವಾದಿ (2)
17.ಉರಿಯುತ್ತಿರುವ ಇದ್ದಿಲು (2)



6280ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಲ್ಲವಿ 3.ಉಪವಾಸ 5.ಕರಡು 6.ಅನುಮತಿ 8.ತಾತಾ 9.ಉಮೇದು 10.ವಧು 11.ವನವಾಸ 12.ಲವಂಗ 15.ನದೀತೀರ 16.ಗೆದ್ದಲು

ಮೇಲಿಂದ ಕೆಳಕ್ಕೆ: 1.ಪತ್ನಿ 2.ವಿಧುರ 4.ಸದ್ಗತಿ 5.ಕರತಾಡನ 6.ಆಮದು 7.ಮದುವಣಿಗ 9.ಉಬ್ಬಸ 11.ವದನ 13.ವಂತಿಗೆ 14.ಸೋಲು

ಸುಡೊಕು 6665

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿನ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		5	8			4	1	
2								
		4			2	8		6
3			6			5		9
	7						8	
8		1				3		7
4			6		1		9	
	3				5	7		8
6		8	2	3				5

6664 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ವೇಣುಗೋಪಾಲ್ ಮಧ್ಯಪ್ರವೇಶಿಸಲಿ'

ಮಲಯಾಳ ಭಾಷೆ ಹೇರಿಕೆ ತಡೆಗೆ ಬಿ.ವೈ.ವಿಜಯೇಂದ್ರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದಲ್ಲಿ ಕನ್ನಡಿಗರ ಮೇಲೆ ಮಲಯಾಳ ಭಾಷೆಯನ್ನು ಹೇರಿಕೆ ಮಾಡುತ್ತಿರುವ ವಿಷಯದಲ್ಲಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಕಿವಿಹಿಂಡುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ವಿಚಾರವಾಗಿ ಸಿದ್ದರಾಮಯ್ಯ ಅವರು ಕೇರಳ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಆದರೆ ಅಷ್ಟು ಸಾಲದು' ಎಂದು ಅವರು ಹೇಳಿದರು.

'ಕೋಗಿಲು ವಿಚಾರದಲ್ಲಿ ಕೆ.ಸಿ.ವೇಣುಗೋಪಾಲ್ ಅವರು ಮಾತನಾಡಿದ್ದರು. ಅವರು ಈಗ ಕನ್ನಡಿಗರ ವಿಚಾರದಲ್ಲೂ ಮಧ್ಯ ಪ್ರವೇಶಿಸಲಿ. ಕೇರಳ ಕನ್ನಡಿಗರು, ಕನ್ನಡ ಶಾಲೆಗಳ ರಕ್ಷಣೆಗಾಗಿ ನಿಲ್ಲಬೇಕು. ಅವರಿಂದ ಅಂತಹ ಕೆಲಸ ಮಾಡಿಸುವ ಹೊಣೆ ರಾಜ್ಯ ಕಾಂಗ್ರೆಸ್ ಮತ್ತು ಮುಖ್ಯಮಂತ್ರಿ ಅವರದ್ದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೇರಳ ಜತೆಗೆ ಸಿ.ಎಂ, ಡಿಸಿಎಂ ಹೊಂದಾಣಿಕೆ: ಆರ್.ಅಶೋಕ


ಆರ್.ಅಶೋಕ

'ಮಲಯಾಳ ಹೇರಿಕೆಗೆ ಕೇರಳ ಸರ್ಕಾರ ಮಸೂದೆ ರಚಿಸುವ ವಿಚಾರ ಗೊತ್ತಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುಮ್ಮನಿದ್ದರು. ಇದೊಂದು ರೀತಿ ಮ್ಯಾಚ್ ಫಿಕ್ಸಿಂಗ್' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೇರಳ ಮುಖ್ಯಮಂತ್ರಿ ಜತೆಗೆ ಈ ಇಬ್ಬರೂ ವೇದಿಕೆ ಹಂಚಿಕೊಂಡಿದ್ದರು. ಕನ್ನಡಿಗರ ಬಗ್ಗೆ ಕಾಳಜಿ ಇದ್ದಿದ್ದರೆ, ಮಲಯಾಳ ಹೇರಿಕೆ ಬಗ್ಗೆ ಆ ವೇದಿಕೆಯಲ್ಲೇ ಪ್ರಶ್ನಿಸಬೇಕಿತ್ತು. ಈಗ ಸಿದ್ದರಾಮಯ್ಯ ಅವರು ಪತ್ರ ಬರೆದಿರುವುದು ಹೊಂದಾಣಿಕೆ ರಾಜಕಾರಣ. ನೀನು ಹೊಡೆದಂತೆ ಮಾಡು, ನಾನು ಅತ್ತಂತೆ ಮಾಡುತ್ತೇನೆ ಎಂಬಂತಿದೆ ಈ ಪತ್ರ ವ್ಯವಹಾರ' ಎಂದರು.

'ಒಕ್ಕೊರಲಿನಿಂದ ವಿರೋಧಿಸಿ'

ಸೋಮಶೇಖರ್

'ಮಲಯಾಳ ಭಾಷಾ ಮಸೂದೆಯನ್ನು ತರಾತುರಿಯಲ್ಲಿ ಜಾರಿಗೆ ತಂದು ಕರ್ನಾಟಕ ಮತ್ತು ಕೇರಳ ನಡುವಿನ ಭಾಷಾ ಬಾಂಧವ್ಯ ಹದಗೆಡುವಂತೆ ಮಾಡುವ ಕೇರಳ ಸರ್ಕಾರದ ಪ್ರಯತ್ನವನ್ನು ಕನ್ನಡಿಗರೆಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ ಹೇಳಿದ್ದಾರೆ.

'ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲೂ ಪ್ರಥಮ ಭಾಷೆಯಾಗಿ ಮಲಯಾಳ ಕಲಿಸಬೇಕೆಂಬ ಅಂಶವಿರುವ ಈ ಮಸೂದೆಯು ಕಾಸರಗೋಡಿನ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುವ ಹುನ್ನಾರ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಕಾಸರಗೋಡಿನ ಕನ್ನಡ ಶಾಲೆಗಳಲ್ಲಿ ಮೊದಲ ಭಾಷೆಯಾಗಿ ಮಲಯಾಳ ಕಲಿಕೆ ಕಡ್ಡಾಯಗೊಳಿಸುವುದು ಸರಿಯಲ್ಲ' ಎಂದು ಆಗ್ರಹಿಸಿದ್ದಾರೆ.

ಕರ್ನಾಟಕದ ಸಂದೇಹದಲ್ಲಿ ಹುರುಳಿಲ್ಲ: ಕೇರಳ ಮುಖ್ಯಮಂತ್ರಿ

ಪಿಣರಾಯಿ ವಿಜಯನ್

ತಿರುವನಂತಪುರ (ಪಿಟಿಐ): 'ಮಲಯಾಳ ಭಾಷಾ ಮಸೂದೆ-2025ರ ಬಗ್ಗೆ ಎದ್ದಿರುವ ಸಂದೇಹಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶನಿವಾರ ಹೇಳಿದ್ದಾರೆ.

ಕೇರಳ ಸರ್ಕಾರ ರೂಪಿಸಿರುವ ಮಲಯಾಳ ಭಾಷಾ ಮಸೂದೆ ಕುರಿತು ಆತಂಕ ವ್ಯಕ್ತಪಡಿಸಿದ್ದ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಕುರಿತು ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದಿದ್ದರು. 'ಮಸೂದೆ ಜಾರಿಯಾದರೆ ಅದನ್ನು ವಿರೋಧಿಸುತ್ತೇವೆ. ಗಡಿನಾಡ ಕನ್ನಡಿಗರ ರಕ್ಷಣೆಗೆ ನಿಲ್ಲಲಿದ್ದೇವೆ. ಹಾಗಾಗಿ, ಮಸೂದೆ ಹಿಂಪಡೆಯಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ ವಿಜಯನ್ ಅವರು ಶನಿವಾರ ಮಸೂದೆ ಬಗ್ಗೆ 'ಎಕ್ಸ್'ನಲ್ಲಿ ಸ್ಪಷ್ಟನೆ ನೀಡಿದ್ದಾರೆ. 'ಕೇರಳ ಸರ್ಕಾರವು ಜಾತ್ಯತೀತ ಮತ್ತು ಬಹುತ್ವ ಕುರಿತ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಬದ್ಧವಾಗಿದೆ. ಭಾಷಾ ಅಲ್ಪಸಂಖ್ಯಾತರ, ವಿಶೇಷವಾಗಿ ಕನ್ನಡ ಮತ್ತು ತಮಿಳು ಮಾತನಾಡುವ ಸಮುದಾಯಗಳ ಹಕ್ಕುಗಳನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ಸ್ಪಷ್ಟ ನಿಬಂಧನೆಗಳನ್ನು ಮಸೂದೆ ಒಳಗೊಂಡಿದೆ' ಎಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಫೋಟೊವನ್ನೂ ಹಂಚಿಕೊಂಡಿದ್ದಾರೆ.

'ಯಾರ ಮೇಲೂ ಯಾವುದೇ ಭಾಷೆಯನ್ನು ಹೇರಲಾಗುವುದಿಲ್ಲ ಮತ್ತು ಭಾಷಾ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ರಕ್ಷಿಸಲಾಗಿದೆ ಎಂಬುದನ್ನು ಮಸೂದೆಯ ನಿಬಂಧನೆಗಳು ಖಚಿತಪಡಿಸುತ್ತವೆ. ಅಧಿಸೂಚಿತ ಪ್ರದೇಶಗಳಲ್ಲಿ, ತಮಿಳು ಮತ್ತು ಕನ್ನಡ ಭಾಷಿಕರು ಸಚಿವಾಲಯ, ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರು ಮತ್ತು ಸ್ಥಳೀಯ ಕಚೇರಿಗಳೊಂದಿಗೆ ಅಧಿಕೃತ ಪತ್ರ ವ್ಯವಹಾರವನ್ನು ತಮ್ಮ ಮಾತೃಭಾಷೆಯಲ್ಲೇ ನಡೆಸುವುದನ್ನು ಮುಂದುವರಿಸಬಹುದು. ಅವರಿಗೆ ಅದೇ ಭಾಷೆಗಳಲ್ಲಿ ಉತ್ತರಿಸಲಾಗುವುದು' ಎಂದು ವಿವರಿಸಿದ್ದಾರೆ.

'ಮಾತೃಭಾಷೆ ಮಲಯಾಳವಲ್ಲದ ವಿದ್ಯಾರ್ಥಿಗಳು ರಾಷ್ಟ್ರೀಯ ಶೈಕ್ಷಣಿಕ ಪಠ್ಯಕ್ರಮಕ್ಕೆ ಅನುಗುಣವಾಗಿ ಶಾಲೆಗಳಲ್ಲಿ ಲಭ್ಯವಿರುವ ಭಾಷೆಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಹೊಂದಿದ್ದಾರೆ. ಇತರ ರಾಜ್ಯಗಳು ಅಥವಾ ವಿದೇಶಿ ವಿದ್ಯಾರ್ಥಿಗಳು 9, 10ನೇ ತರಗತಿಗಳಲ್ಲಿ ಮಲಯಾಳ ಭಾಷಾ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಲ್ಲ' ಎಂದು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಪ್ರವೀಣ್‌ಗೆ 'ಕೃಷ್ಣಾ ಹಾನಗಲ್ ರಾಷ್ಟ್ರೀಯ ಪುರಸ್ಕಾರ'

ಪ್ರವೀಣ್ ಗೋಡ್ಖಿಂಡಿ

ಹುಬ್ಬಳ್ಳಿ: ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯದಿಂದ ನೀಡಲಾಗುವ 'ಕೃಷ್ಣಾ ಹಾನಗಲ್ ರಾಷ್ಟ್ರೀಯ ಪುರಸ್ಕಾರ'ಕ್ಕೆ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ವಿದ್ಯಾಲಯದ ಅಧ್ಯಕ್ಷೆ ವೈಷ್ಣವಿ ಹಾನಗಲ್ ಹೇಳಿದರು.

'ಪ್ರಶಸ್ತಿಯು ₹50 ಸಾವಿರ ನಗದು, ಫಲಕ ಒಳಗೊಂಡಿದೆ. ಜ.14ರಂದು ನಗರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಗಾಯಕ ಎಂ.ವೆಂಕಟೇಶಕುಮಾರ ಅವರು ಪ್ರಶಸ್ತಿ ಪ್ರದಾನ ಮಾಡುವರು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗಿರಿಜಾ ಶಾಸ್ತ್ರಿಗೆ 'ಮುಳಿಯ ಪ್ರಶಸ್ತಿ'

ಗಿರಿಜಾ ಶಾಸ್ತ್ರಿ

ಉಡುಪಿ: ದಿ.ಮುಳಿಯ ತಿಮ್ಮಪ್ಪಯ್ಯ ಅವರ ಸ್ಮರಣಾರ್ಥ ನೀಡುವ 'ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ'ಗೆ ಬರಹಗಾರ್ತಿ ಗಿರಿಜಾ ಶಾಸ್ತ್ರಿ ಅವರು ಆಯ್ಕೆಯಾಗಿದ್ದಾರೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ನೀಡುವ ಈ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಇದೇ 17 ರಂದು ನಡೆಯಲಿದೆ.

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2025ನೇ ಸಾಲಿನ ವಿವಿಧ ಪುಸ್ತಕ ಬಹುಮಾನಗಳಿಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಿದೆ.

ಕಾದಂಬರಿ, ಕಥಾಸಂಕಲನ, ವಿಜ್ಞಾನ ಕೃತಿಗಳು, ಲಲಿತ ಪ್ರಬಂಧ, ಕವನ ಸಂಕಲನ, ಅನುವಾದ ಕೃತಿಗಳು, ಪ್ರವಾಸ ಸಾಹಿತ್ಯ, ನಾಟಕ, ಹಾಸ್ಯ ಕೃತಿ, ಮಕ್ಕಳ ಸಾಹಿತ್ಯ, ಆತ್ಮಕಥನ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 2025ರ ಜ.1ರಿಂದ 2025 ಡಿ.31 ರೊಳಗೆ ಪ್ರಕಟಗೊಂಡ ಕೃತಿಗಳನ್ನು ಕಳುಹಿಸಬಹುದಾಗಿದೆ.

ಆಸಕ್ತರು ಫೆ. 10ರೊಳಗೆ ಕರ್ನಾಟಕ ಲೇಖಕಿಯರ ಸಂಘ, ನಂ. 206, 2ನೇ ಮಹಡಿ, ವಿಜಯ ಮ್ಯಾನ್ಶನ್, ಎರಡನೇ ಕ್ರಾಸ್, ಎರಡನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು- 560018 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ತಿಳಿಸಿದ್ದಾರೆ. ಮಾಹಿತಿಗೆ: 94814 80220, 94488 18900.

ಲಕ್ಕುಂಡಿಯಲ್ಲಿ ಚಿನ್ನದ ನಿಧಿ ಪತ್ತೆ


ಲಕ್ಕುಂಡಿಯಲ್ಲಿ ದೊರೆತ ಚಿನ್ನಾಭರಣ

ಗದಗ: ತಾಲ್ಲೂಕಿನ ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಗಂಗವ್ವ ಬಸವರಾಜ ರಿತ್ತಿ ಎಂಬುವರು ಮನೆ ಕಟ್ಟಿಸಲು ಅಡಿಪಾಯ ತೆಗೆಯುವ ವೇಳೆ ಶನಿವಾರ ಚಿನ್ನದ ನಿಧಿ ಸಿಕ್ಕಿದೆ.

ತಾಮ್ರದ ಪುಟ್ಟ ಬಿಂದಿಗೆಯಲ್ಲಿ 470 ಗ್ರಾಂ ತೂಕದ 21 ವಿವಿಧ ಬಗೆಯ ಚಿನ್ನಾಭರಣ ಸಿಕ್ಕಿವೆ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

'ಸರ, ಉಂಗುರ, ಕಡಗ ಸೇರಿದಂತೆ ಪ್ರಾಚೀನ ವಿನ್ಯಾಸ ಹೊಂದಿರುವ ಆಭರಣಗಳಿವೆ. ತಜ್ಞರು ಅಧ್ಯಯನ ನಡೆಸಿದ ನಂತರ ಚಿನ್ನಾಭರಣ ಯಾರ ಕಾಲದ್ದು ಎಂಬುದು ಗೊತ್ತಾಗಲಿದೆ' ಎಂದು ತಿಳಿಸಿದ್ದಾರೆ.

ಲೇಖಕಿ ಆಶಾ ರಘು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾದಂಬರಿಗಾರ್ತಿ, ಪ್ರಕಾಶಕಿ ಆಶಾ ರಘು(47) ಅವರು ಮಲ್ಲೇಶ್ವರದ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮನೆಯ ಕೊಠಡಿಯಲ್ಲಿ ಶುಕ್ರವಾರ ರಾತ್ರಿ ಅವರು ನೇಣು ಹಾಕಿಕೊಂಡಿದ್ದು, ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ಆಶಾ ಅವರಿಗೆ ಪುತ್ರಿ ಇದ್ದಾರೆ.

ಆಶಾ ಪತಿ ಕೆ.ಸಿ.ರಘು ಅವರು ಆಹಾರ ತಜ್ಞರಾಗಿದ್ದರು. ಶ್ವಾಸಕೋಶದ ಕ್ಯಾನ್ಸರ್‌ನಿಂದಾಗಿ ಎರಡು ವರ್ಷಗಳ ಹಿಂದೆ ರಘು ನಿಧನರಾಗಿದ್ದರು. ಪತಿಯ ಸಾವಿನಿಂದ ಮಾನಸಿಕವಾಗಿ ನೊಂದಿದ್ದರು. ಇದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮರಣೋತ್ತರ ಪರೀಕ್ಷೆಯ ಬಳಿಕ ಮಲ್ಲೇಶ್ವರದ ನಿವಾಸದ ಬಳಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಾಹಿತಿಗಳು, ಪ್ರಕಾಶಕರು ಅಂತಿಮ ದರ್ಶನ ಪಡೆದರು. ಶ್ರೀರಾಮ್‌ಪುರದ ಹರಿಶ್ಚಂದ್ರ ಘಾಟ್‌ನ ವಿದ್ಯುತ್ ಚಿತಾಗಾರದಲ್ಲಿ ಶನಿವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಶಾ 1979ರ ಜೂನ್ 18ರಂದು ಜನಿಸಿದ್ದರು. ಕೇಶವ ಅಯ್ಯಂಗಾರ್ ಹಾಗೂ ಸುಲೋಚನಾ ದಂಪತಿ ಹಿರಿಯ ಪುತ್ರಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಬರವಣಿಗೆ, ಪ್ರಕಾಶನ ಕ್ಷೇತ್ರವಲ್ಲದೇ ಕಿರುತೆರೆ, ಬೆಳ್ಳಿತೆರೆಯಲ್ಲೂ ನಟಿಸಿದ್ದರು. ಸಂಭಾಷಣೆಗಾರ್ತಿಯಾಗಿ ಹಾಗೂ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ್ದರು.

ಕೃತಿಗಳು: ಆವರ್ತ, ಗತ, ಮಾಯೆ, ವಕ್ಷಸ್ಥಲ, ಮಾರ್ಕೋಲು, ಚಿತ್ತರಂಗ–ತೆರೆಮರೆಯ ಅಂತರಂಗ ಕಾದಂಬರಿಗಳು, ಬೊಗಸೆಯಲ್ಲಿ ಕಥೆಗಳು ಕಥಾ ಸಂಕಲನ, ಚೂಡಾಮಣಿ, ಪೂತನಿ ಮತ್ತು ಇತರ ನಾಟಕಗಳು, ಬಂಗಾರದ ಪಂಜರ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸೂರ್ಯನಾರಾಯಣ ಚಡಗ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪಳಕಳ ಸೀತಾರಾಮಭಟ್ಟ ಪ್ರಶಸ್ತಿ, ರಾಯಚೂರು ಕಸಪಾ ರಾಜಲಕ್ಷ್ಮಿ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ, ಸೇಡಂನ ಅಮ್ಮ ಹಾಗೂ ಕರ್ನಾಟಕ ಲೇಖಕಿಯರ ಸಂಘದ ತ್ರಿವೇಣಿ ದತ್ತಿನಿಧಿ ಪ್ರಶಸ್ತಿಗಳೂ ಆಶಾ ಅವರಿಗೆ ಸಂದಿದ್ದವು.

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore – 560 001

TENDER NOTIFICATION

The Karnataka State Cricket Association, M. Chinnaswamy Stadium, Cubbon Road, Bangalore invites sealed tenders from GST compliant contractors for the work of Supply, installation, testing and commissioning of additional Fire Safety systems at KSCA, M. Chinnaswamy Stadium, Bangalore.

1	Name of Work:	Supply, installation, testing and commissioning of additional Fire Safety systems at KSCA.
3	Earnest Money Deposit:	Rs.5,50,000/- (to be enclosed in Technical Bid).
4	Cost of Tender Form:	Rs.15,000/- plus GST (Non-refundable)
5	Date of Issue of Tender Form:	12/01/2026 to 20/01/2026
6	Pre-bid Meeting:	19/01/2026 at 4:30 pm
7	Last Date of Submission:	21/01/2026 before 4.00 PM
8	Opening of Technical Bid:	21/01/2026 at 5.30 PM
9	Completion of Work:	30 days from date of Work Order

Tender documents may be obtained from the Office of KSCA Electrical Department between 11.00 AM to 5.00 PM on working days.

Sd/- Chief Executive Officer
KSCA

ತ್ಯಾಜ್ಯ ರಾಶಿ...

ಪ್ರಜಾವಾಣಿ ಚಿತ್ರ:

ಮೈಸೂರು ಮಹಾನಗರಪಾಲಿಕೆಯಿಂದ ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ 'ಸ್ವಚ್ಛ ಸರ್ವೇಕ್ಷಣ ಅಭಿಯಾನ'ದ ಅಂಗವಾಗಿ ಶನಿವಾರ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಸಂಗ್ರಹವಾದ ತ್ಯಾಜ್ಯದೊಂದಿಗೆ ಸ್ವಯಂಸೇವಕರು

ಮನೆ ಬಾಡಿಗೆಗೆ ಕೊಡುವಾಗ ಎಚ್ಚರ ವಹಿಸಿ: ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಬಾಂಗ್ಲಾ ವಲಸಿಗರನ್ನು ಪತ್ತೆಹಚ್ಚಿ ಗಡಿಪಾರು ಮಾಡುತ್ತಿದ್ದೇವೆ. ಮನೆ ಬಾಡಿಗೆಗೆ ನೀಡುವಾಗ ದಾಖಲೆಗಳನ್ನು ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಾಂಗ್ಲಾ ವಲಸಿಗರ ವಿಚಾರದಲ್ಲಿ ಸರ್ಕಾರ ಕಠಿಣವಾಗಿದೆ. ಕೇಂದ್ರ ಸರ್ಕಾರವು ಗಡಿ ಭಾಗಗಳನ್ನು ಬಿಗಿಗೊಳಿಸಬೇಕು. ಹಣ ಕೊಟ್ಟು ಒಳಗೆ ಬರುತ್ತಾರೆಂದರೆ ಗಡಿ ಪ್ರದೇಶದಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ ಅನಿಸುತ್ತಿದೆ. ಈ ಬಗ್ಗೆ ರಕ್ಷಣಾ ಇಲಾಖೆ ಕ್ರಮ ತೆಗೆದುಕೊಳ್ಳಬೇಕು' ಎಂದರು.

'ಮಹಿಳೆಯರ ವಾಸಕ್ಕೆ ದೇಶದ ಸುರಕ್ಷಿತ ನಗರಗಳ ಪಟ್ಟಿಯಲ್ಲಿ ಬೆಂಗಳೂರು ನಗರ ಮೊದಲನೇ ಸ್ಥಾನದಲ್ಲಿರುವುದು ಹೆಮ್ಮೆಯ ವಿಚಾರ' ಎಂದರು. 'ಸುರಕ್ಷತೆ, ತಂತ್ರಜ್ಞಾನ, ಮೂಲಸೌಕರ್ಯ ಮತ್ತಿತರ ಮಾನದಂಡಗಳನ್ನು ಆಧರಿಸಿ ಚೆನ್ನೈ ಮೂಲದ ಅವತಾರ್ ಗ್ರೂಪ್ ಪ್ರಕಟಿಸಿರುವ 'ಭಾರತದಲ್ಲಿ ಮಹಿಳೆಯರಿಗಾಗಿ ಅತ್ಯುತ್ತಮ ನಗರಗಳ' ಪಟ್ಟಿಯಲ್ಲಿ ಬೆಂಗಳೂರು ನಗರ 53.29 ಅಂಕ ಪಡೆದು ಮೊದಲನೇ ಸ್ಥಾನದಲ್ಲಿದೆ' ಎಂದರು.

'ನ್ಯಾಯ ಒದಗಿಸುವುದರಲ್ಲಿ ಈ ಹಿಂದೆಯೂ ಕರ್ನಾಟಕ ಪೊಲೀಸ್ ಸಮರ್ಥವಾಗಿ ಕೆಲಸ ಮಾಡಿದೆ. ಆದರೆ, ವಿರೋಧ ಪಕ್ಷದವರು ನಿತ್ಯ ಬೆಂಗಳೂರಿನ ಕುರಿತು ಟೀಕೆ ಮಾಡುತ್ತಾರೆ. ಈ ವರದಿ ಅವರಿಗೆ ಉತ್ತರವಾಗಲಿದೆ' ಎಂದರು.

'ಪರಮೇಶ್ವರ ಮುಖ್ಯಮಂತ್ರಿ ಆಗಬೇಕು' ಎಂದು ಕೊರಟಗೆರೆಯಲ್ಲಿ ಸರ್ವಧರ್ಮ ಬೆಂಬಲಿಗರಿಂದ ಪೂಜೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಪ್ರತಿಯೊಬ್ಬ ರಾಜಕಾರಣಿಗೂ ಅವರನ್ನು ಇಷ್ಟಪಡುವ ಬೆಂಬಲಿಗರು, ಅಭಿಮಾನಿಗಳು ಇದ್ದೇ ಇರುತ್ತಾರೆ. ಅವರ ನಾಯಕ ಎತ್ತರಕ್ಕೆ ಹೋಗಬೇಕು ಎಂದು ಬಯಸುತ್ತಾರೆ. ಇದನ್ನು ತಪ್ಪು ಎಂದು ಹೇಳುವುದಿಲ್ಲ' ಎಂದರು.

ವೈದ್ಯ ವೃತ್ತಿಗೆ ತೊಡಕಾದ 'ಗ್ರಾಮೀಣ ಸೇವೆ'

ಒಂದನೇ ಮುಖಪುಟದಿಂದ...

ತಜ್ಞ ವೈದ್ಯರು ಲಭ್ಯವಿಲ್ಲದೆ ಗ್ರಾಮೀಣ ಜನರು ಸಂಕಷ್ಟ ಅನುಭವಿಸಿದ್ದರು. ಹಾಗಾಗಿ, ಗ್ರಾಮೀಣ ಸೇವೆ ಕಡ್ಡಾಯಗೊಳಿಸುವ ಕಾಯ್ದೆಯನ್ನು 2012ರಲ್ಲಿ ಸರ್ಕಾರ ಜಾರಿಗೊಳಿಸಿತ್ತು.

ಕಾಯ್ದೆಯ ನಿಯಮಗಳಂತೆ ಸರ್ಕಾರಿ ವೈದ್ಯಕೀಯ ಕೋಟಾದಲ್ಲಿ ಸೀಟು ಪಡೆದು ವೈದ್ಯಕೀಯ ಪದವಿ (ಎಂಬಿಬಿಎಸ್) ಮುಗಿಸಿದವರು ಕನಿಷ್ಠ ಒಂದು ವರ್ಷ ಗ್ರಾಮೀಣ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸಬೇಕು. ಆ ನಂತರವೇ ಅಂತಹ ವಿದ್ಯಾರ್ಥಿಗಳು ಕರ್ನಾಟಕ ವೈದ್ಯಕೀಯ ಪರಿಷತ್‌ನಲ್ಲಿ (ಕೆಎಂಸಿ) ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಪ್ರಮಾಣಪತ್ರ ಸಿಗದೆ ರೋಗಿಗಳನ್ನು ಪರೀಕ್ಷಿಸಲು, ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು, ಕ್ಲಿನಿಕ್, ನರ್ಸಿಂಗ್ ಹೋಂ ತೆರೆಯಲು ಹಾಗೂ ವೈದ್ಯಕೀಯ ಸೇವೆಗಾಗಿ ಹೊರದೇಶಗಳಿಗೆ ತೆರಳಲೂ ಸಾಧ್ಯವಾಗದು.

ಅಂದು ಭಾರಿ ಸಂಖ್ಯೆಯಲ್ಲಿ ವೈದ್ಯರ ಹುದ್ದೆಗಳು ಖಾಲಿ ಇದ್ದ ಕಾರಣ ಕಾಯ್ದೆಯ ನಿಯಮಗಳು ಆಶಾದಾಯಕವಾಗಿಯೇ ಕಾಣಿಸಿದ್ದವು. ದಶಕದ ನಂತರ ಪರಿಸ್ಥಿತಿ ಬದಲಾಗಿದ್ದು, ಸಾಕಷ್ಟು ವೈದ್ಯರನ್ನು ನೇಮಕ ಮಾಡಲಾಗಿದೆ. ಮತ್ತೊಂದು ಕಡೆ ಸರ್ಕಾರಿ ವೈದ್ಯಕೀಯ ಕಾಲೇಜುಗಳು, ಸರ್ಕಾರಿ ಕೋಟಾದ ಸೀಟುಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದ್ದು, ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಕೋರ್ಸ್ ಮುಗಿಸಿ ಹೊರ ಬರುತ್ತಿದ್ದಾರೆ. ನೇಮಕಾತಿ ಪ್ರಕ್ರಿಯೆಯೂ ಕಡಿಮೆಯಾಗಿದ್ದು, ಹಲವರಿಗೆ ಗ್ರಾಮೀಣ ಸೇವೆಯ ಅವಕಾಶವೇ ಸಿಗುತ್ತಿಲ್ಲ. ಹೀಗಾಗಿ, ಕೆಎಂಸಿ ನೋಂದಣಿ ಸಾಧ್ಯವಾಗದೆ ಪರದಾಡುತ್ತಿದ್ದಾರೆ.

'ಕೋವಿಡ್ ನಂತರ 1,048 ಸಾಮಾನ್ಯ ವೈದ್ಯರು, 743 ತಜ್ಞ ವೈದ್ಯರು, 88 ದಂತ ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿತ್ತು. 2022–23ನೇ ಸಾಲಿನಲ್ಲಿ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಯ ಅಡಿ 3,221 ವೈದ್ಯರ ಸೇವೆಯನ್ನು ಬಳಸಿಕೊಳ್ಳಲಾಗಿತ್ತು. ನಂತರ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಸರ್ಕಾರಿ ಕೋಟಾದ ವೈದ್ಯಕೀಯ ಸೀಟುಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಇದರಿಂದ ಪದವಿ ಮುಗಿಸುವ ಎಲ್ಲರಿಗೂ ಗ್ರಾಮೀಣ ಸೇವೆಯ ಅವಕಾಶ ಸಿಗುತ್ತಿಲ್ಲ. ಕೆಎಂಸಿ ನೋಂದಣಿ ಇಲ್ಲದೆ ಖಾಸಗಿ ಆಸ್ಪತ್ರೆ ಸೇರಿದಂತೆ ಬೇರೆ ಕಡೆ ಕೆಲಸಕ್ಕೆ ಸೇರಲೂ ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ಎಂಬಿಬಿಎಸ್ ಪದವೀಧರ ಡಾ.ಕಿರಣ್‌ಕುಮಾರ್.

ತಾತ್ಕಾಲಿಕ ನೋಂದಣಿಗಿಲ್ಲ ಅವಕಾಶ

ಒಂದನೇ ಮುಖಪುಟದಿಂದ...

ಗ್ರಾಮೀಣ ಸೇವೆ ಒಪ್ಪದವರು ₹15 ಲಕ್ಷ ದಂಡ ಕಟ್ಟಿ ಷರತ್ತಿನಿಂದ ಮುಕ್ತವಾಗಬಹುದು. ಇದು ತಾರತಮ್ಯದ ಕಾಯ್ದೆ ಎಂದು ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ರಾಜ್ಯ ಸರ್ಕಾರ ಇಂತಹ ತೊಡಕುಗಳನ್ನು ನಿವಾರಿಸಲು 2023ರಲ್ಲಿ ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಕೆಲವು ವಿನಾಯಿತಿಗಳ ಕುರಿತು ಚರ್ಚಿಸಿತ್ತು. ನಂತರ ಗ್ರಾಮೀಣ ಸೇವೆ ಕಡ್ಡಾಯ ಕೈಬಿಡಲು ಸಮ್ಮತಿಸಿತ್ತು. ಆದರೆ, ಹೈಕೋರ್ಟ್ ಗ್ರಾಮೀಣ ಸೇವೆಯನ್ನು ಎತ್ತಿ ಹಿಡಿದ ಕಾರಣ ಸಂಪುಟದ ತೀರ್ಮಾನ ಜಾರಿಯಾಗಿಲ್ಲ.

ಅಂಕಿ ಅಂಶಗಳು

3,607 ಮಂಜೂರಾದ ವೈದ್ಯ ಹುದ್ದೆಗಳು

1,368 ಖಾಲಿ ಹುದ್ದೆಗಳು

10,559 ರಾಜ್ಯದಲ್ಲಿರುವ ವೈದ್ಯಕೀಯ ಸೀಟುಗಳು

5,938 ಸರ್ಕಾರಿ ಕೋಟಾದ ಸೀಟುಗಳು

ಗ್ರಾಮೀಣ ಸೇವೆ ಮಾಡುವ ಷರತ್ತಿಗೆ ಒಳಪಟ್ಟು ಎಂಬಿಬಿಎಸ್ ಪದವೀಧರರಿಗೆ ನೋಂದಣಿಗೆ ಸರ್ಕಾರ ಸಮ್ಮತಿಸಿದೆ. ವಾರದ ಒಳಗೆ ಅಧಿಕೃತ ಆದೇಶ ಬರುವ ನಿರೀಕ್ಷೆ ಇದೆ
ಡಾ.ವೈ.ಸಿ.ಯೋಗಾನಂದ ರೆಡ್ಡಿ, ಅಧ್ಯಕ್ಷ, ಕೆಎಂಸಿ

2 ವರ್ಷಗಳ ಹಿಂದೆ ಎಂಬಿಬಿಎಸ್ ಮುಗಿಸಿದೆ. ಗ್ರಾಮೀಣ ಸೇವೆಯ ಅವಕಾಶ ಸಿಗದ ಕಾರಣ ಕೆಎಂಸಿ ನೋಂದಣಿ ಆಗಿಲ್ಲ. ನೋಂದಣಿ ಇಲ್ಲದೆ ಪಿ.ಜಿ ಪ್ರವೇಶ ಸಾಧ್ಯವಾಗಿಲ್ಲ
ಡಾ.ರಾಜಶೇಖರ್, ಪಿಜಿ–ನೀಟ್ ಆಕಾಂಕ್ಷಿ

'ಶಾ ಅಸಮರ್ಥ ಗೃಹ ಸಚಿವ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಾಂಗ್ಲಾದೇಶದ ನುಸುಳುಕೋರರನ್ನು ತಡೆಯುವ ಬದಲು ರಾಜ್ಯಗಳ ಚುನಾಯಿತ ಸರ್ಕಾರಗಳನ್ನು ಉರುಳಿಸುವ ಬಗ್ಗೆ ಯೋಚಿಸುವ ಅಮಿತ್ ಶಾ ದೇಶ ಕಂಡ ಅತ್ಯಂತ ಅಸಮರ್ಥ ಗೃಹ ಸಚಿವ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಇಲ್ಲಿ ಟೀಕಿಸಿದರು.

'ಬಿಜೆಪಿ ಆಡಳಿತದಲ್ಲಿರುವ ಅಸ್ಸಾಂ ಮತ್ತಿತರ ರಾಜ್ಯಗಳ ಗಡಿಯ ಮೂಲಕವೇ ಬಾಂಗ್ಲಾ ನುಸುಳುಕೋರರು ಬರುತ್ತಿದ್ದಾರೆ. ದೇಶದ ಗಡಿ ಕಾಯಬೇಕಾದವರು ಸಿದ್ದರಾಮಯ್ಯ, ಜಿ. ಪರಮೇಶ್ವರ ಅವರೋ ಅಥವಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೋ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಮಾತಿಗೊಮ್ಮೆ ರಾಜ್ಯದಲ್ಲಿ ಬಾಂಗ್ಲಾದೇಶಿಯವರು ನುಸುಳಿದ್ದಾರೆ ಎಂದು ಬಿಜೆಪಿಯವರು ಆರೋಪಿಸುತ್ತಾರೆ. ಅದಕ್ಕೆ ಕಾರಣ ಅವರದೇ ಪಕ್ಷದ ಸರ್ಕಾರದ ಗೃಹ ಸಚಿವರು ಎಂಬುದು ಗೊತ್ತಿಲ್ಲವೇ' ಎಂದು ಕೇಳಿದರು.

'ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರ ಇದ್ದಾಗ ಒಂದು ಲಕ್ಷ ಬಾಂಗ್ಲಾದೇಶಿಯರನ್ನು ವಾಪಸು ಕಳುಹಿಸಲಾಗಿತ್ತು. 11 ವರ್ಷಗಳಿಂದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಏಳು ಸಾವಿರ ಜನರನ್ನೂ ಕಳುಹಿಸಿಲ್ಲ. ಕಠಿಣ ನಿಲುವು ತೆಗೆದುಕೊಳ್ಳಬೇಕಾಗಿದ್ದ ಅಮಿತ್ ಶಾ ಅವರು, ಇಡಿ, ಸಿಬಿಐ ಬಳಸಿಕೊಂಡು ಬಿಜೆಪಿಯೇತರ ರಾಜ್ಯ ಸರ್ಕಾರಗಳನ್ನು ಬುಡಮೇಲು ಮಾಡುವಲ್ಲಿ ನಿರತರಾಗಿದ್ದಾರೆ' ಎಂದು ಟೀಕಿಸಿದರು.

ಕರ್ನಾಟಕ ರೆಡ್ಡಿಜನ ಸಂಘ
ನಂ.1, ಮಹಾಯೋಗಿ ವೇಮನ ರಸ್ತೆ, ಕೋರಮಂಗಲ, ಬೆಂಗಳೂರು-34

ಪ್ರಕಟಣೆ

ಕೆ.ಆರ್.ಜೆ.ಎಸ್. / ಆಡಳಿತ/ 40 / 2026 — ದಿನಾಂಕ: 09-01-2026

ಕರ್ನಾಟಕ ರೆಡ್ಡಿಜನ ಸಂಘ **90ನೇ ವಾರ್ಷಿಕ** ಸರ್ವ ಸದಸ್ಯರ ಸಭೆಯನ್ನು **ದಿನಾಂಕ: 25-01-2026ರ ಭಾನುವಾರದಂದು ಬೆಳಿಗ್ಗೆ 11.00ಗಂಟೆಗೆ** ಸಂಘದ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಪ್ರಯುಕ್ತ 21 ದಿನಗಳ ಮುಂಚಿತವಾಗಿ ಸಮಗ್ರ ವಿವರಗಳೊಂದಿಗೆ ಸಭೆಯ "ಸೂಚನಾ ಪತ್ರ"ವನ್ನು ಈಗಾಗಲೇ ಅಂಚೆಯ ಮೂಲಕ ರವಾನಿಸಲಾಗಿದೆ ಎಂದು ಈ ಮೂಲಕ ಸರ್ವ ಸದಸ್ಯರಿಗೆ ತಿಳಿಯಬಯಸುತ್ತೇವೆ.

ಒಮ್ಮೆ ಅಜೀವ ಸದಸ್ಯರ ವಿಳಾಸ ಬದಲಾವಣೆ, ಅಂಚೆ ಕಛೇರಿಯ ವಿಲೇವಾರಿಯಲ್ಲಿ ವ್ಯತ್ಯಯ ಮತ್ತಿತರ ಕಾರಣಗಳಿಂದ ಸರ್ವ ಸದಸ್ಯರ ಸಭೆಯ ನೋಟೀಸ್ ತಮಗೆ ಸಕಾಲಕ್ಕೆ ತಲುಪದೇ ಇದ್ದಲ್ಲಿ ದಿನಾಂಕ: 25-01-2026ರ ಭಾನುವಾರದಂದು ಬೆಳಿಗ್ಗೆ 11.00ಗಂಟೆಗೆ ತಪ್ಪದೇ ಸರ್ವ ಸದಸ್ಯರು ಹಾಜರಾಗಲು ಈ ಮೂಲಕ ತಮ್ಮನ್ನು ಆಹ್ವಾನಿಸಲಾಗಿದೆ.

ಸಹಿ/- **ಅಧ್ಯಕ್ಷರು** — ಸಹಿ/- **ಪ್ರಧಾನ ಕಾರ್ಯದರ್ಶಿ.**

ಕರ್ನಾಟಕ ಸರ್ಕಾರದ ಬಾಂಡ್‌ಗಳು (ಸೆಕ್ಯುರಿಟೀಸ್)
ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಪ್ರಕಟಣೆ

1. ಒಟ್ಟು ಮೊತ್ತ: 6000 ಕೋಟಿ ರೂಗಳು (2,000 ಕೋಟಿ ರೂ.ಗಳು–7.16% SGS 2031 ಮರು ಹಂಚಿಕೆ; 2,000 ಕೋಟಿ ರೂ.ಗಳು–7.51% SGS 2036 ಮರು ಹಂಚಿಕೆ; 2,000 ಕೋಟಿ ರೂ.ಗಳು–6 ವರ್ಷ 6 ತಿಂಗಳುಗಳ ಅವಧಿ)
2. ಹಂಚಿಕೆ ವಿಧಾನ ಹರಾಜು ಮೂಲಕ, (ರಿಸರ್ವ್ ಬ್ಯಾಂಕ್ (ಪಿಡಿಒ), ಆರ್‌ಬಿಐ, ಮುಂಬೈ ಮುಖಾಂತರ).
3. ಹರಾಜಿನ ದಿನಾಂಕ : ಜನವರಿ 13, 2026.

ಕರ್ನಾಟಕ ಸರ್ಕಾರವು ಮೇಲಿನ ಭದ್ರತಾ ಪತ್ರಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ರಿಸರ್ವ್ ಬ್ಯಾಂಕ್, ಪಿಡಿಒ, ಬೆಂಗಳೂರು ಕಛೇರಿಯಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ರಿಸರ್ವ್ ಬ್ಯಾಂಕ್ ನಿಂದ ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟಕ್ಕೆ ಅಧಿಸೂಚಿಸಲಾದ ಮೊತ್ತದ ಗರಿಷ್ಠ ಶೇ.10ರವರೆಗಿನ ಸರ್ಕಾರಿ ಭದ್ರತಾ ಪತ್ರಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಹರಾಜು ಸೌಲಭ್ಯದ ಪರಿಷ್ಕೃತ ಯೋಜನೆಯ ವಿವರಗಳು www.rbi.org.in. ಜಾಲತಾಣದಲ್ಲಿ ಲಭ್ಯವಿದೆ.

ಸಹಿ/– (ಇಕ್ರಂ ಶರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/4948/Zen/2025-26

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಸ.ಕಾಇಂ/ಲೋಇವಿ/ತುಮ/ಕಿಇಂ–3/ಟೆಂಡರ್ 41/2025–26 — ದಿನಾಂಕ: 03–01–2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 41/2025–26 ದಿನಾಂಕ 03–01–2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **41/2025–26** ದಿನಾಂಕ **03–01–2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ:–8443** ಠೇವಣಿ ವಂತಿಕೆ ಅಡಿಯಲ್ಲಿ **03 ಕಾಮಗಾರಿಗಳಿಗೆ** KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 51.74 ಲಕ್ಷಗಳು** ಹಾಗೂ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ. 84.29 ಲಕ್ಷಗಳು,** ಕನಿಷ್ಠ ಇ.ಎಂ.ಡಿ ಮೊತ್ತ **ರೂ. 1,07,500/–** ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ **ರೂ. 1,68,570/–,** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು **ಕಾಲಾವಧಿ: 06 ತಿಂಗಳುಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 14–01–2026 ರ 17–30 ಗಂಟೆಗೆ,** KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 07–01–2026 ರಿಂದ 16–01–2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 16–01–2026 ರ 16–00 ಗಂಟೆವರೆಗೆ** ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ:–17–01–2026 ರ 16–30 ಗಂಟೆಗೆ** ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ: 19–01–2026 ರ 11–30 ಗಂಟೆವರೆಗೆ** ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-219/25-26/Oysters

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054–MDR-Bridge/2025–26/4082 — ದಿನಾಂಕ:09.01.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್) (3ನೇ ಕರೆ)

ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ– 4 ರಲ್ಲಿ ಲೆಕ್ಕ ಶೀರ್ಷಿಕೆ 5054–03–101–0–02–132 ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ಮಾಣ ಅಡಿಯಲ್ಲಿ 01 ಕಾಮಗಾರಿಗೆ **ವರ್ಕ್ ಇಂಡೆಂಟ್ ನಂ: 22334/3ನೇ ಕರೆ** ಗುತ್ತಿಗೆಯನ್ನು ಕರೆಯಲಾಗಿದ್ದು, **ಅಂದಾಜು ಮೊತ್ತ ರೂ. 4450.00 ಲಕ್ಷಗಳು ಹಾಗೂ ಮುಂಗಡ ಠೇವಣಿ ಮೊತ್ತ, 44,50,000/– ರೂ.ಗಳು.** ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಪೂರ್ವ ಭಾವಿ ಸಭೆ **ದಿನಾಂಕ: 16.01.2026** ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:– **22.01.2026** ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 23.01.2026** ರ ಸಂಜೆ 4.31 ಘಂಟೆಯ ನಂತರ ಮತ್ತು, 4) ಟೆಂಡರಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 27.01.2026** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/607/ಕೆಎಸ್‌ಎಂಸಿಎ/2025–26

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ನೋಂದಾಯಿತ ಕಚೇರಿ: #27, ಕೈಗಾರಿಕಾ ಉಪನಗರ, ಬೆಂಗಳೂರು– ಪುಣೆ ಹೆದ್ದಾರಿ, ರಾಜಾಜಿನಗರ, ಬೆಂಗಳೂರು – 560055.
E-mail: ksdl.dgmmtls@gmail.com, ದೂರವಾಣಿ ಸಂಖ್ಯೆ: 080-22164879/22164886/22164901

ದಿನಾಂಕ: 10.01.2026

ಇ–ಹರಾಜು ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಯು ಕೆಳಕಂಡ ಇ–ಹರಾಜಿಗೆ ಇ–ಪೋರ್ಟಲ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಇ–ಹರಾಜಿಗೆ ಸಂಬಂಧಿಸಿದ ದಸ್ತಾವೇಜನ್ನು ಇ–ಪೋರ್ಟಲ್ ನಿಂದ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕ್ರ. ಸಂ.	ಇ– ಹರಾಜಿನ ಸಂಖ್ಯೆ	ಇ–ಹರಾಜಿನ ಹೆಸರು	ಇ–ಹರಾಜು ಪ್ರಕಟಣೆಯ ದಿನಾಂಕ	ಇ–ಹರಾಜಿನಲ್ಲಿ ಭಾಗವಹಿಸುವಿಕೆಯನ್ನು ಖಚಿತಪಡಿಸುವ ದಿನಾಂಕ	ನೇರ ಹರಾಜಿನ ದಿನಾಂಕ ಮತ್ತು ಸಮಯ
1	KSDL/2025-26/AUCTION21	ಶಿವಮೊಗ್ಗದ ಶ್ರೀಗಂಧದ ಎಣ್ಣೆ ವಿಭಾಗದಲ್ಲಿರುವ ಸ್ಕ್ರ್ಯಾಪ್ ವಸ್ತುಗಳನ್ನು ಎಲ್ಲಿ ಹೇಗಿದೆಯೋ ಹಾಗೆ ಆಧಾರದ ಮೇಲೆ ವಿಲೇವಾರಿ ಮಾಡುವುದು	10.01.2026	27.01.2026	31.01.2026 ರ ಬೆಳಿಗ್ಗೆ 10:00 ಗಂಟೆಗೆ ಪ್ರಾರಂಭ ಮತ್ತು ಸಂಜೆ 5:00 ಗಂಟೆಗೆ ಮುಕ್ತಾಯ

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಚಟಿಕೆ ಸುದ್ದಿ

ವಿಮಾನ ಅಪಘಾತ: ಆರು ಮಂದಿಗೆ ಗಾಯ

ರೂರ್‌ಕೇಲಾ/ಭುವನೇಶ್ವರ (ಪಿಟಿಐ): ಖಾಸಗಿ ವಿಮಾನಯಾನ ಸಂಸ್ಥೆಗೆ ಸೇರಿದ ವಿಮಾನವೊಂದು ರೂರ್‌ಕೇಲಾ ಬಳಿ ಅಪಘಾತಕ್ಕೀಡಾಗಿದ್ದು, ಆರು ಮಂದಿ ಗಾಯಗೊಂಡಿದ್ದಾರೆ ಎಂದು ಒಡಿಶಾದ ವಾಣಿಜ್ಯ ಮತ್ತು ಸಾರಿಗೆ ಸಚಿವ ಬಿ.ಬಿ. ಜೆನಾ ಅವರು ತಿಳಿಸಿದ್ದಾರೆ.

ಭುವನೇಶ್ವರದಿಂದ ರೂರ್‌ಕೇಲಾಗೆ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಒಂಬತ್ತು ಆಸನಗಳ ಇಂಡಿಯಾ ಒನ್ ವಿಮಾನಯಾನ ಸಂಸ್ಥೆಗೆ ಸೇರಿದ ಒನ್ ಎ–1 ವಿಮಾನವು ದಾರಿ ಮಧ್ಯೆ ಅಪಘಾತಕ್ಕೀಡಾಗಿದೆ. ಈ ವೇಳೆ ವಿಮಾನದಲ್ಲಿ ನಾಲ್ವರು ಪ್ರಯಾಣಿಕರು ಸೇರಿದಂತೆ ಇಬ್ಬರು ಸಿಬ್ಬಂದಿ ಇದ್ದರು. ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಕ್ಷಣಾ ತಂಡವು ಗಾಯಗೊಂಡವರನ್ನು ರಕ್ಷಿಸಿ, ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದೆ. ಈ ವಿಮಾನವು ಭುವನೇಶ್ವರ ಮತ್ತು ರೂರ್‌ಕೇಲಾ ಮಧ್ಯೆ ನಿಯಮಿತವಾಗಿ ಹಾರಾಟ ನಡೆಸುತ್ತಿದ್ದು, ಖಾಸಗಿ ನಿರ್ವಾಹಕರು ಇದರ ಕಾರ್ಯಾಚರಣೆ ನಡೆಸುತ್ತಾರೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ಆಗ್ರಾದಿಂದ 38 ಬಾಂಗ್ಲಾ ಪ್ರಜೆಗಳ ಗಡಿಪಾರು

ಆಗ್ರಾ(ಉತ್ತರ ಪ್ರದೇಶ)(ಪಿಟಿಐ): ಎಂಟು ಮಕ್ಕಳು ಸೇರಿದಂತೆ 38 ಬಾಂಗ್ಲಾದೇಶದ ಪ್ರಜೆಗಳನ್ನು ಶನಿವಾರ ಆಗ್ರಾದಿಂದ ಗಡಿಪಾರು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘2022ರ ಫೆ.5ರಂದು ಸಿಕಂದ್ರ ಪೊಲೀಸ್ ಠಾಣಾ ವ್ಯಾಪ್ತಿಯ ಸೆಕ್ಟರ್ 15ರಲ್ಲಿ 38 ಮಂದಿ ಬಾಂಗ್ಲಾ ಪ್ರಜೆಗಳು ಅಕ್ರಮವಾಗಿ ನೆಲೆಸಿರುವುದು ಪತ್ತೆಯಾಗಿತ್ತು. ಇವರಲ್ಲಿ ಎಂಟು ಮಕ್ಕಳು ಮತ್ತು 30 ಮಂದಿ ವಯಸ್ಕರು ಇದ್ದರು. ಇಷ್ಟೂ ಜನರಲ್ಲಿ ವಾಸಸ್ಥಳ ದೃಢೀಕರಿಸುವ ಯಾವುದೇ ದಾಖಲೆಗಳಿರಲಿಲ್ಲ. ಹೀಗಾಗಿ ಅಕ್ರಮ ವಾಸದ ಆರೋಪದ ಮೇಲೆ ಪೊಲೀಸರು ಇವರನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸಿದ್ದರು. ನ್ಯಾಯಾಲಯವು ವಿದೇಶಿಯರ ಕಾಯ್ದೆಯಡಿ ಶಿಕ್ಷೆ ವಿಧಿಸಿತ್ತು’ ಎಂದು ಗುಪ್ತಚರ ವಿಭಾಗದ ಎಸಿಪಿ ದಿನೇಶ್ ಸಿಂಗ್ ವಿವರಿಸಿದರು.

‘ಶಿಕ್ಷೆಯ ಅವಧಿ ಮುಗಿದಿರುವುದರಿಂದ ಅವರನ್ನು ಶನಿವಾರ ವಾಹನಗಳ ಮೂಲಕ ಬಾಂಗ್ಲಾದೇಶ ಗಡಿಗೆ ಕಳುಹಿಸಲಾಯಿತು. ಜನವರಿ 13ರಂದು ಅವರನ್ನು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಲಾಗುವುದು’ ಎಂದು ಅವರು ಹೇಳಿದರು.

ಡ್ರೋನ್ ಮೂಲಕ ಎಸೆದಿದ್ದ ಶಸ್ತ್ರಾಸ್ತ್ರ ವಶಕ್ಕೆ

ಜಮ್ಮು (ಪಿಟಿಐ): ಪಾಕಿಸ್ತಾನದಿಂದ ಡ್ರೋನ್ ಮೂಲಕ ಎಸೆದಿದ್ದ ಶಸ್ತ್ರಾಸ್ತ್ರಗಳನ್ನು ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತರರಾಷ್ಟ್ರೀಯ ಗಡಿಯ ಬಳಿ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ಅಡ್ಡಿಪಡಿಸಲು ಭಯೋತ್ಪಾದಕರು ನಡೆಸಬಹುದಾದ ಯಾವುದೇ ಪ್ರಯತ್ನಗಳನ್ನು ತಡೆಯಲು ಬಿಗಿ ಭದ್ರತೆ ಕಲ್ಪಿಸಿರುವ ನಡುವೆಯೆ ಈ ಘಟನೆ ನಡೆದಿದೆ. ವಶಕ್ಕೆ ಪಡೆದಿರುವ ಶಸ್ತ್ರಾಸ್ತ್ರಗಳಲ್ಲಿ ಎರಡು ಪಿಸ್ತೂಲ್‌ಗಳು, ಮೂರು ಮ್ಯಾಗಜೀನ್‌ಗಳು, 16 ಸುತ್ತುಗಳ ಗುಂಡುಗಳು ಮತ್ತು ಒಂದು ಗ್ರೆನೇಡ್ ಇದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅನಾರೋಗ್ಯ: ಬಂಧಿತ ಪ್ರಧಾನ ಅರ್ಚಕ ಆಸ್ಪತ್ರೆಗೆ

ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯದ ಚಿನ್ನ ನಾಪತ್ತೆ ಪ್ರಕರಣದಲ್ಲಿ ಬಂಧಿತರಾಗಿರುವ ದೇವಾಲಯದ ಪ್ರಧಾನ ಅರ್ಚಕ (ತಂತ್ರಿ) ಕಂಡರಾರು ರಾಜೀವಾರು ಅವರನ್ನು ಅನಾರೋಗ್ಯದ ಕಾರಣ ಶನಿವಾರ ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಶುಕ್ರವಾರ ರಾಜೀವಾರು ಅವರನ್ನು ಬಂಧಿಸಿ, ಇಲ್ಲಿನ ವಿಶೇಷ ಜಿಲ್ಲಾ ಉಪ ಬಂದಿಖಾನೆಯಲ್ಲಿ ಇರಿಸಿತ್ತು. ಶನಿವಾರ ಬೆಳಿಗ್ಗೆ ಅರ್ಚಕರು ‘ನನಗೆ ಸುಸ್ತಾಗುತ್ತಿದೆ’ ಎಂದು ಹೇಳಿದ ಕಾರಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ಬಂದಿಖಾನೆ ಮೂಲಗಳು ತಿಳಿಸಿವೆ.

ಮೊದಲು ಅವರನ್ನು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಂತರ ಅಲ್ಲಿನ ವೈದ್ಯರ ಸೂಚನೆಯ ಮೇರೆಗೆ ಹೆಚ್ಚಿನ ತಪಾಸಣೆಗಾಗಿ ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಯಿತು. ಭಾರಿ ಪೊಲೀಸ್ ಬೆಂಗಾಲಿನ ನಡುವೆ ರಾಜೀವಾರು ಅವರು ಸಾರ್ವಜನಿಕ ಆಸ್ಪತ್ರೆಯ ತುರ್ತು ಚಿಕಿತ್ಸಾ ವಾರ್ಡ್‌ಗೆ ನಡೆದುಕೊಂಡು ಹೋಗುತ್ತಿರುವುದು ಕಂಡುಬಂದಿತು.

‘ಎಸ್‌ಐಆರ್: ಅಳಿಸುವ ಪ್ರಕ್ರಿಯೆ’

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪ

ಕೋಲ್ಕತ್ತ (ಪಿಟಿಐ): ‘ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ (ಎಸ್‌ಐಆರ್) ಕಾರ್ಯವು ದಾಖಲೆಗಳನ್ನು ಸರಿಪಡಿಸುವ ಬದಲಿಗೆ, ಮತದಾರರನ್ನು ಪಟ್ಟಿಯಿಂದ ಹೊರಗಿಡುವ ಪ್ರಕ್ರಿಯೆಯಾಗಿ ಪರಿವರ್ತಿತವಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಮಮತಾ ಬ್ಯಾನರ್ಜಿ

ಈ ಕುರಿತು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಶನಿವಾರ ಪತ್ರ ಬರೆದಿರುವ ಅವರು, ‘ಆಯೋಗವು ರಾಜಕೀಯ ಪಕ್ಷಪಾತ ಮತ್ತು ದರ್ಪದಿಂದ ವರ್ತಿಸುತ್ತಿದೆ’ ಎಂದು ದೂರಿದ್ದಾರೆ.

ಇಡೀ ಪ್ರಕ್ರಿಯೆಯು ಹೆಚ್ಚಾಗಿ ಯಾಂತ್ರಿಕವಾಗಿದ್ದು, ತಾಂತ್ರಿಕ ದತ್ತಾಂಶಗಳಿಗೆ ಒತ್ತು ನೀಡಲಾಗಿದೆ. ಮನಸ್ಸು, ಸೂಕ್ಷ್ಮ ಮತ್ತು ಮಾನವ ಸ್ಪರ್ಶದ ಕೊರತೆಯಿಂದ ಕೂಡಿದೆ ಎಂದು ಅವರು ಹೇಳಿದ್ದಾರೆ.

‘ಒಟ್ಟಾರೆ ಎಸ್‌ಐಆರ್ ಕಸರತ್ತಿನ ಉದ್ದೇಶ ತಿದ್ದುಪಡಿ ಅಥವಾ ಸೇರ್ಪಡೆಯಲ್ಲ. ಬದಲಿಗೆ ಕೇವಲ ಹೆಸರುಗಳನ್ನು ಅಳಿಸುವ ಮತ್ತು ಹೊರಗಿಡುವ ಪ್ರಕ್ರಿಯೆ’ ಎಂದು ಮಮತಾ ಟೀಕಿಸಿದ್ದಾರೆ.

ಕಾಗುಣಿತ ದೋಷಗಳು, ವಯಸ್ಸಿನ ವ್ಯತ್ಯಾಸಗಳಿಗಾಗಿ ಜನಸಾಮಾನ್ಯರನ್ನು ವಿಚಾರಣೆಗೆ ಬರುವಂತೆ ಮಾಡುವುದು ಒಂದು ರೀತಿಯ ಕಿರುಕುಳ. ಅಲ್ಲದೆ ಇದರಿಂದ ಅವರ ದಿನದ ಕೂಲಿಯೂ ನಷ್ಟವಾಗುತ್ತದೆ ಎಂದು ಅವರು ಕಿಡಿಕಾರಿದ್ದಾರೆ.

ವಿವಾಹದ ನಂತರ ಮಹಿಳೆಯ ಉಪನಾಮಗಳು ಬದಲಾಗುತ್ತವೆ. ಆದರೆ ಅದನ್ನೇ ಎತ್ತಿ ತೋರಿಸಿ, ಅವರಿಗೆ ಗುರುತು ಸಾಬೀತುಪಡಿಸಲು ಸೂಚಿಸಲಾಗುತ್ತಿದೆ. ಇದು ಗಂಭೀರ ಅವಮಾನವಾಗಿದೆ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ
- ‘ಆಯೋಗ ದರ್ಪದಿಂದ ವರ್ತಿಸುತ್ತಿದೆ’
- ಇಡೀ ಪ್ರಕ್ರಿಯೆ ಯಾಂತ್ರಿಕವಾಗಿದೆ
- ಪ್ರಕ್ರಿಯೆಯಿಂದ ಜನ ಸಾಮಾನ್ಯರಿಗೆ ಕಿರುಕುಳ

ಬಿಜೆಪಿಗೆ ಮೊದಲೇ ಹೇಗೆ ಗೊತ್ತಾಗುತ್ತದೆ?: ಎಸ್‌ಪಿ

ಲಖನೌ (ಪಿಟಿಐ): ‘ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವೇಳೆ ಇಂತಿಷ್ಟು ಸಂಖ್ಯೆಯ ಮತದಾರರು ಪಟ್ಟಿಯಿಂದ ಹೊರಗುಳಿಯುತ್ತಾರೆ ಎಂಬುದಾಗಿ ಬಿಜೆಪಿ ನಾಯಕರಿಗೆ ಮೊದಲೇ ಹೇಗೆ ಗೊತ್ತಾಗುತ್ತದೆ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಶನಿವಾರ ಪ್ರಶ್ನಿಸಿದರು.

ಅಖಿಲೇಶ್ ಯಾದವ್

ಇದು ಭಾರತೀಯ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮತದಾರರ ಕರಡು ಪಟ್ಟಿ ಬಿಡುಗಡೆಗೂ ಮೊದಲೇ ಎಷ್ಟು ಮತದಾರರ ಹೆಸರುಗಳನ್ನು ಅಳಿಸಲಾಗಿರುತ್ತದೆ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಆದರೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸುಮಾರು ನಾಲ್ಕು ಕೋಟಿ ಮತದಾರರ ಹೆಸರನ್ನುಅಳಿಸಲಾಗಿದೆ ಎಂದು ಹೇಗೆ ಹೇಳಿದರು’ ಎಂದು ಅಖಿಲೇಶ್ ಪ್ರಶ್ನಿಸಿದರು. ‘ಬಿಜೆಪಿ ನಾಯಕರು ಈ ರೀತಿ ಹೇಳಿಕೆಗಳನ್ನು ನೀಡುತ್ತಿದ್ದರೆ ಚುನಾವಣಾ ಆಯೋಗವನ್ನು ನಂಬುವುದು ಹೇಗೆ? ಅದರ ವಿಶ್ವಾಸಾರ್ಹತೆ ಎಲ್ಲಿ ಉಳಿಯುತ್ತದೆ’ ಎಂದರು.

‘ಬುಕ್ ಎ ಕಾಲ್ ವಿತ್ ಬಿಎಲ್‌ಒ’

ಲಖನೌ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಮತದಾರರ ಸೇವೆಗಳನ್ನು ಸುಲಭಗೊಳಿಸಲು ಕೇಂದ್ರ ಚುನಾವಣಾ ಆಯೋಗವು ಉತ್ತರ ಪ್ರದೇಶದಲ್ಲಿ ‘ಬುಕ್ ಎ ಕಾಲ್ ವಿತ್ ಬಿಎಲ್‌ಒ’ ಸೌಲಭ್ಯಕ್ಕೆ ಚಾಲನೆ ನೀಡಿದೆ.

ಪ್ರಕಟವಾಗಿರುವ ಎಸ್‌ಐಆರ್ ಕರಡು ಪಟ್ಟಿಗೆ ಆಕ್ಷೇಪಣೆ, ಹೆಸರು ಸೇರ್ಪಡೆ, ತಿದ್ದುಪಡಿಗಳೇನಾದರೂ ಇದ್ದರೆ ಅದಕ್ಕೆ ಅರ್ಜಿ ಸಲ್ಲಿಸಲು ಫೆಬ್ರುವರಿ 6ರವರೆಗೆ ಸಮಯಾವಕಾಶ ಇದೆ ಎಂದು ಆಯೋಗ ತಿಳಿಸಿದೆ. ಇದಕ್ಕೆ ಪೂರಕವಾಗಿ ಮತದಾರರು ತಮ್ಮ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಜತೆ ದೂರವಾಣಿ ಕರೆಯನ್ನು ಬುಕ್ ಮಾಡಿ, ಮಾಹಿತಿ ಅಥವಾ ನೆರವು ಪಡೆಯಬಹುದು ಎಂದು ಅದು ಪ್ರಕಟಣೆಯಲ್ಲಿ ಹೇಳಿದೆ.

ಈ ಸೇವೆಯು ಆಯೋಗದ ಪೋರ್ಟಲ್ voters.eci.gov.in ಮತ್ತು ECINET ಮೊಬೈಲ್ ಅಪ್ಲಿಕೇಷನ್‌ನಲ್ಲಿ ಲಭ್ಯವಿದೆ. ಈ ಸೇವೆ ಪಡೆಯಲು ನೋಂದಾಯಿತ ಮೊಬೈಲ್ ಸಂಖ್ಯೆಯೊಂದಿಗೆ ‘ಲಾಗಿನ್’ ಆಗಬೇಕು ಅಥವಾ ಒಟಿಪಿ ಬಳಸಿಕೊಂಡು ‘ಸೈನ್‌ಅಪ್’ ಆಗಬೇಕು. ನಂತರ ತಮ್ಮ ಎಪಿಕ್ ಸಂಖ್ಯೆಯನ್ನು ನಮೂದಿಸಬೇಕು ಅಥವಾ ಪರ್ಯಾಯವಾಗಿ ರಾಜ್ಯ, ಜಿಲ್ಲೆ, ವಿಧಾನಸಭಾ ಕ್ಷೇತ್ರ ಮತ್ತು ಬೂತ್ ಸಂಖ್ಯೆಯ ವಿವರಗಳನ್ನು ಒದಗಿಸಿ ಕರೆಯನ್ನು ಬುಕ್ ಮಾಡಬೇಕು. ಸಂಬಂಧಿಸಿದ ಬಿಎಲ್‌ಒ 48 ಗಂಟೆಗಳ ಒಳಗೆ ಮತದಾರರನ್ನು ಸಂಪರ್ಕಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಈಗಾಗಲೇ ಉತ್ತರ ಪ್ರದೇಶದಲ್ಲಿ ಎಸ್‌ಐಆರ್ ಕರಡು ಪಟ್ಟಿಯನ್ನು ಆಯೋಗ ಪ್ರಕಟಿಸಿದ್ದು, 2.89 ಕೋಟಿ ಮತದಾರರನ್ನು ಕೈಬಿಡಲಾಗಿದೆ. ಇದರಿಂದ ರಾಜ್ಯದ ಮತದಾರರ ಸಂಖ್ಯೆ ಒಟ್ಟು 12.55 ಕೋಟಿಗೆ ಇಳಿಕೆಯಾಗಿದೆ.

ಸುದ್ದಿ 2 ನಿಮಿಷ

‘ಸಿಂಧೂರ’ ಪರಿಣಾಮ: ಸಂವಿಧಾನಕ್ಕೆ ತಿದ್ದುಪಡಿ ತಂದ ಪಾಕ್‌-ಚೌಹಾಣ್

ಪುಣೆ (ಪಿಟಿಐ): ‘ಆಪರೇಷನ್ ಸಿಂಧೂರ ಕಾರ್ಯಾಚರಣೆ ಪರಿಣಾಮವಾಗಿ ಪಾಕಿಸ್ತಾನವು ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಯಿತು. ನೆರೆಯ ರಾಷ್ಟ್ರದ ಪರಿಸ್ಥಿತಿ ಚೆನ್ನಾಗಿಲ್ಲ ಎನ್ನುವುದರ ಸಾಕ್ಷಿ ಇದು’ ಎಂದು ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ.

ಇಲ್ಲಿ ನಡೆದ ಸಾರ್ವಜನಿಕ ನೀತಿ ಉತ್ಸವದಲ್ಲಿ ಮಾತನಾಡಿದ ಅವರು, ‘ಸರ್ಕಾರವು ‘ಸಿಡಿಎಸ್’ ಅಧಿಕಾರಾವಧಿಯನ್ನು 2026ರ ಮೇ ತಿಂಗಳವರೆಗೆ ವಿಸ್ತರಿಸಿದೆ. ಈ ಗಡುವಿನ ಮೊದಲೇ ಸಶಸ್ತ್ರ ಪಡೆಗಳ ರೂಪಾಂತರ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



‘ಪಾಕಿಸ್ತಾನವು ಅಲ್ಲಿನ ಸಂವಿಧಾನದ 243ನೇ ವಿಧಿಗೆ ತಂದಿರುವ ತಿದ್ದುಪಡಿಯು, ಆ ದೇಶದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಹತ್ವದ ಬದಲಾವಣೆಗಳನ್ನು ತಂದಿದೆ. ಅವರು ಜಂಟಿ ಮುಖ್ಯಸ್ಥರ ಸಮಿತಿ ಅಧ್ಯಕ್ಷ ಹುದ್ದೆಯನ್ನು ರದ್ದುಪಡಿಸಿ, ಆ ಸ್ಥಾನಕ್ಕೆ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಫ್) ಹುದ್ದೆಯನ್ನು ಸೃಷ್ಟಿಸಿದ್ದಾರೆ. ರಾಷ್ಟ್ರೀಯ ಕಾರ್ಯತಂತ್ರ ಪಡೆ ರಚಿಸಲಾಗಿದೆ. ನಾವು ಇದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ.

ತೆಲಂಗಾಣ: ಆಲ್ಮಂಟ್ ಸಿರಪ್ ಬಳಕೆ ನಿಲ್ಲಿಸಲು ಸಲಹೆ

ಹೈದರಾಬಾದ್ (ಪಿಟಿಐ): ಅಲರ್ಜಿ, ಜ್ವರ ಮತ್ತು ಅಸ್ತಮಾ ಚಿಕಿತ್ಸೆಗಾಗಿ ಮಕ್ಕಳಿಗೆ ಸಾಮಾನ್ಯವಾಗಿ ನೀಡುವ ಆಲ್ಮಂಟ್-ಕಿಡ್ ಸಿರಪ್ ಬಳಕೆಯನ್ನು ತಕ್ಷಣವೇ ನಿಲ್ಲಿಸುವಂತೆ ತೆಲಂಗಾಣ ಔಷಧ ನಿಯಂತ್ರಣ ಪ್ರಾಧಿಕಾರ (ಡಿಸಿಎ) ಶನಿವಾರ ತುರ್ತು ಸಲಹೆ ನೀಡಿದೆ.

ಸಿರಪ್‌ನಲ್ಲಿ ವಿಷಕಾರಿ ದ್ರಾವಣ ಡೈಎಥಿಲೀನ್ ಗ್ಲೈಕಾಲ್ (ಡಿಇಜಿ) ಪ್ರಮಾಣ ಹೆಚ್ಚು ಇರುವುದು ಪರೀಕ್ಷೆಯಿಂದ ಕಂಡುಬಂದಿರುವ ಕಾರಣ ಈ ನಿರ್ಧಾರ ತೆಗೆದುಕೊಂಡಿದೆ.

‘ಆಲ್ಮಂಟ್-ಕಿಡ್ ಸಿರಪ್ ಕಳಪೆ ಗುಣಮಟ್ಟ ಹೊಂದಿರುವುದು ಪರೀಕ್ಷೆಯಿಂದ ತಿಳಿದುಬಂದಿರುವುದಾಗಿ ಕೋಲ್ಕತ್ತದ ಪೂರ್ವ ವಲಯದ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಎಚ್ಚರಿಕೆ ನೀಡಿದೆ. ಆದ್ದರಿಂದ ಸಾರ್ವಜನಿಕರು ಈ ಸಿರಪ್ ಬಳಕೆಯನ್ನು ತಕ್ಷಣವೇ ನಿಲ್ಲಿಸುವಂತೆ ಸೂಚಿಸಲಾಗಿದೆ’ ಎಂದು ಡಿಸಿಎ ಹೇಳಿದೆ.

ಎಲ್ಲಾ ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳು, ವಿತರಕರು ಮತ್ತು ಆಸ್ಪತ್ರೆಗಳು ಈ ಸಿರಪ್ ವಿತರಿಸದಂತೆ ಮತ್ತು ಮಾರಾಟ ಮಾಡದಂತೆ ನೋಡಿಕೊಳ್ಳಲು ರಾಜ್ಯದ ಎಲ್ಲ ಡ್ರಗ್ಸ್ ಇನ್‌ಸ್ಪೆಕ್ಟರ್‌ಗಳು ಮತ್ತು ಸಹಾಯಕ ನಿರ್ದೇಶಕರಿಗೆ ಡಿಸಿಎ ಸೂಚಿಸಿದೆ.

ನಿವೃತ್ತ ಡಿಜಿಪಿ ವಿರುದ್ಧ ಎಫ್‌ಐಆರ್‌ಗೆ ಶಿಫಾರಸು

ದೇವೇಂದ್ರ ಫಡಣವೀಸ್, ಏಕನಾಥ್ ಶಿಂಧೆ ಅವರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲು ಸಂಚು

ಮುಂಬೈ (ಪಿಟಿಐ): ದೇವೇಂದ್ರ ಫಡಣವೀಸ್ ಮತ್ತು ಏಕನಾಥ್ ಶಿಂಧೆ ಅವರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲು ಸಂಚು ರೂಪಿಸಿದ ಆರೋಪದ ಮೇಲೆ ಮಹಾರಾಷ್ಟ್ರದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸಂಜಯ್ ಪಾಂಡೆ ಮತ್ತು ಇತರ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಇತ್ತೀಚೆಗಷ್ಟೇ ಮಹಾರಾಷ್ಟ್ರದ ಡಿಜಿಪಿ ಹುದ್ದೆಯಿಂದ ನಿವೃತ್ತರಾದ ರಶ್ಮಿ ಶುಕ್ಲಾ ಶಿಫಾರಸು ಮಾಡಿದ್ದಾರೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ರಶ್ಮಿ ಶುಕ್ಲಾ

ಎಸ್‌ಐಟಿ ನಡೆಸಿದ ವಿಚಾರಣೆಯ ಆಧಾರದ ಮೇಲೆ ರಶ್ಮಿ ಅವರು ಜನವರಿ 3ರಂದು ನಿವೃತ್ತರಾಗುವ ಮೊದಲು ಗೃಹ ಇಲಾಖೆಗೆ ವರದಿ ಸಲ್ಲಿಸಿದ್ದಾರೆ.

2016ರಲ್ಲಿ ಠಾಣೆ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಸುಲಿಗೆ ಪ್ರಕರಣದ ಮರು ತನಿಖೆ ಮಾಡುವ ಮೂಲಕ ಅಂದಿನ ಡಿಜಿಪಿ ಸಂಜಯ್ ಪಾಂಡೆ, ಡಿಸಿಪಿ ಲಕ್ಷ್ಮೀಕಾಂತ್ ಪಾಟೀಲ್ ಮತ್ತು ಎಸಿಪಿ ಸರ್ದಾರ್ ಪಾಟೀಲ್ ಅವರು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ (ಆಗ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು) ಮತ್ತು ಪ್ರಸ್ತುತ ಉಪ ಮುಖ್ಯಮಂತ್ರಿ ಶಿಂಧೆ (ಆಗ ಸಚಿವರಾಗಿದ್ದರು) ಅವರನ್ನು ಸಿಲುಕಿಸುವ ಪಿತೂರಿಯಲ್ಲಿ ಭಾಗಿಯಾಗಿದ್ದಾರೆ ಎಂದು ವರದಿ ಹೇಳಿದೆ. ಈ ಮೂವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ರಶ್ಮಿ ಶಿಫಾರಸು ಮಾಡಿದ್ದಾರೆ.

2016ರಲ್ಲಿ ಶ್ಯಾಮ್‌ಸುಂದರ್ ಅಗರ್ವಾಲ್, ವ್ಯವಹಾರ ಪಾಲುದಾರ, ರಿಯಲ್ ಎಸ್ಟೇಟ್ ಡೆವಲಪರ್ ಸಂಜಯ್ ಪುನಾಮಿಯಾ ನಡುವೆ ವಿವಾದ ಉಂಟಾದ ನಂತರ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. 2017ರಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿತ್ತು.

ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಅಘಾಡಿ ಸರ್ಕಾರದ ಅವಧಿಯಲ್ಲಿ ಪೊಲೀಸ್ ಮಹಾನಿರ್ದೇಶಕರಾಗಿದ್ದ ಪಾಂಡೆ ಯಾರ ಪರವಾಗಿ ಕೆಲಸ ಮಾಡಿದ್ದಾರೆ ಎಂಬುದನ್ನುಪತ್ತೆ ಮಾಡಲು ಸಮಗ್ರ ತನಿಖೆ ನಡೆಸಬೇಕೆಂದು ಬಿಜೆಪಿ ನಾಯಕರು ಒತ್ತಾಯಿಸಿದ್ದಾರೆ.

ಪಂಜಾಬ್: 3 ಪೊಲೀಸ್ ಅಧಿಕಾರಿಗಳಿಗೆ ದೆಹಲಿ ಸ್ಪೀಕರ್ ನೋಟಿಸ್

ನವದೆಹಲಿ (ಪಿಟಿಐ): ವಿಧಾನಸಭೆಯ ವಿಡಿಯೊ ತುಣುಕಿನ ಆಧಾರದ ಮೇಲೆ ದೆಹಲಿ ಕಾನೂನು ಸಚಿವ ಕಪಿಲ್ ಮಿಶ್ರಾ ವಿರುದ್ಧ ಎಫ್‌ಐಆರ್ ದಾಖಲಿಸಿದ ಪಂಜಾಬ್ ಪೊಲೀಸ್ ಇಲಾಖೆಯ ಮೂವರು ಹಿರಿಯ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ದೆಹಲಿ ವಿಧಾನಸಭೆಯ ಸ್ಪೀಕರ್ ವಿಜೇಂದರ್ ಗುಪ್ತಾ ಶನಿವಾರ ತಿಳಿಸಿದರು.

ದೆಹಲಿ ವಿಧಾನಸಭೆಯ ಹಕ್ಕುಚ್ಯುತಿ ಮಾಡಿರುವ ಆರೋಪದ ಮೇರೆಗೆ ಪಂಜಾಬ್‌ನ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ), ವಿಶೇಷ ಡಿಜಿಪಿ (ಸೈಬರ್ ಅಪರಾಧ) ಮತ್ತು ಜಲಂಧರ್ ಪೊಲೀಸ್ ಕಮಿಷನರ್ ಅವರಿಗೆ ನೋಟಿಸ್ ನೀಡಲಾಗಿದ್ದು, 48 ಗಂಟೆಗಳಲ್ಲಿ ಉತ್ತರಿಸುವಂತೆ ಸೂಚಿಸಲಾಗಿದೆ ಎಂದು ಗುಪ್ತಾ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ದೆಹಲಿ ವಿಧಾನಸಭೆಯಲ್ಲಿನ ವಿಡಿಯೊ ತುಣುಕನ್ನು ಆಧರಿಸಿ ಪಂಜಾಬ್ ಪೊಲೀಸರು ಎಫ್‌ಐಆರ್ ದಾಖಲಿಸಿರುವುದು ದುರದೃಷ್ಟಕರ’ ಎಂದ ಅವರು, ‘ಪೊಲೀಸರ ಈ ಕ್ರಮವು ಸದನದ ಗೌರವಕ್ಕೆ ಚ್ಯುತಿ ತಂದಿದೆ’ ಎಂದರು.

ನೋಟಿಸ್‌ಗೆ ಪ್ರತಿಕ್ರಿಯೆ ಬಂದ ಬಳಿಕ ಆ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ನಿರ್ಧರಿಸಲಾಗುವುದು ಎಂದು ಅವರು ಉತ್ತರಿಸಿದರು.

ವಿರೋಧ ಪಕ್ಷದ ನಾಯಕಿ ಅತಿಶಿ ಅವರು ವಿಧಾನಸಭೆಯಲ್ಲಿ ಗುರುತೇಜ್ ಬಹದ್ದೂರ್ ಅವರನ್ನು ಅವಮಾನಿಸಿದ್ದಾರೆ ಎಂದು ಸಚಿವ ಕಪಿಲ್ ಮಿಶ್ರಾ ಮತ್ತು ಕೆಲ ಬಿಜೆಪಿ ಶಾಸಕರು ಆರೋಪಿಸಿದ್ದರು.

ಅತಿಶಿ ಅವರು ಹೇಳಿದ್ದನ್ನು ತಿರುಚಿರುವ ವಿಡಿಯೊವನ್ನು ಪ್ರಸಾರ ಮಾಡಲಾಗಿದೆ ಎಂದು ಆರೋಪಿಸಿರುವ ಜಲಂಧರ್ ಪೊಲೀಸ್ ಕಮಿಷನರೇಟ್, ಮಿಶ್ರಾ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಪಂಜಾಬ್‌ನ ಎಎಪಿ ಆಡಳಿತವು ಪೊಲೀಸರನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಸ್ಪೀಕರ್ ದೂರಿದರು. ಸಿಖ್ ಗುರುವನ್ನು ಅಮಾನಿಸಿರುವ ಅತಿಶಿ ಅವರ ವಿಧಾನಸಭಾ ಸದಸ್ಯತ್ವವನ್ನು ರದ್ದುಗೊಳಿಸಬೇಕು ಎಂದು ಬಿಜೆಪಿ ಶಾಸಕರು ಆಗ್ರಹಿಸಿದ್ದಾರೆ.

ಇಸ್ರೊ ಭೂ ವೀಕ್ಷಣಾ ಉಪಗ್ರಹ ಉಡಾವಣೆ ನಾಳೆ

ತಿರುಪತಿ (ಪಿಟಿಐ): ಪಿಎಸ್‌ಎಲ್‌ವಿ–ಸಿ62, ಭೂ ವೀಕ್ಷಣಾ ಉಪಗ್ರಹ (ಇಒಎಸ್–ಎನ್1) ಉಡಾವಣೆಗೆ ಪೂರ್ವಭಾವಿಯಾಗಿ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರು ತಿರುಪತಿ ವೆಂಕಟೇಶ್ವರ ದೇವಸ್ಥಾನದಲ್ಲಿ ಶನಿವಾರ ಪೂಜೆ ಸಲ್ಲಿಸಿದರು.

‘ಇಒಎಸ್–ಎನ್1’ ಉಡಾವಣೆ ಜನವರಿ 12ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಡೆಯಲಿದ್ದು, ಇದಕ್ಕಾಗಿ ಶನಿವಾರದಿಂದ 25 ಗಂಟೆಗಳ ‘ಕೌಂಟ್‌ಡೌನ್’ ಆರಂಭವಾಗಿದೆ ಎಂದು ನಾರಾಯಣನ್ ಹೇಳಿದರು.

ಉಪಗ್ರಹ ಉಡಾವಣಾ ನೌಕೆಯ ಸಣ್ಣ ಪ್ರತಿಕೃತಿಯೊಂದಿಗೆ ಬಂದಿದ್ದ ಇಸ್ರೊ ತಂಡವು ಅದನ್ನು ದೇವರ ಸನ್ನಿಧಿಯಲ್ಲಿ ಇರಿಸಿ ಪ್ರಾರ್ಥನೆ ಸಲ್ಲಿಸಿತು.

ಇದು ಪಿಎಸ್‌ಎಲ್‌ವಿಯ 64ನೇ ಉಡಾವಣೆಯಾಗಿದೆ. ‘ಅನ್ವೇಷಾ’ ಹೆಸರಿನ ಈ ಉಪಗ್ರಹವನ್ನು ಸನ್– ಸಿಂಕ್ರೊನಸ್ ಕಕ್ಷೆಗೆ (ಎಸ್‌ಎಸ್‌ಒ) ಸೇರಿಸುವ ಗುರಿಯನ್ನು ಇಸ್ರೊ ಹೊಂದಿದೆ.

ಈ ಉಪಗ್ರಹದಲ್ಲಿರುವ ಪೇಲೋಡ್ ಅನ್ನು ಥಾಯ್ಲೆಂಡ್ ಮತ್ತು ಬ್ರಿಟನ್‌ನಲ್ಲಿ ನಿರ್ಮಿಸಲಾಗಿದೆ. ಉಡಾವಣೆಗೊಂಡ 17 ನಿಮಿಷಗಳಲ್ಲಿ ಉಪಗ್ರಹವು ಪೇಲೋಡ್ ಅನ್ನು ಉದ್ದೇಶಿತ ಕಕ್ಷೆಗೆ ನಿಯೋಜಿಸಲಿದೆ.

ಇದು, ಈ ವರ್ಷದ ಇಸ್ರೊದ ಮೊದಲ ಉಪಗ್ರಹ ಉಡಾವಣೆ ಆಗಿದೆ. ‘ಇಒಎಸ್–ಎನ್1‘ ಉಡಾವಣೆಯೊಂದಿಗೆ ಭಾರತೀಯ ನೆಲದಿಂದ ಉಡಾವಣೆ ಮಾಡಲಾದ ವಿದೇಶಿ ಉಪಗ್ರಹಗಳ ಸಂಖ್ಯೆ 442ಕ್ಕೆ ಏರಿಕೆಯಾಗಲಿದೆ.

3,000 ಯುವ ಜನರೊಂದಿಗೆ ಮೋದಿ ಸಂವಾದ

ನವದೆಹಲಿ (ಪಿಟಿಐ): ‘ವಿಕಸಿತ ಭಾರತ ಯುವ ನಾಯಕರ ಸಂವಾದ’ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಯುವ ಜನರೊಂದಿಗೆ ಸೋಮವಾರ ಸಂವಾದ ನಡೆಸಲಿದ್ದಾರೆ.



ನರೇಂದ್ರ ಮೋದಿ

ಸ್ವಾಮಿ ವಿವೇಕಾನಂದ ಅವರ ಜನ್ಮ ದಿನೋತ್ಸವದ ಸ್ಮರಣಾರ್ಥವಾಗಿ ನಡೆಯುವ ‘ರಾಷ್ಟ್ರೀಯ ಯುವ ದಿನಾಚರಣೆ’ಯಂದೇ ದೆಹಲಿಯ ಭಾರತ ಮಂಟಪದಲ್ಲಿ ‘ವಿಕಸಿತ ಭಾರತ ಯುವ ನಾಯಕರ ಸಂವಾದ’ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸಮಾರೋಪದಲ್ಲಿ ಪ್ರಧಾನಿ ಭಾಗವಹಿಸಲಿದ್ದಾರೆ ಎಂದು ಪ್ರಧಾನಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ಈ ಕಾರ್ಯಕ್ರಮಕ್ಕೆ ಆಯ್ಕೆಯಾದವರು ರಾಷ್ಟ್ರೀಯ ಪ್ರಾಮುಖ್ಯತೆಯ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸಿದ 10 ವಿಷಯಗಳ ಕುರಿತು ಯುವ ಜನರ ದೃಷ್ಟಿಕೋನವನ್ನು ಪ್ರಧಾನಿ ಮೋದಿ ಅವರ ಮುಂದೆ ಪ್ರಸ್ತುತಪಡಿಸಲಿದ್ದಾರೆ.

ಇದೇ ವೇಳೆ ಪ್ರಧಾನಿ ಮೋದಿ ಅವರು, ಭಾರತದ ಅಭಿವೃದ್ಧಿ ಆದ್ಯತೆಗಳು ಮತ್ತು ದೀರ್ಘಕಾಲೀನ ರಾಷ್ಟ್ರ ನಿರ್ಮಾಣದ ಗುರಿಗಳ ಕುರಿತು ಆಯ್ದ ಪ್ರಬಂಧಗಳನ್ನು ಒಳಗೊಂಡ ‘ವಿಕಸಿತ ಭಾರತ ಯುವ ನಾಯಕರ ಸಂವಾದ 2026’ರ ಸಂಕಲನವನ್ನು ಬಿಡುಗಡೆ ಮಾಡಲಿದ್ದಾರೆ.

ಜನವರಿ 9ರಿಂದ 12ರವರೆಗೆ ನಡೆಯುತ್ತಿರುವ ಈ ಸಂವಾದದಲ್ಲಿ ದೇಶದಾದ್ಯಂತ ವಿವಿಧ ಹಂತಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಯುವಜನತೆ ಭಾಗವಹಿಸಲಿದ್ದಾರೆ.

‘ಸುಪ್ರೀಂ’ ಅಂಗಳ ತಲುಪಿದ ಜಟಾಪಟಿ

ಎರಡನೇ ಮುಖಪುಟದಿಂದ...

ಕಲ್ಲಿದ್ದಲು ಕಳ್ಳತನ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಕೋಲ್ಕತ್ತದ ‘ಐ-ಪ್ಯಾಕ್’ ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ನಿವಾಸದ ಮೇಲೆ ಗುರುವಾರ ದಾಳಿ ನಡೆಸಿದ್ದರು.

ಶೋಧ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲೇ ಸ್ಥಳಕ್ಕೆ ಬಂದಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘ಟಿಎಂಸಿಗೆ ಸಂಬಂಧಿಸಿದ ದಾಖಲೆಗಳು’ ಎಂದು ಕೇಳಿ ಕೆಲವು ಕಡತಗಳನ್ನು ಕೊಂಡೊಯ್ದಿದ್ದರು.

ಮಮತಾ ಮತ್ತು ಕೋಲ್ಕತ್ತದ ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆ ನಡೆಸುವಂತೆ ಕೋರಿ ಇ.ಡಿ ಶುಕ್ರವಾರ, ಕಲ್ಕತ್ತಾ ಹೈಕೋರ್ಟ್ ಮೊರೆ ಹೋಗಿತ್ತು. ಇ.ಡಿ ಶೋಧದ ಕಾನೂನುಬದ್ಧತೆಯನ್ನು ಪ್ರಶ್ನಿಸಿ ಬಂಗಾಳ ಸರ್ಕಾರ ಕೂಡಾ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಕಲ್ಕತ್ತಾ ಹೈಕೋರ್ಟ್ ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಎರಡೂ ಕಡೆಯವರ ಅರ್ಜಿಗಳನ್ನು ಜನವರಿ 14ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದಾರೆ

> ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಸಮೀಪಿಸುತ್ತಿದ್ದು, ಟಿಎಂಸಿ ನಾಯಕರಿಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಇ.ಡಿ ದಾಳಿ ನಡೆದಿದೆ
>
> **ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

ಪೊಲೀಸ್ ತನಿಖೆ ಆರಂಭ

ಎರಡನೇ ಮುಖಪುಟದಿಂದ...

‘ಶೇಕ್ಸ್‌ಪಿಯರ್ ಸಾರಣಿ ಪೊಲೀಸ್ ಠಾಣೆಯ ಅಧಿಕಾರಿಗಳು ಶನಿವಾರ ಬೆಳಿಗ್ಗೆ ಜೈನ್ ಅವರ ನಿವಾಸಕ್ಕೆ ಭೇಟಿ ನೀಡಿ ಸಿ.ಸಿ.ಟಿ.ವಿ ದೃಶ್ಯಾವಳಿ ಮತ್ತು ಡಿವಿಆರ್ ರೆಕಾರ್ಡಿಂಗ್‌ಗಳನ್ನು ಸಂಗ್ರಹಿಸಿದ್ದಾರೆ. ಮನೆ ಕೆಲಸದ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಯ ಹೇಳಿಕೆಗಳನ್ನೂ ದಾಖಲಿಸಲಾಗಿದೆ. ಗುರುತು ಪತ್ತೆ ಕಾರ್ಯ ಪೂರ್ಣಗೊಂಡ ನಂತರ, ಆರೋಪಿಗಳಿಗೆ ನೋಟಿಸ್ ನೀಡಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ. ಮಮತಾ ಅವರು ಇ.ಡಿಯ ಅಪರಿಚಿತ ಅಧಿಕಾರಿಗಳು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಿರುದ್ಧ ಕೋಲ್ಕತ್ತದ ಶೇಕ್ಸ್‌ಪಿಯರ್ ಸಾರಣಿ ಪೊಲೀಸ್ ಠಾಣೆ ಹಾಗೂ ಬಿಧಾನ್‌ನಗರದ ಎಲೆಕ್ಟ್ರಾನಿಕ್ ಕಾಂಪ್ಲೆಕ್ಸ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಿದ್ದರು.

ಟಿಎಂಸಿ ಪ್ರಚಾರ ಗೀತೆ ಬಿಡುಗಡೆ

ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ಮುಂಬರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಾಗಿ ರಚಿಸಿರುವ ಪ್ರಚಾರ ಗೀತೆಯನ್ನು ಶನಿವಾರ ಬಿಡುಗಡೆ ಮಾಡಿದೆ. ಪಕ್ಷವು ಸತತ ನಾಲ್ಕನೇ ಅವಧಿಗೆ ಅಧಿಕಾರಕ್ಕೆ ಬರಲಿದೆ ಎಂದು ಪ್ರತಿಪಾದಿಸಿದೆ.

ಒಂಟೆ ಉತ್ಸವ...

ಪಿಟಿಐ ಚಿತ್ರ:

ರಾಜಸ್ಥಾನದ ಬೀಕಾನೇರ್‌ನಲ್ಲಿ ನಡೆಯುತ್ತಿರುವ ‘ಅಂತರರಾಷ್ಟ್ರೀಯ ಒಂಟೆ ಉತ್ಸವ’ದಲ್ಲಿ ಅಲಂಕೃತಗೊಂಡಿದ್ದ ಒಂಟೆ ಶನಿವಾರ ಗಮನ ಸೆಳೆಯಿತು

‘ಹಿಜಾಬ್ ಧರಿಸಿದವರು ಪ್ರಧಾನಿಯಾಗ್ತಾರೆ’

ಮುಂಬೈ(ಪಿಟಿಐ): ‘ಭಾರತದ ಸಂವಿಧಾನವು ಎಲ್ಲ ಸಮುದಾಯಗಳ ಜನರಿಗೆ ಸಮಾನ ಸ್ಥಾನಮಾನವನ್ನು ನೀಡಿದ್ದು, ಮುಂದೊಂದು ದಿನ ಹಿಜಾಬ್ ಧರಿಸಿದ ಮಹಿಳೆ ಈ ದೇಶದ ಪ್ರಧಾನಮಂತ್ರಿ ಆಗುತ್ತಾರೆ’ ಎಂದು ಎಐಎಂಐಎಂ ಮುಖ್ಯಸ್ಥ ಅಸಾಸುದ್ದೀನ್ ಒವೈಸಿ ಪ್ರತಿಪಾದಿಸಿದರು.

‘ಇದನ್ನು ನೋಡಲು ನಾನು ಜೀವಂತವಾಗಿ ಇರದಿರಬಹುದು. ಆದರೆ ಭವಿಷ್ಯದಲ್ಲಿ ಹಿಜಾಬ್ ಧರಿಸಿದ ಮಹಿಳೆ ಭಾರತದ ಪ್ರಧಾನಿಯಾಗುವ ದಿನ ಬಂದೇ ಬರುತ್ತದೆ’ ಎಂದು ಅವರು ಹೇಳಿದರು.

ಸೋಲಾಪುರದಲ್ಲಿ ಮಾತನಾಡಿದ ಅವರು, ‘ಭಾರತದ ಸಂವಿಧಾನವು ಎಲ್ಲಾ ಸಮುದಾಯಗಳಿಗೆ ಸಮಾನ ಸ್ಥಾನಮಾನ ನೀಡಿದೆ. ಆದರೆ, ಪಾಕಿಸ್ತಾನದ ಸಂವಿಧಾನ, ಆ ದೇಶದ ಉನ್ನತ ಸಾಂವಿಧಾನಿಕ ಹುದ್ದೆಗಳನ್ನು ಒಂದೇ ಸಮುದಾಯದ ಸದಸ್ಯರಿಗಷ್ಟೇ ನಿರ್ಬಂಧಿಸಿದೆ’ ಎಂದು ಹೇಳಿದರು.

ಗುಜರಾತ್: ಬಾಲಕಿಯ ಮೇಲೆ ಅತ್ಯಾಚಾರ

ನವಸಾರಿ (ಪಿಟಿಐ): ಗುಜರಾತಿನ ನವಸಾರಿ ಜಿಲ್ಲೆಯಲ್ಲಿ 15 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪದ ಮೇಲೆ ಎಂಟು ಜನರನ್ನು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

‘ ವಾಂಸದಾ ನಗರದ ಸಮೀಪದ ಗ್ರಾಮವೊಂದರಲ್ಲಿ ಘಟನೆ ನಡೆದಿದೆ. ಬಾಲಕಿ ರಾತ್ರಿ 10.30ಕ್ಕೆ ಶೌಚಕ್ಕೆಂದು ಮನೆಯ ಹೊರಗೆ ಹೋಗಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದಿದ್ದ ಪರಿಚಿತರಾಗಿದ್ದ ಮೂವರು ಆಕೆಯನ್ನು ಅಪಹರಿಸಿದ್ದಾರೆ’ ಎಂದು ಅಧಿಕಾರಿ ಹೇಳಿದ್ದಾರೆ.

‘ದುಷ್ಕರ್ಮಿಗಳು ಸಂತ್ರಸ್ತೆಯನ್ನು 2.5 ಕಿ.ಮೀ. ಕರೆದೊಯ್ದಿದ್ದರು. ಅಲ್ಲಿ ಅವರಿಗಾಗಿ ಐವರು ಕಾಯುತ್ತಿದ್ದರು. ನಂತರ ಎಂಟು ಮಂದಿ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಆರೋಪಿಗಳಲ್ಲಿ ಏಳು ಮಂದಿ 20–21 ವರ್ಷದವರಾಗಿದ್ದು, ಒಬ್ಬ ಕಾನೂನು ಎದುರು ಸಂಘರ್ಷಕ್ಕೊಳಗಾದ ಅಪ್ರಾಪ್ತ’ ಎಂದು ಅಧಿಕಾರಿ ತಿಳಿಸಿದ್ದಾರೆ.

ಛತ್ತೀಸಗಢ: ಸಾಮೂಹಿಕ ಅತ್ಯಾಚಾರ

ಕೊರ್ಬಾ (ಛತ್ತೀಸಗಢ): ಛತ್ತಿಸಗಢದ ಕೊರ್ಬಾ ಜಿಲ್ಲೆಯಲ್ಲಿ ಪೊಲೀಸರ ತುರ್ತು ಸೇವಾ ವಾಹನದ ಚಾಲಕ ಸೇರಿದಂತೆ ಐವರು ದುಷ್ಕರ್ಮಿಗಳು 19 ವರ್ಷದ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಶನಿವಾರ ಹೇಳಿದ್ದಾರೆ.

ಬಂಕಿಮೊಂಗ್ರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜನವರಿ 8ರ ರಾತ್ರಿ ಘಟನೆ ನಡೆದಿದೆ. ‘ಡಯಲ್ 112’ ಪೊಲೀಸ್ ಸಹಾಯವಾಣಿ ವಾಹನದ ಚಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳಲ್ಲಿ ಒಬ್ಬ ವ್ಯಕ್ತಿ ಸಂತ್ರಸ್ತೆಗೆ ಪರಿಚಿತನಾಗಿದ್ದು, ಆತ ಯುವತಿಯನ್ನು ನಿರ್ಜನ ಮನೆಯೊಂದಕ್ಕೆ ಕರೆದೊಯ್ದಿದ್ದನು. ಅಲ್ಲಿ ಯುವತಿಯ ಮೇಲೆ ಅತ್ಯಾಚಾರ ಎಸಗಲಾಗಿತ್ತು. ಘಟನೆಯ ನಂತರ ಆರೋಪಿಗಳು ಯುವತಿಯನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿಟ್ಟು ಪರಾರಿಯಾಗಿದ್ದರು. ಮನೆ ತಲುಪಿದ್ದ ಯುವತಿ ಘಟನೆಯನ್ನು ಕುಟುಂಬದವರಿಗೆ ತಿಳಿಸಿದ್ದು, ಅವರು ಸಂತ್ರಸ್ತೆಯನ್ನು ಆಸ್ಪತ್ರೆಗೆ ದಾಖಲಿಸಿ, ನಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪಹಲ್ಗಾಮ್ ದಾಳಿ ಬಳಿಕ ಎಚ್ಚೆತ್ತ ರಾಜ್ಯ ಸರ್ಕಾರ; ಕಾಶ್ಮೀರ ಕಣಿವೆಯ ಭದ್ರವಾಹದಲ್ಲಿ ಗಸ್ತು ಹೆಚ್ಚಿಸಿದ ಸೇನಾಪಡೆ

ಪ್ರವಾಸಿಗರ ಸಂಖ್ಯೆ ಏರಿಕೆ; ಭದ್ರತೆ ಹೆಚ್ಚಳ

ಭದ್ರವಾಹ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಹಿಮಚ್ಛಾದಿತ ಪ್ರವಾಸಿ ತಾಣಗಳಲ್ಲಿ ಕಳೆದ ಹದಿನೈದು ದಿನಗಳಲ್ಲಿ ಪ್ರವಾಸಿಗರ ಸಂಖ್ಯೆಯು ತೀವ್ರ ಏರುಗತಿಯಲ್ಲಿ ಸಾಗಿದೆ. ಇದರ ಬೆನ್ನಲ್ಲೇ, ಭದ್ರತೆಯನ್ನು ಹೆಚ್ಚಿಸಲು ಸೇನಾ ಪಡೆ ಕ್ರಮ ಕೈಗೊಂಡಿದೆ.

‘ಎತ್ತರದ ಹುಲ್ಲುಗಾವಲು ಪ್ರದೇಶಗಳಾದ ಛತ್ತರ್‌ಗಲ್ಲಾ (11 ಸಾವಿರ ಅಡಿ), ಪಂಜ್ ನಲ್ಲಾ (10,200 ಅಡಿ) ಹಾಗೂ ಗುಲ್ಡಾಂಡಾ (9,555 ಅಡಿ) ಸೇರಿದಂತೆ ಭದ್ರವಾಹ– ಪಠಾಣ್ ಕೋಟ್ ಹೆದ್ದಾರಿಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಲಾಗಿದ್ದು, ಪ್ರವಾಸಿಗರಲ್ಲಿ ವಿಶ್ವಾಸ ಮೂಡಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಠಿಣ ಹವಾಮಾನದ ಹೊರತಾಗಿಯೂ, ಜಮ್ಮು ಮತ್ತು ಕಾಶ್ಮೀರ ಪೊಲೀಸರ ವಿಶೇಷ ಕಾರ್ಯಾಚರಣಾ ತಂಡ (ಎಸ್‌ಒಜಿ), ಅರೆ ಸೇನಾ ಪಡೆಗಳ ಯೋಧರು ಹೆದ್ದಾರಿ ಹಾಗೂ ಪ್ರವಾಸಿ ತಾಣಗಳಲ್ಲಿ ಪಹರೆ ಕಾಯುತ್ತಿದ್ದಾರೆ. ಸ್ಥಳೀಯ ಆತಿಥ್ಯ ತಂಡಗಳು ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿವೆ.

‘ಭದ್ರವಾಹ ಅತ್ಯಂತ ಸುಂದರವಾದ ಪ್ರವಾಸಿ ಸ್ಥಳವಾಗಿದ್ದು, ಗರಿಷ್ಠ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಸೆಳೆಯುತ್ತಿದೆ. ನಿರಂತರ ಹಿಮಚ್ಛಾದಿತ ಹಾಗೂ ಕಡಿದಾದ ಪರ್ವತಗಳಿರುವ ಕಾರಣ, ಈ ಪ್ರದೇಶಗಳಲ್ಲಿ ಭದ್ರತೆ ಒದಗಿಸುವುದು ಕೂಡ ಸವಾಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿನೋದ್ ಶರ್ಮಾ ತಿಳಿಸಿದ್ದಾರೆ.

‘ ಹಿಮಪಾತದ ಸಂದರ್ಭದಲ್ಲಿ ಅತ್ಯಂತ ಕಡಿದಾದ ಪರ್ವತಗಳಲ್ಲಿ ಮಾತ್ರ ಭದ್ರತೆ ಒದಗಿಸಲಾಗುತ್ತಿತ್ತು. ಈ ಬಾರಿ ಪ್ರವಾಸಿತಾಣಗಳಲ್ಲಿಯೂ ಪೊಲೀಸರನ್ನು ನಿಯೋಜಿಸಿರುವುದು ಪ್ರವಾಸಿಗರಲ್ಲಿ ಹೆಚ್ಚಿನ ವಿಶ್ವಾಸ ಮೂಡಿಸಿದೆ’ ಎಂದು ಸ್ಥಳೀಯ ನಿವಾಸಿ ರಶೀದ್ ಚೌಧರಿ ತಿಳಿಸಿದ್ದಾರೆ.

ಕಳೆದ ವರ್ಷ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನದ ಮೂವರು ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿಯಲ್ಲಿ 25 ಪ್ರವಾಸಿಗರು ಮೃತಪಟ್ಟಿದ್ದರು.

> ಇಲ್ಲಿಗೆ ಬರುವ ಮುನ್ನ ಸುರಕ್ಷತೆಯ ಬಗ್ಗೆ ಆತಂಕಗೊಂಡಿದ್ದೆವು. ಪೊಲೀಸರು ಪಹರೆ ಕಾಯುತ್ತಿರುವ ಕಾರಣ, ನಾವು ಪೂರ್ಣವಾಗಿ ಆನಂದಿಸಲು ಸಾಧ್ಯವಾಯಿತು
>
> **ವಿಶಾಲ್ ಶರ್ಮಾ**, ಮಹಾರಾಷ್ಟ್ರದ ಪ್ರವಾಸಿಗ

> ತಪಾಸಣಾ ಕೇಂದ್ರದಿಂದ ಹಿಡಿದು, ಎಲ್ಲ ಕಡೆಗಳಲ್ಲಿ ಪೊಲೀಸರಿಂದ ಅಗತ್ಯ ನೆರವು ಸಿಕ್ಕಿದೆ. ಸ್ಥಳೀಯರ ಸ್ನೇಹಪರ ನಿಲುವಿನಿಂದ ಪ್ರವಾಸದಲ್ಲಿ ಖುಷಿಯಾಗಿರಲು ಸಾಧ್ಯವಾಯಿತು
>
> **ಸತೀಶ್ ಸಿಂಗ್ ಜಾಧವ್**, ಗುಜರಾತ್ ಪ್ರವಾಸಿಗ

ಶೋಪಿಯಾನ್: ಮೈನಸ್ 8.2 ಡಿಗ್ರಿ ತಾಪಮಾನ

ಭದ್ರವಾಹದ ಪ್ರವಾಸಿತಾಣಗಳಲ್ಲಿ ಪೊಲೀಸರ ವಿಶೇಷ ಕಾರ್ಯಾಚರಣಾ ತಂಡದ ಸದಸ್ಯರು ಶನಿವಾರ ಗಸ್ತು ತಿರುಗಿದರು–ಪಿಟಿಐ ಚಿತ್ರ

ಶ್ರೀನಗರ (ಪಿಟಿಐ): ಕಾಶ್ಮೀರ ಕಣಿವೆಯಲ್ಲಿ ತಾಪಮಾನ ತೀವ್ರವಾಗಿ ಇಳಿಕೆಯಾಗಿದ್ದು, ಶೋಪಿಯಾನ್‌ನಲ್ಲಿ ಶನಿವಾರ ಮೈನಸ್ 8.2 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ದಾಲ್ ಸರೋವರ ಹಾಗೂ ಇತರೆ ಜಲಮೂಲಗಳಲ್ಲಿ ನೀರು ಹೆಪ್ಪುಗಟ್ಟಿದೆ.

‘ಶ್ರೀನಗರದಲ್ಲಿ ಶುಕ್ರವಾರ ರಾತ್ರಿ ಮೈನಸ್ 5.7 ಡಿಗ್ರಿ ತಾಪಮಾನ ದಾಖಲಾಗಿದ್ದು, ಗುರುವಾರ ರಾತ್ರಿ ಮೈನಸ್ 6 ಡಿಗ್ರಿ ದಾಖಲಾಗಿತ್ತು. ಈ ಋತುವಿನಲ್ಲಿ ಕಣಿವೆಯಲ್ಲಿ ದಾಖಲಾದ ಅತ್ಯಂತ ಕನಿಷ್ಠ ತಾಪಮಾನ ಇದು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ಋತುವಿನಲ್ಲಿ ಕಣಿವೆಯಲ್ಲಿ ಇದುವರೆಗೂ ಯಾವುದೇ ಹಿಮಪಾತವಾಗಿಲ್ಲ. ಜನವರಿ 21ರವರೆಗೂ ಇಡೀ ಕಣಿವೆಯಲ್ಲಿ ಇದೇ ತಾಪಮಾನ ಮುಂದುವರಿಯಲಿದೆ’ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇನ್ಫೋಸಿಸ್ ಪ್ರಶಸ್ತಿ ಪ್ರದಾನ

ಆರು ವಿಜ್ಞಾನಿ ಮತ್ತು ಸಂಶೋಧಕರಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲ–ಅನ್ವಯಿಕ ವಿಜ್ಞಾನ, ಮಾನವಿಕ ಶಾಸ್ತ್ರಗಳಲ್ಲಿ ಅಗಣಿತ ಕೆಲಸ ಮಾಡಿದ ಆರು ವಿಜ್ಞಾನಿ ಮತ್ತು ಸಂಶೋಧಕರಿಗೆ ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನದ ವತಿಯಿಂದ 2025ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಪ್ರಶಸ್ತಿಯು ಫಲಕ, ಚಿನ್ನದ ಪದಕ ಮತ್ತು 1 ಲಕ್ಷ ಅಮೆರಿಕನ್ ಡಾಲರ್ (ಸುಮಾರು ₹90 ಲಕ್ಷ) ಒಳಗೊಂಡಿದೆ.

ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ನೊಬೆಲ್ ಪುರಸ್ಕೃತ ಶರೀರಶಾಸ್ತ್ರಜ್ಞ ರ‍್ಯಾಂಡಿ ಸ್ಕೆಕ್‌ಮನ್ ಉದ್ಘಾಟಿಸಿದರು.

‘ಮೂಲ ಮತ್ತು ಅನ್ವಯಿಕ ವಿಜ್ಞಾನಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸುವುದು ಈ ಹೊತ್ತಿನ ತುರ್ತು. ಮಾನವಿಕ ಶಾಸ್ತ್ರಗಳಲ್ಲೂ ಮಹತ್ವದ ಸಂಶೋಧನೆಗಳಾಗಿವೆ. ಮಾನವನ ದೈನಂದಿನ ಬದುಕನ್ನು ಬದಲಿಸಬಲ್ಲ ಸಂಶೋಧನೆಗಳು ಇವು. ಇವನ್ನು ಸಾಧಿಸಿದವರನ್ನು ಗುರುತಿಸಿದರೆ, ಇಂತಹ ಸಂಶೋಧನೆಗಳನ್ನು ಉತ್ತೇಜಿಸಿದಂತಾಗುತ್ತದೆ’ ಎಂದು ರ‍್ಯಾಂಡಿ ಸ್ಕೆಕ್‌ಮನ್ ಪ್ರತಿಪಾದಿಸಿದರು.

ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷ ಕೆ.ದಿನೇಶ್, ‘ಒಂದು ಸಮಾಜವು ಮುನ್ನಡೆಯುವಲ್ಲಿ, ಅಲ್ಲಿ ನಡೆಯುವ ಸಂಶೋಧನೆಗಳು ಮಹತ್ವದ ಪಾತ್ರ ವಹಿಸುತ್ತವೆ. ಅಂತಹ ಸಾಧನೆಗಳಲ್ಲಿ ತೊಡಗಿಕೊಂಡಿರುವವರನ್ನು ಇನ್ಫೋಸಿಸ್ ಸದಾ ಗುರುತಿಸಿ, ಗೌರವಿಸಲಿದೆ’ ಎಂದರು.

ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನವು ಆಯೋಜಿಸಿದ್ದ ಇನ್ಫೋಸಿಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ (ಎಡದಿಂದ ಬಲಕ್ಕೆ) ಆ್ಯಂಡ್ರಿವ್ ಒಲೆಟ್, ನಿಖಿಲ್ ಅಗರ್‌ವಾಲ್, ಸುಶಾಂತ್ ಸಹದೇವ, ರ‍್ಯಾಂಡಿ ಸ್ಕೆಕ್‌ಮನ್, ಅಂಜನಾ ಬದರಿನಾರಾಯಣನ್, ಸವ್ಯಸಾಚಿ ಮುಖರ್ಜಿ, ಕಾರ್ತಿಶ್ ಮಂಥಿರಾಮ್. (ಹಿಂದಿನ ಸಾಲು) ಸಲಿಲ್ ಪಾರೇಖ್, ಶಿಬುಲಾಲ್ ಎಸ್‌.ಡಿ., ನಂದನ್ ನಿಲೇಕಣಿ, ನಾರಾಯಣಮೂರ್ತಿ, ಕೆ.ದಿನೇಶ್, ಕ್ರಿಸ್ ಗೋಪಾಲಕೃಷ್ಣ ಮತ್ತು ವಿ. ಮೋಹನ್‌ದಾಸ್ ಪೈ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪುರಸ್ಕೃತರು

ಅರ್ಥಶಾಸ್ತ್ರ ವಿಭಾಗದಲ್ಲಿ ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಪ್ರಾಧ್ಯಾಪಕ ನಿಖಿಲ್ ಅಗರ್‌ವಾಲ್, ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಟೊರಾಂಟೊ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಸುಶಾಂತ್ ಸಹದೇವ, ಸಮಾಜ ವಿಜ್ಞಾನ ವಿಭಾಗದಲ್ಲಿ ಷಿಕಾಗೊ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆ್ಯಂಡ್ರಿವ್ ಒಲೆಟ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೀವವಿಜ್ಞಾನ ವಿಭಾಗದಲ್ಲಿ ಬೆಂಗಳೂರಿನ ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಅಂಜನಾ ಬದರಿ ನಾರಾಯಣನ್, ಗಣಿತೀಯ ವಿಜ್ಞಾನ ವಿಭಾಗದಲ್ಲಿ ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ ಸಹಾಯಕ ಪ್ರಾಧ್ಯಾಪಕ ಸವ್ಯಸಾಚಿ ಮುಖರ್ಜಿ ಮತ್ತು ಭೌತ ವಿಜ್ಞಾನ ವಿಭಾಗದಲ್ಲಿ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಧ್ಯಾಪಕ ಕಾರ್ತಿಶ್ ಮಂಥಿರಾಮ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿವಸ್ತ್ರ ಆರೋಪ: ಸಿಐಡಿ ತನಿಖೆ ಶುರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಹಿಳೆ ವಿವಸ್ತ್ರ ಆರೋಪದ ಪ್ರಕರಣ ಮತ್ತು ಕೇಶ್ವಾಪುರ ಠಾಣೆಯಲ್ಲಿ ಈ ಬಗ್ಗೆ ದಾಖಲಾಗಿದ್ದ ದೌರ್ಜನ್ಯ ಹಾಗೂ ಇತರೆ ಪ್ರಕರಣಕ್ಕೆ ಸಂಬಂಧಿಸಿ ಶನಿವಾರ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದರು.

ಬೆಂಗಳೂರಿನ ಸಿಐಡಿ ವಿಶೇಷ ವಿಚಾರಣಾ ವಿಭಾಗದ (ಎಸ್‌ಐಡಿ) ಎಸ್‌ಪಿ ಶಾಲೂ ನೇತೃತ್ವದ ಎಂಟು ಮಂದಿ ಅಧಿಕಾರಿಗಳು ಎರಡು ತಂಡಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ತನಿಖಾಧಿಕಾರಿ ಎಸಿಪಿ ಶಿವರಾಜ ಕಟಕಬಾವಿ ಅವರಿಂದ ಪ್ರಕರಣ ಹಸ್ತಾಂತರಿಸಿಕೊಂಡು, ಈವರೆಗೆ ನಡೆದ ತನಿಖೆಯ ಮಾಹಿತಿ ಸಂಗ್ರಹಿಸಿದರು.

ಒಂದು ತಂಡ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರಿಂದ ಮಾಹಿತಿ ಪಡೆಯಿತು. ಮತ್ತೊಂದು ತಂಡ ಕೇಶ್ವಾಪುರ ಪೊಲೀಸ್ ಠಾಣೆಗೆ ಭೇಟಿ ನೀಡಿ ಅಲ್ಲಿಯ ಸಿಬ್ಬಂದಿಯಿಂದ ಪ್ರಕರಣದ ವಿವರ ಪಡೆಯಿತು.

ಪ್ರಕರಣದ ನಂತರ ಕಮಿಷನರ್ ಕಚೇರಿಗೆ ವರ್ಗಾವಣೆಯಾಗಿದ್ದ ಇನ್‌ಸ್ಪೆಕ್ಟರ್ ಕೆ.ಎಸ್.ಹಟ್ಟಿ ಅವರಿಂದ ಪ್ರಕರಣದ ಮಾಹಿತಿ ಪಡೆದು, ಹೇಳಿಕೆ ದಾಖಲಿಸಿಕೊಂಡಿತು.

ವಿವಸ್ತ್ರ ಆರೋಪ ಪ್ರಕರಣ ದಾಖಲಾಗಿಲ್ಲ: ಗಲಾಟೆಗೆ ಸಂಬಂಧಿಸಿ ಆರು ಪ್ರಕರಣಗಳು ದಾಖಲಾಗಿವೆ. ಮಹಿಳೆ ವಿವಸ್ತ್ರಗೊಂಡ ಆರೋಪಕ್ಕೆ ಸಂಬಂಧಿಸಿ ಪ್ರಕರಣ ದಾಖಲಾಗಿಲ್ಲ. ಅವರನ್ನು ವಶಕ್ಕೆ ಪಡೆಯಲು ತೆರಳಿದ್ದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ, ವಿವಸ್ತ್ರ ವಿಡಿಯೊ ಪ್ರಸಾರ ಕುರಿತು ಎರಡು ಪ್ರತ್ಯೇಕ ಪ್ರಕರಣಗಳನ್ನು ಪೊಲೀಸರು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದಾರೆ. ಹಲ್ಲೆ, ಜೀವ ಬೆದರಿಕೆ, ಕೊಲೆಯತ್ನ, ದೌರ್ಜನ್ಯ ಅಡಿಯಲ್ಲಿ ಪಾಲಿಕೆ ಸದಸ್ಯೆ ಸುವರ್ಣಾ ಕಲಕುಂಟ್ಲ ಹಾಗೂ ಸುಜಾತಾ ಹಂಡಿ ಅವರ ಕುಟುಂಬದಿಂದ ಉಳಿದ ನಾಲ್ಕು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇಯರ್, ಉಪಮೇಯರ್ ವಿರುದ್ಧ ಆಕ್ರೋಶ

‘ಮಹಿಳೆ ವಿವಸ್ತ್ರ ಪ್ರಕರಣ ಕುರಿತು ಬಿಜೆಪಿಯಿಂದ ಕೇಶ್ವಾಪುರ ಠಾಣೆ ಎದುರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಅವರು ಸರ್ಕಾರಿ ವಾಹನದಲ್ಲಿ ತೆರಳಿ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಅವರ ಸದಸ್ಯತ್ವ ರದ್ದುಪಡಿಸಬೇಕು’ ಎಂದು ಹುಬ್ಬಳ್ಳಿ ಧ್ವನಿ ಸಾಮಾಜಿಕ ಚಿಂತಕರ ಬಳಗ ಆಗ್ರಹಿಸಿದೆ.

ಬಳಗದ ಅಧ್ಯಕ್ಷ ಸಂಜೀವ ದುಮ್ಮಕನಾಳ ಅವರು, ‘ಪಕ್ಷಾತೀತ ಹುದ್ದೆಯಲ್ಲಿರುವ ಮೇಯರ್, ಉಪಮೇಯರ್ ಅವರು ಪಕ್ಷದ ಅಡಿಯಲ್ಲಿ ನಡೆಯುವ ಪ್ರತಿಭಟನೆಗೆ ಸರ್ಕಾರಿ ವಾಹನದಲ್ಲಿ ತೆರಳಿದ್ದು ಸಂವಿಧಾನ ಬಾಹಿರವಾಗಿದೆ. ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳಬೇಕು‘ ಎಂದು ಒತ್ತಾಯಿಸಿದರು.

‘ಭಯ ಬಿಡಿ, ಪ್ರೀತಿ ಮಾಡಿ' ಆಂದೋಲನ

ಬೆಂಗಳೂರು: ‘ಭಯ ಬಿಡಿ, ಪ್ರೀತಿ ಮಾಡಿ’ ಎನ್ನುವ ಪದಗಳು 'ಗಾಯ'ಗೊಂಡ ನಮ್ಮ ಹೃದಯಗಳಿಗೆ ಮದ್ದು ಹಾಗೂ ಮಾನವೀಯ ಸಂಬಂಧಗಳಿಗೆ ದಿಕ್ಸೂಚಿಯೂ ಹೌದು’ ಎಂದು ಪ್ರಾಧ್ಯಾಪಕ ಪ್ರೊ.ಡೊಮಿನಿಕ್ ಡಿ. ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಒಂದೆಡೆ ಸಂಸ್ಥೆ ಬೈಯಪ್ಪನಹಳ್ಳಿ ಮೆಟ್ರೊ ಸಮೀಪ ಶನಿವಾರ ಆಯೋಜಿಸಿದ್ದ ಲಿಂಗತ್ವ-ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ‘ಭಯ ಬಿಡಿ-ಪ್ರೀತಿ ಮಾಡಿ’ ಎಂಬ ಆಂದೋಲನ ಉದ್ಘಾಟಿಸಿ ಮಾತನಾಡಿದ ಅವರು, ‘ಬದುಕಿನಲ್ಲಿ ಪ್ರೀತಿಯ ಗಾಳಿ ಬೀಸಿ, ಸಾಂತ್ವನದ ಕೈ ಚಾಚುವ, ನಮ್ಮೆಲ್ಲರ ಹೋರಾಟಗಳು ಬದುಕಿಗೆ ಖಂಡಿತವಾಗಿಯು ನಾಂದಿಯಾಗಲಿದೆ. ಆ ದಿಕ್ಕಿನತ್ತ ದಿಟ್ಟ ಹೆಜ್ಜೆಯಿಡೋಣ’ ಎಂದು ಆಶಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕಿ ಕೆ.ವಿದ್ಯಾಕುಮಾರಿ ಮಾತನಾಡಿದರು.

ಭಾರತದ ಕೊನೆಯ ಹಳ್ಳಿಗಳಲ್ಲಿ...
ಲಡಾಖಿನ ನುಬ್ರಾ ಕಣಿವೆಯಲ್ಲಿ ಚಲುಂಕಾ, ತ್ಯಾಕ್ಸಿ, ತುರ್ತುಕ್, ಥಾಂಗ್ ಹಳ್ಳಿಗಳ ಕುರಿತಾದ ಲೇಖನ...

11

ಬಂತು ನೋಡಿ ಶವ ದಹನ ಗಾಡಿ!

ಇದೀಗ ಅಂತಿಮ ಪಯಣದ ಪದ್ಧತಿಯಲ್ಲೂ ಕೆಲವು ಗಮನಾರ್ಹ ಬದಲಾವಣೆಗಳು ಆಗಿವೆ. ಇದಕ್ಕೆ ಕಾಲದ ಒತ್ತಡವೂ ಕಾರಣವಾಗಿದೆ. ಜೊತೆಗೆ ಸದಾ ಧಾವಂತದಲ್ಲಿರುವ ಜನರೂ ಹೊಸ ಪದ್ಧತಿಗಳಿಗೆ ತಮ್ಮನ್ನು ಒಗ್ಗಿಸಿಕೊಳ್ಳುತ್ತಿದ್ದಾರೆ. ಕೇರಳ ರಾಜ್ಯದ ಪಕ್ಕದಲ್ಲೇ ಇರುವ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಅಲ್ಲಿಂದ ಪ್ರಭಾವಿತ ಕೂಡ ಆಗಿವೆ. ಹೀಗಾಗಿ ಶವ ಸಂಸ್ಕಾರದಲ್ಲಿ ಆಗಿರುವ ಪಲ್ಲಟಗಳನ್ನು ಈ ಲೇಖನ ಅನಾವರಣಗೊಳಿಸುತ್ತದೆ.

• ಕೆ.ಎಸ್.ಗಿರೀಶ

ಮನೆ ಮುಂದೆ ಶವ ದಹನ

ಘಟನೆ–ಒಂದು

ಅದು ಕೊಡಗು ಜಿಲ್ಲೆಯ ಗಡಿಭಾಗ. ನೆರೆಯ ಕೇರಳಕ್ಕೆ ಕೂಗಳತೆ ದೂರದಲ್ಲಿರುವ ಕುಟ್ಟ ಗ್ರಾಮದ ಸಮೀಪ ವ್ಯಕ್ತಿಯೊಬ್ಬರು ಮೃತಪಟ್ಟರು. ಬಂಧು–ಬಳಗದವರು ಅಂತಿಮ ದರ್ಶನ ಪಡೆಯಲು ಸೇರಿದರು. ಅಷ್ಟರಲ್ಲೇ ಜೀಪ್ ಯಂತ್ರವನ್ನು ಎಳೆದುಕೊಂಡು ಬಂದು ಮನೆ ಮುಂದೆ ನಿಂತಿತು. ಸಿಬ್ಬಂದಿ ಅದರಿಂದ ಯಂತ್ರವನ್ನು ಬೇರ್ಪಡಿಸಿದರು. ಅದು ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವನ್ನು ಹೋಲುವಂತಿತ್ತು. ಎಲ್ಲರೂ ಅದನ್ನು ಕುತೂಹಲದಿಂದಲೇ ನೋಡುತ್ತಾ ನಿಂತರು. ಯಂತ್ರದ ಸಿಬ್ಬಂದಿ ಮೃತರ ಮನೆಯವರು ಅನುಮತಿ ಪಡೆದರು. ಮೃತದೇಹವನ್ನು ತಾವೇ ಎತ್ತಿಕೊಂಡು ಯಂತ್ರದಲ್ಲಿದ್ದ ಸ್ಟ್ರೆಚರ್‌ಗೆ ಮಲಗಿಸಿ, ಬಾಗಿಲನ್ನು ಭದ್ರವಾಗಿ ಮುಚ್ಚಿದರು. ಬಳಿಕ ಅಂತ್ಯಸಂಸ್ಕಾರದ ವಿಧ–ವಿಧಾನಗಳು ನೆರವೇರಿದವು. ಮೃತರ ಪುತ್ರನಿಂದ ಯಂತ್ರದ ಪುಟಾಣಿ ಕಿಂಡಿಯಿಂದ ಕೊಳ್ಳಿಯನ್ನು ಇರಿಸಲಾಯಿತು. ಎಲ್‌ಪಿಜಿ ಗ್ಯಾಸ್‌ಗಳಿಂದ ಈ ಯಂತ್ರ ದೊಡ್ಡ ಗ್ಯಾಸ್ ಸ್ಟೌನಂತೆ 'ಭರ್...' ಎಂದು ಸದ್ದು ಮಾಡುತ್ತಾ ಶವ ದಹನ ಕಾರ್ಯವನ್ನು ಶುರು ಮಾಡಿತು. ಕ್ರಮೇಣ ಚಿಮಣಿ ಮೂಲಕ ಹೊಗೆ ಹೊರಗೆ ಚಿಮ್ಮುತ್ತಿತ್ತು. ಮೂರು ಗ್ಯಾಸ್ ಸಿಲಿಂಡರ್‌ಗಳು ಖಾಲಿ ಆಗುವ ಹೊತ್ತಿಗೆ ಶವ ಬೂದಿ ಆಯಿತು. ಸಿಬ್ಬಂದಿ ಆ ಬೂದಿಯನ್ನು ಕುಡಿಕೆಯಲ್ಲಿ ಶೇಖರಿಸಿ ಕುಟುಂಬಸ್ಥರಿಗೆ ನೀಡಿದರು. ಬಳಿಕ ಸಿಬ್ಬಂದಿಯೇ ಯಂತ್ರ ಹಾಗೂ ಅದು ನಿಂತಿದ್ದ ಜಾಗವನ್ನು ಸ್ವಚ್ಛಗೊಳಿಸಿ ಮತ್ತೊಂದು ಊರಿಗೆ ಶವ ದಹನಕ್ಕಾಗಿ ತೆರಳಿದರು.

ಘಟನೆ–ಎರಡು

ಅದು ಮಳೆಗಾಲ. ಕೊಡಗಿನಲ್ಲಿ 'ಧೋ' ಎಂದು ಒಂದೇ ಸಮನೆ ಸುರಿದಿದ್ದ ಮಳೆ ಬಿಡುವು ನೀಡಿತ್ತು. ಶವ ದಹಿಸಲು ಸೌದೆಯನ್ನು ಎಷ್ಟು ಹುಡುಕಿದರೂ ಸಿಗಲಿಲ್ಲ. ಬೇರೆ ದಾರಿ ಕಾಣದೆ ಶವವನ್ನು ಹೂಳಲು ಮೃತರ ಮನೆಯವರು ನಿರ್ಧರಿಸಿದರು. ಸರಿ, ಬಂಧುಗಳು ಸ್ಮಶಾನಕ್ಕೆ ಹೋಗಿ ಗುಂಡಿ ತೆಗೆಯಲು ಮುಂದಾದರು. ಅಲ್ಲಿ ಕೆಲವು ದಿನಗಳ ಹಿಂದೆಯಷ್ಟೇ ಹೂತಿದ್ದ ಶವದ ಅಳಿದುಳಿದ ಭಾಗಗಳು ಸಿಕ್ಕವು. ಇದೇ ರೀತಿ ನಾಲ್ಕಾರು ಕಡೆ ಅಗೆದರು. ನಂತರ ಒಂದು ಕಡೆ ಸಿಕ್ಕ ಮೂಳೆಗಳನ್ನು ಅದೇ ಗುಂಡಿಯಲ್ಲಿ ಒಂದು ಕಡೆ ಇರಿಸಿದರು. ಶವವನ್ನು ತರಲು ತಿಳಿಸಿದರು. ಬಂಧುಗಳು ಶವವನ್ನು ಸ್ಮಶಾನಕ್ಕೆ ಹೊತ್ತು ತರುವಷ್ಟರಲ್ಲೇ ಗುಂಡಿಯಲ್ಲಿ ನೀರು ತುಂಬಿಕೊಂಡಿತ್ತು. ವಿಧಿ ಇಲ್ಲದೇ ನೀರು ತುಂಬಿದ್ದ ಅದೇ ಗುಂಡಿಯಲ್ಲಿ ಶವವನ್ನು ಮಣ್ಣು ಮಾಡಿದರು.

> **ಸಾವು ಕೇವಲ ನೋವಿನ ವಿಚಾರವಲ್ಲ, ಬಡವರಿಗೆ, ಮಧ್ಯಮ ವರ್ಗದವರಿಗೆ ಹೊರೆಯೂ ಆಗಿದೆ. ಹಾಗಾಗಿ, ಸಂಚಾರಿ ಶವ ದಹನ ಯಂತ್ರ ಖರೀದಿಸಲು ಇಚ್ಛಿಸಿದ್ದೇವೆ. ಅಂತ್ಯ ಸಂಸ್ಕಾರದ ಹೊರೆಯನ್ನು ತಗ್ಗಿಸುವುದಕ್ಕೆ ಎಲ್ಲರೂ ಕೈಜೋಡಿಸಬೇಕು**
>
> **ವಿನೂಪ್ ಕುಮಾರ್,** ವಿರಾಜಪೇಟೆ ಹಿಂದೂ ಮಲಯಾಳಿ ಸಮಾಜದ ಅಧ್ಯಕ್ಷ

ಘಟನೆ–ಮೂರು

ಕೊಡಗು ಜಿಲ್ಲೆಯ ಮತ್ತೊಂದು ಊರಿನಲ್ಲಿ ಸ್ಮಶಾನದಲ್ಲಿ ಗುಂಡಿ ತೆಗೆಯಲು ಜಾಗವೇ ಇರಲಿಲ್ಲ. ಆದ್ದರಿಂದ ಹೂಳುವುದನ್ನು ಕೈಬಿಟ್ಟು ವಿದ್ಯುತ್ ಚಿತಾಗಾರದಲ್ಲಿ ಶವವನ್ನು ದಹಿಸಲಾಯಿತು.

> **ಕೊಡಗಿನಲ್ಲಿ ಅಂದಾಜು ಸುಮಾರು 300ಕ್ಕೂ ಅಧಿಕ ಶವಗಳನ್ನು ಸಂಚಾರಿ ಶವ ದಹನ ಯಂತ್ರದಲ್ಲಿ ದಹಿಸಲಾಗಿದೆ. ಇದು ಪರಿಸರಸ್ನೇಹಿ ಹಾಗೂ ಹೆಚ್ಚು ಶ್ರಮವಿಲ್ಲದ ವಿಧಾನ. ಮೃತರ ಕುಟುಂಬಸ್ಥರು ನಿಗದಿಪಡಿಸಿದ ಜಾಗದಲ್ಲಿ ಸಂಸ್ಕಾರ ಮಾಡಲಾಗುತ್ತದೆ. ಶವ ದಹಿಸಲು ಒಂದೂವರೆಯಿಂದ ಎರಡು ಗಂಟೆಗಳ ಬೇಕಾಗುತ್ತದೆ. ಕೊಯಮತ್ತೂರಿನಲ್ಲಿ ಈ ಬಗೆಯ ಯಂತ್ರಗಳು ಸಿಗುತ್ತವೆ.**
>
> **ಶಾಂತಕುಮಾರ್,** 'ಐವರ್ ಮಡಂ' (ಸಂಚಾರಿ ಶವದಹಿಸುವ ಸಂಸ್ಥೆ) ಪ್ರತಿನಿಧಿ

ಇದೇ ನೋಡಿ ಸಂಚಾರಿ ಶವ ದಹನ ಯಂತ್ರ

ಒಂದೇ ಗುಂಡಿಯೊಳಗೆ ಶವಗಳು!

ಸ್ಮಶಾನದಲ್ಲಿ ಶವಗಳನ್ನು ಹೂಳಲು ಜಾಗವೇ ಸಿಗುತ್ತಿಲ್ಲ. ಈ ಸಮಸ್ಯೆ ಎಲ್ಲ ಧರ್ಮದವರನ್ನೂ ಕಾಡುತ್ತಿದೆ. ಬಹುತೇಕರು ಅಂತ್ಯಕ್ರಿಯೆಯ ವಿಧಾನವನ್ನು ಬದಲಾಯಿಸಿಕೊಳ್ಳಲು ಮುಂದಾಗಿದ್ದಾರೆ. ಒಂದೇ ಗುಂಡಿಯಲ್ಲಿ ಹತ್ತಾರು ಶವಗಳನ್ನು ಹಾಕುವ ಪದ್ಧತಿಯೂ ಚಾಲ್ತಿಗೆ ಬಂದಿದೆ. ಇದನ್ನು 'ರ‍್ಯಾಕ್ ಪದ್ಧತಿ' ಎನ್ನಬಹುದು!

ರ‍್ಯಾಕ್ ಪದ್ಧತಿ ಅಂದ್ರೆ...

ಹೀಗೆ ಶವ ಹಾಕುವಂತಹ ಪದ್ಧತಿ ಕೇರಳದಲ್ಲಿ ಬಹು ಹಿಂದಿನಿಂದಲೂ ಇದೆ. ಗುಂಡಿ 9 ಅಡಿ ಆಳ, 4 ಅಡಿ ಅಗಲ ಇರುತ್ತದೆ. ಅದರಲ್ಲಿ ರ‍್ಯಾಕ್ ಮತ್ತು ಶವಪೆಟ್ಟಿಗೆಯನ್ನು ಇಡಲಾಗುತ್ತದೆ. ಮತ್ತೊಬ್ಬರು ಮೃತಪಟ್ಟರೆ ಈಗಾಗಲೇ ಇಟ್ಟಿರುವ ಶವಪೆಟ್ಟಿಗೆಯನ್ನು ರ‍್ಯಾಕ್‌ನಿಂದ ಹಿಂದಕ್ಕೆ ತಳ್ಳಿ ಹೊಸ ಪೆಟ್ಟಿಗೆಯನ್ನು ಇಡುತ್ತಾರೆ. ಹೀಗೆ ತಳ್ಳಿದ ಶವಪೆಟ್ಟಿಗೆಯು ಹಿಂದೆ ಇರುವ ಗುಂಡಿಗೆ ಬೀಳುತ್ತದೆ. ಈ ಬಗೆಯಲ್ಲಿ ಹನ್ನೆರೆಡು ರ‍್ಯಾಕ್ ಇರುವ ಈ ವಿಶಿಷ್ಟ ಮಾದರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಶಿರಾಡಿ ಸೇರಿದಂತೆ ಅಲ್ಲಲ್ಲಿ ಇವೆ. ಹೊಸ ಸ್ಮಶಾನ ಮತ್ತು ಸಮುದಾಯ ಭವನವು ಜ.17ರಂದು ಶಿರಾಡಿ ಗ್ರಾಮದ ಸೇಂಟ್ ಪೀಟರ್ ಆ್ಯಂಡ್ ಸೇಂಟ್ ಪಾಲ್ ಚರ್ಚ್‌ನಲ್ಲಿ ಉದ್ಘಾಟನೆಯಾಗಲಿದೆ.

ಇನ್ನೂ ಕೆಲವೆಡೆ ಒಂದು ಕುಟುಂಬಕ್ಕೆ ಒಂದು ಅಥವಾ ಎರಡು ಗುಂಡಿಗಳೆಂದು ನಿಗದಿಪಡಿಸಿ ನೀಡಿರುತ್ತಾರೆ. ಆ ಕುಟುಂಬದಲ್ಲಿ ಎಷ್ಟೇ ಮಂದಿ ಮೃತಪಟ್ಟರೂ ತಮ್ಮ ಕುಟುಂಬಕ್ಕೆ ನಿಗದಿಪಡಿಸಿದ ಗುಂಡಿಗಳಲ್ಲೇ ಹೂಳುವ ಕ್ರಮವೂ ಈಗ ಹೆಚ್ಚಾಗುತ್ತಿದೆ.

ರ‍್ಯಾಕ್ ಪದ್ಧತಿ ಅಂದ್ರೆ ಇದೇನೇ...

ಈ ಮೂರೂ ಘಟನೆಗಳು ಶವ ಸಂಸ್ಕಾರ ಪದ್ಧತಿಯಲ್ಲಾಗುತ್ತಿರುವ ಪಲ್ಲಟಗಳಿಗೆ ಮುನ್ನುಡಿಯಂತಿವೆ.

ಹೆಚ್ಚೇನೂ ಇಲ್ಲ, ಹತ್ತಿಪ್ಪತ್ತು ವರ್ಷಗಳ ಹಿಂದಿನ ಮಾತು. ಊರಿಂದ ಹೊರಗೆ ಯಾರೂ ಸುಳಿಯದ ಜಾಗದಲ್ಲಿ ಶವ ಹೂತು ಸಮಾಧಿ ನಿರ್ಮಿಸುತ್ತಿದ್ದ ಕಾಲದಿಂದ ಹಿಡಿದು ತೀರಾ ಇತ್ತೀಚಿನ ವರ್ಷಗಳವರೆಗೆ ಶವ ಸಂಸ್ಕಾರದಲ್ಲಿ ಅಚ್ಚರಿ ಎನಿಸುಷ್ಟರ ಮಟ್ಟಿಗೆ ಬದಲಾವಣೆಗಳಾಗಿವೆ, ಆಗುತ್ತಲೇ ಇವೆ.

ಅದೊಂದಿತ್ತು ಕಾಲ...

ಯಾರಾದರೂ ಮೃತಪಟ್ಟರೆ ಪರ ಊರಿನಲ್ಲಿರುವ ಸಂಬಂಧಿಕರಿಗೆ ತಿಳಿಸಲೆಂದೇ ಒಬ್ಬೊಬ್ಬರನ್ನು ಒಂದೊಂದು ದಿಕ್ಕಿಗೆ ಸ್ಕೂಟರ್ ಇಲ್ಲವೇ ಬೈಕ್ ಕೊಟ್ಟು ಕಳುಹಿಸಲಾಗುತ್ತಿತ್ತು. (ಇದಕ್ಕೂ ಮೊದಲು ಸೈಕಲ್‌ನಲ್ಲಿ ಹೋಗುತ್ತಿದ್ದರು) ತಾವು ಹೋಗುವ ದಾರಿಯಲ್ಲಿ ಸಿಕ್ಕ ಊರಿನಲ್ಲಿರುವ ಆ ಕುಟುಂಬದ ಸಂಬಂಧಿಕರಿಗೆ ಸುದ್ದಿ ಮುಟ್ಟಿಸಿ ಮುಂದಿನ ಊರಿಗೆ ತೆರಳುತ್ತಿದ್ದರು. ಎಲ್ಲ ಊರಿನ ಸಂಬಂಧಿಕರು, ಬಂಧು–ಬಳಗದವರು ಬಂದ ನಂತರ ಅಂತ್ಯಸಂಸ್ಕಾರ ನೆರವೇರುತ್ತಿತ್ತು. ಮೊಬೈಲ್ ಫೋನ್ ಬಂದ ನಂತರ ಈ ಕೆಲಸ ತುಂಬಾ ಸರಾಗವಾಗಿದೆ.

10ನೇ ಪುಟಕ್ಕೆ...

ಇದು ಅರುಂಧತಿ ಮಡಿಲು

• ಅಶ್ವಿನ್ ಬಿ.ಎಂ.

ಬೆಂಗಳೂರಿನಿಂದ ದಾವಣಗೆರೆಗೆ ಹೋಗುವ ಹೆದ್ದಾರಿಯಲ್ಲಿ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಬಳಿ ಅರುಂಧತಿ ಮಂಡ್ಯ ಅವರ ತೋಟವಿದೆ. ಅಲ್ಲಿ ಅವರು ಕೋಳಿ ಸಾಕಾಣಿಕೆ ಮತ್ತು ಪಶುಸಂಗೋಪನೆಯಲ್ಲಿ ತೊಡಗಿದ್ದಾರೆ. ಬಸ್ತಿ (ಭಿಕ್ಷಾಟನೆ) ಮತ್ತು ಲೈಂಗಿಕ ವೃತ್ತಿಯನ್ನು ತ್ಯಜಿಸುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಸಹಾಯ ಮಾಡಲು ಸುಸ್ಥಿರ ಮಾದರಿಯೊಂದನ್ನು ಅಭಿವೃದ್ಧಿಪಡಿಸುವ ಮೂಲಕ, ಹಲವರ ಬದುಕಿಗೆ ದಾರಿದೀಪವಾಗಿದ್ದಾರೆ.

ಅರುಂಧತಿ ಅವರ ಈ ಪಯಣವು ಸುಲಭದ್ದಾಗಿರಲಿಲ್ಲ. ತಿರಸ್ಕಾರ, ನೋವು, ಹತಾಶೆಯಿಂದ ಕೂಡಿದ ಸವಾಲಿನದಾಗಿತ್ತು. ಅರುಣ ಅವರು ಹುಟ್ಟಿದ್ದು ದಕ್ಷಿಣ ಕನ್ನಡದಲ್ಲಿ. ಹತ್ತು ವರ್ಷವಿದ್ದಾಗ ಅವರ ಶಾರೀರದಲ್ಲಿ ಬದಲಾವಣೆಗಳಾಗುತ್ತಿದ್ದವು. ಇದರಿಂದಾಗಿ ಅವರು ತಾತ್ಸಾರ, ವ್ಯಂಗ್ಯದ ಮಾತುಗಳನ್ನು ಎದುರಿಸಬೇಕಾಯಿತು.

ತಾಯಿಯ ಬೆಂಬಲ ಇದ್ದರೂ, 'ಹುಡುಗ'ನಂತೆ ವರ್ತಿಸು ಎಂದು ಸಹೋದರ ನಿರಂತರವಾಗಿ ಒತ್ತಾಯ ಮಾಡುತ್ತಿದ್ದರು. ಇದರಿಂದ ನೊಂದು ಎಸ್‌ಎಸ್‌ಎಲ್‌ಸಿ ನಂತರ ಮನೆ ತೊರೆದರು. ಮಂಗಳೂರು ರೈಲು ನಿಲ್ದಾಣದಲ್ಲಿ ಒಂಟಿಯಾಗಿ ದಿಕ್ಕು ಕಾಣದೆ ನಿಂತಿದ್ದಾಗ ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ಪರಿಚಯವಾಯಿತು. ಅವರು ಕೇರಳದ ಲಿಂಗತ್ವ ಅಲ್ಪಸಂಖ್ಯಾತರ ಸಂಸ್ಥೆ 'ಮಲಬಾರ್ ಕಲ್ಚರಲ್ ಫೋರಮ್'ಗೆ ಕರೆದುಕೊಂಡು ಹೋದರು. ಈ ಸಂಸ್ಥೆಯು ಅರುಣ ಅವರ ಶಿಕ್ಷಣಕ್ಕೆ ಬೆಂಬಲ ನೀಡಿತು.

ಗೌರವಯುತವಾದ ಜೀವನ ನಡೆಸುವ ಹಂಬಲದಿಂದ ಅವರು ಹಗಲಿನಲ್ಲಿ ಸಾರ್ವಜನಿಕ ಸಂಪರ್ಕ ವ್ಯಕ್ತಿಯಾಗಿ ಮತ್ತು ರಾತ್ರಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಲೇ ದೂರ ಶಿಕ್ಷಣದ ಮೂಲಕ 2011ರಲ್ಲಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಬಳಿಕ ಕರ್ನಾಟಕಕ್ಕೆ ಮರಳಿ ರಾಮನಗರದಲ್ಲಿರುವ ಸರ್ಕಾರೇತರ ಸಂಘಟನೆ (ಎನ್‌ಜಿಒ) ಸೇರಿದರು. ಅಲ್ಲಿ ಪಶುಸಂಗೋಪನೆ ಕುರಿತು ಲಿಂಗತ್ವ ಅಲ್ಪಸಂಖ್ಯಾತರಿಗೆ ತರಬೇತಿ ನೀಡುತ್ತಿದ್ದರು. ಆದರೆ 2012ರಲ್ಲಿ ಯೋಜನೆಯು ನಿಂತ ಕಾರಣ ಕೆಲಸ ಕಳೆದುಕೊಂಡರು.

ಉದ್ಯೋಗ ಪಡೆಯಲು ಹುಡುಕಾಟ ಆರಂಭಿಸಿದಾಗ ಜನರ ಪೂರ್ವಾಗ್ರಹವು ಅವರನ್ನು ಕಂಗೆಡಿಸಿತು. ಕಾರ್ಖಾನೆಗಳು, ಗಾರ್ಮೆಂಟ್ಸ್ ಘಟಕಗಳಲ್ಲಿ ಉದ್ಯೋಗ ಕೇಳಿದರು. ಅಲ್ಲಿ ತಿರಸ್ಕಾರವೇ ಉತ್ತರವಾಗಿತ್ತು. ಒಬ್ಬರು 'ಪುರುಷ'ನಂತೆ ಕಾಣಿಸಿಕೊಂಡರೆ ಉದ್ಯೋಗ ನೀಡುವುದಾಗಿ ಹೇಳಿದರು. ಅರುಂಧತಿ 'ನಾನು ನನ್ನಂತೆಯೇ ಇರುತ್ತೇನೆ. ನನಗೆ ಕೆಲಸವಿಲ್ಲದಿದ್ದರೂ ಸರಿಯೇ' ಎಂದು ಹೇಳಿ ವಾಪಸ್ ಬಂದರು.

ಹೀಗೆ ಉದ್ಯೋಗದ ಎಲ್ಲಾ ಬಾಗಿಲುಗಳು ಮುಚ್ಚಿದಾಗ ಭಿಕ್ಷಾಟನೆ ಮತ್ತು ಲೈಂಗಿಕ ವೃತ್ತಿಯನ್ನು ಆಶ್ರಯಿಸಿದರು. ಈ ಮಧ್ಯೆ ಅರುಣ ಅವರ ಪರಿಚಯಸ್ಥರಾದ ಸಾವಿತ್ರಮ್ಮ ಕುರಿ ಮತ್ತು ಕೋಳಿ ಸಾಕಣೆ ಮಾಡುವಂತೆ ಸಲಹೆ ನೀಡಿದರು. ಜೊತೆಗೆ ಉದ್ಯೋಗ ಪಡೆಯಲೂ ನೆರವಾದರು.

ಬಳಿಕ ಮಂಡ್ಯ ಸಮೀಪದ ಇಂಡುವಾಳು ಗ್ರಾಮದಲ್ಲಿ ನಾಲ್ಕು ಕುರಿಮರಿಗಳೊಂದಿಗೆ ಹೊಸ ಬದುಕಿಗೆ ಅಡಿಇಟ್ಟರು. 2019ರ ಹೊತ್ತಿಗೆ 25 ಮೇಕೆಗಳು, 100 ಕೋಳಿಗಳು ಮತ್ತು ಕೆಲವು ಕುರಿಗಳನ್ನು ಸಾಕುವ ಮೂಲಕ ತಮ್ಮ ವ್ಯವಹಾರವನ್ನು ವಿಸ್ತರಿಸಿದರು. ಹಂತಹಂತವಾಗಿ ಬೆಳೆದು 'ಅರುಂಧತಿ ಮಂಡ್ಯ' ಎಂಬ ಹೆಸರು ಪಡೆದರು. ಹೀಗಿರುವಾಗಲೇ ಲಿಂಗತ್ವ ಅಲ್ಪಸಂಖ್ಯಾತರು ಎಂಬ ಕಾರಣಕ್ಕಾಗಿ ಅರುಂಧತಿ ಮತ್ತು ಅವರ ಸಮುದಾಯವನ್ನು ಗ್ರಾಮಸ್ಥರು ಗ್ರಾಮದಿಂದ ಹೊರಹಾಕಿದರು.

ಲಾಕ್‌ಡೌನ್ ಸಂದರ್ಭದಲ್ಲಿ 20 ಕುರಿಗಳು ಮತ್ತು 30 ಕೋಳಿಗಳು ಕಳುವಾದವು. ಇದರಿಂದಾಗಿ ಜೀವನ ಮತ್ತೆ ಹಳಿ ತಪ್ಪಿತು. ಮನಸ್ಸಿಲ್ಲದಿದ್ದರೂ ಜೀವನ ನಿರ್ವಹಣೆಗಾಗಿ ಮತ್ತೆ ಮೂರು ತಿಂಗಳು ಲೈಂಗಿಕ ವೃತ್ತಿಗಿಳಿದರು.

ನಂತರ ಚಿತ್ರದುರ್ಗಕ್ಕೆ ತೆರಳಿ ಸ್ನೇಹಿತೆಯೊಬ್ಬರ ಸಹಾಯದಿಂದ ಮತ್ತೆ ಪಶುಸಂಗೋಪನೆಯನ್ನು ಆರಂಭಿಸಿದರು. 2023ರಲ್ಲಿ ಮತ್ತೆ 50 ಮೇಕೆಗಳು ಕಳುವಾದವು. ತಮ್ಮ ಸಮುದಾಯದಿಂದಲೇ ದ್ರೋಹ ಮತ್ತು ನಿರ್ಲಕ್ಷ್ಯ ಎದುರಿಸಿದರು. ಪೊಲೀಸರೂ ಬೆಂಬಲ ನೀಡಲಿಲ್ಲ. ಇದರಿಂದ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿದರು.

ಹೀಗಿರುವಾಗ ಒಮ್ಮೆ ಅರುಂಧತಿ ಅವರು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಆಗಿನ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಲತಾ ಅವರನ್ನು ಭೇಟಿಯಾದರು. ಪುಷ್ಪಲತಾ ಅವರು ಬೆಂಬಲದ ಭರವಸೆ ನೀಡಿದರು. ಮಹಿಳಾ ಅಭಿವೃದ್ಧಿ ನಿಗಮವು ಅರುಂಧತಿ ಅವರಿಗೆ ಬೆಂಬಲವಾಗಿ ಶೇಕಡ 50ರಷ್ಟು ಸಬ್ಸಿಡಿಯಲ್ಲಿ ₹23 ಲಕ್ಷ ಸಾಲವನ್ನು ಮಂಜೂರು ಮಾಡಿತು. ಅರುಂಧತಿ ಅವರು ಸ್ನೇಹಿತೆ ಟ್ರಾನ್ಸ್‌ವುಮನ್ ಚೈತ್ರಾ ಅವರ ಜೊತೆ ಸೇರಿ ಭರಮಸಾಗರದಲ್ಲಿ ಚಹಾ ಅಂಗಡಿಯನ್ನು ತೆರೆದರು. ಸಾಲ ಮತ್ತು ಉದ್ಯಮ ತರಬೇತಿ ಫೆಲೊಶಿಪ್ ಹಣವನ್ನು ಬಳಸಿಕೊಂಡು ತಮ್ಮ ತೋಟವನ್ನು ಮಾಡಿದರು. ಈಗ ಅವರ ಜಮೀನಿನಲ್ಲಿ ಸುಮಾರು 50 ಕೋಳಿಗಳು, 100 ಮೇಕೆಗಳು ಮತ್ತು ಕುರಿಗಳಿವೆ.

'ಅರುಂಧತಿ ಅವರ ಕೌಶಲ ಮತ್ತು ಸ್ವಾವಲಂಬಿ ಜೀವನದ ಇಂಗಿತವನ್ನು ಕಂಡು ಪ್ರಭಾವಿತಳಾಗಿದ್ದೇನೆ' ಎನ್ನುತ್ತಾರೆ ಪುಷ್ಪಲತಾ.

ಅರುಂಧತಿ ಅವರು 2022ರಲ್ಲಿ 'ಮಡಿಲು ಸ್ವಾವಲಂಬಿ ಟ್ರಸ್ಟ್' (ದಕ್ಷಿಣ ಭಾರತ) ಸ್ಥಾಪಿಸಿದರು. 25 ಮಂದಿ ಸದಸ್ಯರಿರುವ ಈ ಟ್ರಸ್ಟ್ ಲಿಂಗತ್ವ ಅಲ್ಪಸಂಖ್ಯಾತರ ಆರ್ಥಿಕ ಸಬಲೀಕರಣದ ದೃಷ್ಟಿಯಿಂದಲೇ ಕೆಲಸ ಮಾಡುತ್ತಿದೆ. ಬಸ್ತಿ ಮತ್ತು ಲೈಂಗಿಕ ವೃತ್ತಿ ತ್ಯಜಿಸಿ ಜೀವನ ಕಟ್ಟಿಕೊಳ್ಳುವ ಹಂಬಲದಿಂದ ಬರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಅರುಂಧತಿ ಅವರು ಉಚಿತವಾಗಿ ಎರಡು ಮೇಕೆ ಮತ್ತು ಐದು ಕೋಳಿಗಳನ್ನು ನೀಡುತ್ತಾರೆ. ಸ್ವಾವಲಂಬಿಗಳಾದ ನಂತರ ಅವರು ಅವುಗಳನ್ನು ಇನ್ನೊಬ್ಬರಿಗೆ ವರ್ಗಾಯಿಸಬೇಕೆಂಬ ಒಪ್ಪಂದ ಮಾಡಿಕೊಳ್ಳುತ್ತಾರೆ. ಹೀಗಾಗಿ ಅರುಂಧತಿ ಅವರ ಈ ನಡೆಯು ಅನೇಕ ಲಿಂಗತ್ವ ಅಲ್ಪಸಂಖ್ಯಾತರ ಬಾಳಿಗೆ ಬೆಳಕು ನೀಡಿದೆ.

ಅರುಂಧತಿ ಅವರು ಈವರೆಗೆ 25 ಲೈಂಗಿಕ ಅಲ್ಪಸಂಖ್ಯಾತರಿಗೆ ಉಚಿತವಾಗಿ ಕೋಳಿ ಮತ್ತು ಮೇಕೆಗಳನ್ನು ನೀಡಿದ್ದಾರೆ ಮತ್ತು 35 ಲಿಂಗತ್ವ ಅಲ್ಪಸಂಖ್ಯಾತರಿಗೆ ತೋಟಗಾರಿಕೆ, ಕೃಷಿ ತರಬೇತಿ ನೀಡಿದ್ದಾರೆ. ಅವರ ಕೆಲಸವು ಹಲವು ಲಿಂಗತ್ವ ಅಲ್ಪಸಂಖ್ಯಾತರಿಗೆ ಸ್ಫೂರ್ತಿಯಾಗಿದೆ. ಕೊಪ್ಪಳ, ಮಂಡ್ಯ, ವಿಜಯಪುರ, ಬಾಗಲಕೋಟೆ ಮತ್ತು ಚಿಕ್ಕಮಗಳೂರಿನಲ್ಲಿ ಹಲವರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಅರುಂಧತಿ ತಮ್ಮ ಸಮುದಾಯದವರಿಗೆ ಎದುರಾಗುವ ಕಾನೂನಾತ್ಮಕ ಸಮಸ್ಯೆಗಳನ್ನೂ ಪರಿಹರಿಸಲು ನೆರವು ನೀಡುತ್ತಾರೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳಂತಹ ಅಗತ್ಯ ಗುರುತಿನ ದಾಖಲೆಗಳನ್ನು ಮಾಡಿಸಿಕೊಡುತ್ತಾರೆ.

ತಮ್ಮ ಸಮುದಾಯಕ್ಕೆ ಅಂಟಿರುವ ಕಳಂಕವನ್ನು ತೊಡೆದುಹಾಕಲು ಆರ್ಥಿಕ ಸಬಲೀಕರಣವೊಂದೇ ದಾರಿ ಎಂದು ಅರಿತಿರುವ ಅರುಂಧತಿ, ಕೋಳಿ, ಕುರಿ ಸಾಕಣೆ, ಹೈನುಗಾರಿಕೆ ಮತ್ತು ಕೃಷಿಗೆ ಸಂಬಂಧಿಸಿದಂತೆ ಕೌಶಲ ತರಬೇತಿ ಶಾಲೆಯನ್ನು ಸ್ಥಾಪಿಸಲು ಚಿಂತನೆ ನಡೆಸಿದ್ದಾರೆ.

10ನೇ ಪುಟಕ್ಕೆ..

ಅರುಂಧತಿ ಮಂಡ್ಯ

ಸಂತೆಯಲ್ಲಿ ಕುದುರೆಗಳು

ವರ್ಷಕ್ಕೊಮ್ಮೆ ರಾಯಬಾಗ ಕುದುರೆ ಸಂತೆ

• ಚಂದ್ರಶೇಖರ ಎಸ್ ಚಿನಕೇಕರ

ಬೆಡಗು ಬಿನ್ನಾಣದಿಂದ ಮನ ಸೆಳೆಯೋ ಮೋಹಿನಿ...ನಯ ನಾಜೂಕಿನ ನಡಿಗೆಯಿಂದ ಹೃದಯಕ್ಕೆ ಲಗ್ಗೆ ಇಡುವ ರೂಪಿಣಿ.. ಮಿರಿ ಮಿರಿ ಮಿಂಚುವ ಮೈಬಣ್ಣದಿಂದ ಕಣ್ಮನ ಸೆಳೆಯುವ ಸೌಂದರ್ಯದ ಗಣಿ..

ಇವು ಬೆಳಗಾವಿ ಜಿಲ್ಲೆಯ ರಾಯಬಾಗ ಪಟ್ಟಣದ ರೈಲು ನಿಲ್ದಾಣ ಪ್ರದೇಶದಲ್ಲಿ ಲಕ್ಷ್ಮೀದೇವಿ ಜಾತ್ರೆಯ ನಿಮಿತ್ಯ ಇದೇ ಜನವರಿ 2 ರಿಂದ 4 ರ ವರೆಗೆ ನಡೆದ ಕುದುರೆಗಳ ಪ್ರದರ್ಶನ ಮತ್ತು ಮಾರಾಟದ ಭಿನ್ನ ವಿಭಿನ್ನ ನೋಟಗಳು.

ಕುದುರೆಗಳು ಓಡುವುದನ್ನು ನೋಡುವುದೇ ಮಜಾ. ಶರವೇಗ ವೇಗಕ್ಕೆ ಕುದುರೆಗಳು ಪ್ರಸಿದ್ದಿ. ಆದರೆ ರಾಯಬಾಗದಲ್ಲಿ ನಡೆಯುವ ಜಾತ್ರೆಗೆ ಬರುವ ಕುದುರೆಗಳು ನೋಟಕ್ಕೆ ಪ್ರಸಿದ್ಧಿ! ಮೂರು ದಿನಗಳು ನಡೆಯುವ ಕುದುರೆ ಸಂತೆಯಲ್ಲಿ ಮಹಾರಾಷ್ಟ್ರದ ಕೊಲ್ಹಾಪುರ, ಪುಣೆ, ಸಾಂಗ್ಲಿ, ಸಾತಾರಾ ಜಿಲ್ಲೆಗಳಿಂದ ಹಾಗೂ ರಾಜ್ಯದ ಧಾರವಾಡ, ವಿಜಯಪುರ, ಬಾಗಲಕೋಟೆ, ಬೆಳಗಾವಿ ಸೇರಿದಂತೆ ವಿವಿಧೆಡೆಯಿಂದ ಕುದುರೆಗಳು ಬರುತ್ತವೆ. ದೇಶಿ ಕುದುರೆಗಳನ್ನು ಓಟದ ಸ್ಪರ್ಧೆ (ಶರ್ಯತ್ತು)ಗೆ ಬಳಸಿದರೆ, ಜಾತಿ ಕುದುರೆಗಳನ್ನು ನಡಿಗೆ, ನೃತ್ಯ ಹಾಗೂ ಸೌಂದರ್ಯ ಸ್ಪರ್ಧೆಗೆ ಬಳಸಲಾಗುತ್ತದೆ.

ಮಹಾರಾಷ್ಟ್ರದ ಅಕ್ಲುಜಾ, ಸಾರಂಗಖೇಡಾ, ಮಾಳೇಗಾಂವ, ಎವ್ಲಾ, ಇಂದಾಪೂರ ಸೇರಿದಂತೆ ವಿವಿಧೆಡೆ ಜಾತಿ ಕುದುರೆಗಳ ಸಂತೆಯನ್ನು ಆಯೋಜಿಸಲಾಗುತ್ತದೆ. ಹಲವು ವರ್ಷಗಳಿಂದ ನಡೆಯುವ ಅಲ್ಲಿನ ಸಂತೆಗೆ ನಮ್ಮ ರಾಜ್ಯದವರು ತಮ್ಮ ಕುದುರೆಗಳನ್ನು ಪ್ರದರ್ಶನ ಹಾಗೂ ವ್ಯಾಪಾರಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ನೂರಾರು ಕುದುರೆಗಳನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಮಾರಾಟ ಹಾಗೂ ಪ್ರದರ್ಶನ ಮಾಡುವುದು ಕಷ್ಟವಾಗುತ್ತಿತ್ತು. ಆದ್ದರಿಂದ ತಮ್ಮ ನೆಲದಲ್ಲಿಯೇ ಇಂತಹದೊಂದು ಸಂತೆ ಮಾಡುವ ಆಲೋಚನೆ ಕುದುರೆ ಸಾಕುವ ಹವ್ಯಾಸ ಹೊಂದಿರುವ ಸ್ಥಳೀಯರಲ್ಲಿ ಏಳು ವರ್ಷಗಳ ಹಿಂದೆ ಹೊಳೆಯಿತು. ಈಗ ನಡೆದ ಕುದುರೆ ಸಂತೆ ಏಳನೆಯದು.

ತಳಿ ವೈವಿಧ್ಯ...

ಭಾರತದಲ್ಲಿ ಮಾರವಾರಿ, ಪಂಜಾಬಿ, ಕಾಠೇವಾರಿ, ಸಿಂಧಿ ತಳಿಯ ಕುದುರೆಗಳಿದ್ದು, ಇವೆಲ್ಲ ಕುದುರೆ ಸಂತೆಯಲ್ಲಿ ಭಾಗವಹಿಸಿದ್ದವು. ಪ್ರತಿ ವರ್ಷ ನೂರರಿಂದ ನೂರೈವತ್ತಕ್ಕೂ ಹೆಚ್ಚು ಕುದುರೆಗಳು ಬರುತ್ತವೆ. ಅಲ್ಲದೇ ವರ್ಷದಿಂದ ವರ್ಷಕ್ಕೆ ಕುದುರೆಗಳ ಸಂಖ್ಯೆ ಹೆಚ್ಚುತ್ತಿದೆ. ಸಂತೆಗೆ ಬರುವ ಕುದುರೆಗಳಿಗಾಗಿ ನಡಿಗೆ (ಚಾಲ್-ರೇವಾಳ), ನೃತ್ಯ, ಸೌಂದರ್ಯ ಸೇರಿದಂತೆ ವಿವಿಧ ಬಗೆಯ ಸ್ಪರ್ಧೆಯನ್ನು ಆಯೋಜನೆ ಮಾಡಿ ಬಹುಮಾನ ನೀಡಲಾಗುತ್ತದೆ.

ರಾಜಸ್ತಾನದ ಮಾರವಾರಿ ತಳಿ ಕುದುರೆ ಪ್ರಾಮಾಣಿಕತೆಗೆ, ಪಂಜಾಬಿನ ಪಂಜಾಬಿ ತಳಿ ಸೌಂದರ್ಯ ಹಾಗೂ ಎತ್ತರಕ್ಕೆ, ಗುಜರಾತ್ ಮೂಲದ ಕಾಠೇವಾರಿ ತಳಿ ಸಣ್ಣಗಾತ್ರ ಹಾಗೂ ಗುಣಮಟ್ಟಕ್ಕೆ, ಭಾರತ-ಪಾಕಿಸ್ತಾನ ಗಡಿ ಭಾಗದ ರಾಜ್ಯಗಳಲ್ಲಿ ಕಾಣುವ ಸಿಂಧಿ ತಳಿಯ ಕುದುರೆ ಚಾಲ್ (ನಡಿಗೆ)ಗೆ ಪ್ರಸಿದ್ಧಿಯಾಗಿವೆ. ದೇಶದ ವಿವಿಧ ತಳಿಯ ಕುದುರೆಗಳನ್ನು ನೋಡಲು, ಕೊಳ್ಳಲು ಹಾಗೂ ಮಾರಾಟ ಮಾಡಲು ವಿವಿಧೆಡೆಯಿಂದ ಆಸಕ್ತರು ಇಲ್ಲಿಗೆ ಬರುತ್ತಾರೆ.

ಸೌಂದರ್ಯ, ನಡಿಗೆ ಹಾಗೂ ನೃತ್ಯಕ್ಕೆ ಪ್ರಸಿದ್ಧಿಯಾಗಿರುವ ಈ ಕುದುರೆಗಳಿಗೆ ಕಡಲೆ, ಗೋಧಿ, ಬೂಸಾ (ಹೊಟ್ಟು), ಕಾಟ್ಯಾಳ ಹಿಟ್ಟು, ಹುಲ್ಲು ಮುಂತಾದವುಗಳನ್ನು ಆಹಾರವಾಗಿ ನೀಡಲಾಗುತ್ತದೆ. ಪ್ರತಿ ದಿನ ಬ್ರಷಿನಿಂದ ಮೈ ತಿಕ್ಕುವ ಮೂಲಕ ಕೈ ಇಟ್ಟರೆ ಜಾರುವ ರೀತಿಯಲ್ಲಿ ಕುದುರೆಗಳ ಮೈಕಟ್ಟನ್ನು ನುಣುಪಾಗಿ ಇಡಲಾಗುತ್ತದೆ. ಚಳಿಗಾಲದಲ್ಲಿ ವಾರಕ್ಕೊಮ್ಮೆ, ಇನ್ನುಳಿದ ದಿನಗಳಲ್ಲಿ ದಿನ ಬಿಟ್ಟು ದಿನ ಕುದುರೆಗಳಿಗೆ ಸ್ನಾನ ಮಾಡಿಸಲಾಗುತ್ತದೆ. ಹಾಗೆ ದಿನ ಬಿಟ್ಟು ದಿನ ಐದರಿಂದ ಹತ್ತು ಕಿಲೋಮೀಟರ್ ನಡಿಗೆ ಅಥವಾ ನಿಧಾನಗತಿಯ ಓಟ ಮಾಡಿಸಲಾಗುತ್ತದೆ.

10ನೇ ಪುಟಕ್ಕೆ...

> **ಹಿಂದೆ ರಾಜ–ಮಹಾರಾಜರು, ಶ್ರೀಮಂತರು ಕುದುರೆಗಳನ್ನು ಸಾಕುತ್ತಿದ್ದರು. ಅಂತಹ ಕುದುರೆಗಳನ್ನು ಸಾಕಿ ಸಲಹುವ ಖುಷಿ ಬೇರೊಂದರಲ್ಲಿ ಸಿಗುವುದಿಲ್ಲ. ನಮ್ಮ ಬಳಿ ತಲಾ ₹10 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ನಾಲ್ಕು ಕುದುರೆಗಳಿವೆ. ರಾಯಬಾಗ ಸಂತೆಯಿಂದ ನಮಗೆ ಸಾಕಷ್ಟು ಅನುಕೂಲವಾಗಿದೆ**
>
> **ಮಾರುತಿ ಮಾರಿಗುಡಿ,** ಕುದುರೆ ಮಾಲೀಕ

> **ನಾಲ್ಕು ದಶಕಗಳಿಂದ ಜಾತಿ ಕುದುರೆ ಸಾಕುವ ಹವ್ಯಾಸವಿದೆ. ಇಪ್ಪತ್ತು ವರ್ಷಗಳ ಹಿಂದೆ ಮೂವತ್ತಕ್ಕೂ ಹೆಚ್ಚು ಕುದುರೆಗಳಿದ್ದವು. ಇದೀಗ ಆರು ಕುದುರೆಗಳಿವೆ. ಕುದುರೆ ಸಂತತಿ ಉಳಿಯಬೇಕು. ಬೆಳೆಯಬೇಕು ಎಂಬ ಕಾರಣಕ್ಕಾಗಿ ಪ್ರತಿ ವರ್ಷ ಕುದುರೆ ಸಂತೆಯನ್ನು ಆಯೋಜನೆ ಮಾಡಲಾಗುತ್ತಿದೆ**
>
> **ಕಲ್ಯಾಣರಾವ್ ದೇಶಪಾಂಡೆ,** ಕುದುರೆ ಸಂತೆ ಆಯೋಜಕರು



ಕುದುರೆಗಳ ವೈಯ್ಯಾರದ ನಡಿಗೆ

ಕಾಲಚಕ್ರ ನಾಟಕದ ದೃಶ್ಯ. ಚಿತ್ರ: ಅನೂಪ್ ರಾಘ ಟಿ.

ಕಾಲಚಕ್ರ: ವೃದ್ಧಾಪ್ಯಕ್ಕೆ ಹಿಡಿದ ಕನ್ನಡಿ

• ಕೆ.ನರಸಿಂಹಮೂರ್ತಿ

ಬಹುರೂಪಿ ಉತ್ಸವಕ್ಕೆ ಮುನ್ನುಡಿಯಾಗಿ, ಮೈಸೂರಿನ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಪ್ರದರ್ಶನಗೊಂಡ 'ರಂಗಾಯಣಗಳ ನಾಟಕ ಉತ್ಸವ'ದ ಕೊನೆಯ ನಾಟಕ 'ಕಾಲಚಕ್ರ'.

ವೃದ್ಧ ದಂಪತಿ, ಅವರ ಇಬ್ಬರು ಮಕ್ಕಳು, ದಂಪತಿಯನ್ನು ದತ್ತು ಪಡೆಯುವ ಇನ್ನೊಬ್ಬ ಯುವ ದಂಪತಿ ನಾಟಕದ ಕೇಂದ್ರ. ಎರಡು ಮನೆಯೊಳಗೆ ನಡೆಯುವ ನಾಟಕ. ಒಂದು ನೋವಿನ ಮನೆ. ಇನ್ನೊಂದು ನಲಿವಿನ ಮನೆ. ಎರಡೂ ಕಡೆ ನೋವೂ ನಲಿವೂ ಆಗಾಗ ಕೂಡಿಕೊಳ್ಳುತ್ತವೆ.

ನಾಟಕವು ಹತ್ತು ನಿಮಿಷಗಳ ವಿರಾಮದ ಅವಧಿಯನ್ನು ಹೊರತುಪಡಿಸಿ, ಎರಡು ಗಂಟೆ ಹರಡಿಕೊಂಡಿರುವ ಆರು ಸುದೀರ್ಘ ದೃಶ್ಯಾವಳಿಗಳ ಮೊತ್ತ. ಮಕ್ಕಳು, ಸೊಸೆಯಂದಿರ ನಿರ್ಲಕ್ಷ್ಯದಿಂದ ಬೇಸತ್ತ ವೃದ್ಧ ದಂಪತಿ, ಕಾಡುವ ಅನಾರೋಗ್ಯ, ಪ್ರತಿಯೊಂದಕ್ಕೂ ಅವಲಂಬಿಸಬೇಕಾದ ಶೋಚನೀಯ ಪರಿಸ್ಥಿತಿ, ಮೊಮ್ಮಕ್ಕಳ ಮೇಲಿನ ಪ್ರೀತಿ, ಮಕ್ಕಳಿಗೆ ತಮ್ಮ ಜೀವನೋಪಾಯವೇ ಮುಖ್ಯವಾಗುವ ಬಗೆ... ಇವೆಲ್ಲವೂ ಸೇರಿದ ಒಂದು ಕುಟುಂಬದ ಕತೆಯೊಳಗೆ ಇನ್ನೊಂದು ಕತೆ ಮೂಡಿಬರುತ್ತದೆ. ಅದು ಮಾದರಿ ಮಕ್ಕಳು ಮತ್ತು ಪೋಷಕರ ಕತೆ. 'ಮಕ್ಕಳು, ಸೊಸೆಯಂದಿರು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ' ಎಂಬ ಹತಾಶೆಯಿಂದ ತಂದೆ ಇನಾಂದಾರ ಪತ್ರಿಕೆಯಲ್ಲಿ ಜಾಹೀರಾತು ಕೊಡುತ್ತಾರೆ. ತಂದೆ–ತಾಯಿಯನ್ನು ದತ್ತು ತೆಗೆದುಕೊಳ್ಳುವವರು ಬರಬಹುದು ಎಂದು. ಮಕ್ಕಳು ಉಚಿತ ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಅಲ್ಲಿಂದಲೂ ದಂಪತಿ ವಾಪಸು ಬಂದಾಗ, ಅವರನ್ನು ದತ್ತು ತೆಗೆದುಕೊಳ್ಳಲೆಂದೇ ರಾಘವ ಕರಂಕರ್–ಇರಾವತಿ ದಂಪತಿ ಬರುತ್ತಾರೆ. ಅವರ ಮನೆಗೆ ತೆರಳಿದ ಬಳಿಕ ಕಾಣುವುದು ಮಾದರಿ ಮಗ–ಸೊಸೆಯು ತಂದೆ–ತಾಯಿಯ ಕಾಳಜಿ ವಹಿಸಿ ಆರೈಕೆ ಮಾಡುವ ಕುಟುಂಬ.

ಇಲ್ಲಿ ಪೋಷಕರನ್ನು ನೋಡಿಕೊಳ್ಳಬೇಕಾದ ಮೂವರು ಮಕ್ಕಳ ಮಾದರಿಗಳು ಮುಖಾಮುಖಿಯಾಗುತ್ತವೆ. ವಿಶ್ವ–ಶರತ್ ಸಹೋದರರು, ರಾಘವ ಕರಂಕರ್ ನಡಾವಳಿಗಳು ಪ್ರೇಕ್ಷಕರ ಮುಂದೆ ಅನಾವರಣಗೊಂಡರೆ, ಸ್ವತಃ ಇನಾಂದಾರ್ ಕೂಡ ತಮ್ಮ ತಂದೆಯನ್ನು ಕೊನೆಗಾಲದಲ್ಲಿ ಸರಿಯಾಗಿ ನೋಡಿಕೊಳ್ಳಲು ಆಗಲಿಲ್ಲ ಎಂಬ ಪಶ್ಚಾತ್ತಾಪದಲ್ಲೇ ನರಳುವುದು ಕೂಡ ಎದ್ದು ಕಾಣುವ ಅಂಶ. ಮಕ್ಕಳು ತನ್ನ ಆರೈಕೆ ಮಾಡುತ್ತಿಲ್ಲ ಎಂದು ದೂರಿದಾಗಲೆಲ್ಲ, ಪತ್ನಿಯು 'ನೀವು ನಿಮ್ಮ ತಂದೆಗೆ ಬೆಲೆ ಕೊಟ್ರೇನು' ಎಂದು ಪ್ರಶ್ನಿಸುತ್ತಾಳೆ. ಇದು 'ಕಾಲಚಕ್ರ' ನೀಡುವ ಸಂದೇಶ. ಇಂಥ ಸಂಭಾಷಣೆಗಳೇ ನಾಟಕದ ಜೀವಾಳ.

ಯಾವುದೇ ಸಮಾಜದಲ್ಲೂ ಕೌಟುಂಬಿಕ ಸಂಬಂಧಗಳು ಬಹಳ ಮುಖ್ಯ. ಆದರೆ ಅವುಗಳೇ ನಿರಂತರ ನರಳುವುದೂ ಸಾಮಾನ್ಯ. ಈ ನರಳುವಿಕೆಯೇ ಪ್ರಧಾನವಾದ, ಕಣ್ಣಲ್ಲಿ ನೀರು ಬರಿಸುವಂಥ ನಿರೂಪಣೆಯುಳ್ಳ ಕಥೆ, ಕಾದಂಬರಿ, ಸಿನಿಮಾಗಳು ಕನ್ನಡದಲ್ಲಿ ಹಲವು ಬಂದಿವೆ. ಆದರೆ ನಾಟಕಗಳು ಕಡಿಮೆ. ಹೀಗಾಗಿಯೇ ಎಚ್.ಕೆ.ಕರ್ಕೇರ ಅವರು ಸಮರ್ಥವಾಗಿ ಮರಾಠಿಯಿಂದ ಕನ್ನಡೀಕರಿಸಿರುವ ಜಯವಂತ ದಳ್ವಿಯವರ ಈ ನಾಟಕವು ಮನೋಜ್ಞ ಅಭಿನಯ ಹಾಗೂ ಸಂಭಾಷಣೆಗಳ ಮೂಲಕವೇ ಮನಕ್ಕಿಳಿಯುತ್ತದೆ. ಅದಕ್ಕೆ ಇಂಬಾಗಿ ಹರಿದು ಬರುವ ಕನ್ನಡ, ಹಿಂದಿಯ ಹಳೇ ಸಿನಿಮಾ ಗೀತೆಗಳು, ಭಾವಗೀತೆಗಳ ಸಾಲಿನ ಸಾಂಗತ್ಯವು ಪ್ರೇಕ್ಷಕರನ್ನು ಶೋಕಸಾಗರದ ಮುಂದೆ ನಿಲ್ಲಿಸುತ್ತವೆ. ಹಳೆಯ ಕಥಾವಸ್ತುವಿನ ಹೊಸ ಪ್ರಸ್ತುತಿಯು ಕೆಲವರ ಕಣ್ಣಂಚಲ್ಲಿ ನೀರೂ ಇಣುಕುವಂತೆ ಮಾಡುತ್ತದೆ. ಇದು ಕಾಲಚಕ್ರಕ್ಕೆ ಹಿಡಿದ ಹೊಸ ಕನ್ನಡಿಯೂ ಆಗುತ್ತದೆ.

ಕಲಬುರಗಿ ರಂಗಾಯಣದ ರೆಪರ್ಟರಿ ಕಲಾವಿದರಲ್ಲಿ ಪ್ರತಿಯೊಬ್ಬರೂ ಪರಸ್ಪರರಿಗೆ ಪ್ರತಿಸ್ಪರ್ಧಿ ಎಂಬಂತೆ ಅಭಿನಯಿಸಿದ ಪರಿಣಾಮ, ಮರಾಠಿ ಪರಿಸರದಲ್ಲಿ ನಡೆಯುವ ಕತೆಯು ದೇಶ–ಕಾಲ ಮೀರಿ ಪ್ರೇಕ್ಷಕರ ಮನೆ–ಮನಗಳ ಕತೆಯಾಗಿ ಮಾರ್ಪಡುತ್ತದೆ. ವೃದ್ಧ ದಂಪತಿ ಇನಾಂದಾರ–ರುಕ್ಮಿಣಿ ಪಾತ್ರದಲ್ಲಿ ಮೂವತ್ತರ ಹರೆಯದ ಮಹಾಂತೇಶ ರಾಯಚೂರು ಮತ್ತು ಭಾಗ್ಯಶ್ರೀ ಬಿ.ಪಾಳಾ ಅಭಿನಯ ಅಮೋಘವೆನ್ನಿಸುವಂತಿದೆ. ಮಕ್ಕಳ ಪಾತ್ರದಲ್ಲಿ ಅಭಿಷೇಕ್ ಎಸ್.ಕೆ ಮತ್ತು ರಾಘವೇಂದ್ರ, ಗಯ್ಯಾಳಿ ಸೊಸೆ ಲೀಲಾ ಪಾತ್ರಧಾರಿ ವಾಣಿಶ್ರೀ ಬಿ.ಮಾಳಗಿ, ರಾಘವ–ಇರಾವತಿ ದಂಪತಿಯಾಗಿ ಸಾಗರ ಫಾಳೆನೋರ್–ಅಂಬಿಕಾ ಎಸ್.ತೆಲೆಂಗಿ, ತೋರಿಕೆಯ ಕಿವುಡನ ಬಾಬುರಾವ್ ಪಾತ್ರದಲ್ಲಿ ಸಿದ್ಧಾರ್ಥ ಕಟ್ಟೀಮನಿ ಸೇರಿ ಎಲ್ಲರೂ ಅದೇ ವಯೋಮಿತಿಗೆ ಸೇರಿದವರು.

ರಾಜುಕುಮಾರ ಎಸ್.ಕೆ. ಅವರ ರಂಗ ಸಜ್ಜಿಕೆ, ಶ್ರೀನಿವಾಸ ದೋರನಹಳ್ಳಿಯವರ ಬೆಳಕು, ಸಿದ್ಧಾರ್ಥ, ಸಾಗರ, ಮಹೇಶ ಹಾಗೂ ರಾಘವೇಂದ್ರ ಅವರ ಸಂಗೀತವೆಲ್ಲವೂ ನಾಟಕದ ಆಶಯಕ್ಕೆ ಸಮರ್ಥವಾಗಿ ದುಡಿದಿವೆ. ಹುಲುಗಪ್ಪ ಕಟ್ಟೀಮನಿಯವರ ನಿರ್ದೇಶನವೂ ಜೊತೆಯಾಗಿದೆ.

ಮರಾಠಿ ರಂಗಭೂಮಿಯಲ್ಲೂ ಹೆಚ್ಚು ಗಮನ ಸೆಳೆದ ಈ ನಾಟಕವು ಲೇಖಕ ಜಯವಂತ ದಳ್ವಿಯವರಿಗೂ ಪ್ರಸಿದ್ಧಿ ತಂದುಕೊಟ್ಟಿದೆ. ಪತ್ರಕರ್ತರೂ ಆಗಿದ್ದ ದಳ್ವಿ ಹಾಸ್ಯ ಬರಹಗಳಿಗೆ ಪ್ರಸಿದ್ಧರಾದಂತೆ ಮನಕಲಕುವ ನಾಟಕಕಾರರಾಗಿಯೂ ಉಳಿಯಲು ಈ ನಾಟಕದ ಕೊಡುಗೆ ದೊಡ್ಡದು.

ಹೊನ್ನ ಕಣಜ
ಈಗ ಮಾರುಕಟ್ಟೆಯಲ್ಲಿ ಲಭ್ಯ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
1 ಮತ್ತು 2ನೇ ಸಂಪುಟ

ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಕಲಾವಿದನ ಬೀಡು ಕಾರ್ಟೂನ್ ಗೂಡು

'ಕಾರ್ಟೂನ್‌ನೆಸ್ಟ್'ನ ಗೋಡೆಗಳ ತುಂಬ ಓರೆಕೋರೆ ಗೆರೆಗಳ ಚಿತ್ರಗಳು. ಗೆರೆಗಳಲ್ಲಿ ತಿಳಿಹಾಸ್ಯವಿದ್ದರೂ ಒಳಗೆ ಚಿಂತನೆಗೆ ಹಚ್ಚುವ ತಿರುಳು ಇದೆ. ವಿಡಂಬನಾತ್ಮಕ ಚಿತ್ರಗಳ ಮೂಲಕ ಗಮನ ಸೆಳೆಯುವ ಈ 'ಗೂಡು' ಈಗ ಕಲಾಪ್ರಿಯರು ಭೇಟಿ ನೀಡುವ ತಾಣವೂ ಆಗಿದೆ.

• ವಿಕ್ರಂ ಕಾಂತಿಕೆರೆ

ತಿಳಿಹಾಸ್ಯವಿದೆ, ವಿಡಂಬನೆ ಇದೆ, ಸಮಾಜದ ಮೇಲಿನ ಕಾಳಜಿಯೂ ಇದೆ, ನಾಡಿನ ಅಸ್ಮಿತೆಯನ್ನು ಬಿಂಬಿಸುವ ಪ್ರಜ್ಞಾವಂತಿಕೆಯೂ ಇದೆ. ಇದೆಲ್ಲವೂ ಕಾಣಿಸಿಗುವುದು ಕಲಾವಿದ ಪ್ರಕಾಶ್ ಶೆಟ್ಟಿ ಅವರ ಮನೆ ಎಂಬ ಕಾರ್ಟೂನ್‌ಗಳ ಗೂಡಿನಲ್ಲಿ.

ಮಂಗಳೂರಿನ ಶಕ್ತಿನಗರದಲ್ಲಿರುವ 'ಕಾರ್ಟೂನ್‌ನೆಸ್ಟ್' ಹೆಸರಿನ ಮನೆಯ ಒಳಗೂ ಹೊರಗೂ ಓರೆಕೋರೆ ಗೆರೆಗಳ ಲೋಕ. ಜಗಲಿಯಲ್ಲಿ ಕುಳಿತುಕೊಳ್ಳುವ ಟೈಲ್ಸ್‌ನ ಆಸನಗಳಿಂದ ಹಿಡಿದು ಹಾಲ್, ಬೆಡ್‌ರೂಂ, ಅಡುಗೆ ಮನೆ ಮತ್ತು ಡೈನಿಂಗ್ ಹಾಲ್‌ನಲ್ಲಿ ಅಲ್ಲಲ್ಲಿಗೆ ಸೂಕ್ತವೆನಿಸುವ ಆಶಯಗಳನ್ನು ಬಿಂಬಿಸುವ ಚಿತ್ರಗಳು; ಎಲ್ಲದಕ್ಕೂ ತಿಳಿಹಾಸ್ಯದ ಲೇಪನ.

ಬೆಡ್‌ರೂಂನಲ್ಲಿ ಮ್ಯಾಜಿಕಲ್ ಕಾರ್ಪೆಟ್‌ನಲ್ಲಿ ಕುಳಿತು ಕನಸಿನ ಲೋಕದಲ್ಲಿ ವಿಹರಿಸುವವರು ಇದ್ದಾರೆ. ಅಡುಗೆ ಮನೆಯಲ್ಲಿ ಮೀನು ಕಳ್ಳ ಬೆಕ್ಕು ಇದೆ. ಬಾತ್‌ರೂಂನ ಬಾಗಿಲಲ್ಲಿ ಟವೆಲ್ ಕೇಳುವವರಿದ್ದಾರೆ. ಸ್ವಿಚ್ ಬೋರ್ಡಿನ ಸಣ್ಣ ಗ್ಯಾಪ್‌ನಲ್ಲಿ ಬಾಲ ಸಿಲುಕಿ ಒದ್ದಾಡುವ ಬೆಕ್ಕು ಇದೆ. ಕಿಟಕಿಯ ಕರ್ಟನ್ ರಂಗಮಂಟಪದ ಪರದೆಯಾಗುತ್ತದೆ. ಡೈನಿಂಗ್ ಹಾಲ್‌ನ ವಾಷ್ ಬೇಸಿನ್‌ನಲ್ಲಿ ಕೈತೊಳೆಯುವವರಿಗೆ ಮೇಲಿನ ಕನ್ನಡಿ ಎಂಬ ಪಲ್ಲಕ್ಕಿಯೊಳಗಿನಿಂದ ಅವರೇ ಇಣುಕಿ ನೋಡುತ್ತಿರುವಂತೆ ಭಾಸವಾಗಿಸುತ್ತದೆ. ಬಾಗಿಲ ಬಳಿ ಸ್ವಾಗತಿಸಲು ದೇವಕನ್ಯೆಯರು ಹೂ ಹಿಡಿದುಕೊಂಡು ನಿಂತಿದ್ದಾರೆ.

ವ್ಯಂಗ್ಯಚಿತ್ರಕಾರ ಪ್ರಕಾಶ್ ಶೆಟ್ಟಿ ಅವರು ಸ್ಪಾಟ್ ಕ್ಯಾರಿಕೇಚರ್ ಎಂಬ ಪರಿಕಲ್ಪನೆಯ ಮೂಲಕ ಹೆಸರು ಮಾಡಿದವರು. 'ಬೆಂಗಳೂರಿನಿಂದ ಬಂದು ಮಂಗಳೂರಿನಲ್ಲಿ ಮನೆ ಮಾಡುವ ಸಂದರ್ಭದಲ್ಲಿ ಮನೆ ವಿಭಿನ್ನ ಆಗಿರಬೇಕು ಎಂದುಕೊಂಡಿದ್ದೆ. ಪಾರಂಪರಿಕ ಶೈಲಿಯ, ಹೆಂಚು ಹಾಸಿದ ಸಣ್ಣ ಮನೆಯನ್ನು ನಿರ್ಮಿಸಿದ ನಂತರ ಹೊರ–ಒಳಗಿನ ವಸ್ತುಗಳನ್ನೇ ಬಳಸಿಕೊಂಡು ಕಾರ್ಟೂನ್‌ಗಳ ಸ್ಪರ್ಶ ನೀಡಿದೆ. ಎಲ್ಲ ಕೊಠಡಿಯಲ್ಲಿ ವ್ಯಂಗ್ಯ–ಚಿತ್ತಾರ ಬಿಡಿಸಲು ಎರಡೂವರೆ ತಿಂಗಳು ಬೇಕಾಯಿತು' ಎಂದರು ಪ್ರಕಾಶ್ ಶೆಟ್ಟಿ.

ಬಿವೇರ್ ಆಫ್ ಕಾರ್ಟೂನಿಸ್ಟ್!

'ಕಾರ್ಟೂನ್‌ನೆಸ್ಟ್'ನ ಜಗಲಿಯ ಎರಡು ಪಿಲ್ಲರ್‌ಗಳಿಗೆ ಹೊಂದಿಕೊಂಡು ಕುಳಿತುಕೊಳ್ಳಲು ವ್ಯವಸ್ಥೆ ಇದೆ. ಒಂದು ಭಾಗದಲ್ಲಿ ಕುಳಿತುಕೊಂಡರೆ ಅಜ್ಜನ ಪಕ್ಕದಲ್ಲಿ ಕುಳಿತುಕೊಂಡಂತೆ ತೋರುವ ರೀತಿಯಲ್ಲಿ ಚಿತ್ರವಿದೆ. ಮತ್ತೊಂದು ಭಾಗದಲ್ಲಿ ಮಗುವಿನ ಜೊತೆ ವಾತ್ಸಲ್ಯಮಯಿ ಅಜ್ಜಿ. ಮಧ್ಯದಲ್ಲಿ ತುಳುನಾಡಿನ ಅಸ್ಮಿತೆ ಕಂಬಳದ ದೃಶ್ಯಾವಳಿ. ಬಾಗಿಲ ಬಳಿ ನಾಯಿಯೊಂದು ಇದೆ, ಜೊತೆಯಲ್ಲಿ ಎಚ್ಚರಿಕೆಯ ಬರಹ–'ಬಿವೇರ್ ಆಫ್ ಕಾರ್ಟೂನಿಸ್ಟ್' (ವ್ಯಂಗ್ಯಚಿತ್ರಕಾರ ಇದ್ದಾನೆ, ಎಚ್ಚರಿಕೆ)!

ಒಳಗೆ ಕಾಲಿಟ್ಟು ಹಿಂದಿರುಗಿ ನೋಡಿದರೆ ಬಾಗಿಲ ಮೇಲೆ ಇಂದ್ರಲೋಕ. ಅಲ್ಲಿಂದ ಹೂಮಳೆಗರೆಯುತ್ತಿರುವ ರಂಭೆ ಮತ್ತು ಊರ್ವಶಿ. ಬಲಭಾಗದ ಗೋಡೆಯಲ್ಲಿ ಕಲಾವಿದನ ಸಣ್ಣ ಪರಿಚಯ. 15ನೇ ವರ್ಷದಲ್ಲಿ ಚಿತ್ರಗಳಿಂದ ರಂಜಿಸಲಾರಂಭಿಸಿದ, ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಓದಿದ ಪ್ರಕಾಶ್ ಶೆಟ್ಟಿ 'ಮಯೂರ'ಕ್ಕಾಗಿ ಬರೆದ ಮೊದಲ ಕಾರ್ಟೂನ್, ಬೆಂಗಳೂರಿನ ಟೈಮ್ಸ್ ಆಫ್ ಡೆಕ್ಕನ್, ಚಿತ್ರತಾರಾ, ಮುಂಗಾರು, ಎರ್ನಾಕುಳಂನಲ್ಲಿ ದಿ ವೀಕ್ ಮುಂತಾದ ಕಡೆ ಕೆಲಸ ಮಾಡಿದ್ದು, ಮದುವೆ, ತಂದೆ ದಿವಂಗತ ಮಹಾಬಲ ಶೆಟ್ಟಿ, ತಾಯಿ ಶಾರದಾ ಶೆಟ್ಟಿ, ಕಲಾವಿದರಾದ ಸಹೋದರರ ಜೊತೆ ಕಳೆದ ದಿನಗಳ ನೆನಪು...

ಇದುವೇ ಕಾರ್ಟೂನ್ ಗೂಡು

ಬ್ರೇಕ್‌ನ ನಂತರ...

ಸಣ್ಣ ಬ್ರೇಕ್ ನಂತರ ಮತ್ತೆ ಕಾರ್ಟೂನ್ ಲೋಕ. ಹಾಲ್‌ನಲ್ಲಿ ಮುಖ, ಅಡುಗೆಮನೆಯ ವರೆಗೆ ಬಾಲ ಚಾಚಿರುವ ಡೈನಾಸರ್. ಅದರ ಕೈಯಲ್ಲಿ ಡ್ರಾಯಿಂಗ್ ಪ್ಯಾಡ್ ಹಿಡಿದುಕೊಂಡಿರುವ ಪ್ರಕಾಶ್ ಶೆಟ್ಟಿ. ಕಲಾವಿದ ಸವಾಲುಗಳನ್ನು ಎದುರಿಸಿ ಮುನ್ನುಗ್ಗಿದ ಕಥಾನಕ ಬಿಂಬಿಸುವ ಸಾಂಕೇತಿಕ ಗೆರೆಗಳು.

ಗೋಡೆಯಲ್ಲಿ ಗಾಳ ಹಾಕುವವನೊಬ್ಬನಿಗೆ ಮೀನಿನ ಬದಲು ಸಿಕ್ಕಿದ್ದು ಯಾರದೋ ಶೂ. ಆದರೂ ನಿರಾಸೆಪಡುವಂತಿಲ್ಲ. ಶೂವಿನ ಒಳಗೆ ತುಂಬ ಮೀನು... ಅಲ್ಲೊಬ್ಬ ಸನ್ಯಾಸಿ ಇದ್ದಾನೆ. ಧ್ಯಾನ ಮಾಡುವಾಗ ಸುಮ್ಮನೇ ಸಮಯ ಪೋಲಾಗುವುದು ಬೇಡ ಎಂದು ಕೈಯಲ್ಲಿ ಗಾಳ ಹಿಡಿದುಕೊಂಡಿದ್ದಾನೆ.

ಲಂಡನ್‌ನ ಪ್ರಸಿದ್ಧ ಗಡಿಯಾರಕ್ಕೆ ಕಾರ್ಟೂನ್‌ನೆಸ್ಟ್‌ನಲ್ಲಿ ಒಂದು ಕಂಬದ ಆಸರೆ ಇದೆ. ಆ ಕಂಬದಲ್ಲಿ ಬೆಲ್‌ಬಾಟಮ್ ಪ್ಯಾಂಟ್ ಧರಿಸಿದ ಕಿಲಾಡಿಯೊಬ್ಬ ಹುಡುಗಿಯೊಬ್ಬಳಲ್ಲಿ ಪ್ರೇಮಯಾಚನೆ ಮಾಡುತ್ತಿದ್ದಾನೆ.

ಕಾರ್ಟೂನ್‌ನೆಸ್ಟ್‌ನ ಹಾಲ್
ಚಿತ್ರಗಳು: ಫಕ್ರುದ್ದೀನ್ ಎಚ್

ಪ್ರಕಾಶ್ ಶೆಟ್ಟಿ ತಮ್ಮ ದೇವರು ಎಂದುಕೊಂಡಿರುವ ಚಾರ್ಲಿ ಚಾಪ್ಲಿನ್ ಮತ್ತು ಗಾಂಧೀಜಿ ಕೂಡ ಹಾಲ್‌ನಲ್ಲಿದ್ದಾರೆ. ಹಾಲ್‌ನ ಸ್ವಿಚ್ ಬೋರ್ಡ್‌ನಲ್ಲಿ ಬೆಕ್ಕು ಶಾಕ್ ಆಗಿ ಕಿರುಚುತ್ತಿದೆ. ಅಪಾರ್ಟ್‌ಮೆಂಟ್‌ನಿಂದ ಕುಡುಕ ಗಂಡನನ್ನು 'ರಕ್ಕಸಿ ಪತ್ನಿ' ಎತ್ತಿ ಹೊರಗೆ ಬಿಸಾಕುವಾಗ ಆತನ ಕೈಯಲ್ಲಿರುವ 'ಕ್ಯಾಸ್ಟ್ರೊ ಮುಖರ್ಜಿ' ವಿಸ್ಕಿಯಾದರೂ ತನಗೆ ಸಿಗಲಿ ಎಂದು ಕೆಳಗೊಬ್ಬ ಬಲೆ ಹಿಡಿದುಕೊಂಡು ನಿಂತಿದ್ದಾನೆ. ಇಂಥ ಸಂದರ್ಭದಲ್ಲಿ ರೀಲ್‌ಗಾಗಿ ಫೋಟೊ ತೆಗೆಯದವರು ಇರುತ್ತಾರೆಯೇ..? ಇಲ್ಲೂ ಇದ್ದಾನೆ ಅಂಥ ಒಬ್ಬ ಹುಡಗ.

ಟಿವಿಯನ್ನು ಮಸಲ್‌ಮ್ಯಾನ್ ಗ್ಲೋಬ್ ಎತ್ತಿ ಹಿಡಿದಂತೆ ತೋರುವ ಕಲ್ಪನೆ ಇದೆ. ಟಿವಿ ಎಂದರೆ ಈಗ ಜಗತ್ತಲ್ಲವೇ? ಆದ್ದರಿಂದ ಜಗತ್ತನ್ನೇ ಎತ್ತಿ ಹಿಡಿದ ಧನ್ಯತೆ ಆತನಿಗೆ. ಆದರೆ ಆ ಜಗತ್ತನ್ನು ಕಂಡು ಬೇಸರಗೊಂಡಿರುವ ಒಬ್ಬ ಟಿವಿಯ ಹಿಂದಿನಿಂದ ಸುತ್ತಿಗೆಯನೆತ್ತಿ ಹೊಡೆಯಲು ಹೊಂಚು ಹಾಕುತ್ತಿದ್ದಾನೆ. ಮನೆಯ ವಿದ್ಯುತ್ ಸಂಪರ್ಕದ ಮೀಟರ್ ಬೋರ್ಡ್ ಆಟೊದಲ್ಲಿ ಸಾಗಿಸಲಾಗುತ್ತಿದೆ, ಗೋಡೆಯಲ್ಲಿರುವ ಬಲ್ಬ್ ಕದಿಯಲು ಕಳ್ಳನೊಬ್ಬ ಹೊಂಚು ಹಾಕುತ್ತಿದ್ದಾನೆ. ಇಲ್ಲಿ ಮಲಗಿದವರು ಕನಸಿನಲ್ಲಿ ಚಂದ್ರಲೋಕದತ್ತ ವಿಹಾರ ಕೈಗೊಂಡರೆ, ಸೊಂಟಕ್ಕೆ ನಾಗನನ್ನು ಕಟ್ಟಿಕೊಂಡಿರುವ ಗಣಪ ಮುಂದೆ ಬರಬೇಕೇ..?

ಕಾರ್ಟೂನ್‌ನೆಸ್ಟ್‌ನ ಮಲಗುವ ಕೋಣೆಯಲ್ಲಿ ಅಲಾರ್ಮ್ ಬೇಕೆಂದಿಲ್ಲ. ಅಲ್ಲೊಂದು ಕೋಳಿ ಇದೆ. ಆದರೆ, ಈ ಜಂಭದ ಕೋಳಿಯ ಕೊಬ್ಬು ನೋಡಿ, ಅದು ಕೂಗುವುದಿಲ್ಲ. ಗಡಿಯಾರ ಕೈಯಲ್ಲಿ ಹಿಡಿದುಕೊಂಡು ನಿಂತಿದೆ. ತೆಂಗಿನಕಾಯಿ ಕೊಯ್ಯಲು ಮಾರುತಿ ಕಾರಿನಲ್ಲಿ ಬರುವವನೂ ಇದ್ದಾನೆ.

ಡೈನಿಂಗ್ ಹಾಲ್‌ನ ಒಂದು ಭಾಗದಲ್ಲಿ ನಾಟಕದ ಪಾತ್ರಗಳು, ಮತ್ತೊಂದು ಕಡೆ ಮಲಗಿದ್ದವರನ್ನು ಅಟ್ಟಹಾಸ ಹಾಕಿ ಎಬ್ಬಿಸುವ ಯಕ್ಷಗಾನದ ಪಾತ್ರ. ಇಲ್ಲಿರುವ ಬೆಕ್ಕಿಗೆ ಸಿಕ್ಕಿರುವುದು ಮೀನಿನ ಬರೀ ಮುಳ್ಳು ಮಾತ್ರ. ಇಲ್ಲೊಂದು ಪೆಟ್ರೊಮ್ಯಾಕ್ಸ್ ಇದೆ. ಟ್ಯೂಬ್‌ಲೈಟಿಗೆ ಕಲ್ಲೆಸೆಯುವ ಪುಡಾರಿಯೂ ಇದ್ದಾನೆ. ಆಹಾರ ಸೇವಿಸುತ್ತಿದ್ದಾರೆ ಎಂದಮೇಲೆ ಕಿಟಕಿಯಿಂದ ನಾಯಿಗಳು ಇಣುಕಿ ನೋಡದೇ ಇರುತ್ತವೆಯೇ..?

ಅಡುಗೆಮನೆಯಲ್ಲಿ ಅಕ್ಕಿಮುಡಿ ಹೊತ್ತುಕೊಂಡು ಹೋಗುವವನೂ ಸ್ಟೇಟ್ ಬ್ಯಾಂಕ್ ಮಾರುಕಟ್ಟೆಯಲ್ಲಿ ಮೀನು ಖರೀದಿಸುವವರೂ ಅಡುಗೆ ಮಾಡುವವರೂ, ಇರುವೆಗಳೂ ಇವೆ, ಅರೆವ ಕಲ್ಲೂ ಇದೆ.

'ಕಾರ್ಟೂನ್‌ನೆಸ್ಟ್'ನಲ್ಲಿ ಸುತ್ತಾಡಿ ಹೊರ ಬಂದಾಗ ಹತ್ತಾರು ಭಾವಗಳು ಮನಸ್ಸಿನಲ್ಲಿ ಹಾಯ್ದು ಹೋದವು. ❖

'ಸಾಧಾರಣ ಮನೆಯ ಅಸಾಧಾರಣ ಮಾಡಿದೆ'

ಇದೊಂದು ಆರ್ಟ್ ಗ್ಯಾಲರಿ ಇದ್ದಂತೆ. ವರ್ಷಗಳ ಕಾಲ ಹೀಗೆಯೇ ಉಳಿಯುತ್ತದೆ. ಗೋಡೆಗೆ ಜಿಪ್ಸಂ ಪ್ಲಾಸ್ಟರಿಂಗ್ ಮಾಡಿದ್ದರಿಂದ ಚಿತ್ರ ಬಿಡಿಸಲು ಅನುಕೂಲ ಆಗಿದೆ. ಕೆಲವು ಹೋಟೆಲ್‌ಗಳಲ್ಲಿ ಈ ರೀತಿ ಚಿತ್ರಗಳನ್ನು ಬಿಡಿಸಿದ್ದೇನೆ. ನನ್ನ ಸಾಧಾರಣ ಮನೆಯನ್ನು ಅಸಾಧಾರಣ ಮಾಡಬೇಕು ಎಂಬ ಅಭಿಲಾಷೆಯಿಂದ ಈ ರೀತಿ ಮಾಡಿದ್ದೇನೆ. ಎಐಯಂಥ ತಂತ್ರಜ್ಞಾನ ಬಂದಿದೆ. ಇನ್ನು ಸ್ವಲ್ಪ ವರ್ಷ ಕಳೆದರೆ ಇದನ್ನೆಲ್ಲ ಕೈಯಲ್ಲಿ ಬರೆದಿದ್ದಾ ಎಂದು ಕೇಳುವವರನ್ನು ಕಂಡರೆ ಅಚ್ಚರಿಪಡಬೇಕಾದದ್ದಿಲ್ಲ.

–ಪ್ರಕಾಶ್ ಶೆಟ್ಟಿ ಕಲಾವಿದ

ಮುನ್ನೋಟ 11-01-2026 ರಿಂದ 17-01-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ನಡವಳಿಕೆಯಿಂದಾಗಿ ಮಾಡುವ ಕೆಲಸಗಳಲ್ಲಿ ಸಮಸ್ಯೆಗಳು ಬರಬಹುದು. ಆದಾಯವು ಕಡಿಮೆ ಇರುತ್ತದೆ. ಹಿರಿಯರಿಂದ ಸಾಕಷ್ಟು ಸಹಕಾರ ದೊರೆಯುತ್ತದೆ. ಅನವಶ್ಯ ಚಿಂತೆಗಳಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವ ಉತ್ಸಾಹ ಇರುತ್ತದೆ. ಮಕ್ಕಳಿಗಾಗಿ ಹಣ ಖರ್ಚಾಗುವುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯಾವುದೇ ಕೆಲಸ ಮಾಡಲು ಉತ್ಸಾಹವಿರುವುದಿಲ್ಲ. ಆದಾಯವು ನಿರೀಕ್ಷೆಯ ಮಟ್ಟ ತಲುಪುತ್ತದೆ. ಒಡಹುಟ್ಟಿದವರೊಡನೆ ಹಣಕಾಸಿನ ವ್ಯವಹಾರಗಳು ಬೇಡ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿಬರುವ ಸಾಧ್ಯತೆಗಳಿವೆ. ಉದ್ಯೋಗ ಬದಲಾವಣೆ ಮಾಡುವ ಮುನ್ನ ಸಾಕಷ್ಟು ಆಲೋಚನೆ ಮಾಡುವುದು ಒಳಿತು. ಖಾದ್ಯ ತೈಲವನ್ನು ಮಾರಾಟ ಮಾಡುವವರಿಗೆ ವ್ಯವಹಾರ ವೃದ್ಧಿಸಿ, ಲಾಭ ಹೆಚ್ಚುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಸಂಸಾರದಲ್ಲಿ ಈಗ ಸುಖವಿರುತ್ತದೆ. ಸದಾಕಾಲ ಪಕ್ಕದಲ್ಲಿ ಇರುವವರೇ ನಿಮ್ಮನ್ನು ವಂಚಿಸಬಹುದು ಎಚ್ಚರ. ಗೃಹ ನಿರ್ಮಾಣದ ಕುರಿತು ಆಲೋಚನೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಬಟ್ಟೆ ವ್ಯಾಪಾರ ಮಾಡುವವರಿಗೆ ಸ್ವಲ್ಪ ಆದಾಯ ಹೆಚ್ಚುತ್ತದೆ. ಸರ್ಕಾರಿ ಕಚೇರಿ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲಿ ಸಂತೋಷವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಪಶುಸಂಗೋಪನೆ ಮಾಡುವವರ ಆದಾಯ ಹೆಚ್ಚುತ್ತದೆ. ಹೊಸ ಜವಾಬ್ದಾರಿಗಳು ನಿಮ್ಮ ಹೆಗಲೇರಬಹುದು. ಕೆಲವು ರಾಜಕೀಯ ನಾಯಕರುಗಳಿಗೆ ವರಿಷ್ಠರ ಸಂಪರ್ಕ ದೊರೆಯಬಹುದು. ತಾಯಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮನಸ್ಸು ಗೊಂದಲದ ಗೂಡಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ಕೆಲಸಗಳಲ್ಲಿ ತಾಂತ್ರಿಕವಾಗಿ ತಪ್ಪಾಗದಂತೆ ಎಚ್ಚರ ವಹಿಸಿ. ತಿರುಗಾಟ ಹೆಚ್ಚಾಗುವ ಸಾಧ್ಯತೆಗಳಿವೆ. ಸರ್ಕಾರಿ ಸವಲತ್ತುಗಳು ಈಗ ಸಿಗಲಾರಂಭಿಸುತ್ತವೆ. ಮಾನಸಿಕ ಒತ್ತಡಗಳು ಹೆಚ್ಚಾಗುವ ಸಾಧ್ಯತೆ ಇದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ಅಗತ್ಯವನ್ನು ಪೂರೈಸುತ್ತದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕಾಗಿ ಹೆಚ್ಚು ಕಷ್ಟಪಡಲೇಬೇಕು. ಶ್ವಾಸಕೋಶದ ತೊಂದರೆಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯ ಬೇಜವಾಬ್ದಾರಿತನ ಬೇಸರವನ್ನು ತರಿಸುತ್ತದೆ. ಪ್ರಾಚಾರ್ಯರು ಮತ್ತು ಉಪನ್ಯಾಸಕರಿಗೆ ಉನ್ನತ ಹುದ್ದೆ ಲಭಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿಭೂಮಿ ಕೊಳ್ಳಲು ಸ್ವಲ್ಪ ಹಣ ವಿನಿಯೋಗ ಮಾಡುವಿರಿ. ಬಂಧು ಮಿತ್ರರ ಸಲಹೆಗೆ ಗಮನ ಕೊಡುವುದು ಒಳಿತು. ನಿಮ್ಮ ಒಣ ಪ್ರತಿಷ್ಠೆ ಮತ್ತು ದಡ್ಡತನದ ತೀರ್ಮಾನಗಳಿಂದ ನಷ್ಟ ಅನುಭವಿಸುವಿರಿ. ಕಾರ್ಮಿಕರಿಗೆ ಹೆಚ್ಚು ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ. ವಿದೇಶಕ್ಕೆ ಹೆಚ್ಚಿನ ಶಿಕ್ಷಣಕ್ಕಾಗಿ ಹೋಗಬೇಕೆನ್ನುವವರಿಗೆ ಅವಕಾಶ ಒದಗಿಬರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ನಿಮ್ಮ ವೈಯಕ್ತಿಕ ಬಲದ ಮೇಲೆ ನಂಬಿಕೆ ಇಡಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ಸಿಗುವುದು ಕಡಿಮೆ. ಆರೋಗ್ಯಕ್ಕಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಮಕ್ಕಳಿಗೆ ಉದ್ಯೋಗದಲ್ಲಿ ಅನುಕೂಲವಾಗುತ್ತದೆ. ಹಳೆ ಸಾಲಗಳು ಈಗ ವಾಪಾಸ್ ಬರುವ ಸಾಧ್ಯತೆಗಳಿವೆ. ವೃತ್ತಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು. ಬಟ್ಟೆ ನೇಯುವವರಿಗೆ ಹೆಚ್ಚಿನ ಬೇಡಿಕೆ ಮತ್ತು ಲಾಭ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಹೆಚ್ಚು ಉತ್ಸಾಹಿಗಳಾಗಿ ಕೆಲಸ ಮಾಡುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳು ನಿಮ್ಮಿಂದ ಸಹಾಯ ಪಡೆದು, ನಿಮಗೇ ದ್ರೋಹ ಎಸಗಲು ಪ್ರಯತ್ನಿಸುವರು. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಹೆಚ್ಚು ತಿರುಗಾಟದಿಂದ ಆಯಾಸವಾಗಬಹುದು. ನಿಮ್ಮ ಕೆಲವು ಸಮಸ್ಯೆಗಳು ನಿಧಾನವಾಗಿ ಬಗೆಹರಿಯುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬದುಕಿನಲ್ಲಿ ಹೊಸ ಉತ್ಸಾಹ, ಹುರುಪು ಮೂಡುತ್ತದೆ. ಆದಾಯವು ಕಡಿಮೆ ಇದ್ದರೂ ನಿಭಾಯಿಸುವ ಶಕ್ತಿ ನಿಮಗಿರುತ್ತದೆ. ಕಾನೂನಿನ ಸಮಸ್ಯೆಗಳು ಸರಾಗವಾಗಿ ಬಗೆಹರಿದು, ಮನಸ್ಸಿಗೆ ನಿರಾಳವೆನಿಸುತ್ತದೆ. ಇಂಧನ ಮಾರಾಟಗಾರರಿಗೆ ಸಾಕಷ್ಟು ಲಾಭ ದೊರೆಯುತ್ತದೆ. ಒಡಹುಟ್ಟಿದವರ ಸಹಕಾರ ನಿರೀಕ್ಷಿತ ಸಮಯದಲ್ಲಿ ಸಿಗುತ್ತದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಕಡಿಮೆ ಇರುತ್ತದೆ. ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕಿ. ಬೆಳ್ಳಿ ವ್ಯಾಪಾರಿಗಳಿಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯುತ್ತದೆ. ಬಹುದಿನಗಳಿಂದ ಮುಂದೂಡುತ್ತಿದ್ದ ದೂರ ಪ್ರಯಾಣ ಈಗ ಸಾಕಾರವಾಗುತ್ತದೆ. ಖರ್ಚಿಗೆ ಕಡಿವಾಣ ಹಾಕುವುದರಿಂದ ಅರ್ಧ ಆರ್ಥಿಕ ಸಂಕಷ್ಟ ನೀಗುತ್ತದೆ. ಕಟ್ಟಡ ನಿರ್ಮಾಣ ಮಾಡುವವರಿಗೆ ಕೈತುಂಬಾ ಕೆಲಸ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವೃತ್ತಿಯಿಂದ ಮಾತ್ರ ಆದಾಯವಿರುತ್ತದೆ. ನಿಮ್ಮ ನಕಾರಾತ್ಮಕ ನಡವಳಿಕೆಯಿಂದ ಜನರೆದುರು ಮುಜುಗರಕ್ಕೆ ಒಳಗಾಗುವಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮ್ಮ ಪಾಲು ಕಡಿಮೆಯಾಗಬಹುದು. ಐಶಾರಾಮಿ ಖರ್ಚುಗಳ ಬಗ್ಗೆ ಎಚ್ಚರವಹಿಸುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಪ್ರಗತಿ ಇರುತ್ತದೆ.

ಪದಬಂಧ 2926



ಮೇಲಿನಿಂದ ಕೆಳಕ್ಕೆ

1. 'ಭವ'ದಲ್ಲಿ ವಿಶೇಷ ಕಲಿಕೆ ಪಡೆದ ನುರಿತ	4
2. ಹಿಯ್ಯಾಳಿಸುವಿಕೆ ಹೀಗೆ ಇರುತ್ತೆ	4
3. ಸಿಖ್ ಮಾರ್ಗದರ್ಶಕ ತೆರೆದ ಬಾಗಿಲು	4
5. ಕೆಳಗಿನಿಂದ ಅಂಧಕಾರ ಆವರಿಸಿ, ಮೇಲಿನಿಂದ ಸೃಷ್ಟಿಯಾದ ಜಾತಿ ಗುಂಪು	2
7. ಅಮೂಲ್ಯವಾದ ಹರಳಿನ ನಾಮದಿಂದ ಲಲಾಟ ಶೋಭಿಸಿದೆ	5
9. ಸರಿಯಲ್ಲಿ ದರಿಯನ್ನು ನೂಕಿದರೆ ಪ್ರಸ್ತುತವಾಗಬಹುದೆ?	3
10. ನುಡಿ ಪಾದರಸದಂತೆ ಹರಿದು ಬಿಸಿ ಮುಟ್ಟಿಸುತ್ತದೆ	5
13. ವೈರಿಯಲ್ಲಿರುವ ವಿಧಾನ	3
17. ಹೊಸಮಂದಿ ಇವರು	4
18. ಜೀವನದಲ್ಲಿ ಜಿಗುಪ್ಸೆಯಾದಾಗ ಕಾಣುವ ಜಲ ಮೂಲಗಳು	4
19. ಅಂತರ್ಜಾಲದಲ್ಲಿ ಖರೀದಿಸುವಾಗ ಸಿಗುವ ಆಂಗ್ಲ ಗಾಡಿ	2
20. ಸೂರ್ಯನ ಜೊತೆ ಸೇರಿದ ಅವನ ಬಳಗ	4

ಎಡದಿಂದ ಬಲಕ್ಕೆ

1. ಯಾವ ನೆರವೂ ಕಾಣದ ದಿಕ್ಕು ತೋಚದ ಸ್ಥಿತಿ	6
4. ಸೀಮೆಯಿಂದ ಹೊರಹಾಕುವ ಕಟ್ಟಳೆ	4
5. ನೀರು ಕುದ್ದು ಮತ್ತೆ ವಾಪಸ್ಸು	3
6. ಕಾವ್ಯ ಕರ್ತೃವಿಗೆ ಕೃತಿ ಕಾರಕನೆಂದು ಸೂಚಿಸುವ ಪದ	4
8. ನಿಂದನೆಯ ರಾಡಿಯನ್ನು ಮುಖದಮೇಲೆ ಎಸೆ	5
11. ಶಾಂತರೂಪಿ ಶಿವನ ಉಗ್ರರೂಪ	2
12. ಕೃಷ್ಣನ ಮೇಲಿನ ಪ್ರೀತಿ-ಭಕ್ತಿಯ ಆಂಡಾಳ್ ರಚಿಸಿದ ಶ್ರೇಷ್ಠ ಕೃತಿ	4
14. ತಲೆ ತಗ್ಗಿಸಿ ಮಂದೆಯಲಿ ಸಾಗುವ ಪ್ರಾಣಿಯ ಕೂಸು ಹಿಂದುಮುಂದಾಗಿ ನಡೆದಿದೆ	4
15. ಒಮ್ಮೊಮ್ಮೆ ಬೇಲಿಯೆದ್ದು ಇದ್ದನ್ನೇ ಮೇಯಬಹುದು	2
16. ಸ್ವಪ್ನದಲ್ಲಿ ಮಾತಾಡುವಿಕೆ	5
19. ಬಯಕೆ ಹೆಚ್ಚಾಗಿ ಅವಸರಿಸುವ ಕಾಮಿ	4
21. ರಜಾಕಾಲದ ವಿಹಾರ ವೈಭವ ತಾಣ ಇದೀಗ ರಾಜಕಾರಣದ ರಾಜಕೀಯ ತಂಗುಮನೆ	3
22. 'ಅಂಬಾ' ಎಂದು ಕರೆಸಿಕೊಳ್ಳುವ ವಿಶ್ವಜನನಿ	4
23. ಬಾನಾಡಿಗೆ ಕಾಣುವ ವಿಸ್ತಾರ ದೃಷ್ಟಿ	6

ಪದಬಂಧ ಉತ್ತರ -2925

ಮೇಲಿಂದ ಕೆಳಕ್ಕೆ

1.ಹರಿಕಥಾಮೃತಸಾರ 2.ತನ್ಮಯ 3.ಮಾರಾಯ 4.ಹಲಕೆಲ 5.ಜನನ 6.ಯಕ್ಷಕಿನ್ನರ 7.ಹಾಸು 10.ನಿರಪರಾಧ 12.ಜಗದೋದ್ಧಾರಕ 14. ಪ್ರಸಾದ 15.ಅಂಗಾರಕ 16.ಕುಡಿ 19.ನವಮ 20.ಪತನ

ಎಡದಿಂದ ಬಲಕ್ಕೆ

1.ಹರಜಾತ 3.ಮಾಧ್ಯಮಸಮೂಹ 5.ಜಯವಿಜಯ 7.ಹಾರಿಕೆ 8.ಕ್ಷಮಿಸು 9.ಮೃಗನಯನಿ 11.ರಸಾನ್ನ 13.ರಥಪ್ರಸಂಗ 16.ಕುಬೇರಾ 17.ಗಾರುಡಿ 18.ಧನಸಂಪದ 21.ಕದನವಿರಾಮ 22.ನಳಪಾಕ

ಬಾಗಲಕೋಟೆಯ 'ಓದು ಗೆಳೆಯರ ಬಳಗ'

• ರಾಜಕುಮಾರ ಕುಲಕರ್ಣಿ

ಜಿಲ್ಲೆಯ ಸಾಹಿತ್ಯಾಸಕ್ತರರು ಓದಿನ ಗೀಳಿನಿಂದ ಹುಟ್ಟು ಹಾಕಿದ ಬಳಗವಿದು. ಆರು ಜನ ಯುವಕರಿಂದ ಪ್ರಾರಂಭಗೊಂಡ ಈ ಬಳಗ ಕಳೆದ ಎರಡು ವರ್ಷಗಳಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳ ಕುರಿತು ಓದು, ಚರ್ಚೆ ಮತ್ತು ಸಂವಾದಗಳನ್ನು ನಡೆಸಿದೆ...

ಇತ್ತೀಚೆಗೆ ಬಾಗಲಕೋಟೆ ನಗರದಲ್ಲಿ 'ಓದು ಗೆಳೆಯರ ಬಳಗ' ಎನ್ನುವ ಸಾಹಿತ್ಯಾಸಕ್ತರ ಗುಂಪು ವಿಕ್ರಮ ವಿಸಾಜಿ ಅವರ ರಸಗಂಗಾಧರ, ರಕ್ತವಿಲಾಪ ಮತ್ತು ಕಲ್ಯಾಣಪುರ ಈ ಮೂರು ನಾಟಕಗಳ ಸಾಹಿತ್ಯ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿತ್ತು. ಔಪಚಾರಿಕತೆಯ ಯಾವ ಗೌಜುಗದ್ದಲವಿಲ್ಲದೆ ತುಂಬ ಸರಳವಾಗಿ ನಡೆದ ಕಾರ್ಯಕ್ರಮ ಅದಾಗಿತ್ತು. ಸಭಿಕರ ಸಂಖ್ಯೆ ಸಣ್ಣದಾಗಿದ್ದರೂ ಅವರೆಲ್ಲ ಸಾಹಿತ್ಯದಲ್ಲಿ ಆಸಕ್ತಿ ಉಳ್ಳವರಾಗಿದ್ದರು. ನಗರದ ಉದ್ಯಾನವನದ ಮಂಟಪದಲ್ಲಿ ವೃತ್ತಾಕಾರದಲ್ಲಿ ನೆಲದ ಮೇಲೆ ಕುಳಿತು ಮೂರು ನಾಟಕಗಳ ಕುರಿತು ಮಾತುಕತೆ ಆಪ್ತ ಹರಟೆಯ ಭಾವದಲ್ಲಿ ಜರುಗಿತು. ವಿಕ್ರಮ ವಿಸಾಜಿ ಅವರು ಇಂಥ ಕಾರ್ಯಕ್ರಮಗಳು ತಮಗೂ ಇಷ್ಟವೆಂದು ಸಂತಸಪಟ್ಟರು. ಹಾರ, ಶಾಲುಗಳ ಆಡಂಬರವಿಲ್ಲದೆ ಪುಸ್ತಕವನ್ನು ಅತಿಥಿಗಳಿಗೆ ನೀಡಿ ಸನ್ಮಾನಿಸಲಾಯಿತು. ಬಳಗದ ಸದಸ್ಯರು ಮನೆಯಲ್ಲಿ ಸಿದ್ದಪಡಿಸಿಕೊಂಡು ತಂದಿದ್ದ ಉಪಾಹಾರ ಮತ್ತು ಚಹಾ ಸೇವನೆಯ ನಂತರ ಬರವಣಿಗೆಯ ಒಂದಿಷ್ಟು ಹೊಸ ಹೊಳಹುಗಳೊಂದಿಗೆ ಸಾಹಿತ್ಯಾಸಕ್ತರು ನಿರ್ಗಮಿಸಿದರು.

ಯುವ ಕಥೆಗಾರ ಅನೀಲ್ ಗುನ್ನಾಪೂರ ಅವರ ಮುಂದಾಳತ್ವದಲ್ಲಿ ಆರು ಜನ ಯುವಕರು ಕಟ್ಟಿಕೊಂಡ ಈ 'ಓದು ಗೆಳೆಯರ ಬಳಗ' ಕಳೆದ ಎರಡು ವರ್ಷಗಳಲ್ಲಿ ಸುಮಾರು ಹತ್ತು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಕಥೆ, ಕಾದಂಬರಿ, ಕವಿತೆ, ನಾಟಕ ಮತ್ತು ಪ್ರಬಂಧ... ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕುರಿತು ಓದು, ಚರ್ಚೆ ಮತ್ತು ಸಂವಾದಗಳು ಏರ್ಪಟ್ಟಿವೆ. ಎಸ್.ಗಂಗಾಧರಯ್ಯ, ಆರಡಿ ಮಲ್ಲಯ್ಯ, ಲಕ್ಷ್ಮಣ ಬದಾಮಿ, ಕಪಿಲ ಹುಮನಾಬಾದೆ, ಅನೀಲ್ ಗುನ್ನಾಪೂರ, ಮಲ್ಲಿಕಾರ್ಜುನ ಶೆಲ್ಲಿಕೇರಿ, ರಾಜಕುಮಾರ ಕುಲಕರ್ಣಿ ಇತ್ಯಾದಿ ಲೇಖಕರ ಕೃತಿಗಳು ಈ ಬಳಗ ಆಯೋಜಿಸಿದ್ದ ಕಾರ್ಯಕ್ರಮಗಳಲ್ಲಿ ಚರ್ಚೆ ಮತ್ತು ಸಂವಾದಕ್ಕೆ ಒಳಪಟ್ಟಿವೆ. ಕನ್ನಡ ರಾಜ್ಯೋತ್ಸವದ ದಿನದಂದು ಆಯೋಜಿಸಿದ ಕಾರ್ಯಕ್ರಮ ಕನ್ನಡ ಪದ್ಯಗಳ ವಾಚನಕ್ಕೆ ಮೀಸಲಾಗಿತ್ತು. ಯುವ ಮತ್ತು ಹಿರಿಯ ಕವಿಗಳ ಕವನಗಳನ್ನು ಭಾವಪೂರ್ಣವಾಗಿ ವಾಚಿಸಲಾಯಿತು.

ಬಳಗದ ಎಲ್ಲ ಸದಸ್ಯರು ಯುವಕರಾಗಿದ್ದು ಜೊತೆಗೆ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವವರು. ಬಳಗದ ಕಾರ್ಯಕ್ರಮಕ್ಕೆಂದೇ ಯುವಕರಿಂದ ನಿವೃತ್ತರವರೆಗೆ ವಿವಿಧ ವಯೋಮಾನದ ಸಾಹಿತ್ಯಾಸಕ್ತರ ಒಂದು ಗುಂಪು ರೂಪುಗೊಂಡಿದೆ. ಈ ಗುಂಪಿನಲ್ಲಿ ವ್ಯಾಪಾರಸ್ಥರು ಮತ್ತು ಗೃಹಿಣಿಯರೂ ಸೇರಿರುವುದು ವಿಶೇಷ. ಎಲ್ಲರೂ ಆಸಕ್ತಿಯಿಂದ ಚರ್ಚೆಯಲ್ಲಿ ಭಾಗಿಗಳಾಗಿ ಬೇರೆಯವರ ಮಾತುಗಳನ್ನು ಮುತುವರ್ಜಿಯಿಂದ ಆಲಿಸುತ್ತಾರೆ. ಸಾಹಿತ್ಯದ ಕುರಿತಾದ ಸಂದೇಹಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಕೇಳಿ ಪರಿಹರಿಸಿಕೊಳ್ಳುತ್ತಾರೆ. ಉದ್ಯಾನವನಕ್ಕೆ ಆಗಮಿಸುವ ಸಾರ್ವಜನಿಕರು ಸಹ ಕುತೂಹಲದಿಂದ ಕಾರ್ಯಕ್ರಮದಲ್ಲಿ ಭಾಗಿಗಳಾಗುತ್ತಾರೆ.

ಸಾಹಿತ್ಯ ಸಂವಾದದಲ್ಲಿ ಬಳಗದ ಸದಸ್ಯರು

ಹೀಗಿದೆ ನೋಡಿ ನಮ್ಮ ಬಳಗ

ಮೇಲ್ನೋಟಕ್ಕೆ ಇಂಥ ಪ್ರಯತ್ನಗಳು ಸಣ್ಣ ಸಂಗತಿಗಳೆಂದು ಅನಿಸಬಹುದು. ನಿಜವಾದ ಅರ್ಥದಲ್ಲಿ ಇವುಗಳು ದೊಡ್ಡ ಪಲ್ಲಟಕ್ಕೆ ಕಾರಣವಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ಸಾಹಿತ್ಯದ ಕಾರ್ಯಕ್ರಮಗಳು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಏರ್ಪಾಡಾಗುತ್ತಿವೆ. ಸಮಾನಮನಸ್ಕರು ಒಂದೆಡೆ ಸೇರಿ ತಾವು ಓದಿದ ಉತ್ತಮ ಪುಸ್ತಕಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಪುಸ್ತಕ ಓದಿನ ವಾತಾವರಣವನ್ನು ಎಲ್ಲೆಡೆಯೂ ಪಸರಿಸುವ ದಿಸೆಯಲ್ಲಿ ಅನೇಕ ತರುಣ ಬರಹಗಾರರು ಮತ್ತು ಪ್ರಕಾಶಕರು ಗುಂಪುಗಳನ್ನು ರಚಿಸಿಕೊಂಡು ಸಾಹಿತ್ಯ ಸೇವೆಯಲ್ಲಿ ಸಕ್ರಿಯರಾಗಿರುವರು. ಬಾ ಗುರು ಬುಕ್ ತಗೋ, ಹಲೋ ಕತೆಗಾರ, ಹಲೋ ಕತೆಗಾರ್ತಿ, ಕವಿಗಳಿಗೆ ಕ್ಲಾಸು, ಮಾಸದ ಮಂಥನ, ಕೇಳು ಮನಸೇ, ಅರಳಿಕಟ್ಟೆ ಇತ್ಯಾದಿ ಸಾಹಿತ್ಯಿಕ ಕಾರ್ಯಕ್ರಮಗಳ ಮೂಲಕ ಪುಸ್ತಕ ಓದು, ಚಿಂತನ, ಸಂವಾದ ನಡೆಯುತ್ತಿವೆ. ಪುಸ್ತಕಗಳ ಓದಿನ ರಸಾನುಭವವನ್ನು ಎಲ್ಲೆಡೆ ಪಸರಿಸುವುದೊಂದೇ ಈ ಎಲ್ಲ ಕಾರ್ಯಕ್ರಮಗಳ ಉದ್ದೇಶವಾಗಿದೆ. ಯುವ ಬರಹಗಾರರು ಮತ್ತು ಪ್ರಕಾಶಕರು ಯಾವ ಅಹಂ ಇಲ್ಲದೆ ಉದ್ಯಾನವನದಲ್ಲೋ, ರಸ್ತೆಯ ಮೇಲೋ, ಉಪಾಹಾರ ಗೃಹದಲ್ಲೋ ಓದುಗರನ್ನು ಸಂಪರ್ಕಿಸಿ ಮಾತಿಗಿಳಿಯುವ ವಿನೂತನ ಕಾರ್ಯಕ್ರಮಗಳು ಓದುಗರಿಗೂ ತುಂಬ ಆಪ್ತವೆನಿಸುತ್ತಿವೆ.

ಕೆಲವು ದೃಷ್ಟಾಂತಗಳು...

ಸಾಹಿತ್ಯಾಸಕ್ತರ ಗುಂಪುಗಳು ರಚನೆಯಾಗಿ ಆ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯವಾದದ್ದನ್ನು ಸಾಧಿಸಿದ್ದಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವು ದೃಷ್ಟಾಂತಗಳಿವೆ. ಬಿ.ಎಂ.ಶ್ರೀ ಅವರ ನೇತೃತ್ವದ 'ತಳಿರು ತಂಡ', ಪಂಜೆಮಂಗೇಶರಾಯರ 'ಮಿತ್ರ ಮಂಡಳಿ' ಬೇಂದ್ರೆ ಅವರ ನಾಯಕತ್ವದ 'ಗೆಳೆಯರ ಬಳಗ', ಮಧುರಚೆನ್ನರು ಕಟ್ಟಿದ 'ಹಲಸಂಗಿ ಗೆಳೆಯರು' ಕೆಲವು ಶ್ರೇಷ್ಠ ಉದಾಹರಣೆಗಳಾಗಿವೆ. ಬೇಂದ್ರೆಯವರ 'ಗೆಳೆಯರ ಗುಂಪು' ಕುರಿತು 'ಗೆಳೆಯರ ಗುಂಪಿನ ಗೆಳೆಯರೆಲ್ಲರೂ ಕನಸುಗಾರರು. ಯಾವುದೇ ನಿಯಮ, ನಿರ್ಬಂಧಗಳಿಲ್ಲದ ಗೆಳೆತನದ ವಾತಾವರಣದಲ್ಲಿ ಸಮಾನ ಮನಸ್ಕರಾಗಿ ನವ ಕರ್ನಾಟಕದ ಪುನರುಜ್ಜೀವನಕ್ಕೆ ಉತ್ತರ ಕರ್ನಾಟಕದ ಪರವಾಗಿ ತಮ್ಮ ವೈಶಿಷ್ಟ್ಯಪೂರ್ಣ ಕೊಡುಗೆಯನ್ನು ಈ ಗೆಳೆಯರು ನೀಡಿದರು' ಎಂದು 'ಇದು ಬರಿ ಬೆಳಗಲ್ಲೊ ಅಣ್ಣಾ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಹಲಸಂಗಿ ಗೆಳೆಯರ ಗುಂಪಿನ ಸಾಧನೆ ಕೂಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವಪೂರ್ಣ ಪ್ರಯತ್ನವಾಗಿ ದಾಖಲಾಗಿದೆ. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಒಂದು ಅಜ್ಞಾತ ಹಳ್ಳಿಯಾದ ಹಲಸಂಗಿಗೆ ಜಾನಪದ ಕ್ಷೇತ್ರದ ಯಾತ್ರಾಸ್ಥಳ ಎನ್ನುವ ಹಿರಿಮೆ ತಂದುಕೊಟ್ಟ ಶ್ರೇಯಸ್ಸು ಹಲಸಂಗಿ ಗೆಳೆಯರಿಗೆ ಸಲ್ಲುತ್ತದೆ.

ಕನ್ನಡ ಪುಸ್ತಕಗಳನ್ನು ಓದುವ ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ ಎನ್ನುವುದು ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಆರೋಪವಾಗಿದೆ. ಈ ಆರೋಪದಲ್ಲೂ ಹುರುಳಿರುವುದರಿಂದ ಅದನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಸದ್ಯದ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಯುವಜನಾಂಗ ಸಕ್ರಿಯವಾಗಿದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್, ಎಕ್ಸ್, ಇನ್‌ಸ್ಟಾಗ್ರಾಮ್‌ಗಳ ಬಳಕೆ ವ್ಯಾಪಕವಾಗುತ್ತಿದೆ. ಈ ಸಾಮಾಜಿಕ ಮಾಧ್ಯಮದ ಆಕರ್ಷಣೆಗೆ ಹದಿಹರೆಯದವರು ಮಾತ್ರವಲ್ಲ, ಮಧ್ಯವಯಸ್ಕರು ಮತ್ತು ವೃದ್ಧರು ಕೂಡ ಒಳಗಾಗುತ್ತಿರುವರು. ಪುಸ್ತಕಗಳ ಓದಿನಿಂದ ದೂರಾಗುತ್ತಿರುವವರನ್ನು ಮತ್ತೆ ಪುಸ್ತಕಗಳತ್ತ ಕರೆತರುವ ಕೆಲಸವನ್ನು 'ಓದು ಗೆಳೆಯರ ಬಳಗ'ದಂತಹ ಗುಂಪುಗಳು ಮಾಡುತ್ತಿವೆ. ಸಣ್ಣ ಗುಂಪುಗಳನ್ನು ರಚಿಸಿಕೊಂಡು ಸಾಹಿತ್ಯಾಸಕ್ತಿಯ ಸಮಾನಮನಸ್ಕರು ಮಾಡುತ್ತಿರುವ ಪ್ರಯತ್ನಗಳು ಭರವಸೆಯ ಆಶಾಕಿರಣದಂತೆ ಗೋಚರಿಸುತ್ತಿವೆ. ಇಂಥ ಸಣ್ಣ ಪ್ರಯತ್ನಗಳೇ ಭವಿಷ್ಯದಲ್ಲಿ ಬಹು ದೊಡ್ಡ ಪಲ್ಲಟಕ್ಕೆ ಕಾರಣವಾಗುವ ದಿನಗಳು ದೂರವಿಲ್ಲ. ನಮ್ಮ ಪೂರ್ವಸೂರಿಗಳು ಇದನ್ನು ಸಾಧ್ಯವಾಗಿಸಿದ ಉದಾಹರಣೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲೇ ಇದೆ. ❖

ವರ್ಷಕ್ಕೊಮ್ಮೆ ರಾಯಬಾಗ ಕುದುರೆ ಸಂತೆ

8ನೇ ಪುಟದಿಂದ..

ಸೌಂದರ್ಯ ವರ್ಧನೆಗೆ ಖರ್ಚು

ನೋಡಿದರೆ ನೋಡುತ್ತಲೇ ನಿಲ್ಲಬೇಕು ಎಂಬ ರೀತಿಯಲ್ಲಿ ಸೌಂದರ್ಯದ ಗಣಿಯಾಗಿರುವ ಕುದುರೆಗಳ ಅಲಂಕಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಕನಿಷ್ಠ ಒಂದು ಕುದುರೆ ಅಲಂಕಾರಕ್ಕೆ ₹20 ರಿಂದ ₹30 ಸಾವಿರ ವರೆಗೆ ಖರ್ಚು ಮಾಡಲಾಗುತ್ತದೆ. ಸವಾರ ಕುಳಿತುಕೊಳ್ಳಲು ಆಸನ (ಶೀಟ್), ಮುಖಕ್ಕೆ ಮಕಾಡಾ, ಕಣ್ಣಿಗೆ ಅಂಧಾರಿ, ಕಾಲಿಗೆ ಗೆಜ್ಜೆ, ಎದೆಗೆ ಚಾತಿ ಬೆಲ್ಟ್ ಹಾಗೂ ತಲೆಗೆ ತುರಾಯಿ ಸೇರಿದಂತೆ ವಿವಿಧ ಸೌಂದರ್ಯ ಸಾಧನಗಳನ್ನು ಬಳಸಲಾಗುತ್ತದೆ. ಇದರಿಂದ ಕುದುರೆಗಳ ಸೌಂದರ್ಯ ಇಮ್ಮಡಿಗೊಳ್ಳುತ್ತದೆ.

ಗ್ರಾಮೀಣ ಭಾಗದ ಜಾತ್ರೆ, ಉತ್ಸವಗಳ ಸ್ಪರ್ಧೆಗಳಲ್ಲಿ ರೇಸ್ (ಶರ್ಯತ್ತು) ನಲ್ಲಿ ಬಳಸುವ ಕುದುರೆಗಳು ದೇಶಿ ತಳಿಯಾಗಿದ್ದು, ರಫ್ ಆ್ಯಂಡ್ ಟಫ್ ಆಗಿರುತ್ತವೆ. ಮೈ ಮೇಲೆ ಕೈ ಇಟ್ಟರೆ ಸಾಕು ಶರವೇಗದಲ್ಲಿ ಓಡಿ ನಿಗದಿತ ಗುರಿ ಮುಟ್ಟುತ್ತವೆ. ನಯ ನಾಜೂಕಿನಿಂದ ಕೂಡಿರುವ ಜಾತಿ ಕುದುರೆಗಳನ್ನು ಮದುವೆ, ಜಾತ್ರೆ, ಉತ್ಸವ, ಕಾರ್ಯಕ್ರಮ, ಸಿನಿಮಾ ಚಿತ್ರೀಕರಣದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಎರಡು ಕಾಲಗಳ ಮೇಲೆ ನಿಲ್ಲುವುದು, ವಾದ್ಯದ ಶಬ್ದಕ್ಕೆ ತಕ್ಕಂತೆ ನೃತ್ಯ ಮಾಡುವುದು, ಸಂಯಮದಿಂದ ಮೆರವಣಿಗೆಯ ರಥ ಅಥವಾ ಗಾಡಿಯನ್ನು ಎಳೆಯುವುದನ್ನು ಮಾಡುತ್ತವೆ. ಇವು ಶಬ್ದಕ್ಕೆ ಹೆದರುವುದಿಲ್ಲ, ಜನರಿಗೆ ಬೆದರುವುದಿಲ್ಲ.

...ಶವ ದಹನ ಗಾಡಿ!

8ನೇ ಪುಟದಿಂದ..

ರಾತ್ರಿ ಶವದ ಮುಂದೆ ಭಜನೆ ನಡೆಸಲಾಗುತ್ತಿತ್ತು. ಯಾರೊಬ್ಬರೂ ಮಲಗದೇ ಎಚ್ಚರವಾಗಿರುತ್ತಿದ್ದರು. ಮರುದಿನ ಶವವನ್ನು ಹೊತ್ತೊಯ್ಯಲು ತಾಮುಂದು ನಾಮುಂದು ಎನ್ನುವಂತಹ ದೃಶ್ಯ. ಒಂದಷ್ಟು ದೂರ ಒಬ್ಬೊಬ್ಬರು ಶವಕ್ಕೆ ಹೆಗಲು ಕೊಟ್ಟರೆ, ತಕ್ಷಣವೇ ಇನ್ನೊಬ್ಬರು ಸಿದ್ಧವಾಗಿ ಹೆಗಲು ಕೊಡುತ್ತಿದ್ದರು. ಈಗ ಸ್ಮಶಾನಕ್ಕೆ ಶವ ಸಾಗಿಸಲು ವಾಹನ ಸೌಲಭ್ಯವಿದೆ. ಹೀಗಾಗಿ ಹೆಗಲು ಕೊಡುವ ಪ್ರಮೇಯವೇ ಇಲ್ಲ. ಮದುವೆಗೆ ಹೋಗದಿದ್ದರೂ ಪರವಾಗಿಲ್ಲ, ಸಾವಿಗೆ ಹೋಗಬೇಕು ಎನ್ನುವ ಮಾತಿದೆ. ಅಲ್ಲದೇ, ತೀರಾ ಇತ್ತೀಚಿನವರೆಗಿನ ಮೌಲ್ಯವೂ ಇದೇ ಆಗಿತ್ತು. ಕೆಲವೊಂದು ಊರುಗಳಲ್ಲಿ ಶವ ನೋಡಲು ಬಂದವರಿಗೆ ಅಕ್ಕಪಕ್ಕದ ಮನೆಯವರು ಅಡುಗೆ ಮಾಡಿ ಊಟ ಹಾಕುತ್ತಿದ್ದರು. ಸತ್ತವರ ಮನೆಗೆ ಬಂದು ಹಸಿದು, ಸಂಕಟಪಟ್ಟು ಹೋಗಬಾರದು ಎನ್ನುವ ಭಾವದಿಂದ ಬಂದವರೆಲ್ಲರೂ ಸ್ವಲ್ಪವಾದರೂ ಊಟ ಮಾಡಿಯೇ ತೆರಳುತ್ತಿದ್ದರು. ಈಗಲೂ ಹಳ್ಳಿಗಳಲ್ಲಿ ಈ ಪದ್ಧತಿ ಇದೆ. ❖

> **ಶವ ಸಂಸ್ಕಾರ ಮಾಡುವ ವಿಧಾನದಲ್ಲಿ ಕ್ಷಿಪ್ರಗತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಂಖ್ಯೆ ಹೆಚ್ಚುತ್ತಿದೆಯೇ ಹೊರತು ಭೂಮಿ ಅಷ್ಟೇ ಇದೆ. ಹಾಗಾಗಿ, ಇರುವ ಜಾಗದಲ್ಲೇ ಅಂತ್ಯ ಸಂಸ್ಕಾರ ಮಾಡಬೇಕಿದೆ. ಅದಕ್ಕಾಗಿ ವಿಧಾನಗಳು ಬದಲಾವಣೆಯಾಗುತ್ತಿವೆ.**
> **ಪೌಲಸ್ ಎಂ.ಕೆ.,** ಶಿರಾಡಿ ಗ್ರಾಮ ಪಂಚಾಯಿತಿ ಸದಸ್ಯ

> **ಲಯನ್ಸ್ ಸಂಸ್ಥೆ ವತಿಯಿಂದ ಹೊಸೂರು ಗ್ರಾಮ ಪಂಚಾಯಿತಿಗೆ ನೀಡಿರುವ ಸಂಚಾರಿ ಶವ ದಹನ ಯಂತ್ರ ಸಂಪೂರ್ಣ ಪರಿಸರ ಸ್ನೇಹಿಯಾಗಿದೆ. ಇದರಿಂದ ವಾಯುಮಾಲಿನ್ಯ ಆಗುವುದಿಲ್ಲ.**
> **ಧನು ಉತ್ತಯ್ಯ,** ಗೋಣಿಕೊಪ್ಪಲು ಲಯನ್ಸ್ ವಿದ್ಯಾಸಂಸ್ಥೆಯ ಮುಖ್ಯಸ್ಥ

ಇದು ಅರುಂಧತಿ ಮಡಿಲು

8ನೇ ಪುಟದಿಂದ..

'ನಮ್ಮ ಸಮರ ಸಾರಥಿ ಅಭಿಯಾನದ ಮೂಲಕ ಲಿಂಗತ್ವ ಅಲ್ಪಸಂಖ್ಯಾತರಿಗೆ ತಮ್ಮ ಗುರುತಿನ ಹಕ್ಕು ಮತ್ತು ಸರ್ಕಾರದ ಯೋಜನೆಗಳ ಅನುಕೂಲಗಳನ್ನು ಪಡೆಯುವ ಬಗ್ಗೆ ತರಬೇತಿ ನೀಡಲಾಗುತ್ತಿದೆ' ಎನ್ನುತ್ತಾರೆ ಅರುಂಧತಿ.

'ಇವತ್ತಿಗೂ ಜನರು ನಮ್ಮ ಧ್ವನಿಯನ್ನು ಕೇಳಿದ ಬಳಿಕ ಚಹಾ ಅಂಗಡಿಯಿಂದ ಹಿಂದೆ ಸರಿಯುತ್ತಾರೆ. ಕಠಿಣ ಪರಿಶ್ರಮದಿಂದ ಜೀವನೋಪಾಯ ಕಂಡುಕೊಂಡಿದ್ದರೂ ಸಮಾಜ ನಮ್ಮನ್ನು ತಿರಸ್ಕರಿಸುತ್ತದೆ. ತಮಿಳುನಾಡು ಮತ್ತು ಕೇರಳದಲ್ಲಿರುವಂತೆ ಕರ್ನಾಟಕದಲ್ಲಿಯೂ ಸರ್ಕಾರ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ನಿಗಮ ಸ್ಥಾಪಿಸಬೇಕು' ಎನ್ನುವುದು ಅರುಂಧತಿ ಅವರ ಮನದ ಮಾತು.

ಚಿಕ್ಕಮಗಳೂರಿನ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸದಸ್ಯೆ ಮೇಘಾ ಮಲ್ನಾಡ್ ಅವರು, 'ಮಡಿಲು ಸ್ವಾವಲಂಬಿ ಟ್ರಸ್ಟ್ ಐದು ಮೇಕೆಗಳನ್ನು ನೀಡಿತ್ತು. ನಾನು ಅಂಜುಗೆ ಮೇಕೆಗಳನ್ನು ನೀಡಿದೆ. ಅಂಜು ಮೇಕೆಗಳನ್ನು ಸಾಕಿ ಅವುಗಳ ಹಿಂಡು ಹತ್ತಕ್ಕೆ ಬೆಳೆದಾಗ, ಹರ್ಷಿತಾಗೆ ಐದನ್ನು ನೀಡಿದರು. ಹರ್ಷಿತಾ ಮತ್ತೊಬ್ಬರಿಗೆ ಕೊಟ್ಟರು. ಈ ಸರಪಳಿ ನಮ್ಮ ಸಮುದಾಯಕ್ಕೆ ಬಲ ನೀಡಿದೆ' ಎನ್ನುತ್ತಾ ಸುಸ್ಥಿರ ಮಾದರಿಯ ಸಾಫಲ್ಯವನ್ನು ವಿವರಿಸಿದ್ದಾರೆ.

'ಸಮುದಾಯದ ಅನೇಕರು ಗೌರವಾನ್ವಿತ, ಸ್ವಾವಲಂಬಿ ಜೀವನ ನಡೆಸಲು ಅರುಂಧತಿ ಸ್ಫೂರ್ತಿಯಾಗಿದ್ದಾರೆ' ಎನ್ನುತ್ತಾರೆ ಬೆಂಗಳೂರಿನ ಲಿಂಗತ್ವ ಅಲ್ಪಸಂಖ್ಯಾತೆ ಮಲ್ಲಮ್ಮ ಕುಂಬಾರ.

(ಆತ್ಮಹತ್ಯೆಯಂತಹ ಕೆಟ್ಟ ಆಲೋಚನೆಗಳು ನಿಮ್ಮನ್ನು ಕಾಡುತ್ತಿದ್ದರೆ ಅದರಿಂದ ಹೊರಬಂದು ಬದುಕು ಕಟ್ಟಿಕೊಳ್ಳಲು ನೆರವು ನೀಡಲು ನಾವು ಸದಾ ಸಿದ್ಧ. ಸಂಪರ್ಕಕ್ಕಾಗಿ 14416 ಅಥವಾ 7893078930 ಕರೆ ಮಾಡಿ.)

ಅನುವಾದ: ಕೀರ್ತಿಕುಮಾರಿ ಎಂ.

ಕಥೆ

ಮೂಲ: ಭಗವತೀಕುಮಾರ್ ಶರ್ಮಾ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ **ಬ್ಲೂ-ಫಿಲ್ಮ್**

prajavani.net/short-story

ಕವನ

ಬಸವರಾಜ ಜಿ ಕನ್ನೂರ
ಅವರ **ಅಕ್ಕ**

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ದುರಂತಗಳ ದೃಷ್ಟಾಂತ



ಪರಿಸರದ ಮಹಾದುರಂತಗಳು
ಲೇ: ನಾಗೇಶ ಹೆಗಡೆ
ಪ್ರ: ಭೂಮಿ ಬುಕ್ಸ್
ಸಂ: 9449177628

ವಿಜ್ಞಾನ ಹಾಗೂ ತಂತ್ರಜ್ಞಾನ ದಿನದಿಂದ ದಿನಕ್ಕೆ ನಮ್ಮ ಬದುಕನ್ನು ಸುಧಾರಿಸುತ್ತಿದೆ ಎನ್ನುವುದು ನಿಜ. ಆ ಕ್ಷೇತ್ರದಲ್ಲಿನ ಆವಿಷ್ಕಾರಗಳು ಹಾಗೂ ಮೂಲ ವಿಜ್ಞಾನದ ಅನ್ವೇಷಣೆಗಳು ನೀಡಿರುವ ಕೊಡುಗೆಗಳಿಗೂ ಅಸಂಖ್ಯ ಉದಾಹರಣೆಗಳು ಸಿಗುತ್ತವೆ. ಆದರೆ, ಸಾಮಾಜಿಕ ಹೊಣೆಗೇಡಿತನದಿಂದಾಗಿ ಮಹಾಶೋಧಗಳನ್ನು ಮಹಾದುರಂತಗಳಾಗಿ ಬದಲಿಸಿಕೊಂಡಿರುವುದಕ್ಕೆ ದಂಡಿಯಾಗಿ ಉದಾಹರಣೆಗಳು ಸಿಗುತ್ತವೆ. ಇಂತಹ ಉದಾಹರಣೆಗಳಲ್ಲಿ ಹದಿಮೂರು ಬಿಂದುಗಳನ್ನು ನಾಗೇಶ ಹೆಗಡೆ ಅವರು ಈ ಕೃತಿಯಲ್ಲಿ ಇಟ್ಟಿದ್ದಾರೆ. ಅವನ್ನೆಲ್ಲ ಓದುಗರಾದ ನಾವು ಜೋಡಿಸಿಕೊಂಡು ಓದಿದಾಗ, ಒಂದು ಬಗೆಯಲ್ಲಿ ವಿಷಾದ ಆವರಿಸಿದಂತಾಗುತ್ತದೆ. ಎಷ್ಟೆಲ್ಲ ಅನಾಹುತಗಳನ್ನು ನಮ್ಮ ಕಾಲ ಮೇಲೆ ನಾವೇ ತಂದು ಸುರಿದುಕೊಂಡಿದ್ದೇವೆ ಎಂಬ ಪಾಪಪ್ರಜ್ಞೆ ಕಾಡುವಂತಹ ಸಾಲುಗಳೂ ಕಡಿಮೆಯೇನೂ ಇಲ್ಲ.

ಭೋಪಾಲ್ ದುರಂತ ನಿರಂತರ, ಫುಕುಶಿಮಾದ ಪರಮಾಣು ಪೂತ್ಕಾರ ಎಂಬ ಎರಡು ಅಧ್ಯಾಯಗಳು ಎಂದೋ ಸಂಭವಿಸಿದ ದುರಂತಗಳ ಕಾಲಾತೀತವಾದ ಪರಿಣಾಮಗಳನ್ನು ನಮಗೆ ಕಾಣಿಸುತ್ತವೆ. ಸಿಡಿದು ಅಬ್ಬರಿಸಿದ ರಸಗೊಬ್ಬರ ಎಂಬ ಅಧ್ಯಾಯವು ಸ್ಫೋಟಕಗಳು ತಂದೊಡ್ಡುವ ಮಾನವೀಯ ದುರಂತಗಳ ಹಿಂದೆ ಇರುವ, ರಸಗೊಬ್ಬರಕ್ಕೂ ಬಳಸುವ ರಾಸಾಯನಿಕದ ವೈಜ್ಞಾನಿಕ ಕಥನವೊಂದನ್ನು ಎದುರಲ್ಲಿ ತರುತ್ತದೆ. ವಿಜ್ಞಾನದ ಒಂದು ಉದ್ದೇಶದ ಶೋಧ ಹೇಗೆ ದುರಂತಗಳ ಸರಮಾಲೆಗೆ ಕಾರಣವಾಗುತ್ತದೆ ಎಂಬ ಬೆರಗಿನ ವಿದ್ಯಮಾನವನ್ನು ಈ ಅಧ್ಯಾಯ ಮುಂದೆ ಇಡುತ್ತದೆ.

ಈ ಕೃತಿಯಲ್ಲಿ 13 ಅಧ್ಯಾಯಗಳಿವೆ. ಕಲಿಸುವವರಿಗೆ ಹಾಗೂ ಅರಿವಿನ ಹಣತೆಯ ಬೆಳಕು ಹಿಡಿಯಹೊರಟ ವಿದ್ಯಾರ್ಥಿಗಳಿಗೆ ಇವು ಬಹುಮುಖ್ಯವಾದ ಸರಳ ಭಾಷೆಯಲ್ಲಿ ಇರುವ ಆಕರ ಎನ್ನಬಹುದು. 'ಇದ್ದಕ್ಕಿದ್ದಂತೆ ರೈತನೊಬ್ಬ ಕೂಗುತ್ತ ಜನಜಂಗುಳಿಯನ್ನು ಭೇದಿಸಿ ಮಂತ್ರಿಯ ಮೇಲೆ ಕೀಟನಾಶಕ ವಿಷವನ್ನು ಎರಚಲೆಂದು ಬಂದ. ಮಿನಿಸ್ಟರ್ ಓಟ ಕಿತ್ತರು. ವಿಷ ಹಿಡಿದವನೂ ಓಡಿದ. ಭದ್ರತಾ ಸಿಬ್ಬಂದಿಯೂ ಓಡಿ ಸಚಿವರಿಗೆ ರಕ್ಷಣೆ ಕೊಟ್ಟು, ತಪ್ಪಿತಸ್ಥನನ್ನು ಹಿಡಿದು ಲಾಕಪ್ಪಿಗೆ ಹಾಕಿದರು. ಕೃಷಿಕರಿಗೆ ಅಷ್ಟು ಕೋಪ ಬರಲು ಕಾರಣ ಏನೆಂದರೆ, ಹಿಂದಿನ ಎರಡು ತಿಂಗಳಲ್ಲಿ ಮಹಾರಾಷ್ಟ್ರದ ಸಾವಿರಕ್ಕೂ ಹೆಚ್ಚು ರೈತರು ತಾವು ಸಿಂಪಡಿಸುತ್ತಿದ್ದ ಕೀಟನಾಶಕಗಳ ವಿಷಬಾಧೆಗೆ ತಾವೇ ತುತ್ತಾಗಿ ಆಸ್ಪತ್ರೆ ಸೇರಿದ್ದಾರೆ. 2017ರಲ್ಲಿ ಮಹಾರಾಷ್ಟ್ರದಲ್ಲಿ ನಡೆದ ಹತ್ತಿ ರೈತರಿಗೆ ಸಂಬಂಧಿಸಿದ ಮಾನವೀಯ ಪ್ರಸಂಗವನ್ನು ದೃಶ್ಯವಾಗಿ ಕಟ್ಟಿಕೊಡುವ ಸಾಲುಗಳಿವು. ಇಂತಹ ಸಾದೃಶಗಳು ಕೃತಿಯ ತುಂಬ ಇಡುಕಿರಿದಿದ್ದು, ಮನಕಲಕುತ್ತವೆ. ಪ್ರಶ್ನೆಗಳನ್ನೂ ರಾಚುತ್ತವೆ.

ಪುಟ: 100 ₹130

ಕಥನ ವೈಶಿಷ್ಟ್ಯ ಪರಿಚಯ



ಮುತ್ತುಪ್ಪಾಡಿಯ ಮಾಟಗಾತಿ
ಲೇ: ಲೇ: ಬೊಳುವಾರು
ಪ್ರ: ವೀರಲೋಕ
ಸಂ: 7022122121

ಬೊಳುವಾರು ಮಹಮದ್ ಕುಂಞಿ ಕನ್ನಡದ ಅತ್ಯುತ್ತಮ ಕಥೆಗಾರರಲ್ಲೊಬ್ಬರು. ಮುಸ್ಲಿಂ ಸಮುದಾಯದ ತವಕ ತಲ್ಲಣಗಳು ಇವರ ಕಥನಗಳ ಕೇಂದ್ರದಲ್ಲಿದ್ದರೂ, ಅವು ಸಮುದಾಯಕ್ಕೆ ಸಂಬಂಧಿಸಿದ ಸಂಗತಿಗಳಷ್ಟೇ ಆಗಿ ಉಳಿಯದೆ, ಮನುಷ್ಯ ಸಂಬಂಧಗಳು ಹಾಗೂ ಮಾನವೀಯತೆಯ ಜಿಜ್ಞಾಸೆಯ ರೂಪದಲ್ಲಿ ಸಹೃದಯನ ಮನಸ್ಸಿನಲ್ಲಿ ಉಳಿಯುತ್ತವೆ, ಬೆಳೆಯುತ್ತವೆ. ಜನಸಾಮಾನ್ಯರು, ವಿಶೇಷವಾಗಿ ಗ್ರಾಮೀಣ ಜನರು ಹಾಗೂ ಮಹಿಳೆಯರು ಇವರ ಕಥೆಗಳ ಜೀವದ್ರವ್ಯ ಆಗಿದ್ದಾರೆ. ಶ್ರೀಸಾಮಾನ್ಯರ ಬದುಕಿನ ಮೂಲಕವೇ ದೇಶ–ಕಾಲಗಳ ವರ್ತಮಾನದ ಬಿಕ್ಕಟ್ಟುಗಳ ಬಗ್ಗೆ ಯೋಚಿಸುವಂತೆ ಮಾಡುವುದು ಬೊಳುವಾರರ ಕಥೆಗಳ ವಿಶೇಷ.

'ಮರೆಯಬಾರದ ಡಜನ್ ಕತೆಗಳು' ಎನ್ನುವ ಅಡಿ ಟಿಪ್ಪಣಿಯೇ 'ಮುತ್ತುಪ್ಪಾಡಿಯ ಮಾಟಗಾತಿ' ಸಂಕಲನದ ವಿಶೇಷವನ್ನು ಹೇಳುವಂತಿದೆ. ಬೊಳುವಾರರ ಪ್ರಾತಿನಿಧಿಕ ಎನ್ನಬಹುದಾದ ಹನ್ನೆರಡು ಕಥೆಗಳು ಈ ಕೃತಿಯಲ್ಲಿವೆ. ಈ ಕಥೆಗಳು ಬೊಳುವಾರರ ಅತ್ಯುತ್ತಮ ಕಥೆಗಳು ಮಾತ್ರವಲ್ಲ, ಇವುಗಳಲ್ಲಿ ಕೆಲವು ಕನ್ನಡದ ಅತ್ಯುತ್ತಮ ಕಥೆಗಳ ಸಾಲಿಗೂ ಸೇರುವಂತಹವು. ಬೊಳುವಾರರ ಜನಪ್ರಿಯ ಹಾಗೂ ಜನಪರ ಕಥೆಗಳಾದ 'ಜನ್ನತ್', 'ದೇವರುಗಳ ರಾಜ್ಯದಲ್ಲಿ', 'ಆಕಾಶಕ್ಕೆ ನೀಲಿ ಪರದೆ', 'ಅಂಕ', 'ಒಂದು ತುಂಡು ಗೋಡೆ' ಕಥೆಗಳು ಈ ಕೃತಿಯಲ್ಲಿ ಸೇರಿವೆ. ಇವು ಕಥೆಗಾರರ ಮನೋಧರ್ಮ, ಆಶಯಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂತಿವೆ.

ಹೊಸ ತಲೆಮಾರಿನ ಓದುಗರಿಗೆ ಬೊಳುವಾರರ ಕಥನ ವೈಶಿಷ್ಟ್ಯವನ್ನು ಪರಿಚಯಿಸುವಂತೆ ರೂಪುಗೊಂಡಿರುವುದು 'ಮುತ್ತುಪ್ಪಾಡಿಯ ಮಾಟಗಾತಿ' ಸಂಕಲನದ ವಿಶೇಷಗಳಲ್ಲಿ ಒಂದಾಗಿದೆ. ಕಥೆಗಾರರಾಗಿ ಬೊಳುವಾರರ ಭಾಷೆ, ಕಥನತಂತ್ರಗಳನ್ನು ಗಮನಿಸಲಿಕ್ಕೆ ಇದು ಸೂಕ್ತ ಕೃತಿ. ಇಲ್ಲಿನ ಕಥೆಗಳು ಸರಳ ಹಾಗೂ ಮೋಹಕ ಭಾಷೆಯ ಮಾದರಿಯೊಂದನ್ನು ಪರಿಚಯಿಸುವಂತಿವೆ. ಸೃಜನಶೀಲ ಲೇಖಕನೊಬ್ಬ ಹೊಂದಿರಬೇಕಾದ ರಾಜಕೀಯ ಪ್ರಜ್ಞೆಯ ಸ್ವರೂಪ ಹೇಗಿರಬೇಕು ಎನ್ನುವುದಕ್ಕೂ ಈ ಕಥೆಗಳು ನಿದರ್ಶನದಂತಿವೆ. ಬೊಳುವಾರರ ಕಥಾಲೋಕದ ಆಳ–ಅಗಲಗಳನ್ನು ತಿಳಿಯಲು ಅನುಕೂಲವಾಗುವಂತೆ ವಿಸ್ತೃತ ಪ್ರವೇಶಿಕೆಯೊಂದು ಇದ್ದಿದ್ದರೆ ಈ ಕೃತಿಯ ಸಾಧ್ಯತೆ ಇನ್ನಷ್ಟು ಹೆಚ್ಚುತ್ತಿತ್ತು.

ಪುಟ: 248 ₹300

ಭೀಮನ ಜೀವನ ಚರಿತ್ರೆ



ಒಂದುವೇಳೆ ಬಾಬಾಸಾಹೇಬರು ಇರದಿದ್ದರೆ
ಕನ್ನಡಕ್ಕೆ: ವಿಕ್ರಮ ವಿಸಾಜಿ
ಪ್ರ: ಸುಮೇಧ
ಸಂ: 9886100277

ಬಾಬಾಸಾಹೇಬರು 'ಭಾರತದಲ್ಲಿ ಹಾಕಿದ ಅಡಿಪಾಯದ ವಾರಸುದಾರರು ನಾವಾಗಬೇಕು' ಎನ್ನುವ ಆಶಯದಿಂದ 'ಒಂದುವೇಳೆ ಬಾಬಾಸಾಹೇಬರು ಇರದಿದ್ದರೆ' ಕೃತಿಯನ್ನು ರೂಪಿಸಲಾಗಿದೆ. ಪ್ರಮುಖ ಬೌದ್ಧ ಬಿಕ್ಕು ಭದಂತ ಆನಂದ ಕೌಸಲ್ಯಾಯನ ಅಂಬೇಡ್ಕರ್ ಜೊತೆ ಒಡನಾಡಿದವರು. ಅವರು 'ಯದಿ ಬಾಬಾ ನ ಹೋತೆ' ಎಂಬ ಹಿಂದಿಯಲ್ಲಿ ಬಾಬಾಸಾಹೇಬರ ಜೀವನ ಚರಿತ್ರೆಯನ್ನು ಭಿನ್ನವಾಗಿ ಕಟ್ಟಿದ್ದಾರೆ. ಅದನ್ನು ವಿಕ್ರಮ ವಿಸಾಜಿ ಕನ್ನಡಕ್ಕೆ ತಂದಿದ್ದಾರೆ.

ಬಾಬಾಸಾಹೇಬರ ತಾತ ಮಾಲೋಜಿ ರಾವ್ ಸೇನೆಯಲ್ಲಿ ಇದ್ದರು. ತಂದೆ ರಾಮ್‌ಜಿ ಕೂಡ ಸೇನಾ ಧೀರ. 1882ರಲ್ಲಿ ಮಹರ್ ಜನಾಂಗಕ್ಕೆ ಸೇನೆಗೆ ನಿಷೇಧ ವಿಧಿಸಲಾಯಿತು. ಸೇನಾ ನಿವೃತ್ತಿ ನಂತರ ರಾಮ್‌ಜಿ ಸತಾರದಲ್ಲಿ ಸ್ಟೋರ್ ಕೀಪರ್ ಆಗಿ ಕೆಲಸ ಆರಂಭಿಸುತ್ತಾರೆ. ಕಬೀರ್ ಪಂಥದ ಅನುಯಾಯಿ ಕುಟುಂಬ ಅವರದು. ಮನೆಯಲ್ಲಿ ನಿತ್ಯವೂ ಪೂಜೆ ಭಜನೆ ತಪ್ಪುತ್ತಿರಲಿಲ್ಲ. ಭೀಮ ಹೆಸರಿಗೆ ತಕ್ಕಂತೆ ಗಟ್ಟಿಮುಟ್ಟಾಗಿದ್ದರು. ತುಂಟತನದ ಅವರು ದೊಡ್ಡ ಹುಡುಗರ ಜೊತೆಯೂ ಜಗಳಕ್ಕಿಳಿಯಲು ಹಿಂಜರಿಯುತ್ತಿರಲಿಲ್ಲ ಎನ್ನುವ ಸಂಗತಿಯನ್ನು ಇಲ್ಲಿ ಸ್ಮರಿಸಿದ್ದಾರೆ.

ಭೀಮಾಬಾಯಿ ತೀರಿದ ನಂತರ ರಾಮ್‌ಜಿ ಜೀಜಾಬಾಯಿಯನ್ನು ಮದುವೆಯಾಗುತ್ತಾರೆ. ತಾಯಿಯ ಅಗಲಿಕೆ ಭೀಮನಿಗೆ ಓದಿನ ಬಗ್ಗೆ ನಿರಾಸಕ್ತಿ ಹುಟ್ಟಿಸುತ್ತದೆ. ತಂದೆಗೆ ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎನ್ನುವ ತವಕ. ತಮ್ಮ ಕುಟುಂಬವನ್ನು ಮುಂಬೈಗೆ ವರ್ಗಾಯಿಸುತ್ತಾರೆ. 'ಎಲ್ಫಿನ್ಸ್ ಟನ್' ಶಾಲೆಯಲ್ಲಿ ಓದುತ್ತಿದ್ದ ಭೀಮನಿಗೆ ಅಪಾರ ಪುಸ್ತಕ ಪ್ರೀತಿ ಹುಟ್ಟುತ್ತದೆ. ತಮ್ಮ ಜೀವಕ್ಕಿಂತಲೂ ಪುಸ್ತಕವೇ ಮುಖ್ಯ ಆಗುತ್ತದೆ. 'ರಾಜಗೃಹ' ನಿವಾಸವನ್ನು ಕಟ್ಟಿಸಿದ್ದೂ ಪುಸ್ತಕಗಳಿಗಾಗಿ ಎನ್ನುತ್ತಾರೆ ಕೃತಿಕಾರರು. ಜಾತಿಯ ಕಾರಣಕ್ಕೆ ಗಣಿತ ತರಗತಿಯಲ್ಲಿ ಆದ ಅವಮಾನ, ಸಲೂನ್‌ನಲ್ಲಿ ಕೂದಲು ಕತ್ತರಿಸಲು ನಿರಾಕರಣೆಯಿಂದ ದುಃಖಿತ ಬಾಲ ಭೀಮನಿಗೆ ಅಕ್ಕ ಅಕ್ಕರೆಯಿಂದ ಮುದ್ದು ಮಾಡಿ ಕೂದಲು ಕತ್ತರಿಸಿದ ಕರುಣಾಜನಕ ಸನ್ನಿವೇಶವೂ ಬರುತ್ತದೆ.

ಅಂಬೇಡ್ಕರ್ ಓದು, ಉದ್ಯೋಗ, ಹೋರಾಟ, ವರ್ಣ ಬಹಿಷ್ಕಾರ, ಬೌದ್ಧಧರ್ಮ ಸ್ವೀಕಾರ, ಕಾನೂನು ಸಚಿವ, ಸಂವಿಧಾನ ರಚನಾ ಸಭೆಯ ಅಧ್ಯಕ್ಷ ಹೀಗೆ ಮಹತ್ವದ ಜವಾಬ್ದಾರಿಯ ನಿರ್ವಹಣೆಯನ್ನು ಚಿತ್ರಿಸುವ ಮೂಲಕ 'ಬಾಬಾಸಾಹೇಬರು ಒಂದುವೇಳೆ ಹುಟ್ಟದಿದ್ದರೆ' ಇದೆಲ್ಲ ಆಗುತ್ತಿತ್ತೇ ಎನ್ನುವ ಪ್ರಶ್ನೆಗೆ ಉತ್ತರದಂತೆ ಈ ಕೃತಿ ಕಾಣಿಸುತ್ತದೆ. ಅಂಬೇಡ್ಕರ್ ಬದುಕಿನಲ್ಲಿ ಸಂಭವಿಸಿದ ಘಟನೆಗಳೇ ಕೃತಿಯ ಜೀವಾಳ. ಒಂದು ಘಟನೆಯೂ ಒಂದು ಘಟಕವಾಗಿದ್ದು, ಒಟ್ಟು 24 ಘಟಕಗಳನ್ನು ಇದು ಒಳಗೊಂಡಿದೆ.

ಪುಟ: 108 ₹120

ಭಾರತದ ಕೊನೆಯ ಹಳ್ಳಿಗಳಲ್ಲಿ...



ಲಡಾಖಿನ ಹಿಮಪರ್ವತ

• ರಹಮತ್ ತರೀಕೆರೆ

ಭಾರತದ ಗಡಿಯಲ್ಲಿರುವ ಅನೇಕ ಕೊನೆಯ ಊರುಗಳಿಗೆ ಲೇಖಕರು ಭೇಟಿ ನೀಡಿದ್ದಾರೆ. ಅವುಗಳಲ್ಲಿ ಚೀನಾ ಗಡಿಯಲ್ಲಿರುವ ಮಾನಾ ಹಾಗೂ ಬಾಂಗ್ಲಾ ಗಡಿಯ ಅಗರ್ತಲವೂ ಸೇರಿವೆ. ಡೆಡೆಂಡ್ ಇರುವ ರಸ್ತೆ, ರೈಲು ನಿಲ್ದಾಣ, ಹಳ್ಳಿಗಳು ಒಂದು ಬಗೆಯ ವಿಷಾದಭಾವ ಹುಟ್ಟಿಸುತ್ತವೆ ಎನ್ನುತ್ತಾರೆ ಅವರು.

ಪ್ರವಾಸ

ಲಡಾಖಿನ ನುಬ್ರಾ ಕಣಿವೆಯಲ್ಲಿ ಚಲುಂಕಾ ತ್ಯಾಕ್ಸಿ ತುರ್ತುಕ್ ಥಾಂಗ್ ಎಂಬ ನಾಲ್ಕು ಹಳ್ಳಿಗಳಿವೆ. ಇವು ಭಾರತದ ತುತ್ತತುದಿಯ ಹಳ್ಳಿಗಳು. ಶೋಯೆಕ್ ಹೊಳೆ ದಡದಲ್ಲಿರುವ ಇವುಗಳ ಆಸುಪಾಸಲ್ಲಿ ಟಿಬೆಟ್ಟಿನ ಮರುಭೂಮಿಯ ಸೆರಗಿದೆ. ದುರ್ಗಮವಾದ ಕಾರಕೋರಂ ಪರ್ವತಶ್ರೇಣಿಯಿದೆ. ಸಿಯಾಚಿನ್ ನೀರ್ಗಲ್ಲುಗಳಿವೆ. ಜಗತ್ತಿನ ಎರಡನೇ ಎತ್ತರದ ಹಿಮಶಿಖರ ಕೆ2 ಇರುವುದೂ ಇಲ್ಲೇ. ಒಂದು ಕಾಲಕ್ಕೆ ಚೀನಾದಿಂದ ಹೊರಟು ಯೂರೋಪಿನವರೆಗೆ ಹೋಗುತ್ತಿದ್ದ ರೇಷ್ಮೆ ಹಾದಿಗೂ ಈ ಹಳ್ಳಿಗಳಿಗೂ ಲಗತ್ತಿತ್ತು.

ಬಾಲ್ಟಿ ಭಾಷೆಯನ್ನಾಡುವ ಈ ಹಳ್ಳಿಗಳ ಜನ ಶಿಯಾ ಪಂಥೀಯರು. ನೂರ್‌ಬಕ್ಷ್ ಸೂಫಿಪಂಥದ ಪ್ರಭಾವಕ್ಕೊಳಗಾದವರು. ಇವರಲ್ಲಿ ಟಿಬೆಟಿಯನ್ ಬೌದ್ಧರ ಮಂಗೋಲಿಯನ್ ಮುಖಚರ್ಯೆಯೂ ಹಾಗೂ ಅಫ್ಗಾನಿಸ್ತಾನದ ಪಠಾಣರ ಎತ್ತರದ ನಿಲುವೂ ಮಿಶ್ರಣವಾಗಿವೆ. ದೇಶ ವಿಭಜನೆಯ ಬಳಿಕ ಪಾಕಿಸ್ತಾನ ಆಕ್ರಮಿತ ಪ್ರದೇಶದಲ್ಲಿದ್ದ ಈ ಹಳ್ಳಿಗಳು, ಬಾಂಗ್ಲಾ ವಿಮೋಚನ ಯುದ್ಧದಲ್ಲಿ ಭಾರತಕ್ಕೆ ಸೇರಿದವು. ಬಹುತೇಕ ಗಡಿ ಗ್ರಾಮಗಳಂತೆ ದೇಶ ವಿಭಜನೆಯ ಕಷ್ಟ ಮತ್ತು ಯುದ್ಧಗಳಿಗೆ ಸಾಕ್ಷಿಯಾಗಿವೆ. ಹಲವಾರೂ ರಾಜಮನೆತನಗಳ ರಾಜನರನ್ನು ಕಂಡಿರುವ ಇದರ ಸಂಸ್ಕೃತಿಯ ಮೇಲೆ ಪ್ರತಿ ಆಳಿಕೆಯೂ ತನ್ನ ಗುರುತಿನ ಮುದ್ರೆಗಳನ್ನು ಬಿಟ್ಟಿದೆ.

ನಾವು ತ್ಯಾಕ್ಸಿಯಲ್ಲಿರುವ ಸೈನಿಕ ಠಾಣೆಯಲ್ಲಿ ಗುರುತುಚೀಟಿ ತೋರಿಸಿ, ಪುಸ್ತಕದಲ್ಲಿ ದಾಖಲಿಸಿ ಥಾಂಗನ್ನು ಮುಟ್ಟಿದೆವು. ಪರ್ವತದ ತುದಿಯಿಂದ ಹರಿದು ಬರುವ ಒಣಹಳ್ಳವೇ ಲೈನ್ ಆಫ್ ಕಂಟ್ರೋಲ್ ಆಗಿತ್ತು. ಶಿಖರಗಳಲ್ಲಿ, ಅಲ್ಲಿಗೆ ಹೇಗಾದರೂ ಹೋಗುತ್ತಾರೊ ಎಂದು ಅಚ್ಚರಿ ಪಡುವಷ್ಟು ಎತ್ತರದಲ್ಲಿ, ಕಾವಲು ಗೋಪುರಗಳಿದ್ದವು. ಥಾಂಗ್ ಗ್ರಾಮದ ದಿಬ್ಬದ ಮೇಲೆ ಭಾರತ ಧ್ವಜ ಪಟಪಟಿಸುತ್ತಿತ್ತು. ಅಲ್ಲಿಂದ ಎರಡು ಕಿಲೋಮೀಟರ್ ದೂರದ ಕಣಿವೆಯಲ್ಲಿ ಪಾಕಿಸ್ತಾನದ ಕೊನೆಯ ಹಳ್ಳಿ ಫ್ರಾನೊ ಕಾಣುತ್ತಿತ್ತು. ಗಡಿಯಾಚೆಗಿನ ಮೊದಲ ಹಳ್ಳಿ ಕಾಣಿಸುತ್ತದೆ ಎನ್ನುವ ರೋಚಕತೆ ಬಿಟ್ಟರೆ, ಥಾಂಗಿನಲ್ಲಿ ಏನೂ ವಿಶೇಷತೆ ಇರಲಿಲ್ಲ. ವಿಭಜಿತ ದೇಶದ ಜನ ಮತ್ತು ಊರು, ಪಂಜರದಲ್ಲಿಟ್ಟ ಸರ್ಕಸ್ಸಿನ ಪ್ರಾಣಿಗಳಂತೆ ಜನರು ನೋಡುವ ವಸ್ತುವಾಗುವುದು ಒಂದು ವೈರುಧ್ಯ. ಥಾಂಗಿಗೆ ಹೋಲಿಸಿದರೆ ತುರ್ತುಕ್ ಸುಂದರ ಊರು. ಅದನ್ನು ಹಿಮ ಶಿಖರಗಳಿಂದ ಬರುವ ಬೆಳ್ನೊರೆಯ ನೀಲವರ್ಣದ ಸಣ್ಣ ಹೊಳೆಯೊಂದು ವಿಭಜಿಸಿದೆ. ದಡದ ಎರಡೂ ಬದಿ, ಚಪ್ಪರದ ಮೇಲೆ ಬಳ್ಳಿ ಹಬ್ಬುವಂತೆ ಊರು ಪರ್ವತಗಳ ಬೆನ್ನ ಮೇಲೆ ಹರಡಿದೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೊಳೆದಾಟಲು ಕಟ್ಟಲಾದ ಕಟ್ಟಿಗೆ ಸೇತುವೆ. ಜನ ಕೃಷಿಕರು. ಮನೆಯ ಹಿತ್ತಲುಗಳಲ್ಲಿ ಸೇಬು ಆಪ್ರಿಕಾಟ್ ಹಣ್ಣಿನ ಗಿಡಗಳು; ಅಂಗಳದಲ್ಲಿ ಒಣಹಾಕಿದ ಹಣ್ಣಿನ ಚೂರುಗಳು. ಮನೆಗಳಲ್ಲಿರುವ ಜೀನು ಲಗಾಮು ನೋಡಿದರೆ, ಇವರ ಮೆಚ್ಚಿನ ಪ್ರಾಣಿ ಕುದುರೆ ಮತ್ತು ಕತ್ತೆಗಳು ಅನಿಸಿತು. ಕಾಡುಕುರಿಯ ಕೊಂಬು, ಚರ್ಮ ಬಿಲ್ಲುಬಾಣ, ಯಾಕ್ ಪ್ರಾಣಿಯ ಕೂದಲಿನ ಕಂಬಳಿಗಳು, ಇವರ ಪಶುಪಾಲನೆ ಮತ್ತು ಬೇಟೆಗಾರಿಕೆಯನ್ನು ಸೂಚಿಸುತ್ತವೆ.



ತುರ್ತುಕ್ ಕಟ್ಟಿಗೆ ಸೇತುವೆ

ಇಲ್ಲಿ ಮನೆಗಳು ಸುತ್ತಲೂ ದನ ಕತ್ತೆ ಕಟ್ಟುವ ಕೊಟ್ಟಿಗೆಗಳಿವೆ. ಹಲಗೆಹಾಸಿನ ನೆಲ. ತಲೆತಗ್ಗಿಸಿಯೇ ಪ್ರವೇಶಿಸಬೇಕಾದ ಚಿಕ್ಕ ಬಾಗಿಲು ಮತ್ತು ನೆತ್ತಿಗೆ ತಾಗುವ ಛಾವಣಿಗಳು ಮನೆಯನ್ನು ಪೆಟ್ಟಿಗೆಯನ್ನಾಗಿಸಿವೆ. ಶಾಖ ಹೊರಹೋಗದೆ ಎಚ್ಚರವಹಿಸಿ ಕಟ್ಟಲಾದ ರಚನೆಗಳಿವು. ಚಳಿಗಾಲದಲ್ಲಿ ತಾಪಮಾನ ಮೈನಸ್ 20 ಡಿಗ್ರಿಗಿಳಿದು, ಇಡೀ ಪ್ರದೇಶ ಹಿಮ ಸಮಾಧಿಯಾಗುತ್ತದೆ. ಇಲ್ಲಿ ಸೈನ್ಯಕ್ಕಾಗಿ ಮಾಡಲಾದ ಹಳೆಯ ಬಂಕರುಗಳಿವೆ. ಕಲ್ಲುಮಣ್ಣಿನ ಗುಹಾಮನೆಗಳು ಬೇಸಗೆಯಲ್ಲಿ ಕೋಲ್ಡ್‌ಸ್ಟೋರೇಜುಗಳಾಗಿ, ಚಳಿಗಾಲದಲ್ಲಿ ಬೆಚ್ಚನೆಯ ತಾಣಗಳಾಗಿ ಕೆಲಸ ಮಾಡುತ್ತವೆ.

ಲಡಾಖಿನ ಪ್ರವಾಸಿಗರು ಈ ಬಾಲ್ಟಿಸ್ತಾನಿ ಹಳ್ಳಿಗಳನ್ನು ನೋಡಲು ತಪ್ಪದೆ ಬರುತ್ತಾರೆ. ಹಂಪಿಯಂತೆ ಇವೂ ಪ್ರವಾಸಿ ಸಂಸ್ಕೃತಿ ರೂಢಿಸಿಕೊಂಡಿವೆ. ಜನ ಮನೆಗಳನ್ನೇ ಹೋಂಸ್ಟೇಗಳಾಗಿ ಬದಲಿಸಿದ್ದಾರೆ. ಬಾಲ್ಟಿ ಸಂಸ್ಕೃತಿ ಬಿಂಬಿಸುವ ಕಟ್ಟಿಗೆಯ ವಸತಿಗೃಹ ಕಟ್ಟಿದ್ದಾರೆ. ಪೂರ್ವಜರು ಬಳಸುತ್ತಿದ್ದ ಬೇಟೆಯ ಬೇಸಾಯದ ಅಡುಗೆಯ ಉಡುಗೆ ತೊಡುಗೆಯ ವಸ್ತುಗಳನ್ನೆಲ್ಲ ಜೋಡಿಸಿಟ್ಟು ಮ್ಯೂಸಿಯಂ ಮಾಡಿದ್ದಾರೆ. ನಿತ್ಯ ಬದುಕಿಗೆ ನೆರವಾಗುವ ಸಾಮಗ್ರಿಗಳು ಪ್ರೇಕ್ಷಣೀಯ ವಸ್ತುಗಳಾಗಿ ಬದಲಾಗುವುದು ಇನ್ನೊಂದು ವೈರುಧ್ಯ.

ಈ ಹಳ್ಳಿಗಳು ರುದ್ರಸುಂದರವಾದ ಪ್ರಕೃತಿಯ ಮಡಿಲಲ್ಲಿವೆ ನಿಜ. ಆದರೆ ಹೊರಜಗತ್ತಿನಿಂದ ಕತ್ತರಿಸಿದಂತೆ ಬದುಕುತ್ತಿವೆ. ಮಕ್ಕಳು ಕಾಲೇಜು ಕಲಿಯಲು ಇನ್ನೂರು ಕಿಲೋಮೀಟರ್ ದೂರದ ಲೇಹ್‌ಗೆ ಹೋಗಬೇಕು. 18 ಸಾವಿರ ಅಡಿಯೆತ್ತರದ ಮತ್ತು ಕಠಿಣ ತಿರುವುಗಳಿರುವ ಥಾಂಗ್- ಲೇಹ್ ಹೈವೇ ಹೊರಜಗತ್ತನ್ನು ಸಂಪರ್ಕಿಸುವ ಏಕೈಕ ರಸ್ತೆ. ಬದಿಗೆ ಭೋರ್ಗರೆವ ಶೈಯೋಕ್ ಹೊಳೆ. ಗೋಡೆಯಂತೆ ಎದ್ದಿರುವ ಪರ್ವತಗಳು. ನಿಸರ್ಗದ ಸೆರೆಮನೆಯಲ್ಲಿರುವ ಹಳ್ಳಿಗಳ ದುರ್ಗಮತೆಯೇ ಪ್ರವಾಸಿಗರ ಸೆಳೆವ ಸಂಗತಿಯಾಗಿದೆ. ಪ್ರವಾಸೋದ್ಯಮವು ಇವುಗಳ ಪ್ರಮುಖ ಆದಾಯದ ಮೂಲ. ಬಾಲ್ಟಿ ತರುಣರು ಭಾರತೀಯ ಸೇನೆಗೆ ಪೋರ್ಟರುಗಳಾಗಿ ದುಡಿವರು. ತುರ್ತುಕ್ ತುಂಬ ರೆಸ್ಟೋರೆಂಟುಗಳಿವೆ. ಒಂದೆಡೆ ಇಂಗ್ಲಿಷಿನ ಜತೆ ಹೀಬ್ರೂಭಾಷೆಯ ಫಲಕವಿದ್ದ ಹೋಟೆಲಿತ್ತು. ಪಾಶ್ಚಿಮಾತ್ಯ ತಿನಿಸುಗಳಿದ್ದವು. ಆಪ್ರಿಕಾಟ್ ಮಲಬರ್ರಿ ಜ್ಯೂಸುಗಳು ಅಗ್ಗದಲ್ಲಿ ಸಿಗುತ್ತಿದ್ದವು.

ನಾವು ಹೋದಾಗ ಹಳ್ಳಿಗಳಲ್ಲಿ ಗೋಧಿಪೈರಿನ ಒಕ್ಕಲು ನಡೆಯುತ್ತಿತ್ತು. ಹೆಂಗಸರು ಗದ್ದೆಗಳಿಂದ ಪೈರನ್ನು ಹೊತ್ತು ತಂದು ಅಂಗಳದಲ್ಲಿ ಒಟ್ಟುತ್ತಿದ್ದರು. ಕೌಂಪೌಂಡಿಗೆ ಸೊಂಟದೆತ್ತರ ಕಲ್ಲಿನಗೋಡೆಗಳು ಸಿವುಡನ್ನು ಹೇರಿಕೊಂಡಿದ್ದವು.

ಹೊಲಗಳಲ್ಲಿ ಬಾರ್ಲಿ ಮೊಳಕೆ ಒಡೆದಿತ್ತು. ಹಣ್ಣಿನ ಗಿಡಗಳಲ್ಲಿ ಹಕ್ಕಿಗಳು ಸೇರಿ ಗಲಭೆ ಎಬ್ಬಿಸಿದ್ದವು. ಕಲ್ಲುಗೋಡೆಯ ಮನೆಗಳ ಬದಿ ಚುಳುಚುಳು ಹರಿವ ನೀರುಗಾಲುವೆ. ಥಾಂಗಿನಲ್ಲಿರುವ ಹೊಳೆದಡದಲ್ಲಿರುವ ಒಂದು ತೋಟಕ್ಕಿಳಿದು ಆಪ್ರಿಕಾಟ್ ಬ್ಲೂಬರ್ರಿ ಹಣ್ಣು ಕಚ್ಚಿರುವ ಹಣ್ಣಿನ ಮರಗಳ ಪಟ ತೆಗೆಯಲು ಯತ್ನಿಸಿದೆ. ಜನ ಹೇಳಿದರು: ‘ಇವು ನಮ್ಮವೇ ತೋಟಗಳು. ಹೊರಗಿನವರು ಅಡ್ಡಾಡಿದರೆ ಸೈನಿಕರು ಗಮನಿಸುತ್ತಾರೆ. ವಿಚಾರಣೆ ಮಾಡುತ್ತಾರೆ. ಧ್ವಜಸ್ತಂಭ ಮತ್ತು ಮಾರುಕಟ್ಟೆ ಹೋಟೆಲುಗಳ ಆವರಣಕ್ಕೆ ಸೀಮಿತವಾಗಿರಿ’. ಗಡಿ ಗ್ರಾಮಗಳು ಅತಿಯೆಚ್ಚರದಲ್ಲಿ ಬದುಕುತ್ತವೆ.



ಬಂಕರಿನ ಪ್ರವೇಶದ್ವಾರ

ಭಾರತದ ಗಡಿಯಲ್ಲಿರುವ ಅನೇಕ ಕೊನೆಯ ಊರುಗಳಿಗೆ ಹೋಗಿರುವೆ. ಅವುಗಳಲ್ಲಿ ಚೀನಾ ಗಡಿಯಲ್ಲಿರುವ ಮಾನಾ ಹಾಗೂ ಬಾಂಗ್ಲಾ ಗಡಿಯ ಅಗರ್ತಲ ಸೇರಿವೆ. ಡೆಡೆಂಡ್ ಇರುವ ರಸ್ತೆ, ರೈಲು ನಿಲ್ದಾಣ, ಹಳ್ಳಿಗಳು ಒಂದು ಬಗೆಯ ವಿಷಾದಭಾವ ಹುಟ್ಟಿಸುತ್ತವೆ. ಹುಟ್ಟಿದ ಜೀವಗಳಿಗೆ ಸಾವು ಕೊನೆ ದಿಟ. ಆದರೆ ರಸ್ತೆಗಳಿಗೆ ಊರುಗಳಿಗೆ ಕೊನೆಯುಂಟೇ? ಆಗಸದಿಂದ ನೋಡುವಾಗ ದುಂಡಗಿರುವ ಭೂಮಂಡಲದಲ್ಲಿ ಅಂತಹ ಡೆಡೆಂಡ್ ಎಂಬ ಜಾಗವೇ ಇಲ್ಲ. ನೀಲಗಗನದ ತಳಗೆ, ನೀಲಸಮುದ್ರದ ನಡುವೆ ತೇಲುವ ಈ ಭೂಚೂರುಗಳನ್ನು ನಾವು ದೇಶಗಳೆಂದು ಹಂಚಿಕೊಂಡಿದ್ದೇವೆ. ವಿಭಜಿತ ಗಡಿಗಳು ಭೂಭಾಗಗಳಲ್ಲಿ ಕೆಲವನ್ನು ಕೊನೆಯ ಅಥವಾ ಮೊದಲ ಹಳ್ಳಿಗಳನ್ನಾಗಿ ಮಾಡಿವೆ. ಈ ಹಳ್ಳಿಗಳಲ್ಲಿ ಇನ್ನೆಲ್ಲೊ ಹುಟ್ಟಿದ ಹೊಳೆಗಳು ಹರಿದು ಇನ್ನೊಂದು ದೇಶವನ್ನು ಸೇರುತ್ತವೆ. ಅಲ್ಲಿನ ಹೂವಿಗೆ ಹಣ್ಣಿಗೆ ಬೇರೆ ದೇಶದಿಂದ ದುಂಬಿ ಹಕ್ಕಿಗಳು ಬರುತ್ತವೆ. ಗಾಳಿಗಂತೂ ಗಡಿಯೇ ಇಲ್ಲವಲ್ಲ. ಗಡಿಗಳಿರುವುದು ಮನುಷ್ಯರಿಗೆ ಮಾತ್ರ.

ಗಂಗರ ಕಾಲದ ಅಪರೂಪದ ನಾಣ್ಯಗಳೊಂದಿಗೆ ಎಂ.ಪ್ರಶಾಂತ್‌ಶೇಟ್ ಚಿತ್ರಗಳು: ಫಕ್ರುದ್ದೀನ್ ಎಚ್

ಕೌತುಕದಿ ಮದಗಜದ ಬೆನ್ನೇರಿ...

• ಸಂಧ್ಯಾ ಹೆಗಡೆ

ಕರುನಾಡನ್ನು ಆಳಿದ ರಾಜಮನೆತನಗಳಲ್ಲಿ ಒಂದಾದ ತಲಕಾಡಿನ ಗಂಗರು, ಘನತೆಯ ಸಂಕೇತವಾದ ‘ಮದಗಜ’ವನ್ನು ತಮ್ಮ ಅಧಿಕೃತ ಲಾಂಛನವಾಗಿ ಬಳಸುತ್ತಿದ್ದರು. ಗಜಶಕ್ತಿಯಲ್ಲಿ ಅಪಾರ ನಂಬಿಕೆ ಹೊಂದಿದ್ದ ಗಂಗರು ನಾಣ್ಯಗಳಲ್ಲೂ ವಿವಿಧ ಭಂಗಿಯ ಗಜಗಳನ್ನೇ ಟಂಕಿಸಿಸುತ್ತಿದ್ದರು.

ಗಂಗರ ಚರಿತ್ರೆಯ ನಾಣ್ಯ ವೈವಿಧ್ಯವನ್ನು ಕಾಣಬೇಕೆಂದರೆ ಮಂಗಳೂರಿನ ಎಂ.ಪ್ರಶಾಂತ್ ಶೇಟ್ ಅವರ ಖಜಾನೆಯಲ್ಲಿ ಇಣುಕಬೇಕು. ಗಂಗರ ಕಾಲದ ನಾಣ್ಯಗಳ ಬಹುದೊಡ್ಡ ಸಂಗ್ರಹ ಅವರ ಬಳಿಯಿದೆ.

ತಮ್ಮ ಹದಿನೈದನೇ ವಯಸ್ಸಿನಿಂದ ನಾಣ್ಯ ಸಂಗ್ರಹ ಹವ್ಯಾಸ ರೂಢಿಸಿಕೊಂಡಿರುವ ಪ್ರಶಾಂತ್ ಅವರ ಬಳಿ ಪುರಾತನ ನಾಣ್ಯಗಳೂ ಸೇರಿದಂತೆ ಎರಡು ಸಾವಿರಕ್ಕೂ ಅಧಿಕ ಸಂಗ್ರಹಯೋಗ್ಯ ನಾಣ್ಯಗಳಿವೆ. ಅವುಗಳಲ್ಲಿ ಅವರನ್ನು ವಿಶೇಷವಾಗಿ ಆಕರ್ಷಿಸಿದ್ದು ನಾಲ್ಕನೇ ಶತಮಾನದಿಂದ ಹತ್ತನೇ ಶತಮಾನದವರೆಗೆ ತಲಕಾಡು ಮತ್ತು ಕೋಲಾರವನ್ನು ಕೇಂದ್ರ ಸ್ಥಾನ ಮಾಡಿಕೊಂಡು ಆಳ್ವಿಕೆ ನಡೆಸಿದ ಗಂಗರ ಕಾಲದ ಚಿನ್ನದ ನಾಣ್ಯಗಳು. ಅದಕ್ಕೆ ಕಾರಣವೂ ಇದೆ, ಅದೇನೆಂದರೆ, ಗಜ ಅವರ ನೆಚ್ಚಿನ ಪ್ರಾಣಿ. 2008ರಲ್ಲಿ ಹತ್ತು ನಾಣ್ಯಗಳೊಂದಿಗೆ ‘ಗಜ ಭಂಗಿ’ಯ ಬೆನ್ನತ್ತಿ ಹೊರಟ ಅವರು, ಪ್ರಸ್ತುತ 310 ನಾಣ್ಯಗಳನ್ನು ಹೊಂದಿದ್ದಾರೆ.

‘2013ರ ವೇಳೆಗೆ ನನ್ನ ಬಳಿ ಇದ್ದಿದ್ದು ಗಂಗರ ಕಾಲದ 20 ನಾಣ್ಯಗಳು ಮಾತ್ರ. ಮುಂದಿನ ಐದು ವರ್ಷಗಳಲ್ಲಿ ಶೇಖರಿಸಲು ಸಾಧ್ಯವಾದದ್ದು 10 ಹೆಚ್ಚುವರಿ ನಾಣ್ಯಗಳಷ್ಟೆ. 2018ರಲ್ಲಿ ಅಂಚೆ ಇಲಾಖೆಯವರು ಮಂಗಳೂರಿನಲ್ಲಿ ಅಂಚೆಚೀಟಿ ಮತ್ತು ನಾಣ್ಯಗಳ ಬೃಹತ್ ಪ್ರದರ್ಶನವೊಂದನ್ನು ಹಮ್ಮಿಕೊಂಡಿದ್ದರು. ಈ ಪ್ರದರ್ಶನವು ಗಂಗರ ನಾಣ್ಯ ಸಂಗ್ರಹದ ಸಂಖ್ಯೆಯನ್ನು 96ಕ್ಕೆ ತಲುಪಿಸಲು ಸಹಾಯವಾಗಿದ್ದಷ್ಟೇ ಅಲ್ಲ, ಹುಡುಕಾಟದ ದಾಹವನ್ನು ಇಮ್ಮಡಿಸಿತು’ ಎನ್ನುತ್ತಾರೆ ಪ್ರಶಾಂತ್.



ನಾಣ್ಯ ಪ್ರದರ್ಶನಗಳು, ಹರಾಜು ಪ್ರಕ್ರಿಯೆ ಮೇಲೆ ಸದಾ ಕಣ್ಣಿಡುವ ಅವರು, ಗಂಗರ ನಾಣ್ಯಗಳನ್ನು ಎಲ್ಲೇ ಕಂಡರೂ ಸಂಪಾದಿಸಿಕೊಳ್ಳುತ್ತಾರೆ. ಮುಂಬೈ, ಕೊಲ್ಕತ್ತಾ, ರಾಜಕೋಟ್ ಮೊದಲಾದ ಕಡೆಗಳಿಂದ ಸಂಗ್ರಹಿಸಿದ ನಾಣ್ಯಗಳು ಅವರ ಭಂಡಾರದಲ್ಲಿವೆ. ನಾಣ್ಯ ಸಂಗ್ರಹಕಾರ ವಲಯದಲ್ಲಿ ಅವರು ‘ಗಜಪತಿ ಕಿಂಗ್’ ಎಂದೇ ಪರಿಚಿತರು. ಪ್ರಶಾಂತ್ ಹೇಳುವಂತೆ, ಗಂಗರ ಆಳ್ವಿಕೆಯ ಅತಿ ಹೆಚ್ಚು ನಾಣ್ಯಗಳನ್ನು ಹೊಂದಿರುವ ದೇಶದ ವೈಯಕ್ತಿಕ ಸಂಗ್ರಹಕಾರರಲ್ಲಿ ಅವರೇ ಮೊದಲಿಗರು.

ಖಚಿತತೆ ಹೇಗೆ?

‘ಪ್ರತಿಷ್ಠಿತ ಹರಾಜು ಸಂಸ್ಥೆಗಳು ನಾಣ್ಯಗಳ ಅಧಿಕೃತತೆ ದೃಢಪಡಿಸಿಕೊಂಡೇ ಹರಾಜು ಪ್ರಕ್ರಿಯೆ ನಡೆಸುತ್ತವೆ. ಖುಷಿಗಾಗಿ ಕೂಡಿಟ್ಟುಕೊಂಡವರಿಂದ ನಾಣ್ಯಗಳನ್ನು ಪಡೆದಾಗ ಇತಿಹಾಸ ಅಧ್ಯಯನಕಾರರು ಅಥವಾ ನಾಣ್ಯ ತಜ್ಞರ ಸಲಹೆ ಪಡೆದು ಅಸಲಿತನದ ಬಗ್ಗೆ ಖಚಿತಪಡಿಸಿಕೊಳ್ಳುತ್ತೇನೆ. ಹಲವಾರು ಪ್ರಮುಖ ಪ್ರದರ್ಶನ ವೇದಿಕೆಗಳಲ್ಲಿ ಭಾಗಿಯಾಗುವ ಇತಿಹಾಸ ತಜ್ಞರು, ನಾಣ್ಯಗಳನ್ನು ಪರಿಶೀಲಿಸಿ ಅಧಿಕೃತ ಮುದ್ರೆ ಒತ್ತಿದಾಗ ಅಸಲಿತನಕ್ಕೆ ಅದು ಅಚ್ಚು ಹಾಕಿದಂತೆ’ ಎನ್ನುತ್ತಾರೆ ಅವರು.

‘ನಾಣ್ಯ ಸಂಗ್ರಹದಲ್ಲಿ ಪರಿಪೂರ್ಣ ಎಂಬುದಿಲ್ಲ, ಇತಿಹಾಸದ ಖನಿಯಲ್ಲಿ ಬಗೆದಷ್ಟು ಕುತೂಹಲ ಹೆಚ್ಚಾಗುತ್ತದೆ. ನನ್ನ ಸಂಗ್ರಹದಲ್ಲಿರುವ ನಾಣ್ಯಗಳ ಹೊರತಾಗಿ, ಗಂಗ ರಾಜವಂಶದಲ್ಲಿ ಚಾಲ್ತಿಯಲ್ಲಿದ್ದ ಇನ್ನೂ 12 ಬೇರೆ ನಾಣ್ಯಗಳು ಇವೆ ಎಂದು ಇತಿಹಾಸ ತಜ್ಞರೊಬ್ಬರಿಂದ ತಿಳಿದುಕೊಂಡಿದ್ದೇನೆ. ಈ ನಾಣ್ಯಗಳ ಶೋಧ ಮುಂದುವರಿಸುತ್ತಲೇ ಸಂಗ್ರಹದಲ್ಲಿರುವ ನಾಣ್ಯಗಳ ಬಗ್ಗೆ ಎರಡು ವರ್ಷಗಳಿಂದ ಅಧ್ಯಯನ ನಡೆಸುತ್ತಿದ್ದೇನೆ. ಗಂಗರ ಆಳ್ವಿಕೆಯ 310 ನಾಣ್ಯಗಳಲ್ಲಿ ಸುಮಾರು 290 ನಾಣ್ಯಗಳ ಬಗ್ಗೆ ದಾಖಲಿಸಿದ್ದು, ಪುಸ್ತಕ ಪ್ರಕಟಿಸುವ ಹಂಬಲವಿದೆ. ಈ ಪುಸ್ತಕವು ಇತಿಹಾಸಕಾರನ ಅಧ್ಯಯನ ಅಲ್ಲ, ಒಬ್ಬ ಸಂಗ್ರಹಕಾರನ ಅಕ್ಷಿಯಲ್ಲಿ ಹೊರಹೊಮ್ಮಿದ ಅಭಿವ್ಯಕ್ತಿ’ ಎನ್ನುತ್ತಾರೆ ಸ್ವರ್ಣೋದ್ಯಮಿಯಾಗಿರುವ ಪ್ರಶಾಂತ್ ಶೇಟ್.

ವಿಶೇಷತೆಗಳೇನು?

ಗಂಗರ ನಾಣ್ಯಗಳಲ್ಲಿ ಗಜವೇ ಪ್ರಧಾನ. ಮುಮ್ಮುಖದಲ್ಲಿ ಮದಗಜ, ಶಾಂತ ಕಳೆಯ ಆನೆ, ಕರೇಣು, ದಪ್ಪ ಹಸ್ತಿಯ ಮದ್ದಾನೆ, ವಿವಿಧ ಭಾವಭಂಗಿಯ ಆನೆಗಳು ಹೀಗೆ ಗಜ ಮುಖದ ಬಹುರೂಪ ಅನಾವರಣಗೊಂಡರೆ, ಹಿಮ್ಮುಖದಲ್ಲಿ ಪರಿಸರ, ಪ್ರಾಣಿ, ಸಾಮಾಜಿಕ ಜೀವನದ ಬಿಂಬಗಳು ಹೀಗೆ 1,600ಕ್ಕೂ ಹೆಚ್ಚು ಆಶಯಗಳು ಶತಮಾನಗಳ ಹಿಂದಿನ ಜನ–ಜೀವನ, ಪಾರಿಸಾರಿಕ ನೋಟದ ಮೇಲೆ ಬೆಳಕು ಚೆಲ್ಲುತ್ತವೆ. ಗಂಗರು ಆಭರಣ ಪ್ರಿಯರು ಎಂಬುದಕ್ಕೆ ಆನೆಗಳ ಪಾದ ಸುತ್ತುವರಿದ ಪದರಾದ ಚೈನುಗಳು, ಕೊರಳನ್ನು ಆಲಂಗಿಸಿದ ಸರಪಳಿಯಂತಹ ಸರಗಳು, ದಂತಗಳನ್ನು ಬಿಗಿದಪ್ಪಿದ ಉಂಗುರಗಳ ಗೋಪುರ, ಕರ್ಣಾಲಂಕಾರವೇ ಸಾಕ್ಷಿ. ಅವರು ಆನೆಗಳನ್ನು ಅಲಂಕರಿಸಿ ಟಂಕಿಸುತ್ತಿದ್ದ ನಾಣ್ಯಗಳ ಪರಿಯೇ ಚೆಂದ ಎನ್ನುತ್ತ ನಾಣ್ಯಗಳ ಕೌತುಕ ಲೋಕವನ್ನು ತೆರೆದಿಟ್ಟರು.

ಇತ್ತೀಚೆಗೆ ಹಂಪಿ ದೇವಾಲಯಕ್ಕೆ ಭೇಟಿ ನೀಡಿದಾಗ ನನ್ನ ಕಣ್ಣು ವಿಸ್ಮಯವೊಂದನ್ನು ಗುರುತಿಸಿತು. ಗಂಗರ ಕಾಲದ ನಾಣ್ಯಗಳು ಮತ್ತು ಹಂಪಿ ದೇವಾಲಯದಲ್ಲಿರುವ ಕೆಲವು ಶಿಲ್ಪ ಕಲಾಕೃತಿಯ ಕೆತ್ತನೆಗೆ ಹೋಲಿಕೆ ಇರುವುದು ಕಂಡುಬಂತು. ಇದು ಅಧ್ಯಯನಕ್ಕೊಂದು ವಸ್ತು ಕಲ್ಪಿಸಿದೆ.

ಗೋವಾ ಕದಂಬರು ಮತ್ತು ಹಾನಗಲ್ ಕದಂಬರ ಆಳ್ವಿಕೆಯ ಅವಧಿಯಲ್ಲಿ ಬಳಕೆಯಲ್ಲಿದ್ದ 42 ನಾಣ್ಯಗಳು, ಬ್ರಿಟಿಷ್ ಇಂಡಿಯಾ ಕಾಲದ ನಾಣ್ಯಗಳು ಅವರ ಸಂಗ್ರಹದಲ್ಲಿವೆ. ಸುಮಾರು 50 ವಿಭಿನ್ನ ಥೀಮ್‌ಗಳಿರುವ ಅಂಚೆ ಚೀಟಿಗಳು, ಪೋಸ್ಟ್ ಕಾರ್ಡ್‌ಗಳ ವಸ್ತು ಸಂಗ್ರಹಾಲಯ ಪ್ರಶಾಂತ್ ಶೇಟ್ ಅವರ ಮನೆ.

ಈಗ ಟೆಂಪಲ್ ಜ್ಯುವೆಲ್ಲರಿ ಟ್ರೆಂಡಿಂಗ್‌ನಲ್ಲಿದೆ. ಆಭರಣ ಪ್ರಿಯರನ್ನು ಅತಿ ಹೆಚ್ಚು ಸೆಳೆದಿರುವ ವಿನ್ಯಾಸವಿದು. ಆದರೆ, ಅಂದಿನ ಆಭರಣಗಳು ಮಾನವನ ಸೃಜನಶೀಲತೆಯಲ್ಲರಳಿದ ಕಲಾತ್ಮಕತೆಯಿಂದ ಕೂಡಿರುತ್ತವೆ. ಇಂದಿನ ಶೇಕಡ 90ರಷ್ಟು ಆಭರಣಗಳು ತಂತ್ರಜ್ಞಾನದಿಂದ ಸದ್ಬಳಕೆಯಲ್ಲಿ ಮೂಡಿದವು ಎನ್ನುತ್ತಾರೆ ಪ್ರಶಾಂತ್ ಶೇಟ್.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ವಾರ	+	ತಾಣ	+	ವ	=	
2	ಮುದ್ದಿ	+	ಸುಖ	+	ಪ್ರ	=	
3	ಅಸು	+	ನುರಿ	+	ಸ	=	
4	ವಡೆ	+	ತಲ	+	ಸೆ	=	
5	ವಾಲಿ	+	ಮನ	+	ಗು	=	

ವರ್ಡ್‌ಗೇಮ್

ಇಲ್ಲಿ ಕೊಟ್ಟಿರುವ 9 ಅಕ್ಷರಗಳನ್ನು ಕೇವಲ 7 ಅಕ್ಷರಗಳಲ್ಲಿ ಬರೆದು ಅದೇ ಅರ್ಥ ಬರುವಂತೆ ಮಾಡಬಲ್ಲಿರಾ?

ROBINHOOD =

ಪದ ಶೋಧ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಉತ್ತರ ಕರ್ನಾಟಕದ ಓರ್ವ ಸಾಹಿತಿಯ ಹೆಸರು ಹುಡುಕಬಲ್ಲಿರಾ?

1.ಹಸಿರು ಹೂ 2.ಶುದ್ಧ ನೀರು 3.ಆಲಿಂಗನ 4.ಆಗಮನ 5.ಅಪರೂಪ 6.ಲಟ್ಟಣಿಗೆ 7.ಹಣವಂತ 8.ಆಶೆಬಿಡು 9.ತುಟ್ಟಿಬೆಲೆ

ಉತ್ತರ:

ಶಬ್ದಾಟ

ಇಲ್ಲಿ ಕೊಟ್ಟಿರುವ ಶಬ್ದಕ್ಕೆ ಕೊಟ್ಟಿರುವ ಒಂದಕ್ಷರ ಸೇರಿಸಿ ಅರ್ಥಬದ್ಧ ಪದ ಮಾಡಿ.

ಯಾರದನ + ದೂ =

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಬ್ಬ ಚಿಕ್ಕು ಶೀರ್ಷಿಕೆ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಮರದ ಬುಡದಲ್ಲಿ ಗುಂಡನ ಧ್ಯಾನ

ಹೊರಗಿನ ಜಂಜಾಟಗಳಿಂದ ಬಸವಳಿದ ಗುಂಡ ಮರದ ಕೆಳಗೆ ಶಾಂತವಾಗಿ ಧ್ಯಾನಕ್ಕೆ ಕುಳಿತಿದ್ದ. ತುಸು ಹೊತ್ತಿನಲ್ಲಿ ಗಾಳಿ ಬೀಸಲು ಪ್ರಾರಂಭವಾಯಿತು. ಪರಿಣಾಮವಾಗಿ ಮರದ ಮೇಲಿದ್ದ ಹಣ್ಣುಗಳು ಅಲ್ಲಾಡತೊಡಗಿದವು. ಧ್ಯಾನ ಮಗ್ನನಾಗಿದ್ದ ಗುಂಡನಿಗೆ ಇದರ ಅರಿವೇ ಆಗಲಿಲ್ಲ. ಅಷ್ಟರಲ್ಲಿ ಹಣ್ಣೊಂದು ಗುಂಡನ ತಲೆಮೇಲೆ ಬಿದ್ದು, ನೆಮ್ಮದಿಯ ತಾಣವು ಆತನ ಪಾಲಿಗೆ ನೋವಿನ ಜಾಗವಾಗಿ ಬದಲಾಯಿತು.



TAKE FIVE AND MAKE FIVE

ಇಲ್ಲಿ ಕೊಟ್ಟಿರುವ ಗೋಲಿಗಳಲ್ಲಿ ಐದು ಗೋಲಿಗಳನ್ನು ತೆಗೆದು FIVE ಮಾಡಿ. ((ಚಿತ್ರದಲ್ಲಿರುವಂತೆ ಗೋಲಿಗಳನ್ನು ಇಡಿ))



ಕೊಂಚ ತಂತ್ರ

ಯೋಗದಲ್ಲಿ ಬರುವ ಮೂರು ನಾಡಿಗಳ ಹೆಸರನ್ನು ನೆನಪಿಡಲು IPS ನೆನಪಿಡಿ.

I = ಇಡಾ, P = ಪಿಂಗಳ, S = ಸುಷುಮ್ನಾ

ಜಾಣಪದ ಆಟ

1. ಇಲ್ಲಿ ಕೊಟ್ಟಿರುವ ‘ಯೋಗ’ ಪದದ ಹಿಂದೆ ಒಂದಕ್ಷರ ಸೇರಿಸಿ ಅರ್ಥಬದ್ಧ ಪದ ಮಾಡಿ.

1		ಯೋಗ
2		ಯೋಗ
3		ಯೋಗ
4		ಯೋಗ
5		ಯೋಗ

ಗಣಿತದಲ್ಲಿ ಗರ್ದಿ ಗಮ್ಮತ್ತು

ಈಜಿ ಆ್ಯಂಡ್ ಕ್ರೇಜಿ ಮ್ಯಾಥ್ಸ್

42052631578947368

ಇದನ್ನು ಎರಡರಷ್ಟು ಮಾಡಲು ಇಲ್ಲಿರುವ ಯಾವ ಅಂಕಿಯನ್ನು ಸ್ಥಾನ ಬದಲಿಸಬೇಕು.

ಉಪಾಯ: ಕೇವಲ ಕೊನೆಯ 8ನ್ನು ಆರಂಭಕ್ಕೆ ಬದಲಾಯಿಸಿದರೆ ಸಾಕು ಮೂಲ ಸಂಖ್ಯೆಯ ಎರಡರಷ್ಟಾಗುತ್ತದೆ. ಹೀಗೆ 84205263157894736 ಬೇಕಿದ್ದರೆ ಮೇಲಿನ ಸಂಖ್ಯೆಗೆ 2ರಿಂದ ಗುಣಿಸಿ ಖಾತ್ರಿ ಮಾಡಿಕೊಳ್ಳಿ.

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಭೀಕರದಾಳಿ 2.ವಾಯುಮಾಲಿನ್ಯ 3.ಹಣಗಳಿಕೆ 4.ದಯಮಾಡಿಸು 5.ಮಗನಹಠ
ಶಬ್ದಾಟ: ಪರವಾನಗಿ
ವರ್ಡ್‌ಗೇಮ್: HOSTEL
ಮೋಜಿನ ಇಂಗ್ಲಿಷ್: 1.BANG 2.GANG 3.HANG 4.KING 5.LONG 6.RING 7.WING 8.SING
ಬ್ರೇನ್‌ವ್ಹೀಟಾ ಆಟ: 1.Sunday, Monday, Tuesday, Wednesday... 2.January, February, March, April... 3.One, Two, Three, Four... 4.Two, Four, Six, Eight...
ಪದಪರಿಚಯ: 1.ಗರತಿ 2.ನರ 3.ದನ 4.ದರ 5.ನಲ್ಲಿ 6.ಜಲ್ಲಿ 7.ರಜ 8.ವರ
ಜಾಣಪದ ಆಟ: 1.ಸಹಪಾಠಿ 2.ಸಹಚರ 3.ಸಹಭಾಗಿ 4.ಸಹವಾಸ 5.ಸಹಕಾರ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಪ್ರಯಾಗ್ ಬಿ.
ಕೋಲಾರ

ಅಭಿಮನ್ಯು
ಬೆಂಗಳೂರು

ನಂದಿತಾ ಎಸ್.ಎಂ.
ಬೆಂಗಳೂರು

ರಿಧಾ ರಿಯಾಜ್ ಪ್ಲಾಟ್
ಹಾವೇರಿ

ಬೃಂದಾ ಭಾರದ್ವಾಜ್
ಚಿಕ್ಕಮಗಳೂರು

ಶ್ರೀನಿಧಿ ಎಂ.ಜಡೇದ
ರಾಣೆಬೆನ್ನೂರು

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸಾಲ ಖಾತರಿ ಅಡಿ ₹3,361 ಕೋಟಿ

ಅಮೆರಿಕದ ಸುಂಕದ ಸವಾಲುಗಳನ್ನು ಎದುರಿಸುತ್ತಿರುವ ರಫ್ತುದಾರರಿಗೆ ಉತ್ತೇಜನ ನೀಡಲು ಕ್ರಮ

ನವದೆಹಲಿ (ಪಿಟಿಐ): ರಫ್ತು ವ್ಯವಹಾರದಲ್ಲಿ ತೊಡಗಿರುವವರಿಗೆ ಸಾಲದ ಖಾತರಿ ಯೋಜನೆಯ (ಸಿಜಿಎಸ್‌ಇ) ಅಡಿಯಲ್ಲಿ ಒಂದೇ ತಿಂಗಳಿನಲ್ಲಿ ₹3,361.83 ಕೋಟಿ ಮೊತ್ತವನ್ನು ಹಣಕಾಸು ಸಂಸ್ಥೆಗಳು ಮಂಜೂರು ಮಾಡಿವೆ.

ಅಮೆರಿಕವು ಹೇರಿರುವ ಭಾರಿ ಸುಂಕದ ಪರಿಣಾಮವಾಗಿ ಸವಾಲು ಎದುರಿಸುತ್ತಿರುವ ರಫ್ತುದಾರರಿಗೆ ಇದು ನೆರವು ನೀಡಲಿದೆ ಎಂದು ಹಣಕಾಸು ಸೇವೆಗಳ ಇಲಾಖೆ (ಡಿಎಫ್‌ಎಸ್) ತಿಳಿಸಿದೆ.

ಕಳೆದ ನವೆಂಬರ್ 12ರಂದು ನಡೆದ ಕೇಂದ್ರ ಸಚಿವ ಸಂಪುಟವು, ಎಂಎಸ್‌ಎಂಇ ಸೇರಿದಂತೆ ಅರ್ಹ ರಫ್ತುದಾರರಿಗೆ ₹20 ಸಾವಿರ ಕೋಟಿವರೆಗೆ ಹೆಚ್ಚುವರಿಯಾಗಿ ಸಾಲವನ್ನು ನೀಡುವ ಯೋಜನೆಗೆ ಅನುಮೋದನೆ ನೀಡಿದೆ.

ಈ ಯೋಜನೆ ಡಿಸೆಂಬರ್ 1ರಿಂದ ಕಾರ್ಯರೂಪಕ್ಕೆ ಬಂದಿದೆ. ಇದು ದೇಶದ ರಫ್ತುದಾರರಿಗೆ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಹೆಚ್ಚುವರಿ ಹಣಕಾಸಿನ ನೆರವನ್ನು ಒದಗಿಸಲು ಅವಕಾಶ ಮಾಡಿಕೊಡುತ್ತದೆ. ಅಲ್ಲದೆ ರಫ್ತುದಾರರಿಗೆ ಹೊಸ ಮಾರುಕಟ್ಟೆಗಳನ್ನು ಕಂಡುಕೊಳ್ಳಲು ಮತ್ತು ಜಾಗತಿಕ ಮಟ್ಟದಲ್ಲಿ ತಮ್ಮ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಹೇಳಿದೆ.

ಜನವರಿ 2ರವರೆಗೆ ಈ ಯೋಜನೆಯ ಅಡಿ ₹8,764 ಕೋಟಿ ಮೊತ್ತದ ಸಾಲ ಕೋರಿ 1,840 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈ ಪೈಕಿ 774 ಅರ್ಜಿಗಳಿಗೆ ₹3,361 ಕೋಟಿ ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಧೀನದಲ್ಲಿನ ಹಣಕಾಸು ಸೇವೆಗಳ ಇಲಾಖೆ ತಿಳಿಸಿದೆ.

ಈ ಯೋಜನೆಯು 2026ರ ಮಾರ್ಚ್ 31ರವರೆಗೆ ಅಥವಾ ₹20 ಸಾವಿರ ಕೋಟಿ ಸಾಲದ ಖಾತರಿ ನೀಡುವವರೆಗೆ ಇರಲಿದೆ.

‘ಎಂಎಸ್‌ಎಂಇಗಳಿಗೆ ಸಾಲದ ಖಾತರಿ ಯೋಜನೆ’ಯ ಅಡಿ ಯಂತ್ರೋಪಕರಣ ಖರೀದಿಸುವ ಎಂಎಸ್‌ಎಂಇ ವಲಯದ ಉದ್ಯಮಿಗಳಿಗೆ ₹100 ಕೋಟಿವರೆಗೆ ಹೆಚ್ಚುವರಿ ಸಾಲಕ್ಕೆ ಖಾತರಿ ನೀಡಲಾಗುತ್ತದೆ. ಈ ಮೂಲಕ ತಯಾರಿಕೆಗೆ ಉತ್ತೇಜನ ನೀಡುವ ಗುರಿಯನ್ನು ಹೊಂದಿದೆ.

ಬ್ಯಾಂಕ್‌ಗಳಿಗೆ ₹4 ಲಕ್ಷ ಕೋಟಿ ಲಾಭ

ಇಲಾಖೆಯು ಬ್ಯಾಂಕುಗಳ ಹಣಕಾಸಿನ ಸ್ಥಿತಿಯ ಬಗ್ಗೆಯೂ ಮಾಹಿತಿ ಒದಗಿಸಿದ್ದು, 2024-25ರ ಆರ್ಥಿಕ ವರ್ಷದಲ್ಲಿ ವಾಣಿಜ್ಯ ಬ್ಯಾಂಕ್‌ಗಳು (ಎಸ್‌ಸಿಬಿ) ದಾಖಲೆಯ ₹4.01 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿವೆ ಎಂದು ಹೇಳಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಕಳೆದ ಆರ್ಥಿಕ ವರ್ಷದಲ್ಲಿ ₹1.78 ಲಕ್ಷ ಕೋಟಿ ಲಾಭ ಗಳಿಸಿವೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ₹0.94 ಲಕ್ಷ ಕೋಟಿ ಲಾಭ ಗಳಿಸಿವೆ.

2015ರ ಮಾರ್ಚ್‌ನಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಗ್ರಾಹಕರಿಂದ ಸಂಗ್ರಹಿಸಿದ ಠೇವಣಿ ಮತ್ತು ಗ್ರಾಹಕರಿಗೆ ನೀಡಿದ ಸಾಲವು ಕ್ರಮವಾಗಿ ₹71.95 ಲಕ್ಷ ಕೋಟಿ ಮತ್ತು ₹56.16 ಲಕ್ಷ ಕೋಟಿ ಆಗಿತ್ತು. ಇದು 2025ರ ಸೆಪ್ಟೆಂಬರ್ ವೇಳೆಗೆ ಕ್ರಮವಾಗಿ ₹146.27 ಲಕ್ಷ ಕೋಟಿ ಮತ್ತು ₹114.85 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಇದೇ ಅವಧಿಯಲ್ಲಿ ಒಟ್ಟು ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 4.97ರಿಂದ ಶೇ 2.30ಕ್ಕೆ ಇಳಿದಿದೆ. ಇದು 2018ರ ಮಾರ್ಚ್‌ನಲ್ಲಿ ಶೇ 14.58ರಷ್ಟು ಇತ್ತು. ಇದು ದಾಖಲೆಯ ಮಟ್ಟದ್ದ ಎನ್‌ಪಿಎ ಆಗಿತ್ತು.

ಬ್ಯಾಂಕ್‌ಗಳ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 11.45ರಿಂದ ಶೇ 15.96ಕ್ಕೆ ಏರಿಕೆ ಆಗಿದ್ದು, ಶೇ 4.51ರಷ್ಟು (451 ಮೂಲಾಂಶ) ಸುಧಾರಿಸಿದೆ ಎಂದು ತಿಳಿಸಿದೆ.

ನಾಸ್ಕಾಂ, ಐಬಿಎಂನಿಂದ ಕೌಶಲ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಸೌಲಭ್ಯ ವಂಚಿತ ಸಮುದಾಯಗಳ 87 ಸಾವಿರಕ್ಕೂ ಹೆಚ್ಚು ಯುವಕರಿಗೆ ಮಾರುಕಟ್ಟೆ ಸಂಬಂಧಿತ ಡಿಜಿಟಲ್, ಡೊಮೇನ್ ಮತ್ತು ಉದ್ಯೋಗ ಕೌಶಲ ತರಬೇತಿ ನೀಡಲು ನಾಸ್ಕಾಂ ಫೌಂಡೇಶನ್ ಮತ್ತು ಐಬಿಎಂ ಪಾಲುದಾರಿಕೆಗೆ ಒಪ್ಪಿವೆ.

ಐಬಿಎಂನ ‘ಸ್ಕಿಲ್ಸ್‌ಬಿಲ್ಡ್’ ಕಾರ್ಯಕ್ರಮದ ಅಡಿಯಲ್ಲಿ ಈ ಪಾಲುದಾರಿಕೆ ಅಂತಿಮಗೊಂಡಿದೆ. ಡಿಜಿಟಲ್ ಜಗತ್ತಿನಲ್ಲಿ ಉದ್ಯೋಗ ಮಾಡಲು ಸಿದ್ಧವಿರುವ ಪ್ರತಿಭಾವಂತರನ್ನು ನಿರ್ಮಾಣ ಮಾಡುವ ಗುರಿಯನ್ನು ಈ ಕಾರ್ಯಕ್ರಮವು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಐಬಿಎಂ ‘ಸ್ಕಿಲ್ಸ್‌ಬಿಲ್ಡ್’ಗೆ ಪ್ರವೇಶ ಪಡೆಯುವವರು ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಕ್ಲೌಡ್ ಕಂಪ್ಯೂಟಿಂಗ್, ದತ್ತಾಂಶ ವಿಶ್ಲೇಷಣೆಯಂತಹ ಕ್ಷೇತ್ರಗಳಿಗೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಭಾಗಿಯಾಗಬಹುದು.

‘ನಮ್ಮ ಪಾಲುದಾರಿಕೆಯು, ತಂತ್ರಜ್ಞಾನ ಚಾಲಿತ ಕಲಿಕೆಯೊಂದಿಗೆ ಜೀವನೋಪಾಯದ ಅವಕಾಶಗಳನ್ನು ಕಲ್ಪಿಸುತ್ತದೆ’ ಎಂದು ನಾಸ್ಕಾಂ ಫೌಂಡೇಶನ್‌ನ ಸಿಇಒ ಜ್ಯೋತಿ ಶರ್ಮಾ ಹೇಳಿದ್ದಾರೆ.

ಈ ಸಹಯೋಗವು 2030ರ ವೇಳೆಗೆ 3 ಕೋಟಿ ಯುವಕರಿಗೆ ಮತ್ತು 2026ರ ಅಂತ್ಯದ ವೇಳೆಗೆ 20 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿ ಹೊಂದಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

17 ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ವಿ.ಎಸ್. ಮುನಿರೆಡ್ಡಿ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ ಶ್ರೀಮತಿ ರತ್ನಮ್ಮ
ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26250
ಎಸಿ	₹14420
ಆರ್‌ಪಿ	₹17000
ಆರ್‌ಸಿ	₹10150

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1605 (1600)
ಸೋಯಾ (ರಿಫೈನ್ಡ್)	₹1315 (1310)
ಸೂರ್ಯಕಾಂತಿ (ರಿಫೈನ್ಡ್)	₹1535 (1530)
ಪಾಮೋಲಿನ್	₹1275 (1270)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹605
	12 ಕ್ಕೆ	₹90
ಮೈಸೂರು:	100 ಕ್ಕೆ	₹603

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹255-771
ದ್ವಿತಳಿ (ಬಿ.ವಿ)	₹316-915

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182.50
ಆರ್‌ಎಸ್‌ಎಸ್-5	₹177.50
ಗುಡ್ ಲಾಟ್	₹166

ಡಿ–ಮಾರ್ಟ್ ಲಾಭ ಶೇ 18ರಷ್ಟು ಏರಿಕೆ

ನವದೆಹಲಿ (ಪಿಟಿಐ): ‘ಡಿ–ಮಾರ್ಟ್’ ಸೂಪರ್ ಮಾರ್ಕೆಟ್‌ಗಳ ಮಾಲೀಕತ್ವ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಲಿಮಿಟೆಡ್ ಡಿಸೆಂಬರ್ ತ್ರೈಮಾಸಿಕದ ಫಲಿತಾಂಶ ಪ್ರಕಟಿಸಿದ್ದು, ಕಂಪನಿಯ ಒಟ್ಟು ನಿವ್ವಳ ಲಾಭವು ಶೇ 18.27ರಷ್ಟು ಹೆಚ್ಚಳ ಕಂಡಿದೆ.

ಈ ತ್ರೈಮಾಸಿಕದಲ್ಲಿ ಕಂಪನಿಯು ₹855.78 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯ ಲಾಭವು ₹723.54 ಕೋಟಿ ಆಗಿತ್ತು.

ಕಂಪನಿಯ ಕಾರ್ಯಾಚರಣೆ ವರಮಾನವು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 13.32ರಷ್ಟು ಹೆಚ್ಚಳವಾಗಿದ್ದು ₹18,100 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನವು ₹15,972 ಕೋಟಿ ಆಗಿತ್ತು. ಕಂಪನಿಯ ಒಟ್ಟು ವೆಚ್ಚಗಳು ಶೇ 13ರಷ್ಟು ಹೆಚ್ಚಳವಾಗಿವೆ.

ದಿನಬಳಕೆ ಉತ್ಪನ್ನಗಳ ಬೆಲೆ ಇಳಿಕೆಯು ವರಮಾನ ಹೆಚ್ಚಳದ ಮೇಲೆ ಒಂದಿಷ್ಟು ಪರಿಣಾಮ ಉಂಟುಮಾಡಿದೆ ಎಂದು ಕಂಪನಿಯ ನಿಯೋಜಿತ ಸಿಇಒ ಅನ್ಶುಲ್ ಅಸಾವಾ ಹೇಳಿದ್ದಾರೆ.

ಎಫ್‌ಎಂಸಿಜಿ, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು ಸೇರಿದಂತೆ ನೂರಾರು ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರವನ್ನು ಸೆಪ್ಟೆಂಬರ್ 22ರಿಂದ ಕಡಿಮೆ ಮಾಡಲಾಗಿದೆ. ಅದು ಜಾರಿಗೆ ಬಂದ ನಂತರದ ಮೊದಲ ಪೂರ್ಣ ತ್ರೈಮಾಸಿಕದ (ಅಕ್ಟೋಬರ್–ಡಿಸೆಂಬರ್) ಹಣಕಾಸಿನ ಫಲಿತಾಂಶ ಇದಾಗಿದೆ.

ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯು ಡಿ–ಮಾರ್ಟ್ ಮಳಿಗೆಗಳ ಮೂಲಕ ಎಫ್‌ಎಂಸಿಜಿ, ದಿನಸಿ, ಬಟ್ಟೆ, ಎಲೆಕ್ಟ್ರಾನಿಕ್ಸ್ ಸೇರಿದಂತೆ ಮನೆಬಳಕೆಯ ಹಲವು ಬಗೆಯ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ.

ಬೆಂಗಳೂರಿನಲ್ಲಿ ಟೆಸ್ಲಾ ಮಳಿಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಬೆಂಗಳೂರಿನಲ್ಲಿ ತನ್ನ ಕಾರುಗಳ ಮಾರಾಟ ಮಳಿಗೆಯೊಂದನ್ನು ಆರಂಭಿಸುವ ಸೂಚನೆ ನೀಡಿದೆ.

ಕಂಪನಿಯು ತನ್ನ ಎಕ್ಸ್ ಖಾತೆಯ ಮೂಲಕ ‘ಸೀ ಯೂ ಸೂನ್ ಇನ್ ನಮ್ಮ ಬೆಂಗಳೂರು’ ಎಂಬ ಸಂದೇಶವನ್ನು ಪೋಸ್ಟ್ ಮಾಡಿದೆ.

ಬೆಂಗಳೂರಿನಲ್ಲಿ ಮಳಿಗೆ ಆರಂಭಿಸುವ ಬಗ್ಗೆ ಕಂಪನಿಯ ಅದರಲ್ಲಿ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಆದರೆ, ಆ ಸಂದೇಶವು ಹೊಸ ಮಳಿಗೆ ಆರಂಭಿಸುವುದರ ಸೂಚನೆ ಎಂದು ಹಲವರು ವಿಶ್ಲೇಷಿಸಿದ್ದಾರೆ.

ಕಂಪನಿಯು ಬೆಂಗಳೂರಿನಲ್ಲಿ ಮಳಿಗೆ ತೆರೆಯಲು ಮುಂದಾಗಿದೆ ಎಂಬ ವರದಿಗಳು ಈ ಹಿಂದೆಯೂ ಇದ್ದವು. ಆದರೆ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಟೆಸ್ಲಾ ಕಂಪನಿಯು ದೇಶದಲ್ಲಿ ಈಗ ದೆಹಲಿ, ಗುರುಗ್ರಾಮ ಮತ್ತು ಮುಂಬೈನಲ್ಲಿ ಮಳಿಗೆಗಳನ್ನು ಹೊಂದಿದೆ.

ತುರ್ಕ್‌ಮಾನ್ ಗೇಟ್: ಬಂಧಿತರ ಸಂಖ್ಯೆ 16ಕ್ಕೆ ಏರಿಕೆ

ನವದೆಹಲಿ (ಪಿಟಿಐ): ತುರ್ಕ್‌ಮಾನ್ ಗೇಟ್ ಕಲ್ಲುತೂರಾಟ ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಮತ್ತೆ ಮೂವರನ್ನು ಬಂಧಿಸಿದ್ದು, ಇದರೊಂದಿಗೆ ಬಂಧಿತರ ಸಂಖ್ಯೆ 16ಕ್ಕೆ ಏರಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡಲು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಮತ್ತು ಅರೆಸೈನಿಕ ಪಡೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದೇ ವೇಳೆ ಹಿರಿಯ ಅಧಿಕಾರಿಗಳು ಶುಕ್ರವಾರದ ಪ್ರಾರ್ಥನೆಗಾಗಿ ಮೈದಾನದ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಡ್ರೋನ್ ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಮೂಲಕ ಪೊಲೀಸರು ಪ್ರದೇಶದಲ್ಲಿ ಬಿಗಿ ಕಣ್ಗಾವಲು ನಡೆಸುತ್ತಿದ್ದಾರೆ. ಪರಿಸ್ಥಿತಿ ಶಾಂತಿಯುತವಾಗಿದ್ದು, ನಿಯಂತ್ರಣದಲ್ಲಿದೆ ಎಂದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆಯ ಭಾಗವಾಗಿ, ಘಟನೆಗೆ ಸಂಬಂಧಿಸಿ ತಪ್ಪು ಮಾಹಿತಿಗಳನ್ನು ಹರಡುತ್ತಿರುವ 10 ಸಾಮಾಜಿಕ ಮಾಧ್ಯಮ ಪ್ರಭಾವಿಗಳನ್ನು ಗುರುತಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

10-01-2026

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1615 (1610)
ಒಂದು ವಾರದ ಡೆಲಿವರಿ	1610 (1605)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1475 (1470)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,38,000 (1,37,000)
ಬೆಳ್ಳಿ ಕೆ.ಜಿಗೆ	2,47,800 (2,44,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪಾಕಿಸ್ತಾನದ ನೌಕಾಪಡೆಯ ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ನೌಕಾಪಡೆಯು, ಭೂಮೇಲ್ಮೈಯಿಂದ ಹಾರಿಸುವ ಕ್ಷಿಪಣಿಯ ಪ್ರಾಯೋಗಿಕ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ.

ಉತ್ತರ ಅರಬ್ಬಿ ಸಮುದ್ರದಲ್ಲಿ ಕೈಗೊಂಡಿರುವ ಸಮರಾಭ್ಯಾಸದ ವೇಳೆ ‘ಎಲ್‌ವೈ-80 (ಎನ್)’ ಕ್ಷಿಪಣಿಯ ಪರೀಕ್ಷೆ ನಡೆಸಲಾಯಿತು. ಇದು ಕಾರ್ಯಾಚರಣೆ ಮತ್ತು ಯುದ್ಧ ಸನ್ನದ್ಧತೆಯನ್ನು ತೋರಿಸುತ್ತದೆ’ ಎಂದು ಪಾಕಿಸ್ತಾನ ಸೇನೆಯು ಅಧಿಕೃತ ಪ್ರಕಟಣೆ ತಿಳಿಸಿದೆ.

‘ಕ್ಷಿಪಣಿಯು ವೈಮಾನಿಕ ಗುರಿಯನ್ನು ಯಶಸ್ವಿಯಾಗಿ ಹೊಡೆದುರುಳಿಸಿತು. ಇದು ಪಾಕಿಸ್ತಾನ ನೌಕಾಪಡೆಯ ಬಲಿಷ್ಠ ವಾಯುರಕ್ಷಣಾ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇದು ಎದುರಾಳಿ ಗುರಿಯನ್ನು ಯಶಸ್ವಿಯಾಗಿ ಹೊಡೆದುರುಳಿಸುತ್ತದೆ’ ಎಂದು ಹೇಳಿದೆ.

ಇದೇ ವೇಳೆ ಮಾನವ ರಹಿತ ಯುದ್ಧನೌಕೆಯ ಪರೀಕ್ಷೆಯನ್ನೂ ಯಶಸ್ವಿಯಾಗಿ ನಡೆಸಲಾಗಿದೆ.

ಸುದ್ದಿ 2 ನಿಮಿಷ

ಇ.ಯು ಜೊತೆ ಎಫ್‌ಟಿಎ ಚುರುಕು ನೀಡಲು ಸೂಚನೆ

ನವದೆಹಲಿ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಮಾತುಕತೆಯನ್ನು ತ್ವರಿತಗೊಳಿಸುವಂತೆ ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ವಾಣಿಜ್ಯ ಸಚಿವರು ತಮ್ಮ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲು ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಮಾತುಕತೆಗಳಿಗೆ ವೇಗ ನೀಡುವಂತೆ ಭಾರತದ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ಐರೋಪ್ಯ ಒಕ್ಕೂಟದ ವಾಣಿಜ್ಯ ಮತ್ತು ಆರ್ಥಿಕ ಭದ್ರತಾ ಆಯುಕ್ತ ಮಾರೊಷ್ ಶೆಫ್ಕೋವಿಕ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಶನಿವಾರ ತಿಳಿಸಿದೆ.

ಗೋಯಲ್ ಮತ್ತು ಮಾರೊಷ್ ಶೆಫ್ಕೋವಿಕ್ ಅವರು ಬ್ರಸಲ್ಸ್‌ನಲ್ಲಿ ಭೇಟಿಯಾಗಿ ಮಾತುಕತೆಯ ಪ್ರಗತಿ ಪರಿಶೀಲಿಸಿದರು. ಸರಕುಗಳಿಗೆ ಮಾರುಕಟ್ಟೆ ಪ್ರವೇಶ, ಸೇವೆಗಳಿಗೆ ಸಂಬಂಧಿಸಿದ ವಿಚಾರಗಳು ಸೇರಿದಂತೆ ವಿವಿಧ ವಿಚಾರಗಳಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಸಭೆಯಲ್ಲಿ ಪರಿಶೀಲಿಸಲಾಯಿತು.

ಸಚಿವರೊಂದಿಗಿನ ಈ ಮಾತುಕತೆಗೂ ಮುನ್ನ ಜನವರಿ 6 ಮತ್ತು 7ರಂದು ಕೇಂದ್ರ ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ರಾಜೇಶ್ ಅಗರವಾಲ್ ಮತ್ತು ಐರೋಪ್ಯ ಕಮಿಷನ್‌ನ ವ್ಯಾಪಾರ ಮಹಾನಿರ್ದೇಶಕ ಸಬೈನ್ ವೆಯಾಂಡ್ ನಡುವೆ ಉನ್ನತ ಮಟ್ಟದ ಚರ್ಚೆಗಳು ನಡೆದಿದ್ದವು.

‘ಸಚಿವರ ಮಟ್ಟದ ಮಾತುಕತೆಯು, ಇತ್ಯರ್ಥ ಆಗದೆ ಇರುವ ಸಮಸ್ಯೆಗಳನ್ನು ಪರಿಹರಿಸಲು ಎರಡೂ ಕಡೆಗಳವರು ಹೊಂದಿರುವ ದೃಢ ನಿಶ್ಚಯವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ’ ಎಂದು ಹೇಳಿಕೆಯು ತಿಳಿಸಿದೆ.

ಸೇವಾ ಶುಲ್ಕ ವಿಧಿಸಿದ 27 ರೆಸ್ಟೋರೆಂಟ್‌ಗಳಿಗೆ ದಂಡ

ನವದೆಹಲಿ (ಪಿಟಿಐ): ಗ್ರಾಹಕರಿಂದ ಸೇವಾ ಶುಲ್ಕ ಸಂಗ್ರಹಿಸಿದ 27 ರೆಸ್ಟೋರೆಂಟ್‌ಗಳ ವಿರುದ್ಧ ಸ್ವಯಂಪ್ರೇರಿತವಾಗಿ ಕ್ರಮ ಜರುಗಿಸಲಾಗಿದೆ ಎಂದು ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಶನಿವಾರ ತಿಳಿಸಿದೆ.

ಈ ರೆಸ್ಟೋರೆಂಟ್‌ಗಳಿಗೆ ₹50 ಸಾವಿರದವರೆಗೆ ದಂಡ ವಿಧಿಸಲಾಗಿದೆ. ಅಲ್ಲದೆ, ಗ್ರಾಹಕರಿಂದ ಸಂಗ್ರಹಿಸಿದ ಸೇವಾ ಶುಲ್ಕವನ್ನು ಅವರಿಗೆ ಮರುಪಾವತಿ ಮಾಡುವಂತೆ ಮತ್ತು ಬಿಲ್ಲಿಂಗ್ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದೆ.

ಗ್ರಾಹಕರ ಸಹಾಯವಾಣಿಗೆ ಬಂದ ದೂರುಗಳನ್ನು ಆಧರಿಸಿ ನಡೆಸಿದ ತನಿಖೆಯಲ್ಲಿ ದೇಶದ ಹಲವೆಡೆ ರೆಸ್ಟೋರೆಂಟ್‌ಗಳು ಈ ನ್ಯಾಯಸಮ್ಮತವಲ್ಲದ ವ್ಯಾಪಾರ ನಡೆಸುತ್ತಿವೆ ಎಂಬುದು ಗೊತ್ತಾಗಿದೆ. ರೆಸ್ಟೋರೆಂಟ್‌ಗಳು ನೀಡಿದ ಬಿಲ್‌ನಲ್ಲಿ ಸೇವಾ ಶುಲ್ಕ ನಮೂದಾಗಿದೆ.

ಪಟ್ನಾದ ಕೆಫೆ ಬ್ಲೂ ಬಾಟಲ್, ಮುಂಬೈನ ಚೀನಾ ಗೇಟ್ ರೆಸ್ಟೋರೆಂಟ್ ಪ್ರೈವೆಟ್ ಲಿಮಿಟೆಡ್ (ಬೋರಾ ಬೋರಾ) ಸೇರಿದಂತೆ ಹಲವಾರು ರೆಸ್ಟೋರೆಂಟ್‌ಗಳು ಶೇ 10ರಷ್ಟು ಸೇವಾ ಶುಲ್ಕವನ್ನು ಬಿಲ್ ಜೊತೆ ವಿಧಿಸುತ್ತಿವೆ ಎಂದು ಹೇಳಿದೆ.

ಗ್ರಾಹಕರಿಗೆ ಸೇವಾ ಶುಲ್ಕ ವಿಧಿಸುವುದು 2019ರ ಗ್ರಾಹಕರ ರಕ್ಷಣಾ ಕಾಯ್ದೆ ಮತ್ತು ಸಿಸಿಪಿಎ ಮಾರ್ಗಸೂಚಿಗಳ ಉಲ್ಲಂಘನೆ ಎಂದು ಇತ್ತೀಚೆಗೆ ದೆಹಲಿ ಹೈಕೋರ್ಟ್ ಹೇಳಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Factory

ಕಾಯಿಲ್ ವೈಂಡಿಂಗ್ ಮೆಷಿನ್‌ಗೆ ಆಪರೇಟರ್ಸ್ ಗೆ ಅನುಭವಿಗಳು ಅಥವಾ ಫ್ರೆಶರ್‌ಗಳು ಬೇಕಾಗಿದ್ದಾರೆ. ಕರೆ ಮಾಡಿ 9880882122

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ. 9964311522, 9742133993

ಭವಿಷ್ಯ

Astrology

ಶ್ರೀ ಸಿದ್ಧಿವಿನಾಯಕ ಜ್ಯೋತಿಷಿ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ವ್ಯಾಪಾರ ಸಂತಾನ, ಸಾಲಬಾಧೆ, ಕೋರ್ಟ್ ಕೇಸ್ ಇನ್ನೂ ಯಾವುದೇ ಗುಪ್ತಸಮಸ್ಯೆಗಳಿಗೆ ಕೇವಲ 1 ದಿನದಲ್ಲಿ ಪರಿಹಾರ. 8317227470

ಪ್ರವಾಸ

Travel

ಮಲೇಷಿಯಾ & ಸಿಂಗಾಪುರ ಪ್ರವಾಸ 7 ದಿನಗಳು 22/01/2026 ಶ್ರೀಲಂಕಾ 6 ದಿನಗಳ ಪ್ರವಾಸ 5/3/26 ದುಬೈ ಪ್ರವಾಸ 6 ದಿನಗಳು 12/2/26 ಸಂಪರ್ಕಿಸಿ ಸುವರ್ಣ ಯಾತ್ರಾ 6360146483/ 9019462508

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇರಾನ್: ಎರಡು ವಾರ ಪೂರೈಸಿದ ಪ್ರತಿಭಟನೆ

ದುಬೈ/ಪ್ಯಾರಿಸ್ (ಎಪಿ/ಎಎಫ್‌ಪಿ): ಇರಾನ್ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯು ಎರಡು ವಾರಗಳನ್ನು ಪೂರೈಸಿದೆ. ಶುಕ್ರವಾರ ರಾತ್ರಿ ಟೆಹರಾನ್ ಸೇರಿದಂತೆ ಹಲವೆಡೆ ದೊಡ್ಡ ಮಟ್ಟದಲ್ಲಿ ಪ್ರತಿಭಟನಾ ರ್‍ಯಾಲಿಗಳು ನಡೆದಿವೆ.

ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಭದ್ರತಾ ಪಡೆಗಳು ಕಠಿಣ ಕ್ರಮ ಕೈಗೊಳ್ಳುತ್ತವೆ ಎಂದು ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಶುಕ್ರವಾರ ಎಚ್ಚರಿಕೆ ನೀಡಿದ್ದರೂ ಪ್ರತಿಭಟನೆಯ ಕಾವು ತಣ್ಣಗಾಗಿಲ್ಲ.

ಗುರುವಾರದಿಂದ ಇಂಟರ್‌ನೆಟ್ ಮತ್ತು ದೂರವಾಣಿ ಸಂಪರ್ಕಗಳನ್ನು ಕಡಿತಗೊಳಿಸಿರುವುದರಿಂದ ಇರಾನ್, ಹೊರಜಗತ್ತಿನ ಸಂಪರ್ಕ ಕಳೆದುಕೊಂಡಿದೆ. ಆದ್ದರಿಂದ ಅಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ವಿದೇಶದಿಂದ ಮಾಹಿತಿ ಕಲೆಹಾಕುವುದು ಕಷ್ಟಕರವಾಗಿದೆ.

ಪ್ರತಿಭಟನೆ ವೇಳೆ ನಡೆದ ಹಿಂಸಾಚಾರದಲ್ಲಿ ಈವರೆಗೆ 65 ಮಂದಿ ಮೃತಪಟ್ಟಿದ್ದಾರೆ. 2,300ಕ್ಕೂ ಅಧಿಕ ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಸಂಸ್ಥೆ ತಿಳಿಸಿದೆ. ಭದ್ರತಾ ಪಡೆಯ ಕೆಲವು ಸಿಬ್ಬಂದಿ ಮೃತಪಟ್ಟಿರುವುದಾಗಿ ಇರಾನ್‌ನ ಸರ್ಕಾರಿ ವಾಹಿನಿ ವರದಿ ಮಾಡಿದೆ.

ಪಹ್ಲವಿ ಕರೆ: ಈ ಹಿಂದೆ ಇರಾನ್ ಅನ್ನು ಆಳಿದ್ದ ಪಹ್ಲವಿ ಸಾಮ್ರಾಜ್ಯದ ಮೊಹಮ್ಮದ್ ರೆಜಾ ಪಹ್ಲವಿ ಅವರ ಪುತ್ರ, ಈಗ ಅಮೆರಿಕದಲ್ಲಿ ನೆಲಸಿರುವ ರೆಜಾ ಪಹ್ಲವಿ ಅವರು ಸರ್ಕಾರದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವಂತೆ ಪ್ರತಿಭಟನಕಾರರನ್ನು ಕೋರಿದ್ದಾರೆ. ಶುಕ್ರವಾರ ರಾತ್ರಿ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಪಾಲ್ಗೊಂಡಿದ್ದಕ್ಕೆ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಬಿಎನ್‌ಪಿ ಅಧ್ಯಕ್ಷರಾಗಿ ತಾರಿಕ್ ನೇಮಕ

ತಾರಿಕ್ ರೆಹಮಾನ್

ಢಾಕಾ (ಪಿಟಿಐ): ಮಾಜಿ ಪ್ರಧಾನಿ ದಿವಂಗತ ಖಾಲಿದಾ ಜಿಯಾ ಅವರ ಪುತ್ರ ತಾರಿಕ್ ರಹಮಾನ್ ಅವರು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಖಾಲಿದಾ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಈ ನೇಮಕ ನಡೆದಿದೆ. ಶುಕ್ರವಾರ ನಡೆದ ಬಿಎನ್‌ಪಿ ಸ್ಥಾಯಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ತಾರಿಕ್ ನೇಮಕವನ್ನು ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಕ್ರುಲ್ ಇಸ್ಲಾಮ್ ಆಲಂಗೀರ್ ಅವರು ಮಾಧ್ಯಮಗಳಿಗೆ ದೃಢಪಡಿಸಿದರು.

ಮೂರು ಸಲ ಬಾಂಗ್ಲಾದ ಪ್ರಧಾನಿಯಾಗಿದ್ದ ಖಾಲಿದಾ ಅವರು ದೀರ್ಘಕಾಲದ ಅನಾರೋಗ್ಯದಿಂದ ಡಿಸೆಂಬರ್ 30ರಂದು ನಿಧನರಾಗಿದ್ದರು. ‘ಖಾಲಿದಾ ಜಿಯಾ ಅವರ ನಿಧನದ ನಂತರ, ಪಕ್ಷದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಬಿಎನ್‌ಪಿ ಸಂವಿಧಾನಕ್ಕೆ ಅನುಗುಣವಾಗಿ, ರಾಷ್ಟ್ರೀಯ ಸ್ಥಾಯಿ ಸಮಿತಿಯ ಸಭೆ ನಡೆಸಲಾಯಿತು. ತಾರಿಕ್ ರೆಹಮಾನ್ ಅವರನ್ನು ಬಿಎನ್‌ಪಿ ಅಧ್ಯಕ್ಷರಾಗಿ ಒಮ್ಮತದಿಂದ ನೇಮಕ ಮಾಡಲಾಯಿತು’ ಎಂದು ಬಿಎನ್‌ಪಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಸ್ವಯಂ ಗಡಿಪಾರಾಗಿ 17 ವರ್ಷಗಳ ಬಳಿಕ ಲಂಡನ್‌ನಿಂದ ತವರಿಗೆ ಮರಳಿರುವ 60 ವರ್ಷ ವಯಸ್ಸಿನ ತಾರಿಕ್ ಅವರು ಮುಂಬರುವ ಚುನಾವಣೆಯಲ್ಲಿ ಕಣಕ್ಕಿಳಿಯಲಿದ್ದಾರೆ. ಅವರು ಪ್ರಧಾನಿ ಹುದ್ದೆಗೆ ಪ್ರಮುಖ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ.

ವೆನೆಜುವೆಲಾ ತೈಲ ನಿಕ್ಷೇಪ: ಹೂಡಿಕೆದಾರರಿಗೆ ರಕ್ಷಣೆ– ಟ್ರಂಪ್

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ವೆನೆಜುವೆಲಾದಲ್ಲಿನ ತೈಲ ನಿಕ್ಷೇಪಗಳ ಮೇಲೆ ಹೂಡಿಕೆ ಮಾಡುವವರಿಗೆ ಸಂಪೂರ್ಣ ರಕ್ಷಣೆ ನೀಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ.

ವಿವಿಧ ತೈಲ ಕಂಪನಿಗಳ ಕಾರ್ಯನಿರ್ವಾಹಕರು, ಪ್ರತಿನಿಧಿಗಳ ಜತೆ ಶುಕ್ರವಾರ ಸಭೆ ನಡೆಸಿದ ಟ್ರಂಪ್, ವೆನೆಜುವೆಲಾದಲ್ಲಿನ ತೈಲ ನಿಕ್ಷೇಪಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಅಮೆರಿಕ ಮುಂದಾಗಿದೆ. ಇದಕ್ಕಾಗಿ ಶ್ವೇತಭವನವು ಸುಮಾರು 100 ಶತಕೋಟಿ ಡಾಲರ್ (₹902 ಕೋಟಿ) ಹೂಡಿಕೆ ಸಂಗ್ರಹಿಸುವ ಹಾದಿಯಲ್ಲಿದೆ ಎಂದು ತಿಳಿಸಿದ್ದಾರೆ.

ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಅಮೆರಿಕ ಸೇನೆ ಸೆರೆಹಿಡಿದ ಬಳಿಕ, ಅಮೆರಿಕ ವೆನೆಜುವೆಲಾದ ಕೆಲ ತೈಲ ಟ್ಯಾಂಕರ್‌ಗಳನ್ನು ವಶಕ್ಕೆ ಪಡೆದಿದೆ. ವೆನೆಜುವೆಲಾದಲ್ಲಿನ ತೈಲ ನಿಕ್ಷೇಪಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು, ವಿಶ್ವದಾದ್ಯಂತ ತೈಲ ಮಾರಾಟವನ್ನು ಅನಿರ್ದಿಷ್ಟವಾಗಿ ನಿಯಂತ್ರಿಸುವ ಉದ್ದೇಶವಿದೆ ಎಂದಿದ್ದಾರೆ.

‘ವೆನೆಜುವೆಲಾದಲ್ಲಿ ಚಟುವಟಿಕೆ ಆರಂಭಿಸುವ ತೈಲ ಕಂಪನಿಗಳಿಗೆ ಅಗತ್ಯ ಸುರಕ್ಷತೆ ಒದಗಿಸಲಾಗುವುದು. ನೀವು ನಮ್ಮೊಂದಿಗೆ ನೇರವಾಗಿ ವ್ಯವಹಾರ ನಡೆಸುತ್ತಿದ್ದೀರಿಯೇ ಹೊರತು ವೆನೆಜುವೆಲಾದ ಜತೆಗಲ್ಲ. ಅವರೊಂದಿಗೆ ವ್ಯವಹರಿಸುವುದನ್ನು ನಾವು ಬಯಸುವುದೂ ಇಲ್ಲ’ ಎಂದು ಟ್ರಂಪ್ ಇದೇ ವೇಳೆ ತಿಳಿಸಿದ್ದಾರೆ.

‘ವೆನೆಜುವೆಲಾದಲ್ಲಿ ಹಣ ಹೂಡುವುದು ಸರ್ಕಾರವಲ್ಲ. ಬದಲಿಗೆ ನಮ್ಮ ದೈತ್ಯ ತೈಲ ಕಂಪನಿಗಳು. ಅಲ್ಲಿ ಈ ಕಂಪನಿಗಳು ಕನಿಷ್ಠ 100 ಬಿಲಿಯನ್ ಡಾಲರ್ ಹೂಡಿಕೆ ಮಾಡಲಿವೆ. ಅವರಿಗೆ ಸರ್ಕಾರದಿಂದ ಹಣದ ಅಗತ್ಯವಿಲ್ಲ. ಬದಲಿಗೆ ಅವರು ನಮ್ಮಿಂದ ರಕ್ಷಣೆ ನಿರೀಕ್ಷೆ ಮಾಡುತ್ತಾರೆ. ಅದನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ’ ಎಂದು ಹೇಳಿದ್ದಾರೆ.

ವಶಕ್ಕೆ ಪಡೆಯುವ ಟ್ರಂಪ್ ಹವಣಿಕೆಗೆ ಗ್ರೀನ್‌ಲ್ಯಾಂಡ್ ಮುಖಂಡರ ವಿರೋಧ

‘ನಾವು ಗ್ರೀನ್‌ಲ್ಯಾಂಡ್‌ನವರಾಗಿಯೇ ಇರುತ್ತೇವೆ’

ಜೆನ್ಸ್ ಫ್ರೆಡರಿಕ್ ನೀಲ್ಸೆನ್

ನುಕ್/ಗ್ರೀನ್‌ಲ್ಯಾಂಡ್: ‘ನಾವು ಅಮೆರಿಕನ್ನರಾಗಲು ಬಯಸುವುದಿಲ್ಲ, ಡೇನ್ಸ್ (ಡೆನ್ಮಾರ್ಕ್) ಆಗಲೂ ಇಷ್ಟಪಡುವುದಿಲ್ಲ. ನಾವು ಗ್ರೀನ್‌ಲ್ಯಾಂಡ್‌ನವರಾಗಿಯೇ ಮುಂದುವರಿಯುತ್ತೇವೆ. ಗ್ರೀನ್‌ಲ್ಯಾಂಡ್‌ನ ಭವಿಷ್ಯವನ್ನು ಗ್ರೀನ್‌ಲ್ಯಾಂಡ್‌ನವರೇ ನಿರ್ಧರಿಸುತ್ತಾರೆ’ ಎಂದು ಅಲ್ಲಿನ ಪ್ರಧಾನಿ ಜೆನ್ಸ್ ಫ್ರೆಡರಿಕ್ ನೀಲ್ಸೆನ್ ಮತ್ತು ನಾಲ್ಕು ಪಕ್ಷಗಳ ಮುಖಂಡರು ಜಂಟಿ ಪ್ರಕಟಣೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಖನಿಜ ಸಂಪದ್ಭರಿತ ಆರ್ಕ್‌ಟಿಕ್ ದ್ವೀಪವಾದ ‘ಗ್ರೀನ್‌ಲ್ಯಾಂಡ್’ ಅನ್ನು ವಶಕ್ಕೆ ಪಡೆಯುವ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೆ ಹೇಳಿಕೆ ನೀಡಿರುವ ಬೆನ್ನಲ್ಲೇ, ಈ ಪ್ರಕಟಣೆ ಹೊರಬಿದ್ದಿದೆ.

‘ಗ್ರೀನ್‌ಲ್ಯಾಂಡ್ ಬಗ್ಗೆ ಅಮೆರಿಕದ ತಿರಸ್ಕಾರ ಭಾವನೆಯೂ ಇದರೊಂದಿಗೆ ಕೊನೆಗೊಳ್ಳಲಿ’ ಎಂದೂ ಈ ಮುಖಂಡರು ಆಶಿಸಿದ್ದಾರೆ.

ಚೀನಾ, ರಷ್ಯಾಕ್ಕೆ ಬಿಟ್ಟು ಕೊಡುವುದಿಲ್ಲ: ‘ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯುವ ಕುರಿತು ಶುಕ್ರವಾರ ಟ್ರಂಪ್ ಹೇಳಿಕೆ ನೀಡಿದ್ದರು. ‘ಅವರಿಗೆ ಇಷ್ಟವಿರಲಿ, ಇಲ್ಲದಿರಲಿ, ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯಲು ಅಮೆರಿಕ ಒಡಂಬಡಿಕೆ ಮಾಡಿಕೊಳ್ಳಲಿದೆ. ಒಂದು ವೇಳೆ ಅಮೆರಿಕ ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ಪಡೆಯದಿದ್ದರೆ ರಷ್ಯಾ ಮತ್ತು ಚೀನಾ ಇದಕ್ಕಾಗಿ ಕಾಯುತ್ತಿವೆ. ಇದಕ್ಕೆ ಅಮೆರಿಕ ಅವಕಾಶ ಕೊಡುವುದಿಲ್ಲ’ ಎಂದು ಟ್ರಂಪ್ ಹೇಳಿದ್ದಾರೆ.

‘ಸರಳ ಮಾರ್ಗದ ಮೂಲಕ ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯಲು ಸಾಧ್ಯವಾಗದಿದ್ದರೆ ಆಗ ಬಲವಂತದ ಮಾರ್ಗ ಅನುಸರಿಸುತ್ತೇವೆ’ ಎಂದಿರುವ ಟ್ರಂಪ್, ಈ ವಿಷಯದಲ್ಲಿ ಮಾಡಿಕೊಳ್ಳಲಿರುವ ಒಡಂಬಡಿಕೆ ಏನು ಎನ್ನುವುದನ್ನು ಬಹಿರಂಗಪಡಿಸಿಲ್ಲ. ಮಿಲಿಟರಿ ಶಕ್ತಿ ಬಳಸುವುದು ಸೇರಿದಂತೆ ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯಲು ಹಲವು ಆಯ್ಕೆಗಳನ್ನು ಪರಿಶೀಲಿಸುತ್ತಿರುವುದಾಗಿ ಅವರು ಹೇಳಿದ್ದಾರೆ.

ಸ್ಪೇನ್‌ನ ಪೆಡ್ರೊಗೆ ಸಿಂಗಲ್ಸ್ ಕಿರೀಟ

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಸ್ಕೆಟೊವ್ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಪ್ರಶಸ್ತಿಯೊಂದಿಗೆ ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್ (ಬಲ) ಹಾಗೂ ಟಿಮೋಫಿ ಸ್ಕೆಟೊವ್

ಬೆಂಗಳೂರು: ಅಗ್ರ ಶ್ರೇಯಾಂಕದ ಆಟಗಾರ ಪೆಡ್ರೊ ಮಾರ್ಟಿನೆಝ್ ಅವರು ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಆರನೇ ಶ್ರೇಯಾಂಕದ ಆಟಗಾರ ಟಿಮೋಫಿ ಸ್ಕೆಟೊವ್ ಅವರನ್ನು ಸೋಲಿಸಿ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಕಬ್ಬನ್‌ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ 1 ಗಂಟೆ 56 ನಿಮಿಷಗಳ ಫೈನಲ್‌ನಲ್ಲಿ, ಸ್ಪೇನ್‌ನ ಮಾರ್ಟಿನೆಝ್ 7–6 (7–5), 6–3 ರಿಂದ ಕಜಕಸ್ತಾನದ ಎದುರಾಳಿಯನ್ನು ಸೋಲಿಸಿದರು. ಅದರೊಂದಿಗೆ, ವಿಶ್ವ ಕ್ರಮಾಂಕದಲ್ಲಿ 96ನೇ ಸ್ಥಾನದಲ್ಲಿರುವ ಪೆಡ್ರೊ ಅವರು ₹30 ಲಕ್ಷ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು.

28 ವರ್ಷ ವಯಸ್ಸಿನ, ಆರು ಅಡಿ ಎತ್ತರದ ಪೆಡ್ರೊ ಎಂದಿನಂತೆಯೇ ಎದುರಾಳಿಯ ಆಟದ ತಂತ್ರ ಗ್ರಹಿಸಿ ನಂತರ ತಮ್ಮ ಆಟಕ್ಕೆ ಕುದುರಿಕೊಂಡು ಮೇಲುಗೈ ಸಾಧಿಸಿದರು. ಇದು ಅವರಿಗೆ ಎಂಟನೇ ಎಟಿಪಿ ಚಾಲೆಂಜರ್ ಪ್ರಶಸ್ತಿ.

ನಿಕೋಲಸ್–ಕಿಟ್ಟೆಗೆ ಪ್ರಶಸ್ತಿ: ಕೊಲಂಬಿಯಾ ನಿಕೋಲಸ್ ಬೆರಿಂಟೋಸ್– ಅಮೆರಿಕದ ಬೆಂಜಮಿನ್ ಕಿಟ್ಟೆ ಜೋಡಿ 7–6 (11–9), 7–5 ರಿಂದ ಫ್ರಾನ್ಸ್‌ನ ಲುಕಾ ಸ್ಯಾಂಚೆಝ್– ಆರ್ಥರ್ ರೇಮಂಡ್ ಜೋಡಿಯನ್ನು ಸೋಲಿಸಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು. ₹30 ಲಕ್ಷ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡಿತು.

ಸಿನ್ನರ್ ಎದುರು ಜಯಿಸಿದ ಅಲ್ಕರಾಜ್

ಯಾನಿಕ್ ಸಿನ್ನರ್ ಮತ್ತು ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

ಇಂಚಿಯಾನ್ (ದಕ್ಷಿಣ ಕೊರಿಯಾ), (ಎಎಫ್‌ಪಿ): ಆಸ್ಟ್ರೇಲಿಯನ್ ಓಪನ್‌ಗೆ ಮೊದಲು ವಿಶ್ವದ ಅಗ್ರ ಆಟಗಾರರಾದ ಕಾರ್ಲೋಸ್ ಅಲ್ಕರಾಜ್ ಮತ್ತು ಯಾನಿಕ್ ಸಿನ್ನರ್ ಅವರು ಶನಿವಾರ ಪ್ರದರ್ಶನ ಪಂದ್ಯದಲ್ಲಿ ಮುಖಾಮುಖಿಯಾದರು. ಪ್ರೇಕ್ಷಕರಿಂದ ಭರ್ತಿಯಾಗಿದ್ದ ಕ್ರೀಡಾಂಗಣದಲ್ಲಿ ಅಲ್ಕರಾಜ್ ನೇರ ಸೆಟ್‌ಗಳಿಂದ ಇಟಲಿಯ ‘ಚಿರಪರಿಚಿತ’ ಎದುರಾಳಿಯನ್ನು ಸೋಲಿಸಿದರು.

ಈ ವರ್ಷ ಮೊದಲ ಬಾರಿ ಈ ತಾರೆಯಬ್ಬರಿಬ್ಬರು ಮುಖಾಮುಖಿಯಾಗಿದ್ದು, ವಿಶ್ವದ ಅಗ್ರಮಾನ್ಯ ಆಟಗಾರನಾಗಿರುವ ಸ್ಪೇನ್‌ನ ಅಲ್ಕರಾಜ್ 7–5, 7–6 (8/6) ರಿಂದ ಜಯಗಳಿಸಿದರು. ಇಂಚಿಯಾನ್‌ನ ಇನ್‌ಸ್ಪೈರ್ ಅರೇನಾದಲ್ಲಿ ನಡೆದ ಈ ಪಂದ್ಯವನ್ನು 12,000 ಉತ್ಸಾಹಿ ಪ್ರೇಕ್ಷಕರು ವೀಕ್ಷಿಸಿದರು. ಪಂದ್ಯ 1 ಗಂಟೆ 47 ನಿಮಿಷ ನಡೆಯಿತು.

ಇನ್ನು ಎಂಟು ದಿನಗಳಲ್ಲಿ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್‌ಷಿಪ್ ಆರಂಭವಾಗಲಿದೆ. ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಸಿನ್ನರ್ ಹಾಲಿ ಚಾಂಪಿಯನ್ ಆಗಿದ್ದಾರೆ.

ಪ್ರದರ್ಶನ ಪಂದ್ಯದ ಮೂಲಕ ತಾರಾ ಆಟಗಾರರು ಎಷ್ಟು ಸಂಪಾದನೆ ಮಾಡಿದ್ದಾರೆ ಎಂಬುದರ ಬಗ್ಗೆ ದಕ್ಷಿಣ ಕೊರಿಯಾದ ಆಯೋಜಕರು ಏನೂ ಹೇಳಲಿಲ್ಲ. ಆದರೆ ಇಟಲಿಯ ವರದಿಗಳ ಪ್ರಕಾರ, ಅವರು ತಲಾ ₹18 ಕೋಟಿಗೂ ಹೆಚ್ಚು ಹಣ ಸಂಪಾದಿಸಿರುವ ಸಾಧ್ಯತೆಯಿದೆ.

ಸೆಮೀಸ್‌ನಲ್ಲಿ ಸೋತ ಸಿಂಧು

ಕ್ವಾಲಾಲಂಪುರ (ಪಿಟಿಐ): ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಶನಿವಾರ ಚೀನಾದ ವಾಂಗ್ ಝಿಹಿ ಎದುರು ಸೋತರು. ಇದರೊಂದಿಗೆ, ಟೂರ್ನಿಯಲ್ಲಿ ಭಾರತದ ಆಟಗಾರ್ತಿಯ ಯಶಸ್ಸಿನ ಓಟ ಅಂತ್ಯಗೊಂಡಿತು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರು ಆರಂಭದಿಂದಲೂ ಒತ್ತಡಕ್ಕೆ ಸಿಲುಕಿದಂತೆ ಕಂಡರು. ವಿಶ್ವಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ವಾಂಗ್ 21–16, 21–15ರಿಂದ ನೇರ ಗೇಮ್‌ಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಕ್ರಾಸ್‌ಕೋರ್ಟ್ ಹೊಡೆತಗಳಿಗೆ ಹೆಸರಾದ ಸಿಂಧು ಮೊದಲ ಗೇಮ್‌ನ ಆರಂಭದಲ್ಲಿ 5–2ರಿಂದ ಮುಂದಿದ್ದರು. ಬಳಿಕ, ಪುಟಿದೆದ್ದ 25 ವರ್ಷ ವಯಸ್ಸಿನ ವಾಂಗ್ ಅವರು ಬಲವಾದ ಮತ್ತು ಆಕ್ರಮಣಕಾರಿ ಹೊಡೆತಗಳ ಮೂಲಕ ಎದುರಾಳಿಯ ಮೇಲೆ ಒತ್ತಡ ಹೆಚ್ಚಿಸಿದರು. ಮೊದಲ ಗೇಮ್ ಗೆದ್ದರು.

ಎರಡನೇ ಗೇಮ್‌ನಲ್ಲಿಯೂ ಸಿಂಧು 11–6ರ ಮುನ್ನಡೆ ಪಡೆದಿದ್ದರು. ಈ ವೇಳೆ ವಿರಾಮ ತೆಗೆದುಕೊಂಡರು. ಆದರೆ, ವಿರಾಮದ ಬಳಿಕ ನಿಯಂತ್ರಣ ಕಂಡುಕೊಳ್ಳುವಲ್ಲಿ ಎಡವಿದರು. ಅನಗತ್ಯ ಹೊಡೆತಗಳಿಂದಾಗಿ ಎದುರಾಳಿಗೆ ಪಾಯಿಂಟ್ಸ್ ಬಿಟ್ಟುಕೊಟ್ಟರು.

ನಾಕೌಟ್‌ಗೆ ರಾಜ್ಯ ತಂಡ

ಬೆಂಗಳೂರು: ನಾಯಕಿ ಕಶ್ವಿ ಕಂಡಿಕೊಪ್ಪ ಅವರ ಮಿಂಚಿನ ಶತಕ ಹಾಗೂ ನೈನಿಶಾ ರೆಡ್ಡಿ ಪಾಟೀಲ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಶನಿವಾರ 275 ರನ್‌ಗಳಿಂದ ಮಣಿಪುರ ತಂಡವನ್ನು ಮಣಿಸಿತು. ಅದರೊಂದಿಗೆ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆಯಿತು.

ಕೋಲ್ಕತ್ತದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರಾಜ್ಯ ತಂಡವು ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 321 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಕಶ್ವಿ 66 ಎಸೆತಗಳಲ್ಲಿ 158 ರನ್ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ 23 ಬೌಂಡರಿ ಹಾಗೂ 7 ಸಿಕ್ಸರ್‌ಗಳಿದ್ದವು. ಶೀತಲ್ ಸಂತೋಷ್ 52 ರನ್ ಗಳಿಸಿದರು. ಮಣಿಪುರ ತಂಡದ ಫಾರ್ಜಿಯಾ 2 ವಿಕೆಟ್ ಪಡೆದರು. ಬೃಹತ್ ಗುರಿ ಬೆನ್ನಟ್ಟಿದ ಮಣಿಪುರ ತಂಡವು 23.3 ಓವರ್‌ಗಳಲ್ಲಿ 46 ರನ್‌ಗಳಿಗೆ ಕುಸಿಯಿತು. ನೈನಿಷಾ 11 ರನ್‌ಗೆ ಐದು ವಿಕೆಟ್ ಪಡೆದರು. ಶ್ರೀಕಾ ಚತುರಾ (8ಕ್ಕೆ2) ಹಾಗೂ ಹರ್ಷಿತಾ.ಕೆ (2ಕ್ಕೆ1) ಎದುರಾಳಿ ತಂಡವು ಬೇಗನೆ ಕುಸಿಯುವಂತೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 35 ಓವರ್‌ಗಳಲ್ಲಿ 5 ವಿಕೆಟ್‌ಗೆ 321 (ಕಶ್ವಿ ಕಂಡಿಕೊಪ್ಪ 158, ಶೀತಲ್ ಸಂತೋಷ್ 52; ಫಾರ್ಜಿಯಾ 38ಕ್ಕೆ2) ಮಣಿಪುರ: 23.3 ಓವರ್‌ಗಳಲ್ಲಿ 46 (ಲಿಂಥೋಯಿ ಔಟಾಗದೇ 11; ನೈನಿಷಾ 11ಕ್ಕೆ5, ಶ್ರೀಕಾ ಚತುರಾ 8ಕ್ಕೆ2, ಹರ್ಷಿತಾ.ಕೆ 2ಕ್ಕೆ1).

ಕೊಹ್ಲಿ, ರೋಹಿತ್ ಕಡೆ ಮತ್ತೆ ಗಮನ

ಭಾರತ– ನ್ಯೂಜಿಲೆಂಡ್ ಮೊದಲ ಏಕದಿನ ಪಂದ್ಯ ಇಂದು • ತಂಡಕ್ಕೆ ಮರಳಿದ ಗಿಲ್, ಶ್ರೇಯಸ್

ವಡೋದರ (ಪಿಟಿಐ): ಪೂರ್ಣಸಾಮರ್ಥ್ಯದ ಭಾರತ ತಂಡ, ಭಾನುವಾರ ನಡೆಯುವ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಹೊಸಮುಖಗಳಿರುವ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಅನುಭವಿ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅಮೋಘ ಲಯದಲ್ಲಿರುವುದು ಆತಿಥೇಯ ತಂಡಕ್ಕೆ ನೆರವಾಗುವ ನಿರೀಕ್ಷೆಯಿದೆ.

ಟಿ20 ವಿಶ್ವಕಪ್‌ಗೆ ಇನ್ನು ಒಂದು ತಿಂಗಳೂ ಇಲ್ಲ. ಎಲ್ಲರ ಗಮನ ಅದರ ಕಡೆ ಇದೆ. ಆದರೆ ಮುಂದಿನ ಏಳು ದಿನಗಳ ಒಳಗೆ ನಡೆಯುವ ಮೂರು ಏಕದಿನ ಪಂದ್ಯಗಳಲ್ಲಿ ಭಾರತದ ದಿಗ್ಗಜರಿಬ್ಬರ ಆಟದ ಮೇಲೂ ಕುತೂಹಲ ನೆಟ್ಟಿದೆ. ವಿಜಯ್ ಹಜಾರೆ ಏಕದಿನ ಟೂರ್ನಿಯಲ್ಲೂ ಇವರಿಬ್ಬರು ಯಶಸ್ಸು ಗಳಿಸಿದ್ದಾರೆ.

ಗಾಯದ ಸಮಸ್ಯೆ ಮತ್ತು ಕಳಪೆ ಫಾರ್ಮ್ ಕಾರಣ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾಗಿರುವ ಏಕದಿನ ತಂಡದ ನಾಯಕ ಶುಭಮನ್ ಗಿಲ್ ಅವರ ನಿರ್ವಹಣೆಯ ಮೇಲೂ ಗಮನ ಇದೆ. ಕಳೆದ ವರ್ಷದ ಕೊನೆಯಲ್ಲಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಯಲ್ಲೂ ಹೆಚ್ಚಿನ ಪಂದ್ಯ ಕಳೆದುಕೊಂಡಿದ್ದರು.

ಗಿಲ್ ಆಡಲಿರುವ ಕಾರಣ ಯಶಸ್ವಿ ಜೈಸ್ವಾಲ್ ಅವರು ಅಗ್ರ ಸರದಿಯಲ್ಲಿ ಸ್ಥಾನ ಕಳೆದುಕೊಳ್ಳಲಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ಅವರು ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದ್ದರು. ಗಾಯದಿಂದ ಚೇತರಿಸಿರುವ ಉಪ ನಾಯಕ ಶ್ರೇಯಸ್ ಅಯ್ಯರ್ ಸಹ ತಂಡಕ್ಕೆ ಮರಳಿದ್ದು, ತಮ್ಮ ನೆಚ್ಚಿನ ನಾಲ್ಕನೇ ಕ್ರಮಾಂಕಕ್ಕೆ ಹಿಂತಿರುಗಲಿದ್ದಾರೆ. 31 ವರ್ಷದ ಅಯ್ಯರ್ ಅನುಪಸ್ಥಿತಿಯ ವೇಳೆ ನಡೆದ ಪ್ರಯೋಗಗಳು ನಿರೀಕ್ಷಿತ ಫಲ ನೀಡಿರಲಿಲ್ಲ.

ಕೆ.ಎಲ್.ರಾಹುಲ್ ಅವರು ಕೆಳಕ್ರಮಾಂಕದಲ್ಲಿ ಆಡುವ ಜೊತೆಗೆ, ಕೀಪಿಂಗ್ ಸಹ ನಿರ್ವಹಿಸುವ ಕಾರಣ ರಿಷಭ್ ಪಂತ್‌ಗೆ ಅವಕಾಶ ಕಷ್ಟ. ಏಕದಿನ ಮಾದರಿಯಲ್ಲಿ ಅವರು ಎರಡನೇ ಆಯ್ಕೆಯ ಕೀಪರ್ ಪಾತ್ರ ನಿಭಾಯಿಸುವಂತಾಗಿದೆ.

ಮೊದಲ ಪಂದ್ಯ

ಇದು ಕೋತಂಬಿಯಲ್ಲಿರುವ ಬರೋಡಾ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆಯಲಿರುವ ಪುರುಷರ ವಿಭಾಗದ ಮೊದಲ ಅಂತರರಾಷ್ಟ್ರೀಯ ಪಂದ್ಯ. ಇದಕ್ಕೆ ಮೊದಲು ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಮಹಿಳಾ ಏಕದಿನ ಸರಣಿಗೆ ಈ ಕ್ರೀಡಾಂಗಣ ಆತಿಥ್ಯ ವಹಿಸಿತ್ತು.

ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಅವರು ಈ ಸರಣಿಗೆ ವಿಶ್ರಾಂತಿ ಪಡೆದಿದ್ದಾರೆ. ಹೀಗಾಗಿ ವೇಗದ ವಿಭಾಗದ ನಿರ್ವಹಣೆ ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ ಮತ್ತು ಪ್ರಸಿದ್ಧ ಕೃಷ್ಣ ಹೆಗಲೇರಿದೆ.

ತಂಡಗಳು: ಭಾರತ: ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಕೆ.ಎಲ್.ರಾಹುಲ್, ರಿಷಭ್ ಪಂತ್ (ಇಬ್ಬರೂ ವಿಕೆಟ್ ಕೀಪರ್ಸ್), ರವೀಂದ್ರ ಜಡೇಜ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ.

ನ್ಯೂಜಿಲೆಂಡ್: ಮೈಕೆಲ್ ಬ್ರೇಸ್‌ವೆಲ್ (ನಾಯಕ), ಡೆವಾನ್ ಕಾನ್ವೆ, ಮಿಚೆಲ್ ಹೇ (ಇಬ್ಬರೂ ವಿಕೆಟ್ ಕೀಪರ್ಸ್), ನಿಕ್ ಕೆಲ್ಲಿ, ಹೆನ್ರಿ ನಿಕೋಲ್ಸ್, ವಿಲ್ ಯಂಗ್, ಜೋಶ್ ಕಾರ್ಕ್‌ಸನ್, ಝಾಕ್ ಪೌಲ್ಕ್ಸ್, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಆದಿತ್ಯ ಅಶೋಕ್, ಕ್ರಿಸ್ಟಿಯಾನ್ ಕ್ಲಾರ್ಕ್, ಕೈಲ್ ಜೇಮಿಸನ್, ಜೇಡನ್ ಲೆನಾಕ್ಸ್ ಮತ್ತು ಮೈಕೆಲ್ ರೇ.

ಪಂದ್ಯ ಆರಂಭ: ಮಧ್ಯಾಹ್ನ 1.30.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್.

ಮೈಕೆಲ್ ಬ್ರೇಸ್‌ವೆಲ್

ಭಾರತ ತಂಡದ ರೋಹಿತ್ ಶರ್ಮಾ ಹಾಗೂ ಶ್ರೇಯಸ್ ಅಯ್ಯರ್ ಅವರು ಶನಿವಾರ ತಾಲೀಮು ನಡೆಸಿದರು ಪಿಟಿಐ ಚಿತ್ರ

ಆಟಗಾರರ ಸಾಮರ್ಥ್ಯ ಪರೀಕ್ಷೆಗೆ ಅವಕಾಶ

ಈ ಸರಣಿಯು ನ್ಯೂಜಿಲೆಂಡ್ ತಂಡಕ್ಕೆ ಹೊಸ ಮತ್ತು ಎರಡನೇ ಹಂತದ ಆಟಗಾರರನ್ನು ಪರೀಕ್ಷೆಗೊಡ್ಡಲು ಒಳ್ಳೆಯ ಅವಕಾಶ ಒದಗಿಸಿದೆ. ಈ ಹಿಂದೆ ಟೆಸ್ಟ್ ಸರಣಿಯ ವೇಳೆಯೂ ಕಿವೀಸ್ ಪಡೆ ಕೆಲವು ಹೊಸ ಆಟಗಾರರೊಂದಿಗೆ ಬಂದು 3–0 ಜಯ ಸಾಧಿಸಿತ್ತು.

ಈ ತಂಡದಲ್ಲಿ ಅಗ್ರ ಪಂಕ್ತಿಯ ಕೆಲವು ಆಟಗಾರರು ಆಡುತ್ತಿಲ್ಲ. ಮಿಚೆಲ್ ಸ್ಯಾಂಟನರ್ ತೊಡೆಯ ನೋವಿನಿಂದ ಸ್ಥಾನ ಪಡೆದಿಲ್ಲ. ಮಾಜಿ ನಾಯಕ ಕೇನ್ ವಿಲಿಯಮ್ಸನ್ ಎಸ್‌ಎ ಟಿ20 ಲೀಗ್‌ನಲ್ಲಿ ಆಡುತ್ತಿದ್ದಾರೆ. ಟಾಮ್ ಲೇಥಮ್ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಆಲ್‌ರೌಂಡರ್ ರಚಿನ್ ರವೀಂದ್ರ ಮತ್ತು ಮಧ್ಯಮ ವೇಗಿ ಜೇಕಬ್ ಡಫಿ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಸ್ಯಾಂಟನರ್ ಗೈರಿನಲ್ಲಿ ಮೈಕೆಲ್ ಬ್ರೇಸ್‌ವೆಲ್ ತಂಡದ ನೇತೃತ್ವ ವಹಿಸಿದ್ದಾರೆ. ತಂಡವು ಎತ್ತರದ ಆಳು, ವೇಗದ ಬೌಲರ್ ಕೈಲ್ ಜೇಮಿಸನ್ ಮತ್ತು 23 ವರ್ಷದ ಲೆಗ್ ಸ್ಪಿನ್ನರ್ ಆದಿತ್ಯ ಅಶೋಕ್ ಮೇಲೆ ನಿರೀಕ್ಷೆ ಇಟ್ಟುಕೊಂಡಿದೆ. ಸ್ಯಾಂಟನರ್ ಸ್ಥಾನಕ್ಕೆ ಜೇಡನ್ ಲೆನಾಕ್ಸ್ ಅವಕಾಶ ಪಡೆದಿದ್ದಾರೆ.

ಸಾಕಷ್ಟು ಹೊಸಮುಖಗಳಿದ್ದರೂ, ತಂಡದ ಬ್ಯಾಟಿಂಗ್ ಬಲವಾಗಿದೆ. ಡೇವಾನ್ ಕಾನ್ವೆ, ಡೆರಿಲ್ ಮಿಚೆಲ್, ಹೆನ್ರಿ ನಿಕೋಲ್ಸ್, ವಿಲ್ ಯಂಗ್ ಮತ್ತು ಗ್ಲೆನ್ ಫಿಲಿಪ್ಸ್ ಅವರು ಬ್ಯಾಟಿಂಗ್‌ಗೆ ಬಲ ನೀಡಲಿದ್ದಾರೆ.

ಫಲ ನೀಡದ ವಾರಿಯರ್ಸ್ ತಂಡದ ಲಿಚ್‌ಫೀಲ್ಡ್ ಹೋರಾಟ

ಜೈಂಟ್ಸ್‌ಗೆ ರೋಚಕ ಗೆಲುವು

ನವಿ ಮುಂಬೈ (ಪಿಟಿಐ): ಆಸ್ಟ್ರೇಲಿಯಾದ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್ ಅವರ ಅಧಿಕಾರಯುತ 78 ರನ್‌ಗಳ (40 ಎಸೆತ, 4x8, 6x5) ಆಟ ಫಲ ನೀಡಲಿಲ್ಲ. ಗುಜರಾತ್ ಜೈಂಟ್ಸ್ ತಂಡ ಶನಿವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನ ಹೈಸ್ಕೋರಿಂಗ್ ಪಂದ್ಯದಲ್ಲಿ 10 ರನ್‌ಗಳಿಂದ ಯುಪಿ ವಾರಿಯರ್ಸ್ ತಂಡವನ್ನು ಸೋಲಿಸಿತು.

ಟಾಸ್ ಸೋತಿದ್ದ ಜೈಂಟ್ಸ್ ತಂಡವು ಮೊದಲು ಆಡಿ ಆಶ್ಲೆ ಗಾರ್ಡನರ್ ಅವರ ಅರ್ಧಶತಕ (65, 41ಎ, 4x6, 6x3) ಮತ್ತು ಕೊನೆಯಲ್ಲಿ ಜಾರ್ಜಿಯಾ ವೇರ್ಹ್ಯಾಮ್ ಅವರ ಮಿಂಚಿನ ಆಟದ ನೆರವಿನಿಂದ (ಅಜೇಯ 27, 10ಎಸೆತ) 4 ವಿಕೆಟ್‌ಗೆ 207 ರನ್ ಗಳಿಸಿತು.

ಲಿಚ್‌ಫೀಲ್ಡ್ ಪ್ರತ್ಯಾಕ್ರಮಣದ ಆಟವಾಡಿದರು. ಆದರೆ 16ನೇ ಓವರಿನಲ್ಲಿ ಅವರ ನಿರ್ಗಮನದ ನಂತರ ಜೈಂಟ್ಸ್ ಕೈಮೇಲಾಯಿತು. ಆಶಾ ಶೋಭನಾ 10 ಎಸೆತಗಳಲ್ಲಿ 27 ರನ್ ಸಿಡಿಸಿದರೂ ಗುರಿ ತಲುಪಲಾಗಲಿಲ್ಲ. ವಾರಿಯರ್ಸ್ 8 ವಿಕೆಟ್‌ಗೆ 197 ರನ್ ಗಳಿಸಿ ಹೋರಾಟ ಮುಗಿಸಿತು.

ಆರಂಭ ಆಟಗಾರ್ತಿ ಕಿರಣ್ ನವಗಿರೆ ವಿಕೆಟ್ ಪಡೆಯುವ ಮೂಲಕ ರೇಣುಕಾ ಸಿಂಗ್ ಐದನೇ ಎಸೆತದಲ್ಲೇ ವಾರಿಯರ್ಸ್‌ಗೆ ಆಘಾತ ನೀಡಿದರು. ಆದರೆ ಮೆಗ್ ಲ್ಯಾನಿಂಗ್ (30) ಮತ್ತು ಫೋಬಿ ಲಿಚ್‌ಫೀಲ್ಡ್ ಎರಡನೇ ವಿಕೆಟ್‌ಗೆ 70 ರನ್ ಸೇರಿಸಿ ಚೇತರಿಕೆ ನೀಡಿದರು. ನಂತರ ವಾರಿಯರ್ಸ್ ಕುಸಿತ ಕಂಡಿತು. ಲ್ಯಾನಿಂಗ್ ಜೊತೆಗೆ ಹರ್ಲೀನ್ ಡಿಯೋಲ್ (0), ದೀಪ್ತಿ ಶರ್ಮಾ (1) ಅವರು ಬೇಗನೇ ಪೆವಿಲಿಯನ್‌ಗೆ ಮರಳಿದರು. 9ನೇ ಓವರಿನಲ್ಲಿ 1 ವಿಕೆಟ್‌ಗೆ 73 ರನ್ ಗಳಿಸಿದ್ದ ತಂಡ ಹತ್ತು ಓವರ್ ನಂತರ 74 ರನ್ನಿಗೆ 4 ವಿಕೆಟ್ ಕಳೆದುಕೊಂಡಿತು.

ಇದಕ್ಕೆ ಮೊದಲು, ಜೈಂಟ್ಸ್ ತಂಡವು ದೊಡ್ಡ ಮೊತ್ತ ಗಳಿಸಲು ನಾಯಕಿ ಗಾರ್ಡನರ್ ಆಟ ಕಾರಣವಾಯಿತು. ಅವರು ಅನುಷ್ಕಾ ಶರ್ಮಾ (44, 30ಎ) ಜತೆ ಮೂರನೇ ವಿಕೆಟ್‌ಗೆ 103 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 4ಕ್ಕೆ 207 (ಸೋಫಿ ಡಿವೈನ್ 38, ಅನುಷ್ಕಾ ಶರ್ಮಾ 44, ಆಶ್ಲೆ ಗಾರ್ಡನರ್ 65, ಜಾರ್ಜಿಯಾ ವೇರ್ಹ್ಯಾಮ್ ಔಟಾಗದೆ 27; ಸೋಫಿ ಎಕ್ಲೆಸ್ಟೋನ್ 32ಕ್ಕೆ2); ಯುಪಿ ವಾರಿಯರ್ಸ್: 20 ಓವರುಗಳಲ್ಲಿ 8ಕ್ಕೆ 197 (ಫೋಬಿ ಲಿಚ್‌ಫೀಲ್ಡ್ 78, ಆಶಾ ಶೋಭನಾ ಔಟಾಗದೆ 27; ರೇಣುಕಾ ಸಿಂಗ್ 27ಕ್ಕೆ2, ಜಾರ್ಜಿಯಾ ವೇರ್ಹ್ಯಾಮ್ 30ಕ್ಕೆ2). ಪಂದ್ಯದ ಆಟಗಾರ್ತಿ: ಜಾರ್ಜಿಯಾ ವೇರ್ಹ್ಯಾಮ್.

ಗುಜರಾತ್ ಜೈಂಟ್ಸ್ ತಂಡದ ಜಾರ್ಜಿಯಾ ವೇರ್ಹ್ಯಾಮ್ ಎಎಫ್‌ಪಿ ಚಿತ್ರ

404 ರನ್
ಈ ಪಂದ್ಯದಲ್ಲಿ ಉಭಯ ತಂಡಗಳಿಂದ ಒಟ್ಟು 404 ರನ್ ದಾಖಲಾದವು. ಇದು ಡಬ್ಲ್ಯುಪಿಎಲ್‌ನ ಪಂದ್ಯವೊಂದರಲ್ಲಿ ದಾಖಲಾದ ಎರಡನೇ ಗರಿಷ್ಠ ಮೊತ್ತ. 2025ರಲ್ಲಿ ಲಖನೌನಲ್ಲಿ ಆರ್‌ಸಿಬಿ ಮತ್ತು ಯುಪಿ ವಾರಿಯರ್ಸ್ ನಡುವಣ ಪಂದ್ಯದಲ್ಲಿ 438 ರನ್ ದಾಖಲಾಗಿದ್ದು ಗರಿಷ್ಠ ಮೊತ್ತ ಎನಿಸಿದೆ.

21 ಸಿಕ್ಸರ್
ಈ ಪಂದ್ಯದಲ್ಲಿ ಒಟ್ಟು 21 ಸಿಕ್ಸರ್‌ಗಳನ್ನು ಹೊಡೆಯಲಾಗಿದ್ದು, ಡಬ್ಲ್ಯುಪಿಎಲ್‌ನಲ್ಲಿ ದಾಖಲೆ ಎನಿಸಿತು. 2024ರಲ್ಲಿ ಬೆಂಗಳೂರಿನಲ್ಲಿ ಆರ್‌ಸಿಬಿ – ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯದಲ್ಲಿ 19 ಸಿಕ್ಸರ್‌ಗಳು ದಾಖಲಾಗಿದ್ದವು.

ಮುಂಬೈ ಮತ್ತು ವಡೋದರದಲ್ಲಿ ಮಾತ್ರ WPL ನಡೆಸುವುದು ಸರಿಯೇ
• ಸರಿ • ತಪ್ಪು
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಇಂದಿನ ಪಂದ್ಯಗಳು
ಡೆಲ್ಲಿ ಕ್ಯಾಪಿಟಲ್ಸ್– ಗುಜರಾತ್ ಜೈಂಟ್ಸ್, ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಸಂಕ್ಷಿಪ್ತ ಸುದ್ದಿ

ತರಬೇತಿ ಒಪ್ಪಂದ ಕೊನೆಗೊಳಿಸಿದ ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಝೆಕ್ ಕೋಚ್ ಯಾನ್ ಝೆಲೆಝ್ನಿ ಅವರೊಂದಿಗೆ ತರಬೇತಿ ಒಪ್ಪಂದವನ್ನು ಕೊನೆಗೊಳಿಸಿರುವುದಾಗಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಶನಿವಾರ ಪ್ರಕಟಿಸಿದ್ದಾರೆ.

ಒಂದು ವರ್ಷಕ್ಕೇ ಅವರು ಝೆಕ್ ದಿಗ್ಗಜ ತರಬೇತುದಾರನಿಂದ ಬೇರ್ಪಟ್ಟಿದ್ದಾರೆ. ಈ ಅವಧಿ 'ಬೆಳವಣಿಗೆ, ಗೌರವ ಮತ್ತು ಕ್ರೀಡೆಯ ಜೊತೆಗಿನ ಪ್ರೀತಿಯದ್ದಾಗಿತ್ತು' ಎಂದು ಚೋಪ್ರಾ ಹೇಳಿದ್ದಾರೆ.

ಒಪ್ಪಂದ ಕೊನೆಗೊಳಿಸಲು ಚೋಪ್ರಾ ನಿರ್ದಿಷ್ಟ ಕಾರಣ ನೀಡಿಲ್ಲ. ಜಾವೆಲಿನ್‌ನಲ್ಲಿ ಅನೇಕ ದಾಖಲೆಗಳನ್ನು ಸ್ಥಾಪಿಸಿರುವ ಝೆಲೆಝ್ನಿ ಅವರ ಅವಧಿಯಲ್ಲಿ ಹರಿಯಾಣದ ತಾರೆ ಮೊದಲ ಬಾರಿ ಭರ್ಚಿಯನ್ನು 90 ಮೀ. ದೂರ ಎಸೆಯುವಲ್ಲಿ ಯಶ ಕಂಡಿದ್ದರು. 2026ರ ಮೇ ತಿಂಗಳಲ್ಲಿ ದೋಹಾ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ 90.23 ಮೀ. ದೂರ ಎಸೆದಿದ್ದರು.

ಸಾತ್ವಿಕ್ ನಾಯಕ್‌ಗೆ 'ಮೊದಲ' ಚಿನ್ನ

ಪ್ರಜಾವಾಣಿ ವಾರ್ತೆ

ಮಂಗಳೂರು: ಈಜುಕೊಳದಲ್ಲಿ ರಾಜ್ಯಕ್ಕಾಗಿ ಪದಕಗಳನ್ನು ಗೆದ್ದುಕೊಟ್ಟಿರುವ ಮಂಗಳೂರಿನ ಸಾತ್ವಿಕ್ ನಾಯಕ್ ಸುಜೀರ್ ಅವರು ಓಪನ್ ವಾಟರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಚಿನ್ನ ಗೆದ್ದು ಸಂಭ್ರಮಿಸಿದರು.



ಭಾರತ ಈಜು ಫೆಡರೇಷನ್ ಆಶ್ರಯದಲ್ಲಿ ಕರ್ನಾಟಕ ಈಜು ಸಂಸ್ಥೆ ನಗರದ ತಣ್ಣೀರುಬಾವಿ ಬೀಚ್‌ನಲ್ಲಿ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಪುರುಷರ 7.5 ಕಿಲೊಮೀಟರ್ ಗುಂಪು 2ರಲ್ಲಿ ಕರ್ನಾಟಕದವರೇ ಆದ ಕಿಶನ್ ಎಸ್.ವಿ ಅವರ ತೀವ್ರ ಸವಾಲನ್ನು ಮೀರಿ ಸಾತ್ವಿಕ್ ಮೊದಲಿಗರಾದರು. ಸುಜೀರ್ 1 ತಾಸು 51:6ನಿಮಿಷಗಳಲ್ಲಿ ಗುರಿ ತಲುಪಿದರೆ ಕಿಶನ್ 8 ಸೆಕೆಂಡು ತಡವಾಗಿ ಗುರಿಸೇರಿದರು.

ಶನಿವಾರದ ಫಲಿತಾಂಶಗಳು: 7.5ಕಿಮೀ ಪುರುಷರ ಗುಂಪು2: ಸಾತ್ವಿಕ್ ನಾಯಕ್ ಸುಜೀರ್ (ಕರ್ನಾಟಕ)–1. ಕಾಲ: 1ಗಂಟೆ 51:6ನಿಮಿಷ, ಕಿಶನ್ ಎಸ್.ವಿ (ಕರ್ನಾಟಕ)–2, ಸಿ.ಶರಣ್ (ತಮಿಳುನಾಡು)–3; 5 ಕಿಮೀ: ಪುರುಷರ ಮುಕ್ತ ವಿಭಾಗ: ಪವನ್ ಧನಂಜಯ (ಕರ್ನಾಟಕ)–1. ಕಾಲ: 1:3:22, ರೇಣುಕಾಚಾರ್ಯ ಎಚ್ (ಕರ್ನಾಟಕ)–2, ಧ್ಯಾನ್ ಬಾಲಕೃಷ್ಣ (ಕರ್ನಾಟಕ)–3; ಮಹಿಳೆಯರು: ಆಸ್ತಾ ಚೌಧರಿ (ಅಸ್ಸಾಂ)–1. ಕಾಲ: 1:13:46, ಜಾಹ್ನವಿ ಕಶ್ಯಪ್ (ಅಸ್ಸಾಂ)–2, ಜನ್ಯಾ ಬಿ.ಎಸ್ (ಕರ್ನಾಟಕ)–3; 3 ಕಿಮೀ: ಬಾಲಕರ ಗುಂಪು 4: ಮೋನಿಶ್ ಪಿ (ತಮಿಳುನಾಡು)–1. ಕಾಲ: 27:36ನಿ, ರೋನಿತ್ ಅರುಣ್ ಕುಮಾರ್ (ಕರ್ನಾಟಕ)–2, ಆದಿಲ್ (ಕರ್ನಾಟಕ–3; ಬಾಲಕಿಯರ ಗುಂಪು 4: ಇಡಿಕಾ ಭಟ್ (ಕರ್ನಾಟಕ)–1. ಕಾಲ: 32:31ನಿ, ದೇವಿಕಾ ಎಂ (ಕರ್ನಾಟಕ)–2, ರೇವಾ ನಿಖಿಲ್ (ತಮಿಳುನಾಡು)–3.

ಬೀಚ್ ಗೇಮ್ಸ್: ಬೆಂಗಳೂರಿನ ಈಜುಪಟುಗಳ ಪಾರಮ್ಯ

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

• ಪ್ರದೀಶ್ ಎಚ್. ಮರೋಡಿ

ದಿಯು: ಬೆಂಗಳೂರಿನ ಈಜುಪಟುಗಳಾದ ಅಶ್ಮಿತಾ ಚಂದ್ರ ಮತ್ತು ದ್ರುಪದ್ ರಾಮಕೃಷ್ಣ ಅವರು ಇಲ್ಲಿನ ಘೋಘ್ಲಾ ಕಡಲ ಕಿನಾರೆಯಲ್ಲಿ 'ಚಿನ್ನದ ಮೀನಿ'ನಂತೆ ಕಂಗೊಳಿಸಿದರು. ಅವರ ನೆರವಿನಿಂದ ಕರ್ನಾಟಕ ತಂಡವು ಶನಿವಾರ ಮುಕ್ತಾಯಗೊಂಡ ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಪದಕ ಪಟ್ಟಿಯಲ್ಲಿ ಗುರುವಾರ 18ನೇ ಸ್ಥಾನದಲ್ಲಿದ್ದ ಕರ್ನಾಟಕ ಕೊನೆಯ ಎರಡು ದಿನಗಳಲ್ಲಿ ನಡೆದ ಓಪನ್ ವಾಟರ್ ಸ್ವಿಮ್ಮಿಂಗ್‌ನಲ್ಲಿ ಮಿಂಚಿನ ಸಂಚಲನ ಮೂಡಿಸಿತು. 10 ಕಿಲೋ ಮೀಟರ್ ಮತ್ತು 5 ಕಿ.ಮೀ. ಪುರುಷರ ಹಾಗೂ ಮಹಿಳೆಯರ ಈಜು ಸ್ಪರ್ಧೆಯಲ್ಲಿದ್ದ ಒಟ್ಟು 12 ಪದಕಗಳ ಪೈಕಿ ಎಂಟನ್ನು ಬಾಚಿಕೊಂಡಿತು. ಹೀಗಾಗಿ, 11 ಪದಕಗಳೊಂದಿಗೆ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿತು. ಕಳೆದ ಆವೃತ್ತಿಯಲ್ಲಿ ನಾಲ್ಕು (2 ಚಿನ್ನ, 2 ಕಂಚು) ಪದಕ ಗೆದ್ದು 11ನೇ ಸ್ಥಾನ ಗಳಿಸಿತ್ತು.

ಅಶ್ಮಿತಾಗೆ ಚಿನ್ನ ಡಬಲ್: 10 ಕಿ.ಮೀ. ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದ 20 ವರ್ಷದ ಅಶ್ಮಿತಾ, ಕೂಟದ ಕೊನೆಯ ದಿನ 5 ಕಿ.ಮೀ.ನಲ್ಲೂ ಚಾಂಪಿಯನ್ ಆದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಬಾರಿ ಭಾರತವನ್ನು ಪ್ರತಿನಿಧಿಸಿದ್ದ ಅವರು 1 ಗಂಟೆ 35:11 ನಿಮಿಷದಲ್ಲಿ ಗುರಿ ತಲುಪಿದರು. ಅವರಿಗೆ ಮಹಾರಾಷ್ಟ್ರದ ದೀಕ್ಷಾ ಸಂದೀಪ್ ಅವರಿಂದ ಪ್ರಬಲ ಸ್ಪರ್ಧೆ ಎದುರಾಯಿತು. ಆರಂಭದಿಂದಲೇ ಮುಂಚೂಣಿಯಲ್ಲಿ ಸಾಗಿದ ಅಶ್ಮಿತಾ ಮುಖಕ್ಕೆ ಬಡಿಯುತ್ತಿದ್ದ ತೀವ್ರ ಸ್ವರೂಪದ ಅಲೆಗಳ ಜೊತೆ ಹೋರಾಟ ನಡೆಸಿ ಗೆಲುವಿನ ನಗೆ ಬೀರಿದರು.

ಬೆಂಗಳೂರಿನ ಮತ್ತೊಬ್ಬ ಸ್ಪರ್ಧಿ ಆಶ್ರಾ ಸುಧೀರ್ ಅವರಿಗೂ ಅವಳಿ ಪದಕಗಳ ಸಂಭ್ರಮ. 10 ಕಿ.ಮೀ.ನಲ್ಲಿ ಬೆಳ್ಳಿ ಗೆದ್ದಿದ್ದ 18 ವರ್ಷದ ಆಶ್ರಾ (1ಗಂ.39:14ನಿ.) 5.ಕಿ.ಮೀ.ನಲ್ಲಿ ಕಂಚಿನ ಸಾಧನೆ ಮಾಡಿದರು. ದೀಕ್ಷಾ (1ಗಂ.35:53ನಿ.) ಬೆಳ್ಳಿ ತಮ್ಮದಾಗಿಸಿಕೊಂಡರು.

ಚಿನ್ನ ಉಳಿಸಿಕೊಂಡ ದ್ರುಪದ್: ಬಸವನಗುಡಿ ಈಜು ಕೇಂದ್ರದ ದ್ರುಪದ್ ಅವರು 5 ಕಿ.ಮೀ. ಸ್ಪರ್ಧೆಯಲ್ಲಿ ಪ್ರಶಸ್ತಿಯನ್ನು ಉಳಿಸಿಕೊಂಡರು. ಕಳೆದ ಆವೃತ್ತಿಯಲ್ಲಿ ಚಿನ್ನ ಗೆದ್ದಿದ್ದ ಅವರು ಈ ಬಾರಿಯೂ 1 ಗಂಟೆ 21:33 ನಿಮಿಷಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದರು. ಸ್ಪರ್ಧೆಯ ಆರಂಭದಿಂದ ಕೊನೆಯ ಹಂತದವರೆಗೂ ಉತ್ತರ ಪ್ರದೇಶದ ಅನುರಾಗ್ ಸಿಂಗ್ (1ಗಂ.21:38ನಿ) ಮುನ್ನಡೆ ಕಾಯ್ದುಕೊಂಡಿದ್ದರು. ಆದರೆ, ಮುಕ್ತಾಯಕ್ಕೆ 150 ಮೀಟರ್ ದೂರ ಇರುವಂತೆ ವೇಗ ಪಡೆದುಕೊಂಡ ದ್ರುಪದ್ ಕೇವಲ ಐದು ಸೆಕೆಂಡ್‌ಗಳ ಅಂತರದಲ್ಲಿ ವಿಜಯಶಾಲಿಯಾದರು. ಕರ್ನಾಟಕದ ಪ್ರಶನ್ಸ್ ಎಚ್.ಎಂ. (1ಗಂ.24:35ನಿ) ಕಂಚಿನ ಪದಕ ಗೆದ್ದುಕೊಂಡರು.

ಸಿಂಗಪುರದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ 15 ವರ್ಷದ ದ್ರುಪದ್ ಕಳೆದ ಒಂದು ದಶಕದಿಂದ ಈಜು ಅಭ್ಯಾಸದಲ್ಲಿ ತೊಡಗಿಸಿಕೊಂಡಿದ್ದಾರೆ. ಸದ್ಯ, ಬನಶಂಕರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ 10ನೇ ತರಗತಿ ಓದುತ್ತಿದ್ದಾರೆ.

ಅಶ್ಮಿತಾ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಆಶ್ರಾ ಮತ್ತು ಪ್ರಶನ್ಸ್ ಅವರೂ ಬಸವನಗುಡಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡದ ಸದಸ್ಯರು. (ಎಡದಿಂದ) ಕನಿಷ್ಕ್ ಎಸ್.ಎ, ಅಶ್ಮಿತಾ ಚಂದ್ರ, ಪ್ರಶನ್ಸ್ ಎಚ್.ಎಂ, ಈಜು ಕೋಚ್ ರಾಜೇಶ್ ಆರ್, ದ್ರುಪದ್ ರಾಮಕೃಷ್ಣ, ಆಶ್ರಾ ಸುಧೀರ್ ಮತ್ತು ಅಕ್ಷಜ್ ಪಿ.

ಬೀಚ್ ಗೇಮ್ಸ್: ಪದಕ ಪಟ್ಟಿ

ಸ್ಥಾನ	ರಾಜ್ಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಕರ್ನಾಟಕ	3	2	7	11
2	ತಮಿಳುನಾಡು	3	2	3	8
3	ಮಣಿಪುರ	3	2	2	7
4	ಮಧ್ಯಪ್ರದೇಶ	3	1	1	5
5	ಹರಿಯಾಣ	2	4	2	8

ವಸ್ತ್ರಾಕರ್ ಅಲಭ್ಯ

ಮುಂಬೈ (ಪಿಟಿಐ): ಭಾರತ ತಂಡದ ಮಧ್ಯಮ ವೇಗದ ಬೌಲರ್ ಪೂಜಾ ವಸ್ತ್ರಾಕರ್ ಅವರು ಮೊಣಕಾಲ ಹಿಂಭಾಗದ ಸ್ನಾಯುರಜ್ಜು (ಹ್ಯಾಮ್ ಸ್ಟ್ರಿಂಗ್) ನೋವಿನ ಕಾರಣ ಕನಿಷ್ಠ 2 ವಾರ ಡಬ್ಲ್ಯುಪಿಎಲ್‌ಗೆ ಅಲಭ್ಯರಾಗಿದ್ದಾರೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಕಟಿಸಿದೆ.

ಕಳೆದ ನವೆಂಬರ್‌ನಲ್ಲಿ ಡಬ್ಲ್ಯುಪಿಎಲ್ ಆಕ್ಷನ್ ವೇಳೆ, 26 ವರ್ಷ ವಯಸ್ಸಿನ ಪೂಜಾ ₹85 ಲಕ್ಷಕ್ಕೆ ಆರ್‌ಸಿಬಿ ಪಾಲಾಗಿದ್ದರು. 2024ರ ಟಿ20 ವಿಶ್ವಕಪ್ ನಂತರ ಅವರು ಯಾವುದೇ ಪ್ರಮುಖ ಟೂರ್ನಿ ಆಡಿರಲಿಲ್ಲ. ಈ ಲೀಗ್ ಮೂಲಕ ಪುನರಾಗಮನಕ್ಕೆ ಸಜ್ಜಾಗಿದ್ದರು.

ಮುಂಬೈಗೆ ಮಣಿದ ಡೆಲ್ಲಿ ಕ್ಯಾಪಿಟಲ್ಸ್

ನವಿ ಮುಂಬೈ (ಪಿಟಿಐ): ನಾಟ್ ಶಿವರ್ ಬ್ರಂಟ್ ಅವರ ಆಲ್‌ರೌಂಡ್ ಆಟ ಹಾಗೂ ಅಮೇಲಿಯಾ ಕೆರ್ (24ಕ್ಕೆ3) ಮತ್ತು ನಿಕೋಲಾ ಕ್ಯಾರಿ (37ಕ್ಕೆ3) ಅವರ ಬೌಲಿಂಗ್ ಬಲದಿಂದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಶನಿವಾರ 50 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

ಆರ್‌ಸಿಬಿ ಎದುರು ಶುಕ್ರವಾರ ಲೀಗ್‌ನ ಉದ್ಘಾಟನಾ ಪಂದ್ಯದಲ್ಲಿ ಸೋಲನುಭವಿಸಿದ್ದ ಮುಂಬೈ ತಂಡವು ಸುಧಾರಿತ ಪ್ರದರ್ಶನದೊಂದಿಗೆ ಮೊದಲ ಜಯ ಸಾಧಿಸಿತು. ಅನುಭವಿ ಆಟಗಾರ್ತಿಯರಾದ ನಾಟ್ ಶಿವರ್ ಬ್ರಂಟ್ (70; 46ಎ, 4x13) ಮತ್ತು ಹರ್ಮನ್‌ಪ್ರೀತ್ ಕೌರ್ (74; 42ಎ, 4x8, 6x3) ಅವರ ಅರ್ಧಶತಕದ ಬಲದಿಂದ ನಿಗದಿತ ಓವರ್‌ಗಳಲ್ಲಿ 4 ವಿಕೆಟ್‌ಗೆ 195 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಅಮೇಲಿಯಾ ಮತ್ತು ನಿಕೋಲಾ ಆಘಾತ ನೀಡಿದರು. ನಿಯಮಿತವಾಗಿ ವಿಕೆಟ್ ಕಳೆದುಕೊಂಡ ಜೆಮಿಮಾ ರಾಡ್ರಿಗಸ್ ಬಳಗವು 19 ಓವರ್‌ಗಳಲ್ಲಿ 145 ರನ್‌ಗಳಿಗೆ ಕುಸಿಯಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ಶಿನೆಲ್ ಹೆನ್ರಿ (56; 33ಎ, 4x5, 6x3) ಅರ್ಧಶತಕ ಗಳಿಸಿ ಹೋರಾಟ ತೋರಿದರು. ಬ್ರಂಟ್ 29 ರನ್‌ಗಳಿಗೆ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 4ಕ್ಕೆ 195 (ನಾಟ್ ಶಿವರ್ ಬ್ರಂಟ್ 70, ಹರ್ಮನ್‌ಪ್ರೀತ್ ಕೌರ್ 74; ನಂದನಿ ಶರ್ಮಾ 26ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 19 ಓವರ್‌ಗಳಲ್ಲಿ 145 (ಶಿನೆಲ್ ಹೆನ್ರಿ 56; ಅಮೇಲಿಯಾ ಕೆರ್ 24ಕ್ಕೆ3, ನಿಕೋಲಾ ಕ್ಯಾರಿ 37ಕ್ಕೆ3, ನಾಟ್ ಶಿವರ್ ಬ್ರಂಟ್ 29ಕ್ಕೆ2). ಫಲಿತಾಂಶ: ಮುಂಬೈ ಇಂಡಿಯನ್ಸ್ ತಂಡಕ್ಕೆ 50 ರನ್ ಗೆಲುವು. ಪಂದ್ಯದ ಆಟಗಾರ್ತಿ: ಹರ್ಮನ್‌ಪ್ರೀತ್ ಕೌರ್.

ಮಹಿಳಾ ಪ್ರೀಮಿಯರ್ ಲೀಗ್

ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನಿಂದ 'ಮೈನ್ ಡೈಮಂಡ್ ಫೆಸ್ಟಿವಲ್

ಬೆಂಗಳೂರು : ವಜ್ರದ ಆಭರಣಗಳ ಖರೀದಿಯಲ್ಲಿ ಭಾರತೀಯ ಗ್ರಾಹಕರ ಮನಸ್ಥಿತಿ ಬದಲಾಗುತ್ತಿದ್ದು, ಈಗ ಕೇವಲ ಮದುವೆ ಸಮಾರಂಭಗಳಿಗೆ ಮಾತ್ರವಲ್ಲದೆ ವಾರ್ಷಿಕೋತ್ಸವಗಳು, ಸಾಧನೆಯ ಸಂಭ್ರಮ ಮತ್ತು ದೈನಂದಿನ ಬಳಕೆಗಾಗಿಯೂ ವಜ್ರಾಭರಣಗಳನ್ನು ಇಷ್ಟಪಡುತ್ತಿದ್ದಾರೆ. ಈ ಬದಲಾಗುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಪ್ರಖ್ಯಾತ ಆಭರಣ ಸಂಸ್ಥೆಯಾದ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ತನ್ನ ವಿಶೇಷ ಬ್ರ್ಯಾಂಡ್ 'ಮೈನ್' ಅಡಿಯಲ್ಲಿ 'ಮೈನ್ ಡೈಮಂಡ್ ಫೆಸ್ಟಿವಲ್' ಘೋಷಿಸಿದೆ.

ಹಬ್ಬದ ವಿಶೇಷತೆ ರಿಯಾಯಿತಿ: ಈ ಫೆಸ್ಟಿವಲ್‌ನ ಭಾಗವಾಗಿ ಗ್ರಾಹಕರು ವಜ್ರದ ಮೌಲ್ಯದ ಮೇಲೆ 30 % ವರೆಗೆ ರಿಯಾಯಿತಿಯನ್ನು ಪಡೆಯಬಹುದಾಗಿದೆ. ಈ ಆಫರ್ ಡಿ.20, 2025ರಿಂದ ಆರಂಭವಾಗಿದ್ದು, ಜ.26, 2026ರವರೆಗೆ ಭಾರತದಾದ್ಯಂತ ಲಭ್ಯವಿರುತ್ತದೆ.

ವೈವಿಧ್ಯಮಯ ಸಂಗ್ರಹ: ಹಬ್ಬದ ಪ್ರಯುಕ್ತ ನೆಕ್ಲೆಸ್‌ಗಳು, ಕಿವಿಯೋಲೆಗಳು, ಸ್ಟಡ್‌ಗಳು, ಉಂಗುರಗಳು ಮತ್ತು ಲೇಯರ್ಡ್ ಚೈನ್‌ಗಳು ಸೇರಿದಂತೆ ಲಘು ತೂಕದ ಆಭರಣಗಳಿಂದ ಹಿಡಿದು ವಧುವಿನ ವಿಶೇಷ ಆಭರಣಗಳವರೆಗೆ ವಿಸ್ತಾರವಾದ ಸಂಗ್ರಹವನ್ನು ಪ್ರದರ್ಶಿಸಲಾಗುತ್ತಿದೆ.

ಗುಣಮಟ್ಟ ಮತ್ತು ಪಾರದರ್ಶಕತೆ: ಮಲಬಾರ್ ಗ್ರೂಪ್‌ನ ಅಧ್ಯಕ್ಷರಾದ ಶ್ರೀ ಎಂ. ಪಿ.ಅಹಮ್ಮದ್‌ರವರು ಮಾತನಾಡಿ, 'ಇಂದಿನ ಗ್ರಾಹಕರು ದೈನಂದಿನ ಜೀವನಕ್ಕೆ ಒಪ್ಪುವ ಹಾಗೂ ಪ್ರಮಾಣೀಕೃತ ನೈಸರ್ಗಿಕ ವಜ್ರಗಳನ್ನು ಬಯಸುತ್ತಾರೆ. 'ಮೈನ್ ಡೈಮಂಡ್ಸ್' ಸಂಪೂರ್ಣ ಪಾರದರ್ಶಕತೆ ಮತ್ತು ನಂಬಿಕೆಯನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ ಎಂದರು.

ಪ್ರಮಾಣೀಕರಣ : ಪ್ರತಿಯೊಂದು ವಜ್ರವು ಐಜಿಐ ಅಥವಾ ಜಿಐಎ ಪ್ರಮಾಣಪತ್ರವನ್ನು ಹೊಂದಿರುತ್ತದೆ. ಜತೆಗೆ, 28 ಹಂತಗಳ ಕಟ್ಟುನಿಟ್ಟಾದ ಗುಣಮಟ್ಟದ ತಪಾಸಣೆಗೆ ಒಳಪಟ್ಟಿರುತ್ತದೆ. ಮಲಬಾರ್‌ನಿಂದ ಜೀವಿತಾವಧಿಯ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಮತ್ತು ಬೈಬ್ಯಾಕ್ ಗ್ಯಾರಂಟಿಯಂತಹ ಸೇವೆಗಳನ್ನು ಗ್ರಾಹಕರು ಪಡೆಯಲಿದ್ದಾರೆ.

ಪಾರದರ್ಶಕ ಬೆಲೆ: ಆಭರಣದ ಒಟ್ಟು ತೂಕ, ಕಲ್ಲಿನ ತೂಕ ಮತ್ತು ಮೇಕಿಂಗ್ ಚಾರ್ಜ್‌ಗಳ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಬೆಲೆಯಲ್ಲಿ ನೀಡಲಾಗುತ್ತದೆ.

ಜವಾಬ್ದಾರಿಯುತ ವ್ಯವಹಾರ: ಮಲಬಾರ್ ಸಂಸ್ಥೆಯು ಕೇವಲ ಅಧಿಕೃತ ಮೂಲಗಳಿಂದ ಮಾತ್ರ ಚಿನ್ನವನ್ನು ಸಂಗ್ರಹಿಸುತ್ತದೆ. ಬಾಲಕಾರ್ಮಿಕ ಪದ್ಧತಿ, ಚಿನ್ನದ ಕಳ್ಳಸಾಗಣೆ ಮತ್ತು ತೆರಿಗೆ ವಂಚನೆಯ ವಿರುದ್ಧ ಕಟ್ಟುನಿಟ್ಟಾದ ನಿಲುವನ್ನು ಹೊಂದಿದೆ. ಅಲ್ಲದೆ, ಕಂಪನಿಯು ತನ್ನ ಲಾಭದ 5 % ರಷ್ಟು ಹಣವನ್ನು ಪರಿಸರ, ಶಿಕ್ಷಣ ಮತ್ತು ಮಹಿಳಾ ಸಬಲೀಕರಣದಂತಹ ಸಾಮಾಜಿಕ ಸೇವಾ ಕಾರ್ಯಗಳಿಗೆ ಮೀಸಲಿಡುತ್ತಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಮೋ ಬುದ್ಧಾಯ

ಡಾ. ಎಚ್.ಎಂ. ಗಂಗಾಧರಯ್ಯ
ಸಂಸ್ಥಾಪಕರು, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ)

ಪುಣ್ಯಾರಾಧನೆ

ನಮೋ ಬುದ್ಧಾಯ

ಡಾ. ಜಿ ಶಿವಪ್ರಸಾದ್
ಸ್ಥಾಪಕ ಕುಲಾಧಿಪತಿಗಳು, ಸಾಹೇ, ತುಮಕೂರು

ಶ್ರೀಮತಿ ಗಂಗಾಂಬಿಕ ರವರು

(ಜನನ: 01–01–1951 – ನಿಧನ: 01–01–2026)

ಶಿಕ್ಷಣ ಭೀಷ್ಮ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಯವರ ಕುಟುಂಬದವರು
ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳು ಹಾಗೂ ಶಿಕ್ಷಣ ಭೀಷ್ಮರೂ ಆದ ದಿವಂಗತ ಡಾ|| ಹೆಚ್.ಎಂ. ಗಂಗಾಧರಯ್ಯನವರ ಜೇಷ್ಠ ಪುತ್ರ ದಿವಂಗತ ಡಾ|| ಜಿ. ಶಿವಪ್ರಸಾದ್‌ರವರ ಧರ್ಮಪತ್ನಿ
ಶ್ರೀಮತಿ ಗಂಗಾಂಬಿಕ ರವರು
ದಿನಾಂಕ: 01–01–2026 ರಂದು ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಪುಣ್ಯಾರಾಧನಾ ಕಾರ್ಯಕ್ರಮವನ್ನು ದಿ: 11–01–2026ನೇ ಭಾನುವಾರದಂದು ಏರ್ಪಡಿಸಲಾಗಿದೆ.
ತಾವು ದಯಮಾಡಿ ಕಾರ್ಯಕ್ರಮಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಸಮಯ : ಬೆಳಿಗ್ಗೆ 11–00 ಗಂಟೆ ಸ್ಥಳ : ಸಿದ್ಧಾರ್ಥ ನಗರ (ಗೊಲ್ಲಹಳ್ಳಿ), ಬಿ.ಹೆಚ್. ರಸ್ತೆ, ತುಮಕೂರು ತಾಲ್ಲೂಕು.

ಇಂತಿ ದುಃಖತಪ್ತರು

ಡಾ|| ಜಿ. ಪರಮೇಶ್ವರ
ಕಾರ್ಯದರ್ಶಿಯವರು,
ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ) ಮತ್ತು
ಗೃಹ ಸಚಿವರು, ಕರ್ನಾಟಕ ಸರ್ಕಾರ

ಡಾ| ಜಿ.ಎಸ್. ಆನಂದ್
ದಿ. ಡಾ.ಜಿ.ಶಿವಪ್ರಸಾದ್ ಅವರ ಪುತ್ರ
ಹಾಗೂ ನಿರ್ದೇಶಕರು
ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ)

ಪ್ರಕಟಣೆ: ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ನೌಕರರ ಒಕ್ಕೂಟ,
ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ) ತುಮಕೂರು.

ಪೂರ್ವಿಕಾ

ಪೂರ್ವಿಕಾ
ಸಂಕ್ರಾಂತಿ
ವಿಶೇಷ ಮಾರಾಟ

Participate in Feedback Contest & Get
WIN
Upto 100%* CASHBACK
Upto 1 Lakh Voucher

FEEDBACK CONTEST
WINNERS
VOUCHER ₹5,000 | VOUCHER ₹1,000 | VOUCHER ₹1,000 | VOUCHER ₹1,000 | VOUCHER ₹1,000 | VOUCHER ₹1,000 | VOUCHER ₹1,000

10%* Upto INSTANT DISCOUNT
HDFC BANK We understand your world
*Terms & Conditions: Min. transaction of ₹15,000/- INSTANT DISCOUNT 10% upto ₹2,000/-, Offer applicable on CC-EMI & DC-EMI. Valid from 31st Dec 2025 to 18th Jan 2026, Valid once per card.

Upto ₹10,000 Instant Discount
FREE* ONE TIME SCREEN REPLACEMENT
Upto ₹12,000* EXCHANGE BONUS
1 RUPEE* DOWN PAYMENT

SAMSUNG Galaxy S25 ultra 5G — 12GB + 256GB — ~~₹1,29,999~~ Effective Price ₹1,19,999 — INCLUDED BANK CASHBACK — 24 MONTHS NO COST EMI
SAMSUNG Galaxy A36 5G — 8GB + 128GB — ~~₹32,499~~ Effective Price ₹30,499 — INCLUDED BANK CASHBACK — 18 MONTHS NO COST EMI
SAMSUNG Galaxy A17 5G — ZERO DOWN PAYMENT — EMI ₹2,786 — GET ₹1000 OFF ON On Galaxy Buds Core Worth ₹4,999
realme 16 Pro series 5G — NEW ARRIVAL — ₹4,000 INSTANT CASHBACK — FREE TWS Worth ₹3,990
Redmi Note 15 5G — NEW ARRIVAL — ₹3,000 INSTANT CASHBACK — Upto 80% Discount On Smartwatch Worth ₹4,999

iPhone 15 (128 GB) — EMI ₹2,288 — ₹2,000 CREDIT CARD CASHBACK — EXCHANGE BONUS ₹6,000 — Effective Price ₹26,900 — Per Day EMI ₹76*
iPhone 16 (128 GB) — EMI ₹2,704 — ₹3,000 CREDIT CARD CASHBACK — EXCHANGE BONUS ₹6,000 — Effective Price ₹35,900 — Per Day EMI ₹90*
iPhone 17 Pro (256 GB) — EMI ₹5,538 — ₹4,000 CREDIT CARD CASHBACK — EXCHANGE BONUS ₹6,000 — Effective Price ₹1,02,900 — Per Day EMI ₹185*
oppo Find X9 5G — 10% INSTANT CASHBACK or 24 MONTHS NO COST EMI — Upto 75% Discount On SOUNDBAR Worth ₹13,999
vivo X300 5G — 10% INSTANT CASHBACK or 24 MONTHS NO COST EMI — Upto 60% Discount On TWS Worth ₹7,499

NOTHING Phone 3A Lite 5G — 8GB + 128GB — ~~₹21,999~~ Effective Price ₹20,999 — INCLUDED BANK CASHBACK — Upto 80% Discount On TWS Worth ₹3,990
Google Pixel 9A 5G — 8GB + 256GB — ~~₹49,999~~ Effective Price ₹36,999 — INCLUDED BANK CASHBACK — Upto 75% Discount on Soundbar Worth ₹13,999
ONEPLUS 15R 5G — ₹3,000 INSTANT CASHBACK or ZERO DOWNPAYMENT — Upto 80% Discount On Smartwatch Worth ₹4,999
vivo V60e 5G — ₹2,500 INSTANT CASHBACK — Upto 75% Discount on Soundbar Worth ₹13,999
oppo F31 Pro Plus 5G — 10% INSTANT CASHBACK or ZERO DOWN PAYMENT — Upto 80% Discount On TWS Worth ₹4,999

Redmi 15 5G — Upto 10% INSTANT CASHBACK or ZERO DOWN PAYMENT — Upto 90% Discount On Neckband Worth ₹1,999
realme 15X 5G — Upto 10% INSTANT CASHBACK or ZERO DOWN PAYMENT — Upto 70% Discount On Neckband Worth ₹2,999
ONEPLUS Nord 5 5G — ₹1,500 INSTANT CASHBACK or ZERO DOWN PAYMENT — Upto 70% Discount On Neckband Worth ₹3,290
oppo A6 Pro 5G — Upto 10% INSTANT CASHBACK — Upto 80% Discount On Smartwatch Worth ₹4,999
vivo Y31 Pro 5G — ₹1,000 INSTANT CASHBACK or ZERO DOWNPAYMENT — Upto 75% Discount On Personal Fan Worth ₹1,999

LAPTOP
Starts @ ₹25,990*
Samsung models only — Upgrade ₹3,000*
Buy Above 50K Laptop & Get FREE Laptop Bag + Keyboard Mouse Combo Worth ₹3,499
Buy Gaming Laptop Pay ₹999 & Get boAt Soundbar Worth ₹7,999
₹10,000* CASHBACK On Leading Bank (selected models)
₹3,000* UPI CASHBACK (selected models)

Ai LAPTOP
Starts @ ₹59,990*

SMART TV
LED 32 inch START @ ₹8,890
QLED 43 inch START @ ₹19,990
QLED 55 inch START @ ₹32,999

*T&C apply. Offer applicable for selected brand and models

Buy SMARTPHONE or TABLET Get any
NECKBAND @ ₹199
SMARTWATCH @ ₹899
PERSONAL FAN @ ₹499
TRUE WIRELESS @ ₹2,999
TRUE WIRELESS @ ₹799
SOUNDBAR @ ₹3,499

JBL Tune 770NC BT Headset — 30% Discount — ₹5,499
NOTHING Open Ear True Wireless — 45% Discount — ₹9,999
SONY HT-S20R 5.1 Ch Soundbar — 25% Discount — ₹17,990
YARR Wave Wireless Earbuds — 70% Discount — ₹1,499
*Selected Brand & model only

SCAN QR CODE
12%* Upto INSTANT DISCOUNT
AXIS BANK | YES BANK | kotak | SOUTH INDIAN Bank
*Terms & Conditions: Min. transaction of ₹15,000/- INSTANT DISCOUNT 12% upto ₹2,000/-, Offer applicable on CC-EMI. Valid from 31st Dec 2025 to 18th Jan 2026, Valid once per card.

Customer Helpline :
99406 88855
Shop online @ www.poorvika.com

POORVIKA